"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

14ನೇ ನವೆಂಬರ್ 2017
ಮಂಗಳವಾರ

## ವಿಷಯಾನುಕ್ರಮಾಣಿಕೆ

1. **ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.**

3493 – ಹಾಪ್‌ಕಾಮ್ಸ್ ಸಂಸ್ಥೆ ಬಗ್ಗೆ– ಶ್ರೀಮತಿ ತಾರಾಅನೂರಾಧ

3577 – ಸಿ.ಆರ್.ಎಫ್. ಅನುದಾನದಡಿ ಕೈಗೊಳ್ಳಲಾದ ಕಾಮಗಾರಿಗಳ ಬಗ್ಗೆ.
– ಶ್ರೀ ಪ್ರದೀಪ್ ಶೆಟ್ಟರ್

3556 – ಬೀದರ್ ಜಿಲ್ಲೆಯ ಸೋಲಾರ್ ಪಾರ್ಕ್ ಬಗ್ಗೆ– ಶ್ರೀ ವಿಜಯ ಸಿಂಗ್

3474 – ಬೆಂಗಳೂರಿನಿಂದ ಮಂಗಳೂರಿಗೆ ಹೋಗುವ ಹೆದ್ದಾರಿಯ ಶಿರಾಡಿಘಾಟ್ ರಸ್ತೆಯು ಹಾಳಾಗಿರುವ ಬಗ್ಗೆ– ಕ್ಯಾಪ್ಟನ್ ಗಣೇಶ್ ಕಾರ್ಣಿಕ್

3544 – ವಿಯೆಟ್ನಾಂನಿಂದ ಕರಿಮೆಣಸು ಆಮದು ಮಾಡಿಕೊಳ್ಳುತ್ತಿರುವುದರಿಂದ ಬೆಳಗಾರರು ತೀವ್ರ ಸಂಕಷ್ಟಕ್ಕೆ ನಿಲುಕಿರುವ ಬಗ್ಗೆ– ಶ್ರೀಮತಿ ಎಸ್.ವೀಣಾ ಅಚ್ಚಯ್ಯ

3634 – ಕೃಷಿ ಇಲಾಖೆಯ ಉಪಕರಣಗಳನ್ನು ರೈತರಿಗೆ ವಿತರಿಸುವ ಬಗ್ಗೆ.
– ಶ್ರೀ ಎನ್.ಅಪ್ಪಾಜಿಗೌಡ

3481 – ದೇವಸ್ಥಾನಗಳ ವ್ಯವಸ್ಥಾಪನಾ ಸಮಿತಿ ರಚಿಸುವ ಪ್ರಕ್ರಿಯೆ ಕೈಬಿಡುವ ಬಗ್ಗೆ.
– ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ

3476 – ಬೀದರ್–ಔರಾದ್ ಎಸ್.ಹೆಚ್–15ರ ರಸ್ತೆ ತುಂಬಾ ಹಾಳಾಗಿರುವ ಬಗ್ಗೆ
– ಶ್ರೀ ರಘುನಾಥ ರಾವ್ ಮಲ್ಕಾಪೂರೆ

3630 – ರಾಯಚೂರಿನಲ್ಲಿ ಸ್ಥಾಪಿಸಿರುವ ಆರ್.ಟಿ.ಪಿ.ಎಸ್. ಹಾಗೂ ವೈ.ಟಿ.ಪಿ.ಎಸ್. ಯೋಜನೆಗೆ ರೈತರಿಂದ ಭೂಮಿ ಸ್ವಾಧೀನಪಡಿಸಿಕೊಂಡಿರುವ ಬಗ್ಗೆ.
– ಶ್ರೀ ಅಮರನಾಥ ಪಾಟೀಲ್

3613 – ಬೆಂಗಳೂರು – ಮೈಸೂರು ಹೆದ್ದಾರಿ ರಸ್ತೆ ಡಾಂಬರ್ ಹಾಳಾಗಿರುವ ಬಗ್ಗೆ.
– ಶ್ರೀ ಕೆ.ಟಿ. ಶ್ರೀಕಂಠೇಗೌಡ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

೩೫೮೦ – ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಜವಳಿ ಕಾರ್ಖಾನೆಗಳ ಬಗ್ಗೆ.
– ಶ್ರೀ ಆರ್.ಪ್ರಸನ್ನಕುಮಾರ್

೩೫೬೩ – ರಾಯಚೂರು ಜಿಲ್ಲೆಯಲ್ಲಿರುವ ಆರ್‌ಟಿಪಿಎಸ್ ಮತ್ತು ವೈಟಿಪಿಎಸ್ ಬಗ್ಗೆ
– ಶ್ರೀ ಎನ್.ಎಸ್.ಬೋಸ್‌ರಾಜು

**ಆ) ಚುಕ್ಕೆ ರಹಿತ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**

**2. ನೂತನ ಸಚಿವರ ಪರಿಚಯ.**

**3. ಸಭಾಪತಿಯವರ ಅನುಮತಿ ಮೇರೆ ಚರ್ಚಿಸಲ್ಪಟ್ಟ ವಿಷಯಗಳು.**

**ಅ) ಶಿಕ್ಷಕರ ವರ್ಗಾವಣೆ ಬಗ್ಗೆ.**

– ಶ್ರೀ ಎಸ್.ವಿ.ಸಂಕನೂರು
– ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)

**ಆ) ವೈದ್ಯರ ಮುಷ್ಕರದಿಂದ ಮೂವರು ಮೃತಪಟ್ಟಿರುವ ಬಗ್ಗೆ.**

– ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ
– ಶ್ರೀ ಕೆ.ಆರ್.ರಮೇಶ್‌ಕುಮಾರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)
– ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧಪಕ್ಷದ ನಾಯಕರು)

**ಇ) ಅಧಿವೇಶನ ಕರ್ತವ್ಯಕ್ಕೆ ನಿಯೋಜನೆಗೊಂಡಿರುವ ಪೋಲೀಸರಿಗೆ ಮೂಲ ಸೌಕರ್ಯಗಳು ಇಲ್ಲದಿರುವ ಬಗ್ಗೆ.**

– ಶ್ರೀ ಮಹಾಂತೇಶ್ ಕವಟಗಿ ಮಠ
– ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)

**ಈ) ಸರ್ಕಾರಿ ಜಾಗದಲ್ಲಿ ಅಕ್ರಮವಾಗಿ ನಿರ್ಮಾಣ ಮಾಡಿರುವ ಮನೆಗಳನ್ನು ಸಕ್ರಮಗೊಳಿಸುವ ಕುರಿತು.**

– ಶ್ರೀ ಶ್ರೀನಿವಾಸ ಮಾನೆ
– ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)

**ಉ) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ನಾಮ ನಿರ್ದೇಶಿತ ಸದಸ್ಯರ ಬಗ್ಗೆ.**

– ಶ್ರೀ ರಮೇಶ್ ಬಾಬು
– ಶ್ರೀ ಎಂ.ಆರ್.ಸೀತಾರಾಂ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಊ) ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ ಜಿಲ್ಲೆಗಳಲ್ಲಿರುವ ಕುಡುಬಿ/ಕುಣಬಿ ಜನಾಂಗವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಬಗ್ಗೆ.**

– ಶ್ರೀ ಐವನ್ ಡಿ'ಸೋಜಾ(ಸರ್ಕಾರದ ಮುಖ್ಯ ಸಚೇತಕರು)
– ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)

**4. ಸಭೆಯ ಮುಂದಿಡಲಾದ ಕಾಗದ ಪತ್ರಗಳು.**

**5. ಕಾರ್ಯದರ್ಶಿಯವರ ವರದಿ.**

**6. ವರದಿಗಳನ್ನೊಪ್ಪಿಸುವುದು.**

**7. ಅರ್ಜಿಯನ್ನೊಪ್ಪಿಸುವುದು.**

**8. ಗಮನ ಸೆಳೆಯುವ ಸೂಚನೆಗಳು.**

**ಅ) ರಾಜ್ಯದಲ್ಲಿ ವ್ಯಾಪಕವಾಗಿ ಮಾದಕ ದ್ರವ್ಯಗಳ ಸಾಗಾಣಿಕೆ ಮತ್ತು ಸೇವನೆ ಕುರಿತು ಅನೇಕ ಪ್ರಕರಣಗಳು ದಾಖಲಾಗಿದ್ದು, ಇಲಾಖೆ ಕೈಗೊಂಡಿರುವ ಬಗ್ಗೆ.**

– ಶ್ರೀ ಐವನ್ ಡಿ'ಸೋಜಾ (ಸರ್ಕಾರದ ಮುಖ್ಯ ಸಚೇತಕರು)
– ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ವಿರೋಧ ಪಕ್ಷದ ಮುಖ್ಯ ಸಚೇತಕರು)
– ಶ್ರೀಮತಿ ತಾರಾಅನೂರಾಧ
– ಶ್ರೀ ಭಾನುಪ್ರಕಾಶ್
– ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ
– ಶ್ರೀ ಎಂ.ಕೆ.ಪ್ರಾಣೇಶ್
– ಶ್ರೀ ಶರಣಪ್ಪ ಮಟ್ಟೂರ
– ಶ್ರೀ ಪಿ.ಆರ್.ರಮೇಶ್
– ಶ್ರೀಮತಿ ಜಯಮ್ಮ
– ಶ್ರೀ ವಿ.ಎಸ್.ಉಗ್ರಪ್ಪ
– ಶ್ರೀ ರಾಮಚಂದ್ರಗೌಡ
– ಶ್ರೀ ರಾಮಲಿಂಗಾರೆಡ್ಡಿ(ಗೃಹ ಸಚಿವರು)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಆ) ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಕಾಮಗಾರಿಗಳು ನಿಗಧಿತ ಕಾಲಮಿತಿಯೊಳಗೆ ಪೂರ್ಣಗೊಳ್ಳದೆ ಇರುವುದರಿಂದ, ಸಾರ್ವಜನಿಕರಿಗೆ ಕುಡಿಯುವ ನೀರಿನ ತೊಂದರೆ ಉಂಟಾಗಿರುವ ಬಗ್ಗೆ.**

– ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ
– ಶ್ರೀ ಹೆಚ್.ಕೆ.ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)
– ಶ್ರೀಮತಿ ಮೋಟಮ್ಮ
– ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು)
– ಶ್ರೀ ಭಾನುಪ್ರಕಾಶ್
– ಶ್ರೀ ಕೆ.ಟಿ.ಶ್ರೀಕಂಠೇಗೌಡ
– ಶ್ರೀ ಕಾಂತರಾಜು (ಬಿಎಂಎಲ್)
– ಶ್ರೀ ಅಪ್ಪಾಜಿಗೌಡ

<><><><>

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(938)14-11-2017(11-00)ಬಿಎಸ್‌ಡಿ/ವಿಕೆ

**ಕರ್ನಾಟಕ ವಿಧಾನ ಪರಿಷತ್ತು**

ಮಂಗಳವಾರ, 14 ನೇ ನವೆಂಬರ್ 2017

ಸದನವು ಬೆಳಗಾವಿಯ ಸುವರ್ಣ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಗ್ಗೆ *11 ಗಂಟೆ 05 ನಿಮಿಷಕ್ಕೆ* ಸಮಾವೇಶಗೊಂಡಿತು.

ಸಭಾಪತಿ (ಶ್ರೀ ಡಿ.ಹೆಚ್. ಶಂಕರಮೂರ್ತಿ) ಅವರು ಸಭಾಪೀಠದಲ್ಲಿ ಉಪಸ್ಥಿತರಿದ್ದರು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ತಮ್ಮ ಅನುಮತಿಯೊಡನೆ ಒಂದು ವಿಷಯವನ್ನು ಪ್ರಸ್ತಾಪಿಸುತ್ತೇನೆ. ನಿನ್ನೆ ಮಾನ್ಯ ಸದಸ್ಯರಾದ ಶ್ರೀ ಅಮರನಾಥ ಪಾಟೀಲ್, ಶ್ರೀ ಶರಣಪ್ಪ ಮಟ್ಟೂರ್ ಸೇರಿದಂತೆ ಕೆಲವು ಸದಸ್ಯರಿಗೆ ಅನಾನುಕೂಲವಾಗಿದೆ.

ಸಭಾಪತಿಯವರುಃ- ಇಲ್ಲ, ಅದು ನಿನ್ನೆಯೇ ಪರಿಹಾರ ಆಗಿದೆ. ನನ್ನ ಹತ್ತಿರ ಬಂದಿದ್ದರು, ಅದನ್ನು ಪರಿಹಾರ ಮಾಡಿದ್ದೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

## 1. ಪ್ರಶ್ನೋತ್ತರಗಳು

## ಅ. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

### ಚುಕ್ಕೆ ಗುರ್ತಿನ ಪ್ರಶ್ನೆ ಸಂಖ್ಯೆಃ 3493

(ಉತ್ತರದ ಪ್ರತಿ ಲಗತ್ತಿಸಿದೆ)

ಶ್ರೀಮತಿ ತಾರಾ ಅನೂರಾಧಃ- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದು, ನಾನು ಹಾಪ್‌ಕಾಮ್ಸ್ ಸಂಸ್ಥೆಗೆ ತರಕಾರಿ ಹಣ್ಣು ಸರಬರಾಜು ಮಾಡಿದ ರೈತರಿಗೆ ಪಾವತಿಸಬೇಕಾದ ಹಣವೆಷ್ಟು; ಇದನ್ನು ಯಾವಾಗ ಪಾವತಿಸಲಾಗುವುದು; ಸರಬರಾಜು ಮಾಡಿದ ಎಷ್ಟು ದಿನಗಳಲ್ಲಿ ಹಣ ಪಾವತಿಸಬೇಕಾಗಿತ್ತು; ವಿಳಂಬಕ್ಕೆ ಕಾರಣಗಳೇನು? ಎಂಬ ಪ್ರಶ್ನೆಯನ್ನು ಕೇಳಿದ್ದೆನು. ಇದಕ್ಕೆ ಉತ್ತರವಾಗಿ ಹಾಪ್‌ಕಾಮ್ಸ್ ಸಂಸ್ಥೆಯಿಂದ ರೈತರಿಗೆ ಬಾಕಿ ರೂ.72,99,341/- ಗಳನ್ನು ಪಾವತಿಸಬೇಕಾಗಿದ್ದು, ಮೂರ್‍ನಾಲ್ಕು ದಿನಗಳಲ್ಲಿ ಪಾವತಿಸುವ ಬಗ್ಗೆ ತಿಳಿಸಿದ್ದಾರೆ. ಮಾನ್ಯ ಸಭಾಪತಿಯವರೇ, ಹಾಪ್‌ಕಾಮ್ಸ್‌ನಲ್ಲಿ ಇರುವ ನಿಯಮಗಳ ಪ್ರಕಾರ ರೈತರು ಹಣ್ಣು-ತರಕಾರಿಗಳನ್ನು ನೀಡಿದ ದಿವಸವೇ ಹಣ ಪಾವತಿಸಬೇಕೆಂದು ಇದೆ. ಇದನ್ನು ಮಾನ್ಯ ಸಚಿವರೇ ಮಾಡಿಕೊಂಡಿದ್ದಾರೆ. ಆರ್‌ಟಿಜಿಎಸ್ ಮೂಲಕ 24 ಗಂಟೆಗಳಲ್ಲಿ ರೈತರ ಖಾತೆಗಳಿಗೆ ಹಣ ಪಾವತಿಯಾಗಬೇಕು. ಅದರೆ ಉತ್ತರದಲ್ಲಿ ಮೂರ್‍ನಾಲ್ಕು ದಿನಗಳಲ್ಲಿ ರೈತರ ಖಾತೆಗೆ ಹಣ ವರ್ಗಾಯಿಸಲಾಗುವುದು ಎಂದು ಸಮರ್ಥಿಸಿಕೊಂಡಿದ್ದಾರೆ. ಆದ್ದರಿಂದ ಹಾಪ್‌ಕಾಮ್ಸ್ ನಿಯಮ ಏಕೆ ಮತ್ತು ಮಾನ್ಯ ಸಚಿವರ ಉತ್ತರದ ಸಮರ್ಥನೆ ಏಕೆಂದು ನನಗೆ ಗೊತ್ತಾಗಲಿಲ್ಲ.

ಇನ್ನು ಎರಡನೆಯದಾಗಿ, ಹಾಪ್‌ಕಾಮ್ಸ್ ಸಂಸ್ಥೆಯಿಂದ ಸ್ವಯಂ ನಿವೃತ್ತಿ ಹೊಂದಿರುವ ನೌಕರರಿಗೆ ನೀಡಬೇಕಾದ ಡಿಚಿಣಣಣಾಥಿ ಬಾಕಿ ಎಷ್ಟು; ಅದನ್ನು ಯಾವಾಗ ಪಾವತಿಸಲಾಗುವುದು; ಬಾಕಿ ಇರಿಸಲು ಕಾರಣಗಳೇನು; ಎಂಬ ಪ್ರಶ್ನೆಯನ್ನು ಕೇಳಿದ್ದೆನು. ಆದರೆ ಉತ್ತರದಲ್ಲಿ ಬಾಕಿ ಇರಿಸಲು ಕಾರಣಗಳೇನೆಂದು ತಿಳಿಸಿಲ್ಲ. ಉತ್ತರದಲ್ಲಿ ಸ್ವಯಂ ನಿವೃತ್ತಿ ಹೊಂದಿರುವ 7 ನೌಕರರಿಗೆ ನೀಡಬೇಕಾದ gratuity ಬಾಕಿ ಮೊತ್ತ ರೂ.19 ಲಕ್ಷ ಎಂದು ಹೇಳಿದ್ದಾರೆ. ಆದರೆ 18 ಜನರಿಗೆ gratuity ಕೊಡಬೇಕಾಗಿದ್ದು, ಇದರ ಮೊತ್ತ ರೂ.60 ಲಕ್ಷ ಬಾಕಿ ಇದೆ ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಇದಕ್ಕೆ ಮಾನ್ಯ ಸಚಿವರ ಉತ್ತರ ಬೇಕಾಗಿದೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇನ್ನು ಮೂರನೆಯದಾಗಿ, ಹಾಪ್‌ಕಾಮ್ಸ್ ಸಂಸ್ಥೆಯಿಂದ ವಿವಿಧ ಸಂಘ ಸಂಸ್ಥೆಗಳಿಗೆ ಕೊಡಬೇಕಾಗಿರುವ ಬಾಕಿ ಮೊತ್ತದ ಬಗ್ಗೆ ಪ್ರಶ್ನೆಯನ್ನು ಕೇಳಿದ್ದು, ಇದಕ್ಕೆ ಉತ್ತರದಲ್ಲಿ ಪ್ರಾಮಾಣಿಕವಾಗಿ ರೂ.2,97,42,436/-ಗಳನ್ನು ಪಾವತಿಸಬೇಕೆಂದು ಒಪ್ಪಿಕೊಂಡಿದ್ದಾರೆ.

ಇನ್ನು ನಾಲ್ಕನೆಯದಾಗಿ ಹಾಪ್‌ಕಾಮ್ಸ್ ಸಂಸ್ಥೆಯಿಂದ ರೂ.3 ಕೋಟಿಗಳನ್ನು ಎಫ್.ಡಿ ಇಟ್ಟಿದ್ದು, ಈ ಹಣವನ್ನು ಪಾಪಸ್ಸು ಪಡೆದಿರುವ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೇನೆ. ಇದಕ್ಕೆ ರೂ.3 ಕೋಟಿಗಳನ್ನು ವಾಪಸ್ಸು ಪಡೆದಿರುವುದಿಲ್ಲ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಆಡಳಿತ ನಡೆಸುವುದಕ್ಕಾಗಿ ರೂ.1 ಕೋಟಿಗಳನ್ನು ವಾಪಸ್ಸು ಪಡೆದಿದ್ದಾರೆ. ಆದರೆ ಉತ್ತರದಲ್ಲಿ ವಾಪಸ್ಸು ತೆಗೆದುಕೊಂಡಿಲ್ಲ ಎಂದು ಹೇಳಿದ್ದಾರೆ. ಮುಂದುವರೆದು ಸಂಸ್ಥೆಯ ಗೊಬ್ಬರ ಖಾತೆಯಿಂದ ಷರತ್ತುಬದ್ಧವಾಗಿ ಹಣ ಹಿಂಪಡೆಯಲಾಗಿದೆಯೇ ಎಂಬ ಪ್ರಶ್ನೆಗೆ ಗೊಬ್ಬರ ಸಂಸ್ಥೆಯಿಂದ ವಾಪಸ್ಸು ತೆಗೆದುಕೊಂಡಿಲ್ಲ ಎಂದು ಹೇಳಿದ್ದಾರೆ. ಆದರೆ ವರದಿಯಲ್ಲಿ ರೂ.70 ಲಕ್ಷಗಳನ್ನು ತೆಗೆದುಕೊಂಡಿದ್ದು, ಪುನಃ ವಾಪಸ್ಸು ಕೊಟ್ಟಿಲ್ಲ ಎಂದು ಇದೆ.

ಇನ್ನು ಐದನೆಯದಾಗಿ, ಹಾಪ್‌ಕಾಮ್ಸ್ ಸಂಸ್ಥೆಯಲ್ಲಿ 2015-16 ಮತ್ತು 2016-17ನೇ ಸಾಲುಗಳ ಆರ್ಥಿಕ ವರ್ಷದ ಲೆಕ್ಕ ಪರಿಶೋಧನೆ ನಡೆದಿದೆಯೇ ಎಂದು ಪ್ರಶ್ನೆಯನ್ನು ಕೇಳಿದ್ದೇನೆ. 2015-16ನೇ ಸಾಲಿನ ಆರ್ಥಿಕ ಲೆಕ್ಕ ಪರಿಶೋಧನೆ ಆಗಿದೆ ಎಂದು ಉತ್ತರದಲ್ಲಿ ನಿಜವನ್ನು ಹೇಳಿದ್ದಾರೆ. ಇದನ್ನು ಮಾಡಲು ಒಂದೂವರೆ ವರ್ಷಗಳ ಸಮಯವನ್ನು ತೆಗೆದುಕೊಂಡಿದ್ದು, ಇದನ್ನು ವರದಿಯಲ್ಲಿ ತಿಳಿಸಿದ್ದಾರೆ. ಆದರೆ 2016-17ನೇ ಸಾಲಿನ ಆರ್ಥಿಕ ಲೆಕ್ಕ ಪರಿಶೋಧನೆಯು ನಡೆದಿಲ್ಲ, ಈ ಲೆಕ್ಕಪರಿಶೋಧನೆಯು ನಡೆಯುತ್ತಿದೆ ಎಂದು ತಿಳಿಸಿದ್ದಾರೆ. ಹಾಪ್‌ಕಾಮ್ಸ್ ಸಂಸ್ಥೆಯು ರೈತರ ಮುಖ್ಯ ಸಂಸ್ಥೆಯಾಗಿದ್ದು, ಉತ್ತರ ಕರ್ನಾಟಕದ ಬಾಗಲಕೋಟೆಯಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯವನ್ನು ಮಾಡಿದ್ದೇವೆ. ರೈತರು ಬೆಳೆಯುವ ಹಣ್ಣು ಮತ್ತು ತರಕಾರಿಗಳಿಗೆ ನ್ಯಾಯಬದ್ಧವಾಗಿ ಬೆಲೆ ಸಿಗಬೇಕು, ಅವರಿಗೆ ಹಣ ಸರಿಯಾಗಿ ಸಂದಾಯವಾಗಬೇಕೆಂದು ಹಾಪ್‌ಕಾಮ್ಸ್ ಸ್ಥಾಪನೆಯಾಗಿರುವ ಬಗ್ಗೆ ನಮಗೆಲ್ಲರಿಗೂ ತಿಳಿದಿದೆ. ಆದರೆ ನಮಗೆ ಅನಿಸಿದಂತೆ ಮೊಟ್ಟಮೊದಲ ಬಾರಿಗೆ ಹಾಪ್‌ಕಾಮ್ಸ್ ಸಂಸ್ಥೆಯು ಬಹಳ ನಷ್ಟದಲ್ಲಿ ನಡೆಯುತ್ತಿದೆ ಎಂಬ ವರದಿಯೂ ಇದೆ. ಇದೆಲ್ಲದ್ದರ ಬಗ್ಗೆ ನಾನು ಮಾನ್ಯ ಸಚಿವರಲ್ಲಿ ಸ್ಪಷ್ಟನೆ ಕೇಳಬಯಸುತ್ತೇನೆ.

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀಮತಿ ತಾರಾರವರು ಸಾಕಷ್ಟು ಪ್ರಶ್ನೆಗಳನ್ನು ಕೇಳಿದ್ದು, ಅವುಗಳಿಗೆ ಉತ್ತರವನ್ನು ಒದಗಿಸಿದ್ದೇನೆ. ಮೊದಲನೆಯದಾಗಿ 2-3 ದಿವಸಗಳಲ್ಲಿ ರೂ. 72,99,341/- ಗಳನ್ನು ಪಾವತಿಸದಿರುವ ಬಗ್ಗೆ ಕಾರಣಗಳನ್ನು ಕೇಳಿದ್ದಾರೆ.

(ಮುಂದು)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(939)14.11.2017/11.10/ಹೆಚ್‌ವಿಃವಿಕೆ

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್(ಮುಂದುವರೆದದ್ದು):–**

ಸನ್ಮಾನ್ಯ ಸಭಾಪತಿಯವರೇ, ನಮ್ಮ ನಿಯಮಗಳ ಪ್ರಕಾರ ಹಾಪ್‌ಕಾಮ್ಸ್ ಸಂಸ್ಥೆಗೆ ತರಕಾರಿ ಮತ್ತು ಹಣ್ಣು ಸರಬರಾಜು ಮಾಡುವ ರೈತರಿಗೆ 2 ರಿಂದ 3 ದಿನಗಳೊಳಗಾಗಿ ಜ್ಯೇಷ್ಠತೆಯ ಆಧಾರದ ಮೇಲೆ ಆನ್‌ಲೈನ್ ಮೂಲಕ ಹಣವನ್ನು ಪಾವತಿ ಮಾಡಲಾಗುತ್ತದೆ. ಕೆಲವೊಮ್ಮೆ ಒಂದೇ ದಿನದಲ್ಲಿ, ಕೆಲವೊಮ್ಮೆ ಎರಡನೆಯ ದಿನ ಹಣವನ್ನು ಪಾವತಿ ಮಾಡಲಾಗಿದೆ. ಯಾವ ರೈತರಿಗೂ 3 ದಿನಗಳ ನಂತರ ಹಣವನ್ನು ಪಾವತಿ ಮಾಡಿಲ್ಲ. ಮೂರು ದಿನದೊಳಗಾಗಿ ಕಡ್ಡಾಯವಾಗಿ ರೈತರಿಗೆ ಹಣವನ್ನು ಪಾವತಿಸಬೇಕೆನ್ನುವ ನಿಯಮವಿದೆ.

ಎರಡನೆಯದಾಗಿ, ಮಾನ್ಯ ಸದಸ್ಯರು ‘ಹಾಪ್‌ಕಾಮ್ಸ್ ಸಂಸ್ಥೆಯಿಂದ ಸ್ವಯಂ ನಿವೃತ್ತಿ ಹೊಂದಿರುವ ನೌಕರರಿಗೆ ನೀಡಬೇಕಾದ ಗ್ರಾಚ್ಯುಟಿಯ ಬಾಕಿ ಎಷ್ಟು’ ಎನ್ನುವ ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ಸಂಬಂಧಪಟ್ಟ ಉತ್ತರವನ್ನು ಲಿಖಿತ ರೂಪದಲ್ಲಿ ಒದಗಿಸಲಾಗಿದೆ.

‘ಹಾಪ್‌ಕಾಮ್ಸ್ ಸಂಸ್ಥೆಯಿಂದ ವಿವಿಧ ಸಂಘಸಂಸ್ಥೆಗಳಿಗೆ ಕೊಡಬೇಕಾಗಿರುವ ಬಾಕಿ ಹಣವೆಷ್ಟು’ ಎನ್ನುವ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಹಾಪ್‌ಕಾಮ್ಸ್‌ನ ಒಟ್ಟು ಟರ್ನ್‌ಓವರ್ ಸುಮಾರು 108 ಕೋಟಿ ರೂಪಾಯಿಗಳಾಗಿದ್ದು, ಅದರಲ್ಲಿ ಇನ್ನೂ 2,97,42,436 ರೂಪಾಯಿಗಳನ್ನು ವಿವಿಧ ಸಂಘಸಂಸ್ಥೆಗಳಿಗೆ ಕೊಡಬೇಕಾಗಿದೆ. ಸುಮಾರು ಹದಿನೈದು ದಿನ ಅಥವಾ ಒಂದು ತಿಂಗಳ ಅವಧಿಯಲ್ಲಿ ಸರಬರಾಜುದಾರರಿಗೆ ನೀಡಬೇಕಾಗಿರುವ ಬಾಕಿ ಆಗಿರುತ್ತದೆ.

ಸನ್ಮಾನ್ಯ ಸಭಾಪತಿಯವರೇ, ‘ಹಾಪ್‌ಕಾಮ್ಸ್ ಸಂಸ್ಥೆಯಿಂದ ಕೈಗಾರಿಕಾ ಸಹಕಾರ ಬ್ಯಾಂಕ್‌ನಲ್ಲಿ ಇರಿಸಿದ್ದ 3 ಕೋಟಿ ರೂಪಾಯಿಗಳಷ್ಟು ಎಫ್.ಡಿ. ವಾಪಸ್ಸು ಪಡೆಯಲಾಗಿದೆಯೇ?’ ಎನ್ನುವ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ತಮ್ಮೆಲ್ಲರಿಗೂ ತಿಳಿದಿರುವಂತೆ ಕೈಗಾರಿಕಾ ಸಹಕಾರ ಬ್ಯಾಂಕ್ ಮುಚ್ಚಿ ಹೋಗಿದೆ. ನಾವು ಎಫ್.ಡಿ.ಯನ್ನು ವಿತ್‌ಡ್ರಾ ಮಾಡಬೇಕೆಂದು ಹೋದಾಗ, ಅದಕ್ಕೆ ಹೈಕೋರ್ಟ್ ತಡೆಯಾಜ್ಞೆಯನ್ನು ನೀಡಿದೆ ಮತ್ತು ನಾವು ಇಟ್ಟಿರುವ ಠೇವಣಿ ಹಣಕ್ಕೆ ಪ್ರತಿ ತಿಂಗಳು 5 ಲಕ್ಷ ರೂಪಾಯಿಗಳ ಬಡ್ಡಿ ಮೊತ್ತವನ್ನು ಮಾತ್ರ ಡ್ರಾ ಮಾಡಬೇಕೆನ್ನುವ ನಿರ್ದೇಶನವನ್ನು ಕೋರ್ಟ್ ಇತ್ತೀಚೆಗೆ ನೀಡಿದೆ. ಈಗ 11 ಲಕ್ಷ ರೂಪಾಯಿಗಳು ಜಮಾ ಆಗಿದೆ. ಮುಂದಿನ ದಿನಗಳಲ್ಲಿ ಎಫ್.ಡಿ.ಯ ಒಟ್ಟು ಹಣ ಪಾವತಿಯಾಗುವಂತೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರು ಹಾಪ್‌ಕಾಮ್ಸ್ ಸಂಸ್ಥೆಯ ಲೆಕ್ಕ ಪರಿಶೋಧನೆಯ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ಹಾಪ್‌ಕಾಮ್ಸ್ ಸಂಸ್ಥೆಯ 2015-16ನೇ ಸಾಲಿನ ಲೆಕ್ಕ ಪರಿಶೋಧನೆಯ ಕಾರ್ಯ

ಮುಗಿದಿದೆ. 2016-17ನೇ ಸಾಲಿನ ಲೆಕ್ಕ ಪರಿಶೋಧನೆಯ ಕಾರ್ಯ ಒಂದೆರಡು ತಿಂಗಳುಗಳಲ್ಲಿ ಪೂರ್ಣಗೊಳ್ಳಲಿದೆ. ಅದರ ಬಗ್ಗೆ ಯಾವುದೇ ಸಂಶಯವಿಲ್ಲ. 'ಸಂಸ್ಥೆಯ ಆರ್ಥಿಕ ದುಸ್ಥಿತಿಗೆ ಕಾರಣರಾದವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆಯೇ' ಎನ್ನುವ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ, 2015-16ನೇ ಸಾಲಿನಲ್ಲಿ ಸಂಸ್ಥೆಯ ಆರ್ಥಿಕ ದುಸ್ಥಿತಿಗೆ ಕಾರಣರಾದ ಒಟ್ಟು 24 ಜನರಿಗೆ ನೋಟಿಸ್ ಜಾರಿಗೊಳಿಸಿ, ಅವರುಗಳನ್ನು ಅಮಾನತುಗೊಳಿಸಲಾಗಿದೆ. ಅದೇ ರೀತಿಯಲ್ಲಿ 2016-17ನೇ ಸಾಲಿನಲ್ಲಿ ಒಟ್ಟು 16 ಜನರಲ್ಲಿ 03 ಜನರನ್ನು ಅಮಾನತ್ತುಗೊಳಿಸಲಾಗಿದೆ. ಉಳಿದ 13 ಜನರಿಗೆ ನೋಟಿಸ್ ನೀಡಲಾಗಿದೆ. ಇವರುಗಳ ಹೆಸರುಗಳನ್ನು ಬೇಕಾದರೆ ಮಾನ್ಯ ಸದಸ್ಯರಿಗೆ ಒದಗಿಸಿ ಕೊಡಲಾಗುತ್ತದೆ.

**ಶ್ರೀಮತಿ ತಾರಾಅನೂರಾಧ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ನೀಡುವಂತಹ ಸಂದರ್ಭದಲ್ಲಿ 'ನಿಯಮಗಳ ಪ್ರಕಾರ ಹಾಪ್‌ಕಾಮ್ಸ್ ಸಂಸ್ಥೆಗೆ ತರಕಾರಿ ಮತ್ತು ಹಣ್ಣು ಸರಬರಾಜು ಮಾಡಿರುವ ರೈತರಿಗೆ 2 ರಿಂದ 3 ದಿನಗಳೊಳಗಾಗಿ ಆನ್‌ಲೈನ್ ಮೂಲಕ ಹಣವನ್ನು ಪಾವತಿ ಮಾಡಲಾಗುತ್ತದೆ.' ಎನ್ನುವ ಮಾತನ್ನು ಹೇಳಿದ್ದಾರೆ. ಆದರೆ, ನಿಯಮಗಳಲ್ಲಿ ಆರ್.ಟಿ.ಜಿ.ಎಸ್. ಮೂಲಕ ಸಂಬಂಧಪಟ್ಟ ರೈತರಿಗೆ ಆ ದಿನವೇ ಅಂದರೆ 24 ಗಂಟೆಗಳೊಳಗಾಗಿ ಹಣ ಪಾವತಿಯಾಗಬೇಕೆಂದು ಇದೆ. ಆದರೆ, 2 ರಿಂದ 3 ದಿನಗಳೊಳಗಾಗಿ ಪಾವತಿಸಲಾಗುತ್ತದೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಇದಕ್ಕೇನಾದರೂ ತಾಂತ್ರಿಕ ಕಾರಣವಿದೆಯೇ ಅಥವಾ ಹಾಪ್‌ಕಾಮ್ಸ್ ಸಂಸ್ಥೆ ರೈತರಿಗೆ ಅದೇ ದಿನ ಹಣವನ್ನು ಪಾವತಿ ಮಾಡುತ್ತಿಲ್ಲವೇ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್:-** ಸನ್ಮಾನ್ಯ ಸಭಾಪತಿಯವರೇ, ನಿಯಮದಲ್ಲಿ ಬದಲಾವಣೆಯಾಗಿದೆ. ಈಗ ಇರುವಂತಹ ನಿಯಮದಲ್ಲಿ ಹಾಪ್‌ಕಾಮ್ಸ್ ಸಂಸ್ಥೆಗೆ ತರಕಾರಿ ಮತ್ತು ಹಣ್ಣು ಸರಬರಾಜು ಮಾಡಿರುವ ರೈತರಿಗೆ 2 ರಿಂದ 3 ದಿನಗಳೊಳಗಾಗಿ ಆನ್‌ಲೈನ್ ಮೂಲಕ ಹಣವನ್ನು ಪಾವತಿ ಮಾಡಬೇಕೆಂದು ಇದೆ. ಆ ನಿಯಮದ ಪ್ರತಿಯನ್ನು ಮಾನ್ಯ ಸದಸ್ಯರಿಗೆ ಒದಗಿಸಿಕೊಡಲಾಗುತ್ತದೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:3577**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪ್ರದೀಪ್ ಶೆಟ್ಟರ್:-** ಸನ್ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರದಂತೆ ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳು ದೊಡ್ಡ ನಗರಗಳಾಗಿ ಬೆಳೆಯುತ್ತಿವೆ. ನಾನು ಕೇಳಿರುವಂತಹ ಪ್ರಶ್ನೆಗಳಿಗೆ ಮಾನ್ಯ ಸಚಿವರು ಲಿಖಿತ ರೂಪದಲ್ಲಿ ಉತ್ತರವನ್ನು ಒದಗಿಸಿಕೊಟ್ಟಿದ್ದಾರೆ. ಕೇಂದ್ರ ರಸ್ತೆ ನಿಧಿ ಯೋಜನೆಯಡಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹುಬ್ಬಳ್ಳಿ-ಧಾರವಾಡ ಮಹಾನಗರಗಳಿಗೆ 2016-17ನೇ ಸಾಲಿನಲ್ಲಿ 36400 ಲಕ್ಷ ರೂಪಾಯಿಗಳು ಮತ್ತು 2017-18ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಗೆ 500 ಲಕ್ಷ ರೂಪಾಯಿಗಳು ಬಿಡುಗಡೆಯಾಗಿದೆ ಎನ್ನುವ ಉತ್ತರವನ್ನು ಮಾನ್ಯ ಸಚಿವರು ನೀಡಿದ್ದಾರೆ. ಲೋಕಸಭಾ ಸದಸ್ಯರಾಗಿರುವ ಮಾನ್ಯ ಪ್ರಹ್ಲಾದ ಜೋಷಿ ಮತ್ತು ನಮ್ಮ ಶಾಸಕರಾಗಿರುವಂತಹ ಮಾನ್ಯ ಜಗದೀಶ್ ಶೆಟ್ಟರ್‌ರವರ ಪ್ರಯತ್ನದಿಂದಾಗಿ ಈ ಕಾರ್ಯಕ್ಕಾಗಿ ಸಾಕಷ್ಟು ಹಣ ಬಿಡುಗಡೆಯಾಗಿದೆ. ಲೋಕಸಭಾ ಸದಸ್ಯರ ಕಛೇರಿಯಿಂದ ಪಡೆದುಕೊಂಡಿರುವ ಮಾಹಿತಿಯ ಪ್ರಕಾರ ಕೇಂದ್ರ ರಸ್ತೆ ನಿಧಿ ಯೋಜನೆಯಡಿ ಧಾರವಾಡ ಜಿಲ್ಲೆಗೆ 4040 ಕೋಟಿ ರೂಪಾಯಿಗಳು ಮತ್ತು ಹೆದ್ದಾರಿ ಲೆಕ್ಕ ಶೀರ್ಷಿಕೆಯಡಿಯಲ್ಲಿ 819 ಕೋಟಿ ರೂಪಾಯಿಗಳು ಹೀಗೆ ಒಟ್ಟು 1261 ಕೋಟಿ ರೂಪಾಯಿಗಳಷ್ಟು ಮೊತ್ತ ಇಲ್ಲಿಯವರೆಗೆ ಕೇಂದ್ರ ಸರ್ಕಾರದಿಂದ ಹರಿದು ಬಂದಿದೆ. ಇದು ಅತೀ ಹೆಚ್ಚಿನ ಪ್ರಮಾಣದ ಅನುದಾನವಾಗಿದ್ದು, 1073 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ಹುಬ್ಬಳ್ಳಿ-ಧಾರವಾಡ ರಸ್ತೆ ಜಾಲ ಸುಧಾರಣೆಗೆ ನೀಡಿರುತ್ತಾರೆ. ಈ ಪ್ರಾಜೆಕ್ಟ್‌ಗಳಿಗೆ ರಾಜ್ಯ ಸರ್ಕಾರ ಇಲ್ಲಿಯವರೆಗೆ ಏತಕ್ಕೋಸ್ಕರ DPR (Detailed Project Report) ಮಾಡಿಲ್ಲ ಮತ್ತು ಟೆಂಡರ್ ಕರೆದಿಲ್ಲ ಎನ್ನುವುದು ನನ್ನ ಪ್ರಶ್ನೆಯಾಗಿದೆ. ವರ್ತುಲ ರಸ್ತೆ ನಿರ್ಮಾಣಕ್ಕಾಗಿ ಈಗಾಗಲೇ 330 ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ. ಇದಕ್ಕೂ ಡಿ.ಪಿ.ಆರ್. ಮಾಡಬೇಕೆಂದು ಜಿಲ್ಲಾಧಿಕಾರಿಗಳು ಹೇಳಿದ್ದಾರೆ. ಕಳೆದ ವಾರ ಈ ಬಗ್ಗೆ ಜಿಲ್ಲಾಧಿಕಾರಿಗಳಿಂದ ಮಾಹಿತಿಯನ್ನು ಪಡೆದುಕೊಂಡಿದ್ದೇನೆ. ಏತಕ್ಕೋಸ್ಕರ ರಾಜ್ಯ ಸರ್ಕಾರ ಈ ರೀತಿಯ ಮಲತಾಯಿ ಧೋರಣೆಯನ್ನು ತಳೆಯುತ್ತಿದೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ನಮ್ಮ ಶಾಸಕರು ಮತ್ತು ಲೋಕಸಭಾ ಸದಸ್ಯರು ಕೇಂದ್ರ ಸರ್ಕಾರದಿಂದ ನಿಧಿಯನ್ನು ತರಬಾರದು ಯಾವುದೇ ಕೆಲಸಗಳು ಆಗಬಾರದು ಎನ್ನುವುದು ಸರ್ಕಾರದ ಇಚ್ಛೆಯಾಗಿದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕ ಭಾಗದಲ್ಲಿರುವ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವುದಕ್ಕಾಗಿ ಬೆಳಗಾವಿಯಲ್ಲಿ ಈ ಅಧಿವೇಶನವನ್ನು ಕರೆಯಲಾಗಿದೆ. ಹುಬ್ಬಳ್ಳಿ-ಧಾರವಾಡ ಜಿಲ್ಲೆಗಳು ಇಲ್ಲಿಂದ ಕೇವಲ 100 ಕಿಲೋ ಮೀಟರ್ ದೂರದಲ್ಲಿದೆ. ಕೇಂದ್ರ ಸರ್ಕಾರದಿಂದ ಬರುವಂತಹ ಅನುದಾನವನ್ನು ಆದಷ್ಟು ಬೇಗನೆ ತೆಗೆದುಕೊಂಡು, ಡಿ.ಪಿ.ಆರ್. ಮಾಡಿ, ರಾಜ್ಯ ಸರ್ಕಾರ ಕೊಡಬೇಕಾಗಿರುವ ಪಾಲಿನ ಹಣವನ್ನು ಕೊಟ್ಟು ಕೆಲಸವನ್ನು ಯಾಕೆ ಪ್ರಾರಂಭಗೊಳಿಸುತ್ತಿಲ್ಲ ಎನ್ನುವುದು ನನ್ನ ಪ್ರಶ್ನೆಯಾಗಿದೆ. ರಾಜ್ಯ ಸರ್ಕಾರದ ಈ ಧೋರಣೆಯನ್ನು ನಾನು ಖಂಡಿಸುತ್ತಿದ್ದೇನೆ. ಆದಷ್ಟು ಬೇಗ ಡಿ.ಪಿ.ಆರ್. ಮಾಡಿ ಟೆಂಡರ್ ಕರೆಯಬೇಕು. ಕೇಂದ್ರ ಸರ್ಕಾರದಿಂದ ಸಾಕಷ್ಟು ಅನುದಾನ ಬರುವುದಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇದು ಸುಳ್ಳಲ್ಲ. ನನ್ನ ಪ್ರಶ್ನೆಗೆ ನಿನ್ನೆ ಸಂಜೆಯವರೆವಿಗೂ ಉತ್ತರ ಬಂದಿರಲಿಲ್ಲ. ಈ ದಿನ ಬೆಳಗ್ಗೆ, ನಾನು ಸದನಕ್ಕೆ ಬರುವುದಕ್ಕೂ 5 ನಿಮಿಷಗಳ ಮುಂಚೆ ನನಗೆ ಉತ್ತರ ದೊರೆತಿದೆ. ಏತಕ್ಕೋಸ್ಕರ ಸರ್ಕಾರ ಈ ರೀತಿ ಬೇಜವಾಬ್ದಾರಿತನವನ್ನು ಪ್ರದರ್ಶಿಸುತ್ತಿದೆ ಎನ್ನುವುದು ನನಗೆ ಗೊತ್ತಾಗುತ್ತಿಲ್ಲ.

**ಡಾ।।ಹೆಚ್.ಸಿ.ಮಹದೇವಪ್ಪ:–** ಸನ್ಮಾನ್ಯ ಸಭಾಪತಿಯವರೇ, ಕಳೆದ ಬಾರಿಯ ಅಧಿವೇಶನದಲ್ಲಿಯೂ ಮಾನ್ಯ ಪ್ರದೀಪ್ ಶೆಟ್ಟರ್‌ರವರು ಇದೇ ಪ್ರಶ್ನೆಯನ್ನು ಕೇಳಿದ್ದರು. CRF (Central Road Fund) ಎಂದರೆ, ಪ್ರತಿ ರಾಜ್ಯ ಸರ್ಕಾರ ಮತ್ತು ಕೇಂದ್ರಾಡಳಿತ ಪ್ರದೇಶಕ್ಕೆ ಕೇಂದ್ರ ಸರ್ಕಾರ fuel consumptionಗೆ ಆಧಾರದ ಮೇಲಿನ ರಾಜ್ಯ ಸರ್ಕಾರದ ತೆರಿಗೆ ಹಣವನ್ನು ಕೊಡಬೇಕು. ಅದು ಪಾಲಿಸಿ. ಕೇಂದ್ರ ಸರ್ಕಾರ ಕೊಡುತ್ತಿರುವುದು ರಾಜ್ಯ ಸರ್ಕಾರಕ್ಕೆ ನ್ಯಾಯ ಸಮ್ಮತವಾಗಿ ಬರಬೇಕಾಗಿರುವ ಹಣವಾಗಿದೆ.

**ಶ್ರೀ ಪ್ರದೀಪ್ ಶೆಟ್ಟರ್:–** ಸನ್ಮಾನ್ಯ ಸಭಾಪತಿಯವರೇ,. . . . .

**ಸಭಾಪತಿಯವರು:–** ಮಾನ್ಯ ಪ್ರದೀಪ್ ಶೆಟ್ಟರ್‌ರವರೇ, ಮಾನ್ಯ ಸಚಿವರು ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಲಿ ನಂತರ ತಾವು ಪ್ರಶ್ನೆ ಕೇಳಿ.

**ಶ್ರೀ ಪ್ರದೀಪ್ ಶೆಟ್ಟರ್:–** ಸನ್ಮಾನ್ಯ ಸಭಾಪತಿಯವರೇ, ಅವರು ಉತ್ತರವನ್ನು ಹೇಳಲಿ. ಆದರೆ, ಅವರು ಹೇಳಿದಂತಹ ಮಾತುಗಳಿಗೆ ನಾನು ಸ್ಪಷ್ಟೀಕರಣವನ್ನು ಕೊಡುತ್ತಿದ್ದೇನೆ. ಪೆಟ್ರೋಲ್ ಉತ್ಪನ್ನಗಳನ್ನು ಕೇಂದ್ರ ಸರ್ಕಾರದವರು ನಿಯಂತ್ರಣ ಮಾಡುತ್ತಾರೆ. ಅದನ್ನು ಮಾರಿ ರಾಜ್ಯ ಸರ್ಕಾರದವರು ಸೆಸ್ ಕೊಡಬೇಕಾಗುತ್ತದೆ. ರಾಜ್ಯ ಸರ್ಕಾರದವರು ಆ ಕೆಲಸವನ್ನು ಮಾಡುವುದಿಲ್ಲ.

**ಡಾ।।ಹೆಚ್.ಸಿ.ಮಹದೇವಪ್ಪ:–** ಸನ್ಮಾನ್ಯ ಸಭಾಪತಿಯವರೇ, 2016 Act ನಲ್ಲಿ in clause (3) '30 per cent of the fuel consumption and 70 per cent of the...' ಭೌಗೋಳಿಕ ಪ್ರದೇಶವನ್ನು ಗಣನೆಗೆ ತೆಗೆದುಕೊಂಡು ಆಯಾಯ ರಾಜ್ಯಕ್ಕೆ fuel consumptionಗೆ ಕೇಂದ್ರ ಸರ್ಕಾರ ಕೊಡಬೇಕಾಗಿರುವಂತಹ ರಾಜ್ಯದ ಹಣ. ಯಾರು ತಪ್ಪು ಕಲ್ಪನೆಯಲ್ಲಿ ಇರಬಾರದು. ಕೇಂದ್ರ ಸರ್ಕಾರದವರು ಅನುದಾನವನ್ನು ಕೊಟ್ಟಿದ್ದಾರೆ, ರಾಜ್ಯ ಸರ್ಕಾರದವರು ಕೊಡುತ್ತಿಲ್ಲ, that is

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

not the question at all. ರಾಜ್ಯ ಸರ್ಕಾರಕ್ಕೆ ಈ ಬಾರಿ ಸುಮಾರು 500 ರಿಂದ 600 ಕೋಟಿ ರೂಪಾಯಿಗಳು ಬರಬೇಕಾಗಿತ್ತು. ಕೇಂದ್ರದ ಭೂ ಸಾರಿಗೆ ಸಚಿವರಾಗಿರುವಂತಹ ಮಾನ್ಯ ನಿತಿನ್ ಗಡ್ಕರಿಯವರು 2000 ಕೋಟಿ ರೂಪಾಯಿಗಳಿಗೂ ಹೆಚ್ಚಿನ ಹಣ ಅಂದರೆ, 5000 ಕೋಟಿ ರೂಪಾಯಿಗಳು ಬೇಕಾದರೂ ಕೊಡುತ್ತಾರೆ. ಹಿಂದೆ, ಯು.ಪಿ.ಎ. ಸರ್ಕಾರ ಅಧಿಕಾರದಲ್ಲಿದ್ದಂತಹ ಸಂದರ್ಭದಲ್ಲಿ ಮಾನ್ಯ ಆಸ್ಕರ್ ಫರ್ನಾಂಡಿಸ್‌ರವರು ರಾಜ್ಯಕ್ಕೆ ಎಷ್ಟು ಅನುದಾನ ಬರಬೇಕಾಗಿತ್ತು ಅದಕ್ಕಿಂತ 2-3 ಪಟ್ಟು ಹೆಚ್ಚು ಹಣ ಕೊಟ್ಟಿದ್ದರು. ಅವರು ಕೊಟ್ಟ ಹಣಕ್ಕೆ ಒಂದೇ ಸಾರಿ ಟೆಂಡರ್ ಕರೆಯುವುದಕ್ಕೆ ರಾಜ್ಯ ಸರ್ಕಾರದ ಮಂಜೂರಾತಿ ಬೇಕಾಗುತ್ತದೆ. ರಾಜ್ಯ ಸರ್ಕಾರದ ಅವಶ್ಯಕತೆ ಎಷ್ಟಿದೆ ಎನ್ನುವುದರ ಬಗ್ಗೆ ಯೋಜನೆ ಮತ್ತು ಆಯವ್ಯಯವನ್ನು ಸಿದ್ಧಗೊಳಿಸಿಕೊಂಡಿರಲಾಗಿರುತ್ತದೆ. ಕೇಂದ್ರ ಸರ್ಕಾರದವರು ನಾವು 10,000 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ನೀವು ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳಿ ಎಂದರೆ, what would be the financial position of the State? Without a programme, without a budgetary provision, how this statement has to run? That is the question involved here. ಹುಬ್ಬಳ್ಳಿ-ಧಾರಾಡ ಮಹಾನಗರಕ್ಕೆ 36,400 ಲಕ್ಷ ರೂಪಾಯಿಗಳು ಮತ್ತು ಧಾರವಾಡ ಜಿಲ್ಲೆಗೆ 5500 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ಕೈಗೊಳ್ಳಬೇಕಾಗಿರುವ ಕಾಮಗಾರಿಗಳ ಸಂಖ್ಯೆ 27 ಅವುಗಳಲ್ಲಿ 16 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಉಳಿದ 11 ಕಾಮಗಾರಿಗಳಿಗೆ ಟೆಂಡರ್ ಕರೆಯಬೇಕಾಗಿದೆ. ಧಾರವಾಡ ಜಿಲ್ಲೆಗೆ ಸಂಬಂಧಪಟ್ಟಂತೆ 5 ಕೋಟಿ ರೂಪಾಯಿಗಳ ಕಾಮಗಾರಿಯಲ್ಲಿ change of work ಕೇಳಿದ್ದರು. ಅದನ್ನು approve ಮಾಡಿ ಕಳುಹಿಸಿಕೊಟ್ಟಿದೆ, ಅದನ್ನು ಮಾಡಿ ಕೊಡುತ್ತೇವೆ. ತಾರತಮ್ಯ ಮಾಡುವುದು, ಮಲತಾಯಿ ಧೋರಣೆ ತೋರಿಸುವಂತಹ ಯಾವುದೇ ಉದಾಹರಣೆಗಳು ಇಲ್ಲಿಯವರೆಗೆ ಇಲ್ಲ. ಈ ರೀತಿಯ ಭಾವನೆಗಳನ್ನು ಇಟ್ಟುಕೊಳ್ಳುವಂತಹ ಅಗತ್ಯವಿಲ್ಲ. ಇದೇ ಮೊದಲನೆಯ ಬಾರಿಗೆ ಆ ಬಗ್ಗೆ ಕೇಳುತ್ತಿದ್ದೇನೆ. ವರ್ತುಲ ರಸ್ತೆಗೆ ಸಂಬಂಧಪಟ್ಟಂತೆ ಜಿಲ್ಲಾಧಿಕಾರಿಗಳಿಗೆ ಕಳುಹಿಸಿಕೊಡಲಾಗಿದೆ. And all together that is a different question. That should be looked in separately and this should not be connected with this particular question. ಇಲ್ಲಿ ತಾರತಮ್ಯ ಮಾಡುವುದು ಅಥವಾ ನಿರ್ದಾಕ್ಷಿಣ್ಯ ತೋರುವಂತಹ ಪ್ರಶ್ನೆಯೇ ಉದ್ಭವವಾಗುವುದಿಲ್ಲ. The money has been sanctioned and we have called

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

for the tender for the works taken up in the first phase. The tender is going to be awarded and we are about to start the work.

**ಶ್ರೀ ಪ್ರದೀಪ್ ಶೆಟ್ಟರ್ಃ-** ಸನ್ಮಾನ್ಯ ಸಭಾಪತಿಯವರೇ, 'ಕೇಂದ್ರ ಸರ್ಕಾರದಿಂದ ದೊಡ್ಡ ಪ್ರಮಾಣದಲ್ಲಿ ಹಣ ಬಂದರೆ ರಾಜ್ಯ ಸರ್ಕಾರ ಏನು ಮಾಡುವುದು?' ಎಂದು ಮಾನ್ಯ ಸಚಿವರು ಕೇಳುತ್ತಿದ್ದಾರೆ. ಕೇಂದ್ರದಲ್ಲಿ ಯು.ಪಿ.ಎ. ಸರ್ಕಾರ ಅಧಿಕಾರದಲ್ಲಿ ಇದ್ದಂತಹ ಸಂದರ್ಭದಲ್ಲಿ ಇಷ್ಟೊಂದು ದೊಡ್ಡ ಮೊತ್ತದ ಅನುದಾನವನ್ನು ರಾಜ್ಯಕ್ಕೆ ತರಲು ಸಾಧ್ಯವಾಗಿರಲಿಲ್ಲ. ಅದರ ಬಗ್ಗೆಯೂ ನಾನು ಪ್ರಶ್ನೆಯನ್ನು ಕೇಳಿದ್ದೆ.

**Dr. H.C. MAHADEVAPPA:-** You have not asked that question. But then too I have said it.

(ಮುಂದುವರಿದಿದೆ)

(940)14.11.2017-11.20-ಪಿಕೆ-ಬಿಎಸ್‌ಎಸ್

**ಶ್ರೀ ಪ್ರದೀಪ್ ಶೆಟ್ಟರ್:-** ಮಾನ್ಯ ನಿತಿನ್ ಗಡ್ಕರಿಯವರು ಮಂತ್ರಿಯಾದ ಮೇಲೆ ಸಾವಿರಾರು ಕೋಟಿ ರೂಪಾಯಿಗಳು ಬಂದಿದೆ ಎಂದು ತಾವು ಒಪ್ಪಿಕ್ಕೊಂಡಿರಿ.

**ಡಾ:ಹೆಚ್.ಸಿ.ಮಹದೇವಪ್ಪ:-** ಇರುವ ವಿಷಯಗಳನ್ನು ಒಪ್ಪಿಕೊಳ್ಳಲೇ ಬೇಕಾಗುತ್ತದೆ. ಹಾಗೆ ಒಪ್ಪಿಕೊಳ್ಳದೇ ಇದ್ದರೆ ರಾಜಕೀಯ ಕ್ಷೇತ್ರದಲ್ಲಿ ಏಕಿರಬೇಕು? Why we should be continued in public life? ಕೇಂದ್ರ ಸರ್ಕಾರ ಇಷ್ಟು ದುಡ್ಡನ್ನು ಕೊಟ್ಟಿದ್ದೆ, ಈ ರೀತಿ ಮಾಡುತ್ತಿದ್ದೇವೆ ಎಂಬುದನ್ನು ಹೇಳಲೇಬೇಕಾಗುತ್ತದೆ. ಯಾವುದೇ ಕಾರ್ಯಗಳನ್ನು ಕೈಗೆತ್ತಿಕೊಳ್ಳುವ ಮೊದಲು ಅವುಗಳಿಗೆ ಸಂಬಂಧಪಟ್ಟಂತೆ Guidelines, Specifications and Parameters ಇರುತ್ತವೆ. We have to follow all those Guidelines, Specifications and Parameters.

**ಶ್ರೀ ಪ್ರದೀಪ್ ಶೆಟ್ಟರ್:-** ಈ ಕಾರ್ಯಗಳನ್ನು ಬೇಗ ಮಾಡಿ. ದುಡ್ಡು ಲ್ಯಾಪ್ಸ್ ಆಗಬಾರದು. ಅಭಿವೃದ್ಧಿ ಮಾಡುವುದರಲ್ಲಿ ರಾಜಕೀಯ ಮಾಡಬಾರದು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಡಾ:ಹೆಚ್.ಸಿ.ಮಹದೇವಪ್ಪ:-** ಇದರಲ್ಲಿ ರಾಜಕೀಯ ಮಾಡುವ ಪ್ರಶ್ನೆ ಇಲ್ಲ. ನಿಮ್ಮ Tendersure Roads ಏನಿದೆ, ಅದಕ್ಕೆ ಸಂಬಂಧಪಟ್ಟಂತೆ ಕೆಳಮನೆಯ ವಿರೋಧ ಪಕ್ಷದ ನಾಯಕರಾದ ಮಾನ್ಯ ಜಗದೀಶ್ ಶೆಟ್ಟರ್‌ರವರು ಅಭಿನಂದನೆ ಸಲ್ಲಿಸಿದರು. It is going to be another M.G. Road. The Government has taken up the project of improving that road. I think, the Hon'ble Member also knows very well about it. ಇಡೀ ರಾತ್ರಿ ನಾವುಗಳು ಅಲ್ಲಿ ಪ್ರವಾಸ ಮಾಡಿದ್ದೇವೆ. ಕಿತ್ತೂರು ರಾಣಿ ಚೆನ್ನಮ್ಮ ಸರ್ಕಲ್ ಹತ್ತಿರ 5 ಶ್ರೇಣಿಗಳ ಮೇಲ್ಸೇತುವೆ ನಿರ್ಮಿಸಲು ಉದ್ದೇಶಿಸಿ, ರಾಜ್ಯ ಸರ್ಕಾರವೇ ಹಣ ಖರ್ಚು ಮಾಡಿ DPR (Detailed Project Report) ಮಾಡಿ ಭಾರತ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದೆ. None of them have thought over as to what is to be done. I have given the money on behalf of the State Government to prepare DPR in relation to the flyover at Kittur Rani Chennamma Circle for reducing the traffic congestion.

**ಶ್ರೀ ಪ್ರದೀಪ್ ಶೆಟ್ಟರ್:-** ಕಾಮಗಾರಿ ಕಾರ್ಯಗಳು ವಿಳಂಬವಾಗಬಾರದು. ತಾರತಮ್ಯ ಆಗಬಾರದು.

**ಡಾ:ಹೆಚ್.ಸಿ.ಮಹದೇವಪ್ಪ:-** ಸದಸ್ಯರಾಗಿ ನೀವು ಹೀಗೆ ಮಾತನಾಡಿದರೆ ಹೇಗೇ? As far as we are concerned, we will never discriminate.

**ಶ್ರೀ ಪ್ರದೀಪ್ ಶೆಟ್ಟರ್:-** ತಡ ಆಗಬಾರದು. ಮಾನ್ಯ ಸಚಿವರು Tendersure roads ಬಗ್ಗೆ ಹೇಳಿದರು. ಮಾನ್ಯ ಜಗದೀಶ್ ಶೆಟ್ಟರ್ ಕ್ಷೇತ್ರಕ್ಕೆ ಅದು ಬಂದು 6 ತಿಂಗಳಾಯಿತು. ಮೊನ್ನೆ ಸಚಿವ ಸಂಪುಟದಲ್ಲಿ ಅದರ ಬಗ್ಗೆ ನಿರ್ಣಯವಾಗಿದಕ್ಕಾಗಿ ನಿಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

**ಡಾ:ಹೆಚ್.ಸಿ.ಮಹದೇವಪ್ಪ:-** ಅಲ್ಲಿ ಇಡೀ ರಾತ್ರಿ ಪ್ರವಾಸ ಮಾಡಿದ್ದೇವೆ. None of the leaders from that region went around that region during nights.

**ಶ್ರೀ ಪ್ರದೀಪ್ ಶೆಟ್ಟರ್:-** ಆದಷ್ಟು ಬೇಗ ಕೆಲಸಗಳನ್ನು ಮಾಡಿಸಿ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಶ್ನೆ ಸಂಖ್ಯೆ : ೩೫೫೬**

**(ಉತ್ತರ ಪ್ರತಿ ಲಗತ್ತಿಸಲಾಗಿದೆ)**

**ಶ್ರೀ ವಿಜಯಸಿಂಗ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ಒದಗಿಸಿದ್ದಾರೆ. ಆದರೆ ಅಲ್ಲಿನ ರೈತರಿಗೆ ಖಾಸಗಿ ಕಂಪನಿಯವರು ಇನ್ನೂ ದುಡ್ಡು ಕೊಟ್ಟಿಲ್ಲ. ಅವರ ಕುಟುಂಬದವರಿಗೆ ಕೆಲಸ ಕೊಡುತ್ತಿಲ್ಲ. ಹಾಗಾಗಿ ಸಂಬಂಧಪಟ್ಟವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್:–** ಮಾನ್ಯ ಸಭಾಪತಿಯವರೇ, ನಾವು ಹೊಸ concept ನಲ್ಲಿ distributed generation of solar energyಯನ್ನು ಮಾಡುತ್ತಿದ್ದೇವೆ. ಪ್ರತಿ ತಾಲ್ಲೂಕಿಗಳಲ್ಲಿಯೂ ಕನಿಷ್ಠ ೨೦ ಮೆ.ವ್ಯಾ. ಸಾಮರ್ಥ್ಯದ ಯೋಜನೆ ಮಾಡಬೇಕು ಎಂದು ಉದ್ದೇಶಿಸಿದ್ದೇವೆ.

**ಸಭಾಪತಿಯವರು:–** ಪ್ರತಿ ತಾಲ್ಲೂಕೋ ಅಥವಾ ಪ್ರತಿ ಜಿಲ್ಲೆಯೋ ದಯವಿಟ್ಟು ಸರಿಯಾಗಿ ಹೇಳಿ. ಇದು ಒಳ್ಳೆಯ ಕಾರ್ಯಕ್ರಮವಾಗಿದೆ. ತಾವು 'ಪ್ರತಿ ತಾಲ್ಲೂಕು' ಎಂದು ಮೆಲ್ಲನೆಯ ಧ್ವನಿಯಲ್ಲಿ ಹೇಳಿದಿರಿ. ಅದಕ್ಕೆ ನಾನು ಕೇಳಿದೆ.

**ಶ್ರೀ ಡಿ.ಕೆ.ಶಿವಕುಮಾರ್:–** ಪ್ರತಿ ತಾಲ್ಲೂಕಿಗೆ ಸಂಬಂಧಪಟ್ಟಂತೆ ಈ ಯೋಜನೆ ಇದೆ. ಆದರೆ ಮಲೆನಾಡು ಮತ್ತು ಬೆಂಗಳೂರು ಸಿಟಿ ಸುತ್ತಮುತ್ತಲು ಈ ಯೋಜನೆಗಳನ್ನು ಅನುಷ್ಠಾನಗೊಳಿಸುವುದಕ್ಕೆ ಆಗುತ್ತಿಲ್ಲ. ಏಕೆಂದರೆ, ಇಲ್ಲೆಲ್ಲಾ ಜಮೀನಿನ ಬೆಲೆ ಜಾಸ್ತಿ ಇದೆ. ಒಟ್ಟು ಸುಮಾರು 130–140 ತಾಲ್ಲೂಕುಗಳಿಗೆ ಸಂಬಂಧಪಟ್ಟಂತೆ ಈ ಕಾರ್ಯಕ್ರಮವನ್ನು ಕೈಗೆತ್ತಿಕೊಂಡಿದ್ದೇವೆ. ಪ್ರತಿ ತಾಲ್ಲೂಕಿನಲ್ಲಿ ಕನಿಷ್ಠ ೨೦ ಮೆ.ವ್ಯಾ.ಸಾಮರ್ಥ್ಯದ ಯೋಜನೆ ಕೈಗೊಳ್ಳಲು ಮುಂದಾದಾಗ Central Government ನವರೂ ಮುಂದೆ ಬಂದು, ೫೦ ಮೆ.ವ್ಯಾ.ವರೆಗೆ ಆಗಬೇಕೆಂದು ಉದ್ದೇಶಿಸಿ, ಒಟ್ಟು ಎರಡೂ ಸೇರಿ ಸುಮಾರು ೩೦೦೦ ಮೆ.ವ್ಯಾ. ಆಗುತ್ತದೆ. ಇದನ್ನು ಎಲ್ಲಾ ತಾಲ್ಲೂಕುಗಳಲ್ಲೂ ಟೆಂಡರ್ ಕರೆದು ಮಾಡುತ್ತಿದ್ದೇವೆ. ಆದರೆ ಇದನ್ನು ನಮ್ಮ ಸರ್ಕಾರದಿಂದ ಮಾಡುತ್ತಿಲ್ಲ. Central Government ನವರೂ ಕೂಡ ನಮ್ಮ ತರಹವೇ ಟೆಂಡರ್ ಕರೆದಿದ್ದಾರೆ. ನಾವು ಕೇವಲ power ಮಾತ್ರ purchase ಮಾಡುತ್ತೇವೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆಯಾಯ ತಾಲ್ಲೂಕುಗಳಲ್ಲಿ ಏನು ಮೂಲಭೂತ ಸೌಲಭ್ಯಗಳು ಇವೆಯೋ ಆ ಹಿನ್ನೆಲೆಯಲ್ಲಿ ಸೋಲಾರ್‌ನಿಂದ ವಿದ್ಯುತ್ ಉತ್ಪಾದನೆ ಮಾಡಿ ಹಗಲು ಹೊತ್ತಿನಲ್ಲೇ ರೈತರಿಗೆ ಮತ್ತು ಇತರ ಅನುಭೋಗಿಗಳಗೆ ಅನುಕೂಲವಾಗುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗಿದೆ. ಬೀದರ್‌ನ ಎಲ್ಲಾ ತಾಲ್ಲೂಕುಗಳಗೂ ಈ ದಿಸೆಯಲ್ಲಿ ಅವಕಾಶ ಮಾಡಿಕೊಟ್ಟಿದ್ದೇವೆ. ಆದರೆ employment ವಿಚಾರಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಅದು ಖಾಸಗಿ ಸಂಸ್ಥೆಗಳ ವ್ಯಾಪ್ತಿಗೆ ಬರುವುದರಿಂದ, we can't take that responsibility. ಸೋಲಾರ್ ಪಾರ್ಕ್ ಮಾಡಿದ ಮೇಲೆ ಅಲ್ಲಿ ಕೇವಲ 3-4 ಜನ ಅಷ್ಟೇ ಬೇಕಾಗುತ್ತಾರೆ. ಖಾಸಗಿಯವರು ಕೆಲವು ಕಡೆ ಜಮೀನನ್ನು ಖರೀದಿ ಮಾಡುತ್ತಾರೆ, ಕೆಲವು ಕಡೆ ಜಮೀನನ್ನು ಭೋಗ್ಯಕ್ಕೆ ತೆಗೆದುಕೊಳ್ಳುತ್ತಾರೆ. We have a model as to land ಅನ್ನು lease ಗೆ ತೆಗೆದುಕೊಂಡು, ರೈತರಿಗೆ ಬಾಡಿಗೆ ಕೊಟ್ಟು ಕೂಡ ಮಾಡಿಕೊಳ್ಳಬಹುದು ಎನ್ನುವ ಕಾನ್ಸೆಪ್ಟ್ ಇದೆ. ಹೀಗಿರುವಾಗ ನಾವು employment ಗೆ ಸಂಬಂಧಪಟ್ಟಂತೆ involve ಆಗುವುದಕ್ಕಾಗುವುದಿಲ್ಲ. ಇದುಬಿಟ್ಟು ಮಾನ್ಯ ಸದಸ್ಯರು ಬೇರೆ ಸಲಹೆ ಕೊಟ್ಟರೆ ಅದನ್ನು ಕೇಳುತ್ತೇವೆ.

**ಸಭಾಪತಿಯವರು:-** ಮಾನ್ಯ ಸದಸ್ಯರು, ಖಾಸಗಿ ಸಂಸ್ಥೆಯವರು ರೈತರಿಂದ ಭೂಮಿಯನ್ನು ಖರೀದಿ ಮಾಡಿದ ಮೇಲೆ ಆ ಭೂಮಾಲೀಕರಿಗೆ ಸರಿಯಾಗಿ ಹಣ ಕೊಡುತ್ತಿಲ್ಲ, ಈ ನಿಟ್ಟಿನಲ್ಲಿ ಸರ್ಕಾರ ಗಮನಹರಿಸಬೇಕು ಎಂಬ ಬಗ್ಗೆ ಕೇಳದರು.

**ಶ್ರೀ ಡಿ.ಕೆ.ಶಿವಕುಮಾರ್:-** ಭೂ ಮಾಲೀಕರಿಂದ ಜಮೀನನ್ನು ತೆಗೆದುಕೊಂಡು, ತಮ್ಮ ಹೆಸರಿಗೆ ರಿಜಿಸ್ಟರ್ ಮಾಡಿಸಿ, conversion ಮಾಡಿಕೊಂಡ ನಂತರ ಮಾತ್ರ they can start the project. Otherwise, they can't start the project.

**ಸಭಾಪತಿಯವರು:-** ಭೂ ಮಾಲೀಕರ ಹಿತ ಕಾಪಾಡಬೇಕು ಎನ್ನುವುದು ಮಾನ್ಯ ಸದಸ್ಯರ ಉದ್ದೇಶವಾಗಿದೆ.

**ಶ್ರೀ ಡಿ.ಕೆ.ಶಿವಕುಮಾರ್:-** ನಿರ್ದಿಷ್ಟವಾಗಿ ಇಂತಹ ಭೂಮಾಲೀಕರಿಗೆ ತೊಂದರೆಯಾಗಿದೆ ಎಂಬುದನ್ನು ನಮ್ಮ ಗಮನಕ್ಕೆ ತಂದರೆ, ಯಾರು ಟೆಂಡರ್ ಹಾಕಿಕೊಂಡಿದ್ದಾರೋ ಅಂಥವರಿಗೆ information ಕೊಟ್ಟು settlement ಮಾಡುವುದಕ್ಕೆ ಹೇಳುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಶ್ನೆ ಸಂಖ್ಯೆ:3474**

**(ಉತ್ತರ ಪ್ರತಿ ಲಗತ್ತಿಸಲಾಗಿದೆ)**

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ನಮಗೆಲ್ಲರಿಗೂ ಶಿರಾಡಿ ಘಾಟ್‌ನ ಸಮಸ್ಯೆ ಏನು ಎನ್ನುವುದು ಗೊತ್ತಿದೆ. ಶಿರಾಡಿ ಘಾಟ್‌ನ ರಸ್ತೆಯ ಸಮಸ್ಯೆಗೆ ಪರಿಹಾರ ಇಲ್ಲವೇನೋ ಎಂದು ಯೋಚನೆ ಮಾಡುವ ಹಂತಕ್ಕೆ ಬಂದಿದ್ದೇವೆ. ಈ ವರ್ಷ ಮತ್ತೆ ಆ ರಸ್ತೆ ಪೂರ್ತಿ ಕೆಟ್ಟು ಹೋಗಿದೆ. ಪ್ರಯಾಣ ಮಾಡುವುದಕ್ಕೆ ಯೋಗ್ಯವಾಗಿಲ್ಲ. 12.38 ಕಿ.ಮೀ, ಕೆಂಪುಹೊಳೆಯಿಂದ ಅಡ್ಡಹೊಳೆವರೆಗಿನ ಈ ರಸ್ತೆಗೆ ಯಾವಾಗ ಮುಕ್ತಿ ಒದಗಿಸುತ್ತಾರೆ ಎನ್ನುವುದನ್ನು ಮಾನ್ಯ ಸಚಿವರು ಹೇಳಬೇಕು. ಕಳೆದ ವರ್ಷ ಈ ಪ್ರಶ್ನೆ ಕೇಳಿದಾಗ, ಆದಷ್ಟು ಬೇಗ ಕೈಗೆತ್ತಿಕೊಂಡು ಮುಗಿಸುತ್ತೇವೆ ಎಂದು ಹೇಳಿದ್ದಿರಿ. ಒಬ್ಬ ಹಳೆಯ ಕಾಂಟ್ರ್ಯಾಕ್ಟರ್ ಯಾರೋ ಕೋರ್ಟ್‌ನಲ್ಲಿ ಕೇಸ್ ಹಾಕಿದ್ದ. ಆ ಕೇಸ್ ಕ್ಲಿಯರ್ ಆಗಿದೆಯೇ ಎನ್ನುವುದನ್ನು ತಿಳಿಸಬೇಕು. ಮತ್ತೆ, ಉತ್ತರದಲ್ಲಿ ಹೇಳಿರುವಂತೆ, ಸೆಪ್ಟೆಂಬರ್ ತಿಂಗಳಿನಲ್ಲಿ ರೂ.74 ಕೋಟಿಗಳ ಆರ್ಥಿಕ ಬಿಡ್‌ಅನ್ನು ಕೇಂದ್ರ ಭೂಸಾರಿಗೆ ಮಂತ್ರಾಲಯಕ್ಕೆ ಅನುಮೋದನೆಗಾಗಿ ಕಳುಹಿಸಿದ್ದೇವೆ ಎಂದು ಹೇಳಿದ್ದೀರಿ. ಆದರೆ, 1ನೇ ಜನವರಿ 2018 ರಿಂದ ಸದರಿ ಶಿರಾಡಿ ಘಾಟ್ ರಸ್ತೆಯನ್ನು ಸಂಚಾರಕ್ಕೆ ಸ್ಥಗಿತಗೊಳಿಸುತ್ತೇವೆ ಎಂದು ಹೇಳಿರುವಿರಿ. ಅಕಸ್ಮಾತ್ ಕೇಂದ್ರದಿಂದ ಒಪ್ಪಿಗೆಯಾಗಿ ಬರದೇ ಇದ್ದರೆ ನಾವು ಮತ್ತೆ ಕಷ್ಟ ಅನುಭವಿಸಬೇಕಾಗುತ್ತದೆ. 2 ತಿಂಗಳಲ್ಲಿ ಮತ್ತೆ ಮಳೆಗಾಲ ಪ್ರಾರಂಭ ಆಗುತ್ತದೆ. ಮುಂದಿನ ವರ್ಷವೂ ಆ ರಸ್ತೆಯ ಸ್ಥಿತಿ ಹಾಗೆಯೇ ಇರುತ್ತದೆ. ನಾನು, 'ಈ ಭಾಗದ ರಸ್ತೆಯನ್ನು ಸಂಪೂರ್ಣ ಕಾಂಕ್ರೀಟ್ ಮುಖಾಂತರ ನಿರ್ಮಿಸುವ ಯೋಜನೆ ಸರ್ಕಾರದ ಮುಂದಿದೆಯೇ' ಎಂದು ಕೇಳಿರುವ ಪ್ರಶ್ನೆಗೆ, 'ಇದೆ' ಎನ್ನುವ ಉತ್ತರ ಕೊಟ್ಟಿದ್ದಾರೆ. ಇದಕ್ಕೆ ಮಾನ್ಯ ಸಚಿವರು ವಿವರ ಕೊಡಬೇಕು. ರಾಷ್ಟ್ರೀಯ ಹೆದ್ದಾರಿ-48 ಕಿ.ಮೀ. 190.00 ರಿಂದ 250.00 ಕಿ.ಮೀ. ವರೆಗಿನ 60 ಕಿ.ಮೀ., 250.62 ಕಿ.ಮೀ. ನಿಂದ 263 ಕಿ.ಮೀವರೆಗಿನ 12.38 ಕಿ.ಮೀ, ಮತ್ತು 263.00 ಕಿ.ಮೀ. ನಿಂದ 328.00 ಕಿ.ಮೀವರೆಗಿನ ಒಟ್ಟು 138.00 ಕಿ.ಮೀ ರಸ್ತೆಯ ಯೋಜನೆಯ ವೆಚ್ಚ ಎಷ್ಟು? ಇದು ಯಾವಾಗ ಮುಕ್ತಾಯವಾಗುತ್ತದೆ ಎಂಬ ವಿವರ ಕೊಡಬೇಕು.

ಮಾನ್ಯ ಸಭಾಪತಿಯವರೇ, ಸದರಿ ರಸ್ತೆಗೆ ಸಂಬಂಧಪಟ್ಟಂತೆ ಪತ್ರಿಕೆಗಳಲ್ಲಿ, ಈ ರಸ್ತೆಯನ್ನು 8 ಲೇನ್ ಆಗಿ ಮಾಡುತ್ತಾರೆ, ಬೆಂಗಳೂರಿನಿಂದ ಮಂಗಳೂರಿಗೆ 4 ಗಂಟೆ ಅವಧಿಯಲ್ಲಿ ಹೋಗುವ ನಿಟ್ಟಿನಲ್ಲಿ ಆಲೋಚನೆ ನಡೆಯುತ್ತಿದೆ ಎಂಬ ವರದಿ ಬರುತ್ತಿದೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡಾಗ ಪ್ರಸ್ತುತ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಉದ್ದೇಶಿಸಿರುವ ಯೋಜನೆಗಳ ಸ್ಥಿತಿ ಏನಾಗಿರುತ್ತದೆ? ಜಪಾನ್ ದೇಶದ ಒಂದು ಸಂಸ್ಥೆಯ ಸಹಭಾಗಿತ್ವದಲ್ಲಿ ಒಂದು ಟನಲ್ ಮಾಡಲಾಗುತ್ತದೆ ಎನ್ನುವ ವಿಚಾರ ಕೂಡ ಪತ್ರಿಕೆಯಲ್ಲಿ ಬಂದಿದೆ. 8 ಲೇನ್ ಆಗುತ್ತದೆ, ಸುರಂಗ ಆಗುತ್ತದೆ, ಹಾಗಾಗುತ್ತದೆ, ಹೀಗಾಗುತ್ತದೆ ಎಂಬ ವಿಚಾರಗಳನ್ನು ಕೇಳುತ್ತಿದ್ದೇವೆಯೇ ಹೊರತು ಆ ರಸ್ತೆ ಪರಿಸ್ಥಿತಿ ಇದ್ದ ಹಾಗೆಯೇ ಇದೆ, ಅವ್ಯವಸ್ಥೆಯಿಂದಲೇ ಕೂಡಿದೆ. ಈ ಎಲ್ಲವನ್ನೂ ಮನಸ್ಸಿನಲ್ಲಿಟ್ಟುಕೊಂಡು ಅಕಸ್ಮಾತ್ ಸುಮಾರು 12.50 ಕಿ.ಮೀ ರಸ್ತೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವುದಾದರೆ ಬದಲೀ ವ್ಯವಸ್ಥೆ ಏನು ಮಾಡುತ್ತೀರಿ? ಈ ಕುರಿತು ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ಕೋರುತ್ತೇನೆ.

**ಡಾ: ಹೆಚ್.ಸಿ.ಮಹದೇವಪ್ಪ:-**ಮಾನ್ಯ ಸಭಾಪತಿಯವರೇ, 2015ರಲ್ಲಿ ಎರಡನೆಯ ಹಂತದ ಶಿರಾಡಿ ಘಾಟ್ ಯೋಜನೆಗೆ ಟೆಂಡರ್ ಕೊಡಲಾಗಿತ್ತು. ಅವರು ಸರಿಯಾಗಿ ಕೆಲಸ ಪ್ರಾರಂಭ ಮಾಡದೇ ಇದ್ದಾಗ ಅವರನ್ನು terminate ಮಾಡಲಾಯಿತು, ಕೋರ್ಟ್‌ನಲ್ಲೂ ಕೇಸ್ ವಜಾ ಆಯಿತು. ಇದನ್ನು ಇನ್ನೊಬ್ಬರಿಗೆ award ಕೂಡ ಮಾಡಲಾಗಿದೆ, ಟೆಂಡರ್ ಓಪನ್ ಆಗಿದೆ. ಇನ್ನೊಂದು ವಾರ, 10-15 ದಿನಗಳಲ್ಲಿ work award ಮಾಡುತ್ತೇವೆ. ಜನವರಿಯಲ್ಲಿ ಕಾಮಗಾರಿಯನ್ನು ಪ್ರಾರಂಭ ಮಾಡಿ ಏಪ್ರಿಲ್ ತಿಂಗಳಲ್ಲಿ ಅದನ್ನು ಅಂತ್ಯಗೊಳಿಸಬೇಕೆಂಬ ಉದ್ದೇಶ ಇಟ್ಟುಕೊಂಡಿದ್ದೇವೆ.

ಮಾರನಹಳ್ಳಿಯಿಂದ ಕೆಂಪುಹೊಳೆ ಎಂದು ಏನು ಹೇಳುತ್ತೇವೆಯೋ, that length of 26 kms. is called Shiradi Ghat. ಇನ್ನುಳಿದುದರ ಬಗ್ಗೆ ಏನು ಹೇಳಿದರೋ ಅದು ಹಾಸನ-ಬಂಟ್ವಾಳ ರಸ್ತೆಗೆ ಸಂಬಂಧಪಟ್ಟದ್ದಾಗಿದೆ. ಕೆಲವು ಕಡೆ National Highways Authority of India (NHAI) ದವರೇ ತೆಗೆದುಕೊಂಡಿದ್ದಾರೆ. ಹಾಸನದಿಂದ ಬಂಟ್ವಾಳ ರಸ್ತೆ ಏನು ಶಿರಾಡಿ ಘಾಟ್ ಮೂಲಕ ಹಾದು ಹೋಗುತ್ತದೆಯೋ (B.C. Road) ಅದು ಮಾರನ ಹಳ್ಳಿ ಮತ್ತು ಕೆಂಪುಹೊಳೆ ಮಧ್ಯದಲ್ಲಿ ಬರುತ್ತದೆ. ಈಗ ಹೊಸ ಟೆಕ್ನಾಲಜಿ ಮೂಲಕ 13 ಕಿ.ಮೀ. ಮಾಡಿದ್ದೇವೆ. 2015ರಲ್ಲಿ ಎರಡನೆಯ ಫೇಸ್‌ಗೆ ಸಂಬಂಧಪಟ್ಟಂತೆ ಯಾರಿಗೆ ಕಾಂಟ್ರ್ಯಾಕ್ಟ್ ಕೊಡಲಾಗಿತ್ತೋ ಆತ ಮಾಡಲಿಲ್ಲವಾದ್ದರಿಂದ ಅವರನ್ನು terminate ಮಾಡಲಾಯಿತು. ಈಗ ಬೇರೆಯವರಿಗೆ ಟೆಂಡರ್ ಓಪನ್ ಆಗಿದೆ. Likely to start the work in January 2018 and complete it by April-May 2018. We will not take much time.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಸದಸ್ಯರು ಟನಲ್ ಮಾಡುವ ಯೋಜನೆಯೂ ನಡೆಯುತ್ತಿದೆಯೇ ಎಂದು ಕೇಳಿದರು. ಹೌದು, ಆ experiment ಕೂಡ ನಡೆಯುತ್ತಿದೆ. Environmentalists, Technical experts ಎಲ್ಲರೂ ಅದನ್ನು ವೀಕ್ಷಿಸಿ JICA (Japan International Cooperation Agency) ಯೋಜನೆಗೆ connect ಮಾಡಬೇಕು. First tunnel in the Country which is environment friendly ಎಂದು ಮಾಡುವ ಪ್ರಯತ್ನ ನಡೆಯುತ್ತಿದೆ. ಜಪಾನ್‌ನ JICA Bank ಕೂಡ ಇದರಲ್ಲಿ ಆಸಕ್ತಿ ವಹಿಸಿದೆ. It is under serious scrutiny. ಇದಾದರೆ ಮುಂದಿನ ದಿನಗಳಲ್ಲಿ ಅನುಕೂಲ ಆಗುತ್ತದೆ.

(ಮುಂದು . . .)

(941)14.11.2017.11.30 ಡಿಎಸ್-ಬಿಎನ್ಎಸ್

ಡಾ:ಹೆಚ್.ಸಿ.ಮಹದೇವಪ್ಪ(ಮುಂದು):-

ಜನವರಿಗೆ ಮಾಡುವಾಗ ಮತ್ತೆ ನಾವು ಈ ಕಡೆ ಚಾರ್ಮುಡಿ ಘಾಟ್, ಮಡಿಕೇರಿ, ಬಿಸಲೆಘಾಟ್‌ನಲ್ಲಿ light motor vehicles ಅನ್ನು ಬಿಟ್ಟು ಕಳೆದ ಸಲ ಮಾಡಿದ ಹಾಗೆ ವಾಹನಗಳ ಸಂಚಾರಕ್ಕೆ ತೊಂದರೆಯಾಗದ ರೀತಿಯಲ್ಲಿ ಏಪ್ರಿಲ್ ಅಂತ್ಯದಲ್ಲಿ ಇದನ್ನು ಪೂರ್ತಿ ಮಾಡುವುದಕ್ಕೆ ನಾನು ಎಲ್ಲಾ ಪ್ರಯತ್ನಗಳನ್ನು ಮಾಡುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್**:- ಮಾನ್ಯ ಸಭಾಪತಿಯವರೆ, ತಮ್ಮ ಮೂಲಕ ಮಾನ್ಯ ಸಚಿವರಿಗೆ ವಿನಂತಿ ಮಾಡುವುದೇನೆಂದರೆ, ಏನು alternative route arrangement ಮಾಡುತ್ತಾರೆ ಅಲ್ಲಿ ಆ ರಸ್ತೆಯ ನಿರ್ವಹಣೆಯನ್ನು ಮಾಡುವುದಿಲ್ಲ. ಯಾವಾಗ ವಾಹನ ದಟ್ಟಣೆ ಚಾರ್ಮುಡಿ ಘಾಟ್ ಮೇಲೆ ಹೋಗುವುದಕ್ಕೆ ಶುರುವಾಗುತ್ತದೆ ಆಗ ಈ ರಸ್ತೆ ಸರಿಯಿಲ್ಲ, ದುರಸ್ತಿ ಮಾಡುತ್ತಿದ್ದೇವೆಂದು ಹೇಳುತ್ತಾರೆ. ಆ ರಸ್ತೆಯೂ ಕೆಟ್ಟು ಹೋಗುತ್ತದೆ. ನನ್ನ ವಿನಂತಿ ಏನೆಂದರೆ, ಬದಲಿ ವ್ಯವಸ್ಥೆ ಮಾಡಿ ಅಲ್ಲಿಗೆ redirect ಮಾಡುವುದಕ್ಕಿಂತ ಮುಂಚೆ ಆ ರಸ್ತೆಗಳನ್ನು ಖಂಡಿತವಾಗಿಯೂ ಉನ್ನತೀಕರಿಸಬೇಕು ಅಥವಾ ನಿರ್ವಹಣೆ ಮಾಡಬೇಕು. ಈ ರೀತಿ ಮಾಡದಿದ್ದರೆ ಇಲ್ಲಿಯೂ ವ್ಯವಸ್ಥೆ ಸರಿ ಇರುವುದಿಲ್ಲ, ಅಲ್ಲಿಯೂ ವ್ಯವಸ್ಥೆ ಸರಿ ಇರುವುದಿಲ್ಲ. ಅದಕ್ಕೆ ಮಾನ್ಯ ಸಚಿವರು ಕ್ರಮ ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಡಾ:ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೆ, ಅವರ ಸಲಹೆಯನ್ನು ನಾನು ಗಂಭೀರವಾಗಿ ತೆಗೆದುಕೊಳ್ಳುತ್ತೇನೆ. I will see to it that the roads are made motorable.

**ಚುಕ್ಕೆ ಪ್ರಶ್ನೆ ಸಂಖ್ಯೆ:3544**
**(ಉತ್ತರ ಲಗತ್ತಿಸಲಾಗಿದೆ)**

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೆ, ವಿಯಟ್ನಾಂನಿಂದ ಕರಿಮೆಣಸು ಆಮದು ಮಾಡಿಕೊಳ್ಳುತ್ತಿರುವುದರಿಂದ ಈಗಾಗಲೇ ಕೊಡಗು ಜಿಲ್ಲೆಯಲ್ಲಿ ಸುಮಾರು ಎರಡು ತಿಂಗಳುಗಳಿಂದ ರೈತಾಪಿ ವರ್ಗದವರು, ಬೆಳೆಗಾರರು ಪ್ರತಿಭಟನೆಯನ್ನು ನಡೆಸುತ್ತಿದ್ದಾರೆ. ಅವರ ಪರವಾಗಿ ಕೆಲವು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ನಾನು ಇಷ್ಟಪಡುತ್ತಿದ್ದೇನೆ. ವಿಯಟ್ನಾಂನಿಂದ ಕರಿಮೆಣಸನ್ನು ಆಮದು ಮಾಡಿಕೊಳ್ಳುತ್ತಿರುವುದರಿಂದ ನಮ್ಮ ರಾಜ್ಯದ ಅದರಲ್ಲೂ ಕೊಡಗು, ಚಿಕ್ಕಮಗಳೂರು ಮೆಣಸು ಬೆಳಗಾರರಿಗೆ ಬಹಳ ಅನ್ಯಾಯವಾಗಿದೆ. ಕರ್ನಾಟಕದಲ್ಲಿ ಅಂದರೆ ಭಾರತದಲ್ಲಿ ಬೆಳೆಯುವ ತಳಿಗಳಲ್ಲಿ ಕಲ್‌ಚೆರಿ ಹಾಗೂ ಮಲಬಾರ್ ಉತ್ಕೃಷ್ಟ ಉತ್ಪನ್ನಗಳ ಜೊತೆಗೆ ಇನ್ನು ಅನೇಕ 20 ಕ್ಕಿಂತ ಹೆಚ್ಚು ತಳಿಗಳನ್ನು ನಮ್ಮ ರಾಜ್ಯದಲ್ಲಿ ಬೆಳೆಯುತ್ತಿದ್ದಾರೆ. ಕಳಪೆ ಗುಣಮಟ್ಟದ ಕರಿಮೆಣಸನ್ನು ಆಮದು ಮಾಡಿಕೊಂಡು ಕಲಬೆರಕೆ ಮಾಡಿ ನಮ್ಮ ರೈತರು ಆರ್ಥಿಕವಾಗಿ ಕುಸಿದಿದ್ದಾರೆ. 2017ರ ಮಾರ್ಚ್‌ನಿಂದ ವಿಯಟ್ನಾಂನಿಂದ ಕರಿಮೆಣಸು ಆಮದು ಪ್ರಾರಂಭವಾಗಿದ್ದು, ವಿಯಟ್ನಾಂನ ರಾಜಧಾನಿಯಾದ Ho Chi Minh City ಇಂದ ಬೆಂಗಳೂರಿಗೆ ಆಮದು ಮಾಡಿಕೊಳ್ಳಲಾಗುತ್ತಿದೆ. ರೋಜ್‌ಮೇರಿ ಹಾಗೂ ಜಯ್‌ಬಾಲರಾಜ್ ಸಂಸ್ಥೆಗಳು ಅದನ್ನು ಕೊಡಗಿನ ಗೋಣಿಕೊಪ್ಪ ಎ.ಪಿ.ಎಂ.ಸಿ.,ಗೆ ತಂದು ತದನಂತರ ಒಂದು ಕೆ.ಜಿ.ಗೆ ರೂ.223 ರಿಂದ ರೂ.225 ಎಂದು ದೃಢೀಕರಣಗೊಳಿಸಿ ನಂತರ Cess ಪಾವತಿಸಿ ಆ ಮೆಣಸನ್ನು ಕೊಡಗಿನ ಕಾಳು ಮೆಣಸಿನ ಜೊತೆಗೆ ಕಲಬೆರಕೆ ಮಾಡಿ ಒಂದು ಕೆ.ಜಿ.ಗೆ ರೂ.450 ಎಂದು ದೃಢೀಕರಣ ಮಾಡಿ ಮಾರಾಟ ಮಾಡುತ್ತಿದ್ದಾರೆ.

**ಸಭಾಪತಿಯವರು:-** ತಾವು ತಮ್ಮ ಪ್ರಶ್ನೆಯನ್ನು ಕೇಳಿ. ಬಹಳ ಒಳ್ಳೆಯ ಪ್ರಶ್ನೆಯನ್ನು ಪ್ರಸ್ತಾಪ ಮಾಡಿದ್ದೀರಿ. ಏನು ಮಾಡಬೇಕೆಂದು ನೀವು ಹೇಳಿ, ಮಾನ್ಯ ಸಚಿವರು ಅದಕ್ಕೆ ಉತ್ತರ ಹೇಳುತ್ತಾರೆ.

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೆ, ಈ ರೈತರಿಗೆ ಆದ ಅನ್ಯಾಯವನ್ನು ಯಾವ ರೀತಿ ಭರಿಸುತ್ತಾರೆ ಎನ್ನುವುದು ನನ್ನ ಪ್ರಶ್ನೆ. ಅದೇ ರೀತಿ ಈ ಆಡಳಿತ ಮಂಡಳಿಯ ಅಧಿಕಾರಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಶಾಮೀಲಾಗಿ ಬೇರೆಯವರಿಗೆ ಅವಕಾಶ ಮಾಡಿಕೊಟ್ಟು ಈ ತರಹ ದ್ರೋಹ ಮಾಡಿದ್ದಕ್ಕಾಗಿ ಆ ಆಡಳಿತ ಮಂಡಳಿಯವರನ್ನು ಮತ್ತು ಸಂಬಂಧಪಟ್ಟ ಅಧಿಕಾರಿಯನ್ನು ಈಗಾಗಲೇ ಅಮಾನತ್ತಿಲ್ಲಟ್ಟು ಪ್ರಕರಣವನ್ನು ದಾಖಲು ಮಾಡಲಾಗಿದೆ. ಆಡಳಿತ ಮಂಡಳಿಯವರ ಕಣ್ಣೆದುರಿಗೆ ಇಂತಹ ದುರುಪಯೋಗ ಆಗಿದ್ದು ಇದರಿಂದಾಗಿ ಕೊಡಗಿನ ರೈತರಿಗೆ ಬಹಳ ಕಷ್ಟವಾಗಿದೆ. ಅವರು ಈಗಾಗಲೇ ಬಹಳ ಸಂಕಷ್ಟದಲ್ಲಿ ಇದ್ದಾರೆ. ಹಾಗಾಗಿ ಈ ಸಂಸ್ಥೆಯನ್ನು supersede ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ಸಚಿವರೆ, ಮಾನ್ಯ ಸದಸ್ಯರು ನಿರ್ದಿಷ್ಟ ಬೇಡಿಕೆಯನ್ನು ಇಟ್ಟಿದ್ದಾರೆ.

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಕೇಳಿರುವಂತಹ ಎಲ್ಲಾ ಪ್ರಶ್ನೆಗಳಿಗೂ ಉತ್ತರವನ್ನು ಒದಗಿಸಿದ್ದೇನೆ. ನಾವು ನಮ್ಮ ರಾಜ್ಯದಲ್ಲಿ ಮುಖ್ಯವಾಗಿ 35,000 ಹೆಕ್ಟೇರ್ ಪ್ರದೇಶದಲ್ಲಿ ಕಾಳು ಮೆಣಸನ್ನು ಬೆಳೆಯುತ್ತಿದ್ದೇವೆ. ಅದರಲ್ಲಿ ಮಾನ್ಯ ಸದಸ್ಯರು ಹೇಳಿದ ಹಾಗೆ ಸಾಕಷ್ಟು ಕರಿಮೆಣಸು ನಮ್ಮ ದೇಶಕ್ಕೆ ಆಮದಾಗಿ ಬರುತ್ತಿದೆ. ಅದು ವಿಯಟ್ನಾಂನಿಂದ ಶ್ರೀಲಂಕಾಕ್ಕೆ ಹೋಗಿ ಶ್ರೀಲಂಕಾದಿಂದ ನಮಗೆ ಬರುತ್ತಿದೆ. ಶ್ರೀಲಂಕಾದಿಂದ ನಮಗೆ ಬರಬೇಕಾದರೆ 2,500 metric tons ವರೆಗೆ ಮಾತ್ರ no Customs Duty. Above 2,500 metric tons ಗೆ ಶೇಕಡ 8 ರಷ್ಟು Customs Duty ವಿಧಿಸುತ್ತಿದ್ದಾರೆ. ಬೇರೆ ದೇಶಗಳಿಂದ ಬಂದರೆ ಶೇಕಡ 24 ರಷ್ಟು Customs Duty ಮತ್ತು Asian Countries ಗಳಿಂದ ಬಂದರೆ ಶೇಕಡ 54 ರಷ್ಟು Customs Duty ಮತ್ತು ಇತರ ದೇಶಗಳಿಂದ ಬಂದರೆ ಶೇಕಡ 70 ರಷ್ಟು Customs Duty ವಿಧಿಸುತ್ತಾರೆ. ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಸಾಕಷ್ಟು ಮನವಿಗಳನ್ನು ಕೊಟ್ಟಾದ ಮೇಲೆ, ಮಾನ್ಯ ಮುಖ್ಯಮಂತ್ರಿಗಳು ಕೂಡ ದಿನಾಂಕ:2-11-2017 ರಂದು ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆದಿದ್ದಾರೆ. ಕಾಳು ಮೆಣಸಿಗೆ ತಾವು ಇನ್ನು ಹೆಚ್ಚಿನ ಸುಂಕವನ್ನು ವಿಧಿಸಬೇಕು ಮತ್ತು ನಮ್ಮ ರಾಜ್ಯದ ರೈತರಿಗೆ ಅನುಕೂಲ ಮಾಡಿಕೊಡಬೇಕೆನ್ನುವ ದೃಷ್ಟಿಯಲ್ಲಿ ನಾವು ಅವರಿಗೆ ಪತ್ರದ ಮುಖಾಂತರ ಕೇಳಿಕೊಂಡಿದ್ದೇವೆ. Customs Duty ವಿಧಿಸುವುದು ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿದೆ. ಈ ಕುರಿತು ನಾವು ಅವರಲ್ಲಿ ಕೇಳಿಕೊಂಡಿದ್ದೇವೆ.

**ಸಭಾಪತಿಯವರು:–** ಗುಣಮಟ್ಟ ನಿರ್ವಹಣೆ ಮಾಡುತ್ತಿಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್:–** ಮಾನ್ಯ ಸಭಾಪತಿಯವರೆ, ಈಗ ಅಲ್ಲಿಂದ ಕರಿಮೆಣಸು ಕಳಪೆ ಗುಣಮಟ್ಟದಲ್ಲಿಯೇ ಬರುತ್ತಿದೆ.

**ಸಭಾಪತಿಯವರು:–** ಅದನ್ನು ನಿಯಂತ್ರಿಸುವ ಬಗ್ಗೆಯೂ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ.

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:–** ಮಾನ್ಯ ಸಭಾಪತಿಯವರೆ, "ಒಂದು ಕ್ವಿಂಟಾಲ್‌ಗೆ 750 ರೂಪಾಯಿ ಇರುವ ಕರಿಮೆಣಸು ಈಗ 350 ರೂಪಾಯಿಗೆ ಬಂದಿದೆ." ನಮ್ಮ ಕೊಡಗಿನಲ್ಲಿ ಬೆಳೆಯುವ ಕರಿಮೆಣಸು ಎಂದರೆ ಇಡೀ ಪ್ರಪಂಚಕ್ಕೆ ಉತ್ತಮ ಗುಣಮಟ್ಟ ಹೊಂದಿದ್ದಂತಹ ಕರಿಮೆಣಸು. ಅದರ ಜೊತೆಗೆ ಈ ಕಳಪೆ ಗುಣಮಟ್ಟದ ಮೆಣಸನ್ನು ಬೆರೆಸುತ್ತಿದ್ದಾರೆ. ಇದರಿಂದಾಗಿ ನಮ್ಮ ರಾಜ್ಯದ ರೈತರಿಗೆ ಅನ್ಯಾಯವಾಗುತ್ತಿದೆ. ಇದರ ಬಗ್ಗೆ ಮಾನ್ಯ ಸಚಿವರು ಸೂಕ್ತ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್:–** ಮಾನ್ಯ ಸಭಾಪತಿಯವರೆ, ಶ್ರೀಲಂಕಾದಿಂದ ಬರುತ್ತಿರುವ ಮೆಣಸಿಗೆ Customs Duty paid ಅಥವಾ ಬಹಳ ಕಡಿಮೆ Customs Duty ಯನ್ನು ಕಟ್ಟಿದರೆ ಅದು ನಮಗೆ ಬರುತ್ತಿದೆ. ಆದರೆ ಅದು ಯಾವ ಗುಣಮಟ್ಟದಲ್ಲಿದೆ ಎಂಬುದು ನಮಗೆ ಗೊತ್ತಾಗುವುದಿಲ್ಲ. ನಮ್ಮ ದೇಶಕ್ಕೆ ಬಂದು ವಿವಿಧ ರಾಜ್ಯಗಳಿಂದ ಮಡಿಕೇರಿಗೆ ಬಂದು ಅಲ್ಲಿ ಮಿಕ್ಸ್ ಆಗಿ ಕಳಪೆ ಗುಣಮಟ್ಟದ ಮೆಣಸು ಮಾರಾಟವಾಗುತ್ತಿದೆ ಎಂಬ ವಾದವನ್ನು ಮಾನ್ಯ ಸದಸ್ಯರು ಮಾಡುತ್ತಿದ್ದಾರೆ. ಆದರೆ ಅದರ ಬಗ್ಗೆ ಕೇಂದ್ರ ಸರ್ಕಾರವೇ ಹೆಚ್ಚು ಗಮನ ಕೊಡಬೇಕಾಗಿದೆ.

**ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ:–** ಕಲಬೆರಕೆ ಮಾಡುವುದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ?

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್:–** ಕಲಬೆರಕೆ ಮಾಡುವುದರ ಬಗ್ಗೆ ನಿಮ್ಮವರು ಬಂದು ಮನವಿಯನ್ನು ಕೊಟ್ಟಿದ್ದರು. ಅದರ ಬಗ್ಗೆ ತನಿಖೆ ಮಾಡುವುದಕ್ಕೆ ನಾನು ಸೂಚನೆಯನ್ನು ಕೊಟ್ಟಿದ್ದೇನೆ. ತನಿಖಾ ವರದಿ ಬಂದ ಮೇಲೆ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಆಗಲೇ ಉಲ್ಲೇಖ ಮಾಡಿದರು. ಅದು ಸತ್ಯ ಇದೆ. ಆದರೆ, ಇದು ಕೇವಲ ಈ ಒಂದು ಕಾರಣಕ್ಕಾಗಿ ಆಗಿದೆಯೇ ಅಥವಾ ರೈತರು ಬೇರೆ ಸಮಸ್ಯೆಗಳಿಂದ ಸಿಕ್ಕಿಹಾಕಿಕೊಂಡಿದ್ದಾರೆಯೇ ಎಂಬುದು ಕೂಡ ಇಲ್ಲಿ ಮುಖ್ಯವಾಗುತ್ತದೆ. 750 ರೂಪಾಯಿ ಇದ್ದದು ನೇರವಾಗಿ 350 ರೂಪಾಯಿಗೆ ಬರಬೇಕಾದರೆ ಕೇವಲ ಶ್ರೀಲಂಕಾದಿಂದ ಆಮದು ಮಾಡಿಕೊಂಡಿದ್ದಾರೆ ಎನ್ನುವ ಕಾರಣಕ್ಕಾಗಿ ಸಾಧ್ಯವಿಲ್ಲ. ರೈತರ ಸಹಾಯಕ್ಕೆ ಸರ್ಕಾರ ಏನು ಕ್ರಮ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತೆಗೆದುಕೊಂಡಿದೆ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಕಲಬೆರಕೆ ಅದು ಒಂದು ಭಾಗ, ಅದನ್ನು ಸರ್ಕಾರ ನಿಲ್ಲಿಸಬೇಕಾಗಿತ್ತು. ಅದರಲ್ಲಿ ಎಲ್ಲೋ ತಪ್ಪಿದ್ದಾರೆ. ಅದನ್ನು ಅವರು ತಿದ್ದುಕೊಳ್ಳಲಿ. ಆದರೆ 750 ರೂಪಾಯಿ ಇರುವುದು 350 ರೂಪಾಯಿಗೆ ಬಂದಿದೆ ಎಂದರೆ ಕರಿಮೆಣಸು ಬೆಳೆಯುವ ರೈತ ಹೇಗೆ ಬದುಕಬೇಕು? ಅದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್:-** ಮಾನ್ಯ ಸಭಾಪತಿಯವರೆ, ಹಿಂದೆ ಅಡಿಕೆಗೂ ಇದೇ ರೀತಿ ಆಯಿತು. ಆಗ ಅಡಿಕೆಗೆ ಸುಂಕ ಬಹಳ ಕಡಿಮೆ ಇತ್ತು. ಶೇಕಡ 10 ರಷ್ಟು ಸುಂಕ ವಿಧಿಸಲಾಗಿತ್ತು. ನಮ್ಮ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಕೇಳಿಕೊಂಡಾಗ ಕೇಂದ್ರ ಸರ್ಕಾರದವರು ಸುಂಕವನ್ನು ಹೆಚ್ಚು ಮಾಡಿದರು. ಅದೇ ರೀತಿ ಅವರು ಸುಂಕವನ್ನು ಹೆಚ್ಚಿಗೆ ಮಾಡಿಸಿಕೊಂಡು ಬರಲಿ. ಆಗ ಇದು ನಮ್ಮ ದೇಶಕ್ಕೂ ಬರುವುದಿಲ್ಲ, ನಮ್ಮ ರಾಜ್ಯಕ್ಕೂ ಬರುವುದಿಲ್ಲ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ನಾವು ಮಾಡಿಕೊಂಡು ಬರಬೇಕೆಂದರೆ ನೀವು ಏಕೆ ಮಂತ್ರಿಯಾಗಬೇಕು? ನೀವು ಅದನ್ನು ಬಿಟ್ಟುಬಿಡಿ, ನಾವು ಮಾಡಿಸಿಕೊಂಡು ಬರುತ್ತೇವೆ.

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್:-** ಕೇಂದ್ರ ಸರ್ಕಾರಕ್ಕೆ ನೀವು ಸಪೋರ್ಟ್ ಮಾಡಿ. ಎಲ್ಲರೂ ಜೊತೆಗೆ ಹೋಗೋಣ.

(ಗೊಂದಲ)

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್:-** ಈಗ Anti Dumping Duty ವಿಧಿಸಿ ಎಂದು ಕೇಳಲು ನಾವು ಬರುತ್ತೇವೆ. ನಾವು ನೀವೆಲ್ಲರೂ ಮನವಿಯೊಂದಿಗೆ ಹೋಗೋಣ. ನೀವು ಸಪೋರ್ಟ್ ಮಾಡಿ. ಅಡಿಕೆ 20,000, 18,000ಕ್ಕೆ ಬಂದಿತ್ತು, ಆಗ ನಾವೆಲ್ಲರೂ ಹೋಗಿದ್ದೆವು. ಮಾನ್ಯ ಈಶ್ವರಪ್ಪನವರು ಇಲ್ಲೇ ಇದ್ದಾರೆ. ಲೋಕಸಭಾ ಸದಸ್ಯರು, ನಾವೆಲ್ಲರೂ ಹೋಗಿ ಮನವಿಯನ್ನು ಕೊಟ್ಟಾದ ಮೇಲೆ ಶೇಕಡ 50 ರಷ್ಟು ಸುಂಕವನ್ನು ವಿಧಿಸಿದರು.

**ಶ್ರೀ ಎಂ.ಕೆ.ಪ್ರಾಣೇಶ್:-** ಎಷ್ಟೆಷ್ಟು ಸುಂಕಗಳನ್ನು ವಿಧಿಸುತ್ತಾರೆ ಎನ್ನುವುದರ ಬಗ್ಗೆ ಮಾನ್ಯ ಸಚಿವರು ಮಾಹಿತಿ ಕೊಟ್ಟಿದ್ದಾರೆ. ಶ್ರೀಲಂಕಾದಿಂದ ಎಷ್ಟು ಬರುತ್ತದೆ, ವಿಯಟ್ನಾಂನಿಂದ ಎಷ್ಟು ಬರುತ್ತದೆ ಹಾಗೂ ಇಂಡೋನೇಷಿಯಾದಿಂದ ಎಷ್ಟು ಬರುತ್ತದೆ ಎಂಬುದರ ಬಗ್ಗೆ ಸರಿಯಾದ ಮಾಹಿತಿಯನ್ನು ಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ. ಏಕೆಂದರೆ ಶ್ರೀಲಂಕಾದಿಂದ ಶೇಕಡ 11 ರಷ್ಟು ಸುಂಕವನ್ನು ವಿಧಿಸುತ್ತಾರೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇಂಡೋನೇಷಿಯಾದಲ್ಲಿ ಶೇಕಡ 37 ರಷ್ಟು ಸುಂಕವನ್ನು ವಿಧಿಸುತ್ತಾರೆ, ಹಾಗೆಯೇ ವಿಯಟ್ನಾಂನಲ್ಲಿ ಶೇಕಡ 63 ರಷ್ಟು ಸುಂಕವನ್ನು ವಿಧಿಸುತ್ತಾರೆ. ಇದರಲ್ಲಿ ನಮ್ಮ ರಾಜ್ಯದ ಪಾತ್ರವೇನು ಎಂದು ಕೇಳುತ್ತಿದ್ದೇವೆ. ಕೇಂದ್ರದ ಬಗ್ಗೆ ನಾವು ಕೇಳುತ್ತಿಲ್ಲ. ನಾವು ಏಕೆ ಇದನ್ನು ಒತ್ತಾಯ ಮಾಡುತ್ತಿದ್ದೇವೆಂದರೆ, ರಾಜ್ಯ ಸರ್ಕಾರಕ್ಕೂ ಇದರಿಂದ ಎಷ್ಟೋ ಅನುಕೂಲಗಳಿವೆ. ಇವತ್ತು ಕರ್ನಾಟಕದಲ್ಲಿ ಹೆಚ್ಚು ಕಡಿಮೆ 20,000 ದಿಂದ 25,000 ಟನ್ ಕರಿಮೆಣಸಿನ ಬೆಳೆಯನ್ನು ಬೆಳೆಯುತ್ತಿದ್ದೇವೆ. ಇವತ್ತು ಕರ್ನಾಟಕದಲ್ಲಿ ಮೆಣಸಿನ ವ್ಯವಹಾರದಲ್ಲಿ ಸುಮಾರು ಒಂದು ಸಾವಿರ ಕೋಟಿ ರೂಪಾಯಿಯ ವಹಿವಾಟು ನಡೆಯುತ್ತಿದೆ. ಹಾಗಾಗಿ ಕರ್ನಾಟಕದ ಒಳಗೆ ನಾವೇನು ಮಾಡಬೇಕಾಗಿದೆ ಎಂಬುದು ಗೊತ್ತಿದೆ. SAARC (South Asian Association for Regional Cooperation) Agreement ಪ್ರಕಾರ ಶ್ರೀಲಂಕಾದಿಂದ ನಾವು ಆಮದು ಮಾಡಿಕೊಳ್ಳುತ್ತಿದ್ದೇವೆ. ಆದರೆ ನಾವು ಇಲ್ಲಿ ಮಾಡಬೇಕಾಗಿರುವ ಕೆಲಸಗಳು ನಮ್ಮ ಮುಂದೆ ಇವೆ. ನಾವು ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಬೇಕಾಗುತ್ತದೆ.

(ಮುಂದು)

942/14-11-2017/11-40/ಬಿಕೆಪಿ-ಕೆ.ಎಸ್

**ಶ್ರೀ ಪ್ರಾಣೇಶ್ ಎಂ.ಕೆ(ಮುಂದು. .)**

ಅದು ಏನೆಂದರೆ, ಇಲ್ಲಿ ಕೂಡಲೇ ಒಂದು Spices Park ಅನ್ನು ಮಾಡಬೇಕಾಗುತ್ತದೆ. ಏಕೆಂದರೆ, ಮುಂದಿನ ದಿವಸಗಳಲ್ಲಿ . . .

**ಸಭಾಪತಿಯವರು:-** ಕರಿಮೆಣಸಿನ ಬಗ್ಗೆ ಚರ್ಚೆ ಇಲ್ಲ. ಅವರು ಪ್ರಶ್ನೆ ಎತ್ತಿದ್ದಾರೆ. ಈ ವಿಚಾರ ಗಂಭೀರವಾಗಿರುವುದು ಹೌದು. ಅದರೆ, ಈ ಪ್ರಶ್ನೋತ್ತರ ಅವಧಿಯಲ್ಲಿ . . . .

**(ಗೊಂದಲ)**

**ಶ್ರೀ ಎಂ.ಕೆ ಪ್ರಾಣೇಶ್:-** ಹಾಗಾಗಿ, ದಯಮಾಡಿ ಇದರ ಬಗ್ಗೆ ಮಾಹಿತಿಯನ್ನು ಪಡೆಯುವಂತಹದ್ದು ಮತ್ತು ಕರ್ನಾಟಕಕ್ಕೂ revenue ಮಾಡುವಂತಹದ್ದು ಮತ್ತು ಇಲ್ಲಿ ಬೆಳೆಗಾರರನ್ನೂ ಉಳಿಸುವಂತಹ ಕೆಲಸ ಮಾಡುವುದು ಮಂತ್ರಿಗಳಾದ ತಮ್ಮ ಕರ್ತವ್ಯ ಇದೆ. ಹೀಗಾಗಿ, ಈ ಬಗ್ಗೆ ಸರಿಯಾದ ಮಾಹಿತಿಯನ್ನು ಮಾನ್ಯ ಸಚಿವರು ತೆಗೆದುಕೊಳ್ಳುವುದರ ಮೂಲಕ ಸದನಕ್ಕೆ ಮಾಹಿತಿಯನ್ನು ಕೊಡಿ. ನಾವು ಸಹ ಆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬೆಳೆಗಾರರು ಹೌದು. ಈ ಸಂಬಂಧ ಮಾಹಿತಿಯನ್ನು ನಾವು ಸಹ ಇಟ್ಟುಕೊಂಡಿದ್ದೇವೆ. ಕೇವಲ ಬೀಸೋ ದೊಣ್ಣೆಯನ್ನು ತಪ್ಪಿಸುವಂತಹ ಕೆಲಸಗಳು ಅಥವಾ ಸದನದಲ್ಲಿ ನಾವು ಕೇಳಿರುವಂತಹ ಪ್ರಶ್ನೆಗಳಿಗೆ ಉತ್ತರ ಕೊಟ್ಟು ಮುಗಿಸುವಂತಹ ಕೆಲಸ ಆಗಬಾರದು. ಸಂಪೂರ್ಣವಾದ ವಿವರ ನಮಗೆ ಬೇಕು.

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್:–** ನಾವು ಸಹ ಮೆಣಸು, ಅಡಿಕೆ ಬೆಳೆಯುತ್ತೇವೆ. ಮೆಣಸಿನ ಗಿಡವನ್ನು ಹಾಕಿದ್ದೇವೆ. ನಾನು ಸಹ ರೈತ. ಆ ಒಂದು ದೃಷ್ಟಿಕೋನ ಇಟ್ಟುಕೊಂಡು ಹೇಳಬೇಕೆಂದರೆ, ತಾವು ಹೇಳಿದ ಹಾಗೆ ನಮ್ಮಲ್ಲಿ 14,500 ಟನ್ ಮೆಣಸು ಉತ್ಪಾದನೆಯಾಗುತ್ತಿದೆ. ಈಗ ಶ್ರೀಲಂಕಾದಿಂದ 2,500 ಟನ್ ಮೆಣಸು ಆಮದು ಮಾಡಲಿಕ್ಕೆ zero-duty ಯಲ್ಲಿ SAARC ನಲ್ಲಿ resolution ಆಗಿದೆ. ವಿಯೆಟ್ನಾಂನಿಂದ ಶ್ರೀಲಂಕಾಕ್ಕೆ ಹೋಗಿ, ಶ್ರೀಲಂಕಾದಿಂದ ನಮ್ಮ ದೇಶಕ್ಕೆ ಬರುತ್ತದೆ. ಆ ರೀತಿಯಲ್ಲಿ ನಮ್ಮ ದೇಶಕ್ಕೆ ಇಲ್ಲಿಯವರೆಗೆ 3,200 ಮೆಟ್ರಿಕ್ ಟನ್ ಮೆಣಸು ಬಂದಿದೆ. ಅದರ ಬಗ್ಗೆ ಹೇಳಬೇಕೆಂದರೆ ಶ್ರೀಲಂಕಾದಿಂದ ನಮ್ಮ ದೇಶಕ್ಕೆ ಬರುವ 2,500 ಟನ್ ಮೆಣಸು ಆಮದಿಗೆ zero-duty ಇರುತ್ತದೆ. ಅದರ ಮೇಲ್ಪಟ್ಟು ಆದಲ್ಲಿ 8% duty ಇರುತ್ತದೆ. ಆದರೆ, ವಿಯೆಟ್ನಾಂ ಸೇರಿದಂತೆ other Asian countries ನಿಂದ ನಾವು import ಮಾಡಿದರೆ, it attracts a duty of around 54 per cent and for import of pepper from other than Asian countries duty would be around 63 per cent. ಹೀಗಾಗಿ, ಜಾಸ್ತಿ ಶ್ರೀಲಂಕಾಕ್ಕೆ divert ಆಗಿ, ಶ್ರೀಲಂಕಾದಿಂದ ನಮ್ಮ ದೇಶಕ್ಕೆ ಬರುವಂತಹ ಪದ್ಧತಿಯಾಗಿದೆ. ಅದಕ್ಕೋಸ್ಕರ ನಾವು ಕೇಂದ್ರ ಸರ್ಕಾರಕ್ಕೂ ಮನವಿ ಮಾಡಿಕೊಂಡಿದ್ದೇವೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ದಿನಾಂಕ: 02-11-2017 ರಂದು ಕೇಂದ್ರ ಸರ್ಕಾರದ ಮಂತ್ರಿಗಳಿಗೂ ಪತ್ರ ಬರೆದಿದ್ದಾರೆ. ಈ ಮೂಲಕ ನಾವು ಅವರನ್ನು ಈ ನಿಟ್ಟಿನಲ್ಲಿ ಕೇಳಿಕೊಂಡಿದ್ದೇವೆ. ಆ ಒಂದು ದೃಷ್ಟಿಕೋನದಲ್ಲಿ ಎಲ್ಲರೂ ಸೇರಿಕೊಂಡು ಕೇಂದ್ರ ಸರ್ಕಾರಕ್ಕೆ ಒತ್ತಡ ತಂದು duty ಯನ್ನು ಜಾಸ್ತಿ ಮಾಡಿಸಿದರೆ ನಮ್ಮ ರೈತರಿಗೂ ಸೇರಿದಂತೆ ಎಲ್ಲರಿಗೂ ಅನುಕೂಲವಾಗುತ್ತದೆ.

**(ಗೊಂದಲ)**

**ಸಭಾಪತಿಯವರು:–**ಇದು ಮಾನ್ಯ ಸದಸ್ಯರಾದ ಶ್ರೀಮತಿ ಎಸ್.ವೀಣಾ ಅಚ್ಚಯ್ಯನವರ ಪ್ರಶ್ನೆಯಾಗಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಪ್ರಾಣೇಶ್ ಎಂ.ಕೆ:–** ರಾಜ್ಯ ಸರ್ಕಾರದ ವತಿಯಿಂದ ಪತ್ರ ಹೋಗಬೇಕಾಗಿದ್ದು, ನೀವುಗಳು ಆ ಒಂದು ಕೆಲಸವನ್ನು ಮಾಡಬೇಕು. ಆ ರೀತಿ ಮಾಡಿದರೆ ಈ ಒಂದು ಸಮಸ್ಯೆಗೆ ಪರಿಹಾರ ಇದೆ. ನೀವು ಏನು ಪ್ರಯತ್ನಗಳನ್ನು ಮಾಡಬೇಕಾಗಿದೆ, ಅದನ್ನು ಕೂಡಲೇ ಮಾಡಬೇಕು.

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಶ್ರೀಮತಿ ಎಸ್.ವೀಣಾ ಅಚ್ಚಯ್ಯನವರು ಇನ್ನೊಂದು ಪ್ರಮುಖವಾದ ವಿಚಾರವನ್ನು ಎತ್ತಿದ್ದರು. ಅಧಿಕಾರಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಅವರು ಕೇಳಿದ್ದರು. ಅದರ ಬಗ್ಗೆ ಹೇಳಿ.

**ಶ್ರೀಮತಿ ಎಸ್**.ವೀಣಾ ಅಚ್ಚಯ್ಯ:– ಆ ಆಡಳಿತ ಮಂಡಳಿ ಮೇಲೆ ಕ್ರಮ ತೆಗೆದುಕೊಳ್ಳಬೇಕು.

**ಸಭಾಪತಿಯವರು:–** ಅದರ ಬಗ್ಗೆ ಹೇಳಿ. ಈಗ ಅದರ ಬಗ್ಗೆ ನಿಮ್ಮ ಹತ್ತಿರ ಮಾಹಿತಿ ಇದ್ದರೆ ಕೊಡಿ. ಇಲ್ಲದಿದ್ದರೆ ನಂತರ ಅವರಿಗೆ ಕಳುಹಿಸಿ ಕೊಡಿ. ಆಡಳಿತಾಧಿಕಾರಿಯನ್ನು ಅಮಾನತ್ತು ಮಾಡಿದ್ದೀರಿ. ಆದರೆ, ಆಡಳಿತ ಮಂಡಳಿಯ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲವೆಂದು ಅವರು ಕೇಳುತ್ತಿದ್ದಾರೆ.

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್:–** ಎನ್‌ಕ್ವೈರಿ ಆಗಿದೆ. ರಿಪೋರ್ಟ್ ಬಂದ ಮೇಲೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:–** ಮಾನ್ಯ ಸಭಾಪತಿಯವರೆ, ಈ ಒಂದು ಕೆಲಸ ಅವರ ಮೂಗಿನ ನೇರಕ್ಕೆ ಆಗಿದೆ. ಇಡೀ ಕೊಡಗಿನ ಬೆಳೆಗಾರರಿಗೆ ನಷ್ಟವಾಗಿದೆ. ಅದನ್ನು ನಾವು ಖಂಡಿತವಾಗಿಯೂ ಸಹ ಸಹಿಸಿಕೊಳ್ಳಲಿಕ್ಕೆ ಆಗುವುದಿಲ್ಲ. ಮತ್ತೆ sourav bunk ಬಗ್ಗೆ ಹೇಳಿದರು. ಇವರು ಒಂದು ತಿಂಗಳಿಗೆ 8 ಕೋಟಿ ರೂಪಾಯಿಗಳಷ್ಟು ಹಣ ಲೂಟಿ ಮಾಡಿಕೊಂಡು ಹೋಗಿದ್ದಾರೆ. ಹೀಗಾಗಿ, ಈ ವಿಚಾರದಲ್ಲಿ ಮುಂದಿನ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಜನರ ಪರವಾಗಿ ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:–** ಮಾನ್ಯ ಸಚಿವರು ಈ ವಿಚಾರವನ್ನು ಗಮನಿಸಬೇಕು.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಶ್ನೆ ಸಂಖ್ಯೆ 3634**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎನ್. ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಕಳೆದ 4 ವರ್ಷಗಳಿಂದ ಮಂಡ್ಯ ಜಿಲ್ಲೆಯಲ್ಲಿ ಕೃಷಿ ಇಲಾಖೆಯ ವತಿಯಿಂದ ಯಾವ ಯಾವ

ಕೃಷಿ ಉಪಕರಣಗಳನ್ನು ರೈತರಿಗೆ ಸರಬರಾಜು ಮಾಡಲಾಗಿದೆ ಎಂದು ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಅದರಲ್ಲಿ ನನ್ನ ಉಪ ಪ್ರಶ್ನೆ ಏನೆಂದರೆ, ಕೃಷಿ ಯಂತ್ರಧಾರೆ ಎನ್ನುವಂತಹ concept ಅನ್ನು ಪ್ರತಿ ಒಂದು ತಾಲ್ಲೂಕಿನಲ್ಲಿ ಏನು ಪ್ರಾರಂಭ ಮಾಡಿದ್ದಾರೆ, ಅದ್ಯಾವುದೂ ಸಹ ಕೆಲಸ ಮಾಡುತ್ತಿಲ್ಲ. ಕೃಷಿಯ ಬಗ್ಗೆ, ರೈತರ ಬಗ್ಗೆ ಮಾನ್ಯ ಕೃಷಿ ಸಚಿವರಿಗೆ ಕಾಳಜಿ ಇದೆ. ಅದಕ್ಕಾಗಿ ನಾನು ಅವರಿಗೆ ಅಭಿನಂದನೆಯನ್ನು ಕೂಡ ಸಲ್ಲಿಸುತ್ತೇನೆ. ಆದರೆ ಅಲ್ಲಿ ಇರುವಂತಹ ಅಧಿಕಾರಿ ವರ್ಗದವರು ಸರಿಯಾಗಿ ಕೆಲಸ ಮಾಡುತ್ತಿಲ್ಲ. ನಾನು ನಾಗಮಂಗಲ ತಾಲ್ಲೂಕಿನಲ್ಲಿ ಒಂದು ತಿಂಗಳಿನಿಂದ ಮತ್ತು ಅದರ ಹಿಂದೆ ನೋಡಿದ್ದೇನೆ. ಸುಮಾರು 4-5 ತಿಂಗಳಿನಿಂದ ಅಲ್ಲಿ ಯಾವ ಯಂತ್ರಗಳು ಸಹ ಕೆಲಸ ಮಾಡುತ್ತಿಲ್ಲ. ರೈತರಿಗೆ ಉಪಯೋಗಬೇಕು, ರೈತರು ಸ್ವಂತ ದುಡ್ಡಿನಿಂದ ಅದನ್ನು ಖರೀದಿ ಮಾಡಲಿಕ್ಕೆ ಆಗುವುದಿಲ್ಲವೆನ್ನುವ ಒಂದು concept ನಿಂದ ಅದನ್ನು ಮಾನ್ಯ ಕೃಷಿ ಸಚಿವರು ಪ್ರಾರಂಭ ಮಾಡಿದ್ದಾರೆ, ಅದರ ಉದ್ದೇಶ ಬಹಳ ಚೆನ್ನಾಗಿದೆ. ಆದರೆ ಅಲ್ಲಿ ಪ್ರಾರಂಭವಾಗುತ್ತಿಲ್ಲ. ಜೊತೆಗೆ ನೀವು ಏತಕ್ಕೆ ಇಲ್ಲಿ ಇದನ್ನು open ಮಾಡುತ್ತಿಲ್ಲವೆಂದು ಅಲ್ಲಿ ಹೋಗಿ ಈ ವಿಚಾರವಾಗಿ ಕೇಳಿದ್ದೇನೆ. ಅಲ್ಲಿ ಡ್ರೈವರ್‌ಗಳಿಲ್ಲ. ಇದರಲ್ಲಿ ಸಬ್ಸಿಡಿ ಇದೆ, ನಾವು ಅಲ್ಲಿ ಕೆಲಸ ಮಾಡದಿದ್ದರೆ ನಮಗೆ ಅನುಕೂಲವಿದೆ, ಎನ್ನುವ ಒಂದು ಮಾತನ್ನು ಅವರು ಹೇಳಿದ್ದಾರೆ. ಹೀಗಾಗಿ, ಮಾನ್ಯ ಕೃಷಿ ಸಚಿವರು ಇದರ ಬಗ್ಗೆ ಗಮನಹರಿಸಬೇಕು.

ಮತ್ತೆ, ಮಂಡ್ಯ ಜಿಲ್ಲೆಯಲ್ಲಿ ಎಷ್ಟು ಟಾರ್ಪಾಲ್‌ಗಳನ್ನು ಒದಗಿಸಲಾಗಿದೆ ಎಂದು ಕೇಳಿದ್ದೇನೆ. ಅದಕ್ಕೆ ಅವರು ವಿವರವನ್ನು ಕೊಟ್ಟಿದ್ದಾರೆ. ಆದರೆ, ಅಲ್ಲಿ ಕೊಟ್ಟಿರುವಂತಹ ಟಾರ್ಪಾಲ್‌ಗಳು ಬಹಳ ಕಡಿಮೆ qualityಯಿಂದ ಕೂಡಿವೆ. ಯಾರು ಟೆಂಡರ್ ಮಾಡಿದ್ದರು, ಅವರನ್ನು ಸರಿಯಾಗಿ ತಾವು ಗಮನಿಸಿಕೊಳ್ಳಬೇಕು. ಮುಂದಿನ ದಿವಸಗಳಲ್ಲಿ ಒಳ್ಳೆಯ ಗುಣಮಟ್ಟದ ಟಾರ್ಪಾಲ್‌ಗಳನ್ನು ಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಜೊತೆಗೆ ನಾನು ಇನ್ನು ಒಂದು ವಿಚಾರವನ್ನು ಹೇಳಲಿಕ್ಕೆ ಬಯಸುತ್ತೇನೆ. ಮಂಡ್ಯ ಜಿಲ್ಲೆಯಲ್ಲಿ ಬೆಳೆ ವಿಮೆಯನ್ನು ಮಾಡಿಸಿದ್ದರೂ ಸಹ ಕೃಷಿ ಇಲಾಖೆಯವರು ಸರಿಯಾಗಿ ಮಾಹಿತಿಯನ್ನು ನೀಡದೆ ರೈತರನ್ನು ಸಂಕಷ್ಟಕ್ಕೀಡು ಮಾಡಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೇನೆ. ಅದಕ್ಕೆ ಕೃಷಿ ಸಚಿವರು ಬಂದಿಲ್ಲವೆಂದು ಹೇಳಿದ್ದಾರೆ. ಈ ಒಂದು ವಿಮೆಯ ಯೋಜನೆ ರೈತರಿಗೆ ಬಹಳ ಕ್ರಾಂತಿಕಾರಕವಾದ ಯೋಜನೆಯಾಗಿದೆ. ಆದರೆ, ಸರಿಯಾಗಿ ಯಾವ್ಯಾವ ಸಮಯದಲ್ಲಿ ರೈತರು ಯಾವ್ಯಾವ ಬೆಳೆಗೆ ವಿಮೆಯನ್ನು ಮಾಡಿಸಬೇಕೆನ್ನುವ ವಿಷಯ ನಿಜವಾಗಿಯೂ ಕೂಡ ನಮ್ಮ ರೈತಾಪಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವರ್ಗಕ್ಕೆ ಸರಿಯಾಗಿ ಗೊತ್ತಿಲ್ಲ. ಇದರ ಬಗ್ಗೆ ನಮ್ಮ ಎಲ್ಲಾ ಮಾನ್ಯ ಸದಸ್ಯರುಗಳು ಕೂಡ ಈ ಒಂದು ಅಂಶವನ್ನು ಒಪ್ಪುತ್ತಾರೆಂದು ತಿಳಿದುಕೊಳ್ಳುತ್ತೇನೆ. ಜೊತೆಗೆ ಮಂಡ್ಯ ಜಿಲ್ಲೆಯ ಸುಮಾರು ರೈತರಿಗೆ ಕೃಷಿ ವಿಮೆ ತಲುಪಿಲ್ಲ. ಅದಕ್ಕಿಂತ ಇನ್ನೊಂದು ಮುಖ್ಯವಾದ ವಿಚಾರ ಏನೆಂದರೆ ರೈತರದ್ದು Bank Account ಸರಿಯಿಲ್ಲ, ಸರಿಯಾಗಿ ಅದನ್ನು ನಮೂದಿಸಿಲ್ಲವೆಂದು ಸರ್ಕಾರದವರು ಹೇಳಿದ್ದಾರೆ. ಮತ್ತೆ ಭತ್ತ ಮತ್ತು ಅಕ್ಕಿಯ ವ್ಯತ್ಯಾಸ ಕೇಂದ್ರ ಸರ್ಕಾರಕ್ಕೆ ಗೊತ್ತಿಲ್ಲದೆ ಇರುವುದರಿಂದ ಈ ವಿಮೆಯ ಹಣವನ್ನು ರೈತರಿಗೆ ತಲುಪಿಸಲಿಕ್ಕೆ ಆಗಿಲ್ಲವೆಂದು ಹೇಳಿದ್ದಾರೆ. ಮಾನ್ಯ ಸಚಿವರಿಗೆ ಈ ನಿಟ್ಟಿನಲ್ಲಿ ನನ್ನ ಒಂದು ಮನವಿ ಇದೆ. ಕೇಂದ್ರ ಸರ್ಕಾರಕ್ಕೆ ಭತ್ತ ಮತ್ತು ಅಕ್ಕಿಯ ವ್ಯತ್ಯಾಸ ಗೊತ್ತಿಲ್ಲವೆಂದು ತಾವು ಏನು ನಮೂದಿಸಿದ್ದೀರಿ, ಅದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮತ್ತು ಕೇಂದ್ರ ಕೃಷಿ ಮಂತ್ರಿಗಳಿಗೆ ಮಾಹಿತಿಯನ್ನು ಕೊಟ್ಟು ಈ ಒಂದು ಸಮಸ್ಯೆಯನ್ನು ಬೇಗ ಬಗೆಹರಿಸಬೇಕು. ಈ ಸಮಸ್ಯೆ ಬಹುಶ: ಇಡೀ ರಾಜ್ಯಕ್ಕೆ ಸಂಬಂಧಪಟ್ಟದ್ದಾಗಿದ್ದು, ಕೇವಲ ಮಂಡ್ಯ ಜಿಲ್ಲೆಗೆ ಸಂಬಂಧಪಟ್ಟಿದ್ದಲ್ಲ. ಅದರ ಬಗ್ಗೆ ಗಮನಹರಿಸಿ ಈ ಒಂದು ಸಮಸ್ಯೆಯನ್ನು ಬಗೆಹರಿಸಬೇಕು. ಜೊತೆಗೆ ಈ ವ್ಯತ್ಯಾಸವನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರುವ ಮೂಲಕ ತಾವೇ ರೈತರ ಒಂದು ಬೆಳೆಯ ವಿಮೆಯನ್ನು ಬಿಡುಗಡೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸಭಾಪತಿಯವರೆ, ಅವರ ಮೊದಲನೆಯ ಉಪ ಪ್ರಶ್ನೆ ಕೃಷಿ ಯಂತ್ರಧಾರೆ ಕೇಂದ್ರಗಳ ಬಗ್ಗೆ ಇದೆ. ಅಲ್ಲಿ ಎಷ್ಟರಮಟ್ಟಿಗೆ ಕೆಲಸ ಮಾಡಬೇಕೋ ಅಷ್ಟರಮಟ್ಟಿಗೆ ಸಕ್ರಿಯವಾಗಿ ಕೃಷಿ ಯಂತ್ರಧಾರೆ ಕೇಂದ್ರಗಳು ಕೆಲಸ ಮಾಡುತ್ತಿಲ್ಲ ಎನ್ನುವುದಾಗಿದೆ. ಆ ಸಲಹೆಯನ್ನು ನಾನು ಸ್ವಾಗತಿಸುತ್ತೇನೆ. ಈ ವಿಚಾರವನ್ನು ಮಾನ್ಯ ಸದಸ್ಯರು ಎರಡನೇ ಬಾರಿಗೆ ಪ್ರಸ್ತಾಪ ಮಾಡುತ್ತಿದ್ದಾರೆ. ಕಳೆದ ಅಧಿವೇಶನದಲ್ಲಿಯೂ ಸಹ ಪ್ರಸ್ತಾಪ ಮಾಡಿದ್ದರು. ಅದಾದ ಮೇಲೆ ನಾನು ವಿಶೇಷವಾಗಿ ಮಂಡ್ಯ ಜಿಲ್ಲೆಯ ಅಧಿಕಾರಿಗಳೊಂದಿಗೆ ಮೈಸೂರಿನಲ್ಲಿ ಒಂದು ಸಭೆಯನ್ನು ಮಾಡಿ, ಅವರುಗಳಿಗೆ ಒಂದು ರೀತಿಯಲ್ಲಿ ಖಾರವಾದಂತಹ ಮಾತಿನಲ್ಲಿ ತಾಕೀತು ಮಾಡಿ ಇಲಾಖಾ ಕಾರ್ಯಕ್ರಮಗಳ ಪ್ರಚಾರವನ್ನು ಹೆಚ್ಚಿಗೆ ಮಾಡಬೇಕೆಂದು ಹೇಳಿ, ಬಹಳ ತೀಕ್ಷ್ಣವಾಗಿ ಮಂಡ್ಯ ಜಿಲ್ಲೆಯ ಅಧಿಕಾರಿಗಳಿಗೆ ನಾನು ಸೂಚನೆಯನ್ನು ಸಹ ಕೊಟ್ಟಿದ್ದೇನೆ. ಇನ್ನು ಮುಂದುವರಿದು, ನಾನು ಡಿಸೆಂಬರ್ ತಿಂಗಳಿನಲ್ಲಿ ನಾನೇ ಮಂಡ್ಯ ಜಿಲ್ಲೆಗೆ ಹೋಗಿ ಕೃಷಿ ಯಂತ್ರಧಾರೆ ಕೇಂದ್ರಗಳಿಗೆ ಭೇಟಿಕೊಟ್ಟು, ಇನ್ನು ಅಲ್ಲಿ ಇರುವಂತಹ ಸ್ವಲ್ಪ ಸಣ್ಣ ಪುಟ್ಟ ಸಮಸ್ಯೆಗಳನ್ನು ನೇರವಾಗಿ ಅಲ್ಲಿಯೇ ಪರಿಶೀಲನೆ ಮಾಡಿ ಪರಿಹಾರ ಮಾಡುವಂತಹ ಕೆಲಸವನ್ನು ಮಾಡುತ್ತೇನೆ. ಮಾನ್ಯ ಸದಸ್ಯರುಗಳು ಸಹ ಜನ ಪ್ರತಿನಿಧಿಗಳು ಈ ಕಾರ್ಯಕ್ರಮಕ್ಕೆ ಹೆಚ್ಚಿನ ರೀತಿಯಲ್ಲಿ ಪ್ರಚಾರ ಕೊಟ್ಟರೆ ಇನ್ನೂ ಸಹ ಜನರು ಹೆಚ್ಚಿಗೆ ಅದನ್ನು ಉಪಯೋಗ ಮಾಡುತ್ತಾರೆ. ನಮ್ಮ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಂಡ್ಯ ಜಿಲ್ಲೆಯಲ್ಲಿ ಜನರು ಹೊಸ ವಿಚಾರಕ್ಕೆ ಅಳವಡಿಸಿಕೊಳ್ಳುವುದು ಸ್ವಲ್ಪ ನಿಧಾನ. "ಹೇ, ಬಿಡ್ಲಾ ನಾನು ನೋಡಿದ್ದೇನೆ" ಎಂದು ಹೇಳಿ ಒಂದು ಹಳೆಯ ರೀತಿಯಲ್ಲಿ ಹೋಗುವುದು ಸ್ವಲ್ಪ ಜಾಸ್ತಿ. ನಿಮ್ಮಂತಹವರು ಸ್ವಲ್ಪ ಧ್ವನಿಗೂಡಿಸಿದರೆ ಸ್ವಲ್ಪಮಟ್ಟಿಗೆ ಅವರ ಮನೋಭಾವವನ್ನು ಬದಲಾವಣೆ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಆದರೂ ಸಹ ನಿಮ್ಮ ಸಲಹೆ ಮತ್ತು ನೀವು ಸೂಚಿಸಿರುವ ವಿಷಯವನ್ನು ನಾನು ತಿರಸ್ಕಾರ ಮಾಡದೇ ತಮಗೆ ಮಾಹಿತಿಯನ್ನು ಕೊಡುವುದಾದರೆ, ಪೂರ್ಣವಾಗಿ ಅವುಗಳು ಏನೂ ನಿಷ್ಕ್ರಿಯೆಯಾಗಿಲ್ಲ, ಕೆಲಸ ಮಾಡುತ್ತಿವೆ. ನ್ಯೂನ್ಯತೆಗಳಿವೆ. ಆ ನ್ಯೂನ್ಯತೆಗಳನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದರೂ ಸಹ ತಮ್ಮ ಮಾಹಿತಿಗೆ ಹೇಳುವುದಾದರೆ ಕೃಷಿ ಯಂತ್ರಧಾರೆ ಕೇಂದ್ರಗಳಲ್ಲಿ ಒಟ್ಟು 19 ಕೇಂದ್ರಗಳು ಮಂಡ್ಯ ಜಿಲ್ಲೆಯಲ್ಲಿ ಸ್ಥಾಪನೆಯಾಗಿವೆ. ಸುಮಾರು 7 ಕೇಂದ್ರಗಳನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯವರು ಮಾಡಿದ್ದಾರೆ, 12 ಕೇಂದ್ರಗಳು ವಿಎಸ್‌ಟಿ(VST) ಎನ್ನುವ ಸಂಸ್ಥೆಯವರು ಮಾಡಿದ್ದಾರೆ.

**ಶ್ರೀ ಎನ್. ಅಪ್ಪಾಜಿಗೌಡ:-** ಈ ವಿಎಸ್‌ಟಿ ಸಂಸ್ಥೆಯವರದ್ದೇ ಸಮಸ್ಯೆಯಾಗಿದೆ.

**ಶ್ರೀ ಕೃಷ್ಣ ಬೈರೇಗೌಡ:-** ಹೌದು. ನಾನು ಅದರ ಬಗ್ಗೆ ಹೇಳುತ್ತೇನೆ. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯವರದ್ದು ಸಮಸ್ಯೆಯಿಲ್ಲ. ವಿ.ಎಸ್.ಟಿ. ಸಂಸ್ಥೆಯವರದ್ದು ಸಮಸ್ಯೆ ಇದೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದು ಅವರಿಗೆ ಮೊದಲನೆಯ ವರ್ಷ. ಅವರು ಆರಂಭದ ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ. ಅದನ್ನು ಸರಿ ಮಾಡೋಣ. ನಾನೇ ಅಲ್ಲಿಗೆ ಬಂದು ವೀಕ್ಷಣೆ ಮಾಡಿ ಸರಿ ಮಾಡುವಂತಹ ಕೆಲಸವನ್ನು ಮಾಡುತ್ತೇನೆ. ಆದರೆ, ಈ ವರ್ಷ ಇಲ್ಲಿಯವರೆವಿಗೂ 15,551 ಜನ ರೈತರು ಈ ಕೇಂದ್ರಗಳಲ್ಲಿ ಯಂತ್ರಗಳನ್ನು ಬಾಡಿಗೆಗೆ ಪಡೆದುಕೊಂಡಿದ್ದಾರೆ. ನ್ಯೂನತೆಗಳ ನಡುವೆಯೂ ಸಹ 15,551 ಜನ ರೈತರು ಈ ಕೇಂದ್ರಗಳಲ್ಲಿ ಉಪಯೋಗವನ್ನು ಪಡೆದುಕೊಂಡಿದ್ದಾರೆ.

ಮುಂದು. . .

(943)14.11.2017/11.50/ಎಸ್‌ವಿ-ಕೆಎಸ್

**ಶ್ರೀ ಕೃಷ್ಣ ಬೈರೇಗೌಡ (ಮುಂದು):-**

ವಿ.ಎಸ್.ಟಿ. ಕೇಂದ್ರಗಳನ್ನು ನಾವು ನೋಡಿದರೆ ಅಲ್ಲಿಯೂ ಸಹ ಸುಮಾರು ಮೂರರಿಂದ ಆರು ಲಕ್ಷ ರೂಪಾಯಿಗಳವರೆಗೆ ರೈತರು ಬಾಡಿಗೆ ರೂಪದಲ್ಲಿ ಹಣವನ್ನು ಸಂದಾಯ ಮಾಡಿದ್ದಾರೆ. ಬಾಡಿಗೆ ಬಂದಿದೆ ಎನ್ನುವುದು ಮುಖ್ಯವಲ್ಲ. ರೈತರು ಉಪಯೋಗ ಪಡೆದುಕೊಂಡಿದ್ದಾರೆ ಎನ್ನುವುದಕ್ಕೆ ಪೂರಕವಾಗಿ ನಾನು

ಅಂಕಿ-ಸಂಖ್ಯೆಗಳನ್ನು ಕೊಡುತ್ತಿದ್ದೇನೆ. ನಂತರ ಅವರು ಕೆಲಸ ಮಾಡದಿದ್ದರೆ ಅವರಿಗೆ ಅನುಕೂಲವಾಗುತ್ತದೆ ಎನ್ನುವುದು ಸರಿಯಾದ ಮಾಹಿತಿಯಲ್ಲ. ಏಕೆಂದರೆ, ಅವರು ಬರುವಂತಹ ಬಾಡಿಗೆ ಹಣದಲ್ಲಿ ಕೇಂದ್ರವನ್ನು ನಡೆಸಿಕೊಂಡು ಹೋಗಬೇಕಾಗುತ್ತದೆ. ಕೇಂದ್ರ ಸ್ಥಾಪನೆ ಮಾಡುವುದಕ್ಕೆ ಮಾತ್ರ ಹಣ ಕೊಡುತ್ತದೆ. ಕೇಂದ್ರ ಸರ್ಕಾರ ಸಹಾಯ ಧನವನ್ನು ಕೊಡುವುದಿಲ್ಲ. ಅಲ್ಲಿ ನಡೆಸಿಕೊಂಡು ಹೋಗುವ ಖರ್ಚು ಅವರಿಗೆ ಗಿಟ್ಟುವಳಿ ಆಗಲಿಲ್ಲವೆಂದರೆ ಆ ನಷ್ಟವನ್ನು ಅವರೇ ಭರಿಸಬೇಕಾಗುತ್ತದೆ. ವಿ.ಎಸ್.ಟಿ.ಯವರಿಗೆ ಒಟ್ಟು ಖರ್ಚು 1.4 ಕೋಟಿ ರೂಪಾಯಿಯಾದರೆ ಅವರಿಗೆ ಬಂದಿರುವ ಆದಾಯ ರೂ.80 ಲಕ್ಷ ರೂಪಾಯಿಗಳು. ಸುಮಾರು 24 ಲಕ್ಷ ರೂಪಾಯಿಗಳ ನಷ್ಟವನ್ನು ಅವರೇ ಭರಿಸಬೇಕಾಗುತ್ತದೆ. ಹಾಗಾಗಿ ನಾವು ಯಾವ ರೀತಿ ಇದನ್ನು design ಮಾಡಿದ್ದೇವೆಂದರೆ, ಅವರು ಇದನ್ನು ಸಕ್ರಿಯವಾಗಿ ನಡೆಸಿದರೆ ಮಾತ್ರ ಅವರು ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯ. ಅವರ ಮೇಲೆಯೂ ಬಹಳ ಜವಾಬ್ದಾರಿ ಇದೆ. ಸ್ವಲ್ಪ ಮಟ್ಟಿಗೆ ಚಾಲಕರ ಸಮಸ್ಯೆ, ರಿಪೇರಿಗಳ ಸಮಸ್ಯೆ ಇರಬಹುದು. ನಾನೇ ಒಮ್ಮೆ ಖುದ್ದಾಗಿ ಡಿಸೆಂಬರ್ ತಿಂಗಳನಲ್ಲಿ ಭೇಟಿ ಕೊಟ್ಟು ಅಂತಹ ಸಮಸ್ಯೆಗಳ ಕುರಿತು ಗಮನವನ್ನು ಹರಿಸುತ್ತೇನೆ. ಆದರೆ ನಮ್ಮ ಸರ್ಕಾರ ಬಂದ ಮೇಲೆ ಕೃಷಿ ಯಾಂತ್ರೀಕರಣಕ್ಕೆ ಹೆಚ್ಚಿನ ಒತ್ತನ್ನು ಕೊಡಲಾಗಿದೆ. ಇಂತಹ ಯೋಜನೆಗಳಿಗೆ ನಮ್ಮ ಮುಖ್ಯಮಂತ್ರಿಗಳು ತೆರೆದ ಮನಸ್ಸಿನಿಂದ ಸಹಕಾರವನ್ನು ಕೊಟ್ಟಿರುತ್ತಾರೆ. ಮಂಡ್ಯ ಜಿಲ್ಲೆಗೆ 2011-12ರಲ್ಲಿ ಕೃಷಿ ಯಾಂತ್ರೀಕರಣಕ್ಕೆ ಬಂದಂತಹ ಅನುದಾನ 3.12 ಕೋಟಿ ರೂಪಾಯಿಗಳು. 2012-13ರಲ್ಲಿ ರೂ.3.47 ಕೋಟಿ ರೂಪಾಯಿಗಳು. ಅಂತಹದ್ದು 2016-17ರಲ್ಲಿ ಕೃಷಿ ಯಾಂತ್ರೀಕರಣಕ್ಕೆ ಒಟ್ಟು 15.57 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇದರಲ್ಲಿ ರೈತರಿಗೆ ಕೃಷಿ ಯಂತ್ರಧಾರೆ ಎಲ್ಲಾ ಸೇರಿದೆ. ಮಂಡ್ಯ ಜಿಲ್ಲೆಗೆ 4 ವರ್ಷಗಳಲ್ಲಿ 5 ಪಟ್ಟು ಅನುದಾನವನ್ನು ಹೆಚ್ಚಿಗೆ ಕೊಟ್ಟಿದ್ದೇವೆ. ರಾಜ್ಯ ಮಟ್ಟದಲ್ಲಿ ಹೇಳುವುದಾದರೆ ನಾನು ಇಲಾಖೆ ಜವಾಬ್ದಾರಿ ತೆಗೆದುಕೊಂಡಾಗ ಕೃಷಿ ಯಾಂತ್ರೀಕರಣಕ್ಕೆ 127 ಕೋಟಿ ಇತ್ತು. ಮಾನ್ಯ ಮುಖ್ಯಮಂತ್ರಿಗಳು ನಾಲ್ಕು ವರ್ಷದಲ್ಲಿ 455 ಕೋಟಿ ರೂಪಾಯಿಗಳನ್ನು ಕೃಷಿ ಯಾಂತ್ರೀಕರಣಕ್ಕಾಗಿ ಕೊಟ್ಟಿದ್ದಾರೆ. ಅಂದರೆ ನಾಲ್ಕು ವರ್ಷದಲ್ಲಿ ನಾಲ್ಕು ಪಟ್ಟು ಹಣ ಹೆಚ್ಚಿಗೆ ಮಾಡಲಾಗಿದೆ. ಇಲ್ಲಿ ನಡೆಸುವಂತಹ ವ್ಯವಸ್ಥೆಯಲ್ಲಿ ನ್ಯೂನತೆಗಳಿವೆಯೆಂದು ಮಾನ್ಯ ಸದಸ್ಯರು ಹೇಳಿದರು. ಅದನ್ನು ನಾನೂ ಸಹ ಒಪ್ಪುತ್ತೇನೆ. ಸಾಧ್ಯವಾದರೆ ಮಾನ್ಯ ಸದಸ್ಯರೂ ಸಹ ನನ್ನ ಜೊತೆ ಬರಲಿ. ಹೋಗಿ ವೀಕ್ಷಣೆ ಮಾಡೋಣ.

ಎರಡನೆಯದಾಗಿ ಅವರು ಟಾರ್ಪಾಲ್ ಬಗ್ಗೆ ಉಪ ಪ್ರಶ್ನೆಯನ್ನು ಕೇಳಿದ್ದಾರೆ. ಸಾಕಷ್ಟು ಟಾರ್ಪಾಲ್‌ಗಳನ್ನು ಮಂಡ್ಯ ಜಿಲ್ಲೆಗೆ ಕೊಡಲಾಗಿದೆ. ಅದರ ಮಾಹಿತಿಯನ್ನೂ ಸಹ ಹೇಳಿ ಬಿಡುತ್ತೇನೆ. 2014-15ರಲ್ಲಿ 3,400 ಟಾರ್ಪಾಲ್‌ಗಳನ್ನು ಕೊಡಲಾಗಿದೆ. 2015-16ರಲ್ಲಿ 2,764 ಟಾರ್ಪಾಲ್‌ಗಳನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೊಡಲಾಗಿದೆ. 2016-17ರಲ್ಲಿ ಸುಮಾರು 9,584 ಟಾರ್ಪಾಲ್‌ಗಳನ್ನು ಕೊಡಲಾಗಿದೆ. ಆದರೂ ಇನ್ನು ಬೇಡಿಕೆ ಇದೆ. ಎಷ್ಟು ಸಾಧ್ಯವೋ ಅಷ್ಟನ್ನು ಕೊಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ವಾಸ್ತವವಾಗಿ ನಾವು ಕೊಡುತ್ತಿರುವ ಟಾರ್ಪಾಲ್‌ಗಳ ಬಗ್ಗೆ ಬರುತ್ತಿರುವ ದೂರು ಏನೆಂದರೆ ಸಂಖ್ಯೆ ಸಾಲುತ್ತಿಲ್ಲವೆಂದು. ಗುಣಮಟ್ಟದ ಬಗ್ಗೆ ಇದುವರೆವಿಗೂ ಯಾವುದೇ ದೂರು ಬಂದಿಲ್ಲ. ಮಾನ್ಯ ಸದಸ್ಯರ ಬಳಿ ನಿಖರವಾಗಿರುವ ಮಾಹಿತಿ ಇದ್ದರೆ ನನಗೆ ಕೊಡಲಿ. ಯಾವುದೇ ಮುಲಾಜಿಲ್ಲದೆ ಸರಿದಾರಿಗೆ ಬರುವಂತೆ ಮಾಡುತ್ತೇನೆ. ಒಳ್ಳೆಯ ಗುಣಮಟ್ಟದ ಟಾರ್ಪಾಲ್‌ಗಳನ್ನು ಸರಬರಾಜು ಮಾಡಿಲ್ಲವೆಂದರೆ, ಅವರ ಬಗ್ಗೆ ಕ್ರಮವನ್ನೂ ಸಹ ತೆಗೆದುಕೊಳ್ಳುತ್ತೇನೆ. ಹೆಚ್ಚಿಗೆ ಕೊಡುವಂತಹ ಪ್ರಯತ್ನವನ್ನೂ ಸಹ ನಾವು ಮಾಡುತ್ತೇವೆ.

ಮೂರನೆಯದಾಗಿ ಮಾನ್ಯ ಸದಸ್ಯರು ವಿಮೆಯ ಬಗ್ಗೆ ಕೇಳಿದ್ದಾರೆ. ಮಂಡ್ಯ ಜಿಲ್ಲೆಯಲ್ಲಿ ಸಾಮಾನ್ಯವಾಗಿ ವಿಮೆಗೆ ನೋಂದಣಿ ಮಾಡಿಕೊಳ್ಳುವವರ ಸಂಖ್ಯೆ ಕಡಿಮೆ. ಅಂತಹದರಲ್ಲಿ ಕಳೆದ ವರ್ಷ ನಾವು ಸ್ವಲ್ಪ ಹೆಚ್ಚಿಗೆ ಒತ್ತಡವನ್ನು ಹಾಕಿ ಪ್ರಚಾರ ಮಾಡಿದುದರಿಂದ ಹದಿನೈದರಿಂದ ಇಪ್ಪತ್ತು ಸಾವಿರದಷ್ಟು ರೈತರು ನೋಂದಣಿಯಾದರು. ಇಲ್ಲವಾದಲ್ಲಿ ಕೇವಲ ಒಂದೆರಡು ಸಾವಿರ ರೈತರು ಮಾತ್ರ ನೋಂದಣಿಯಾಗುತ್ತಿದ್ದರು.

ಭತ್ತದ ಕುರಿತಾದ ವಿಷಯ ಬಾಕಿ ಇದ್ದು, ಇದರ ಬಗ್ಗೆ ಕೇಂದ್ರ ಸರ್ಕಾರದ ಜೊತೆ ಮಾತುಕತೆ ನಡೆಸಿದ್ದೇವೆ. ಇವತ್ತಿನ ದಿವಸ ಮುಂದಿನ ಪ್ರಶ್ನೆ ಕೂಡ ಅದೇ ಆಗಿರುವುದರಿಂದ ಆ ಸಂದರ್ಭದಲ್ಲಿ ಹೆಚ್ಚಿನ ಮಾಹಿತಿಯನ್ನು ಕೊಡುತ್ತೇನೆ. ಮಾನ್ಯ ಸದಸ್ಯರು ಹೇಳಿದ ಪ್ರಕಾರ ಕೇಂದ್ರ ಸರ್ಕಾರದ ಜೊತೆಗೆ ಎರಡು ಸಭೆಯನ್ನು ಮಾಡಿರುತ್ತೇವೆ. ಒಂದು ಸಾವಿರ ರೈತರದ್ದು ಬಾಕಿ ಇದೆ. ಆದಷ್ಟು ಬೇಗ ಅದನ್ನು ಇತ್ಯರ್ಥ ಮಾಡಿ ಪಾವತಿ ಮಾಡಲಾಗುವುದು.

**ಶ್ರೀ ಎನ್.ಅಪ್ಪಾಜಿಗೌಡ**:- ಮಾನ್ಯ ಸಭಾಪತಿಯವರೇ, ಈಗ ಕೃಷಿ ಯಂತ್ರಧಾರೆಯನ್ನು ಪ್ರಾರಂಭ ಮಾಡಲಿಕ್ಕೆ ವಿ.ಎಸ್.ಟಿ.ಯವರಿಗೆ ಎಷ್ಟು percent ಸಹಾಯಧನವನ್ನು ಸರ್ಕಾರ ಕೊಡುತ್ತದೆ?

**ಶ್ರೀ ಕೃಷ್ಣ ಬೈರೇಗೌಡ**:- ಮಾನ್ಯ ಸಭಾಪತಿಯವರೇ, ವಿ.ಎಸ್.ಟಿ. ಮತ್ತೊಂದು ಎಂದಲ್ಲ. ಧರ್ಮಸ್ಥಳ ಸಂಸ್ಥೆಯವರು ಮಾಡುತ್ತಾರೆ. ವಿ.ಎಸ್.ಟಿ.ಯವರು ಇದ್ದಾರೆ, John Deere ಎನ್ನುವವರಿದ್ದಾರೆ, ಮಹೀಂದ್ರಾದವರಿದ್ದಾರೆ, ಸ್ವರಾಜ್ ಸಂಸ್ಥೆಯವರಿದ್ದಾರೆ. ಆ ಒಂದು ಕೇಂದ್ರಕ್ಕೆ ಕೇವಲ ಯಂತ್ರೋಪಕರಣಗಳ ಮೇಲೆ ಒಟ್ಟು 75 ಲಕ್ಷ ರೂಪಾಯಿಗಳಷ್ಟು ಗರಿಷ್ಠ ಬಂಡವಾಳದಲ್ಲಿ 2/3 ಭಾಗದಷ್ಟು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸರ್ಕಾರ ಬಂಡವಾಳ ಹೂಡುತ್ತದೆ. ಒಂದು ಭಾಗವನ್ನು ಆ ಸಂಸ್ಥೆಯವರು ಹೂಡಬೇಕು. ಹಿಂದಿನ ವರ್ಷ ಆ ರೀತಿ ಇತ್ತು. ಈ ವರ್ಷ ಶೇ.66.66 ಇದ್ದುದನ್ನು ಶೇ.70ಕ್ಕೆ ಬಂಡವಾಳವನ್ನು ಏರಿಕೆ ಮಾಡಿದ್ದೇವೆ. ಅದು ಇನ್ನೂ implementation ಆಗಬೇಕಾಗಿದೆ. ಹಿಂದಿನ ವರ್ಷಕ್ಕೆ 2/3 ಭಾಗದಷ್ಟು ನಮ್ಮ ಬಂಡವಾಳವನ್ನು ಹೂಡಿರುತ್ತೇವೆ.

**ಸಭಾಪತಿಯವರು:-** ಮುಂದಿನ ಪ್ರಶ್ನೆ ಶ್ರೀ ಧರ್ಮಸೇನ ಅವರದು. ಅವರು ಹಾಜರಿಲ್ಲದ ಕಾರಣ ಮುಂದಿನ ಪ್ರಶ್ನೆ ಶ್ರೀ ಘೋಟ್ನೆಕರ್ ಶ್ರೀಕಾಂತ ಲಕ್ಷ್ಮಣ ಅವರದು.

**ಪ್ರಶ್ನೆ ಸಂಖ್ಯೆ : 3481**

**(ಉತ್ತರವನ್ನು ಲಗತ್ತಿಸಲಾಗಿದೆ.)**

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ:-** ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳ ಹಾಗೂ ಧರ್ಮಾದಾಯ ದತ್ತಿ ಅಧಿನಿಯಮ 1997 (2001ರ ಕರ್ನಾಟಕ ಅಧಿನಿಯಮ ಸಂಖ್ಯೆ:33) ಹಾಗೂ 2011ರ ಕಾನೂನುಗಳ ಕುರಿತು ಸರ್ವೋಚ್ಚ ನ್ಯಾಯಾಲಯದ ಅಂತಿಮ ಆದೇಶ ಬರುವವರೆಗೆ ದೇವಸ್ಥಾನಗಳಿಗೆ ವ್ಯವಸ್ಥಾಪನಾ ಸಮಿತಿ ರಚನೆಯ ಪ್ರಕ್ರಿಯೆಯನ್ನು ತಕ್ಷಣ ಕೈಬಿಡಬೇಕೆಂದು ಒತ್ತಾಯಿಸಿ ಸಾರ್ವಜನಿಕರು ಪ್ರತಿಭಟನೆ ಮಾಡುತ್ತಿರುವುದರ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು ನೀಡಿರುವ ಲಿಖಿತ ಉತ್ತರದಲ್ಲಿ ಗಮನಕ್ಕೆ ಬಂದಿರುವುದಿಲ್ಲವೆಂದು ತಿಳಿಸಿದ್ದಾರೆ. ಆದರೆ ಈಗಾಗಲೇ ಉತ್ತರ ಕನ್ನಡ ಜಿಲ್ಲೆಯಲ್ಲಿ 126 ದೇವಸ್ಥಾನಗಳ ಟ್ರಸ್ಟಿಗಳು ಹಾಗೂ ಭಕ್ತರು ಎಲ್ಲಾ ಕೂಡಿ ಮಹಾಮಂಡಲ ರಚಿಸಿಕೊಂಡಿದ್ದಾರೆ. ಸರ್ವೋಚ್ಚ ನ್ಯಾಯಾಲಯದಿಂದ ಅಂತಿಮ ಆದೇಶ ಬರುವವರೆವಿಗೂ ಏನೂ ಮಾಡಬಾರದೆಂದು ಆದೇಶ ಮಾಡಿದರೂ ಸಹ ಉತ್ತರ ಕನ್ನಡ ಜಿಲ್ಲಾಧಿಕಾರಿಗಳು 126 ದೇವಸ್ಥಾನಗಳಿಗೆ ವ್ಯವಸ್ಥಾಪನಾ ಸಮಿತಿಯನ್ನು ರಚನೆ ಮಾಡಬೇಕೆಂದು ಒತ್ತಡವನ್ನು ಹೇರಿರುತ್ತಾರೆ. ಇದರಿಂದ ಗೊಂದಲ ಸೃಷ್ಟಿಯಾಗಿ 126 ದೇವಸ್ಥಾನದ ಟ್ರಸ್ಟಿಗಳು, ಗುರುಗಳು ಎಲ್ಲಾ ಸೇರಿ ಶಿರಸಿಯಲ್ಲಿ 06.10.2017ರಂದು ದೊಡ್ಡ ಪ್ರತಿಭಟನೆಯನ್ನು ಮಾಡಿದರು. ಆದಾಗ್ಯೂ ಸಮರ್ಪಕವಾದ ನೂತನ ಕಾಯ್ದೆಯನ್ನು ರಚಿಸುವ ಕುರಿತು ಕರಡನ್ನು ಸಿದ್ಧ ಪಡಿಸಲು ರಾಜ್ಯ ಧಾರ್ಮಿಕ ಪರಿಷತ್ತಿನ ಸಭೆಯ ತೀರ್ಮಾನದಂತೆ ರಾಜ್ಯ ಧಾರ್ಮಿಕ ಪರಿಷತ್ತಿನ ಸದಸ್ಯರು ಮತ್ತು ಇಲಾಖಾ ಅಧಿಕಾರಿಗಳನ್ನೊಳಗೊಂಡಂತೆ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ಆದೇಶ ಸಂಖ್ಯೆ: ಎಡಿಎಂ/05/ಸಿಆರ್/60/2017-18

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ದಿನಾಂಕ 31.10.2017ರಲ್ಲಿ ಸಮಿತಿಯನ್ನು ರಚಿಸಲಾಗಿರುತ್ತದೆ. ಆದಷ್ಟು ಬೇಗ ಈ ಸಮಿತಿಯ ವರದಿಯನ್ನು ತರಿಸಿಕೊಂಡು ಧರ್ಮದರ್ಶಿಗಳಿಗೂ, ಟ್ರಸ್ಟಿಗಳಿಗೂ ತೊಂದರೆಯಾಗದಂತೆ ದೇವಸ್ಥಾನಗಳನ್ನು ಕಾಪಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ. ಯಥಾಸ್ಥಿತಿ ಕಾಪಾಡಿಕೊಂಡು ಹೋಗಬೇಕೆಂದು ಸಚಿವರಲ್ಲಿ ನಾನು ಮನವಿಯನ್ನು ಮಾಡುತ್ತೇನೆ. ಇಂತಹ ಕಾನೂನನ್ನು ಈಗಾಗಲೇ ಆಂಧ್ರಪ್ರದೇಶದಲ್ಲಿ ಜಾರಿಗೆ ತಂದು 32,000 ದೇವಸ್ಥಾನಗಳಿಗೆ ಬೀಗ ಹಾಕಲಾಗಿದೆ ಎಂದು ನಮಗೆ ತಿಳಿದುಬಂದಿದೆ. ಆದ್ದರಿಂದ ಇಂತಹ ಒಂದು ಕಾನೂನನ್ನು ರಚಿಸುವಾಗ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಯಾವುದೇ ರಾಜಕೀಯ ಮಾಡಬಾರದೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಈ ಬಗ್ಗೆ ಉತ್ತರ ಕನ್ನಡ ಜಿಲ್ಲಾಧಿಕಾರಿಗಳಿಗೆ ತಿಳಿ ಹೇಳಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗೆ ನಾನು ಈಗಾಗಲೇ ಲಿಖಿತ ಉತ್ತರವನ್ನು ಕೊಟ್ಟಿರುತ್ತೇನೆ. ಆದರೆ ಸರ್ವೋಚ್ಛ ನ್ಯಾಯಾಲಯದ ಆದೇಶದನ್ವಯ ಮುಜರಾಯಿ ದೇವಸ್ಥಾನಗಳಿಗೆ ಕಮಿಟಿಗಳನ್ನು ನೇಮಿಸಬಾರದೆಂಬ ಆದೇಶಕ್ಕೆ ಹೈಕೋರ್ಟಿನಲ್ಲಿ ತಡೆಯಾಜ್ಞೆಯನ್ನು ನೀಡಲಾಗಿದೆ. ಆದ್ದರಿಂದ ನಾನು ಅಧಿಕಾರಕ್ಕೆ ಬಂದ ನಂತರ ಎಲ್ಲಾ ಕಮಿಟಿಗಳನ್ನು ಮಾಡಿದ್ದೇನೆ. 'ಎ' ವರ್ಗದ ಕಮಿಟಿಗಳನ್ನು ರಾಜ್ಯ ಧಾರ್ಮಿಕ ಪರಿಷತ್ತು ಮಾಡುತ್ತದೆ. 'ಬಿ' ಮತ್ತು 'ಸಿ' ವರ್ಗದ ಕಮಿಟಿಗಳನ್ನು ಜಿಲ್ಲಾ ಧಾರ್ಮಿಕ ಪರಿಷತ್ತುಗಳು ಮಾಡುತ್ತವೆ. ಉತ್ತರ ಕನ್ನಡ ಜಿಲ್ಲೆಯ ಬಗ್ಗೆ ಹೇಳುವುದಾದರೆ ಇಲ್ಲಿಯವರೆಗೆ ಅವರು ಜಿಲ್ಲಾ ಧಾರ್ಮಿಕ ಪರಿಷತ್ತನ್ನು ಮಾಡಿರಲಿಲ್ಲ.

(...ಮುಂದು)

(944)14.11.2017/12.00/ಕೆ.ಜಿ-ಜಿಆರ್

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ (ಮುಂದು)**:- ನಾನು ಸಚಿವನಾದ ನಂತರ ಸುಮಾರು 18 ಜಿಲ್ಲೆಗಳಿಗೆ ಜಿಲ್ಲಾ ಧಾರ್ಮಿಕ ಪರಿಷತ್ತ್‌ಅನ್ನು ರಚನೆ ಮಾಡಿದ್ದೇನೆ. 'ಬಿ' ವರ್ಗ ಮತ್ತು 'ಸಿ' ವರ್ಗದ ಕಮಿಟಿಗಳಿಗೆ ವ್ಯವಸ್ಥಾಪನ ಸಮಿತಿಗಳನ್ನು ಮಾಡುವಂತಹ ಅಧಿಕಾರ ಜಿಲ್ಲಾ ಧಾರ್ಮಿಕ ಪರಿಷತ್‌ಗೆ ಇದೆ. ಅದರಿಂದ ಜಿಲ್ಲಾ ಧಾರ್ಮಿಕ ಪರಿಷತ್‌ನವರು ಮಾಡುತ್ತಿದ್ದಾರೆ. 'ಎ' ವರ್ಗದ ಕಮಿಟಿಗಳನ್ನು ಮಾಡುವುದಕ್ಕೆ ದಾಖಲೆಗಳ ಪ್ರಕಾರ, ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುವುದನ್ನು ಮಾತ್ರ ಬಿಟ್ಟು, ಇನ್ನೂ ಉಳಿದಂತಹ ಸುಮಾರು 178ರ ಪೈಕಿ 160ರಷ್ಟನ್ನು ಈಗಾಗಲೇ ಮಾಡಿದ್ದೇವೆ. ಉಳಿದಂತಹ 'ಬಿ' ಮತ್ತು 'ಸಿ' ವರ್ಗದ ಕಮಿಟಿಗಳಿಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಧಾರ್ಮಿಕ ಪರಿಷತ್ತುನವರು ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶ ಇದೆ. ಬಹಳ ವಂಶ ಪಾರಂಪಾರಿಕವಾಗಿ ಬಂದಂತಹ ದೇವಸ್ಥಾನಗಳು, ಕುಟುಂಬಗಳಿಂದ ಬಂದಂತಹ ದೇವಸ್ಥಾನಗಳು ಮತ್ತು ಆದಾಯ ಕಡಿಮೆ ಬರುವಂತಹ ದೇವಸ್ಥಾನಗಳನ್ನು ಅವರಿಗೆ ಬಿಟ್ಟುಕೊಡಬೇಕೆಂದು ಇದೆ. ಮುಜುರಾಯಿ ಇಲಾಖೆಯವರು ಸರ್ವೇ ಮಾಡಿದಂತಹ ಸಂದರ್ಭದಲ್ಲಿ ಸುಮಾರು 34,559 ದೇವಸ್ಥಾನಗಳನ್ನು ಮುಜುರಾಯಿ ಇಲಾಖೆಗೆ ಸಂಬಂಧಪಟ್ಟಿವೆ ಎಂದು ಗುರುತಿಸಿದ್ದಾರೆ. ಆ ರೀತಿ ಗುರುತಿಸಿದ ನಂತರ ಕೆಲವು ವರ್ಷಗಳ ಹಿಂದೆ ಅಲ್ಲಿ ಇರುವಂತಹ ಅರ್ಚಕರು ಮತ್ತು ವಂಶ ಪಾರಂಪಾರಿಕವಾಗಿ ಬಂದಂತಹ ದೇವಸ್ಥಾನಗಳನ್ನು ಅವರು ಆ ಪಟ್ಟಿಯಿಂದ ತೆಗೆದುಹಾಕಬೇಕೆಂದು ಅವರು ಅರ್ಜಿನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಕೆಲವು ಜಿಲ್ಲಾಧಿಕಾರಿಗಳು ಆ ಎಲ್ಲಾ ಶಿಫಾರಸ್ಸುಗಳನ್ನು ಮಾಡಿ ಸರ್ಕಾರದ ಹಂತದಲ್ಲಿ ಬಂದು ಅವು ಹಾಗೆ ಕಡತದಲ್ಲಿ ಇವೆ. ಅದು ಯಾರಿಗೂ ಗೊತ್ತಿಲ್ಲ. ಅವರು ಏನು ಮಾಡಿದ್ದಾರೆಂದರೆ, ಪರ್ಯಾಯವಾಗಿ ಅವರನ್ನು ತೆಗೆದರೋ, ಬಿಟ್ಟರೋ, ಎಂಬ ಗೋಜಿಗೆ ಅವರು ಹೋಗಿರುವುದಿಲ್ಲ. ಅದು ತೆಗೆದಿರಬೇಕು ಎಂದು ಹಾಗೆ ಬಿಟ್ಟಿದ್ದಾರೆ. ಸರ್ಕಾರ ಅದನ್ನು ಹಾಗೆ ಉಳಿಸಿಕೊಂಡು ಬಂದಿದೆ. ಸರ್ಕಾರ ಜಿಲ್ಲಾ ಧಾರ್ಮಿಕ ಪರಿಷತ್ತುಗಳನ್ನು ಮಾಡಿದ ತಕ್ಷಣವೇ ಅವರೆಲ್ಲರೂ ಕಮಿಟಿಗಳನ್ನು ಮಾಡಬೇಕು ನಮ್ಮ ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಬರುತ್ತವೆಂದು ಹೇಳಿ ಅವರೆಲ್ಲರೂ ಕಮಿಟಿಗಳನ್ನು ಮಾಡಿ ಜಿಲ್ಲಾಧಿಕಾರಿಗಳು ಕಾನೂನು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರು. ತದನಂತರ ನನ್ನ ಗಮನಕ್ಕೆ ಬಂದಾಗ ನಾನು ಜಿಲ್ಲಾಧಿಕಾರಿಗಳ ಜೊತೆಗೆ ಮಾತನಾಡಿದ್ದೇನೆ. ಈ ಕಡತ ಸರ್ಕಾರದ ಹಂತದಲ್ಲಿ ಇದೆ. ಹಾಗಾಗಿ, ಇದನ್ನು ತಡೆಯಿರಿ ಎಂದು ಜಿಲ್ಲಾಧಿಕಾರಿಯವರಿಗೆ ಹೇಳಿದ್ದೇನೆ. ಮಾನ್ಯ ಸದಸ್ಯರ ಒಂದು ಮನವಿಯಂತೆ ಈ ಪ್ರಶ್ನೆಯನ್ನು ಕೇಳಿದ್ದಾರೆ. ಅದರಿಂದ ಸುಮಾರು 70 ದೇವಸ್ಥಾನಗಳ ಅರ್ಜಿಗಳು ಸರ್ಕಾರದ ಹಂತದಲ್ಲಿ ಕಡತ ಇದೆ. ಅದರಿಂದ ನಾನು ಈಗ ಕಾನೂನು ಬದ್ಧವಾಗಿ ತಿದ್ದುಪಡಿ ಆದೇಶದ ನಂತರ ಯಾವ ಯಾವ ದೇವಸ್ಥಾನಗಳನ್ನು ಕಾನೂನು ಬದ್ಧವಾಗಿ ಅವರಿಗೆ ವಾಪಸ್ಸು ಕೊಡಬೇಕಾಗಿದೆ ಅಂತಹ ದೇವಸ್ಥಾನಗಳನ್ನು ಬಿಟ್ಟಿಕೊಡಲು ಸರ್ಕಾರ ಸಿದ್ಧವಿದೆ. ಅವರವರ ಕುಟುಂಬ ಮತ್ತು ವಂಶಪಾರಂಪಾರಿಕವಾಗಿ ಬಂದಂತಹ ಮತ್ತು ಕಡಿಮೆ ಆದಾಯ ಹೊಂದಿರುವಂತಹ 'ಸಿ' ವರ್ಗದ ದೇವಸ್ಥಾನಗಳನ್ನು ಯಾರು ಪೂಜಾರಿಗಳು/ಅರ್ಚಕರು ಇದ್ದಾರೆ ಅವರಿಗೆ ಬಿಟ್ಟುಕೊಡುವುದಕ್ಕೆ ಕಡತ ಪರಿಶೀಲನೆಯಲ್ಲಿ ಇದೆ. ನಾನು ತಕ್ಷಣವೆ ಕಡತವನ್ನು ತರಿಸಿಕೊಂಡು ಆದಷ್ಟು ಬೇಗನೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಮಾನ್ಯ ಸದಸ್ಯರ ಪ್ರಶ್ನೆಗೆ ದೇವಸ್ಥಾನಗಳಿಗೆ ವ್ಯವಸ್ಥಾಪನ ಸಮಿತಿ ರಚನೆ ಪ್ರಕ್ರಿಯೆಯನ್ನು ತಕ್ಷಣವೇ ಕೈಬಿಡಬೇಕೆಂದು ಒತ್ತಾಯಿತಿ ಸಾರ್ವಜನಿಕರು ಪ್ರತಿಭಟನೆ ಮಾಡುತಿರುವಂತಹ ವಿಷಯ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ ಎಂದು ಹೇಳಿದ್ದಾರೆ. ಏಕೆಂದರೆ, ಬೇರೆ ಬೇರೆ ಇಲಾಖೆಗಳಿಗೆ ಹೋಲಿಸಿದರೆ, ಧಾರ್ಮಿಕ ದತ್ತಿ ಇಲಾಖೆಯಲ್ಲಿ ಬಹಳ ಕಡಿಮೆ ಕೆಲಸ ಇರುತ್ತದೆ. ಅಲ್ಲದೇ, ಸುಮಾರು ಜನ ಅಧಿಕಾರಿಗಳು ಸಹ ಆ ಇಲಾಖೆಯಲ್ಲಿ ಇದ್ದಾರೆ. ಮಾನ್ಯ ಸ್ವರ್ಣವಲ್ಲಿ ಸ್ವಾಮಿಜೀಗಳ ನೇತೃತ್ವದಲ್ಲಿ ಒಂದು ದೊಡ್ಡ ಪ್ರತಿಭಟನೆ ಸಭೆ ನಡೆದಿತ್ತು. ಸುಮಾರು 126 ಕ್ಕಿಂತ ದೇವಸ್ಥಾನಗಳ ಪ್ರಮುಖರು ಮತ್ತು ಧರ್ಮದರ್ಶಿಗಳು ಎಲ್ಲರೂ ಸೇರಿ ಇದನ್ನು ಸರ್ಕಾರದ ಗಮನಕ್ಕೆ ತರಬೇಕೆಂದೆ ಮಾಡಿದಂತಹ ಸಭೆ ಅದು. ಆ ವಿಷಯ ಸಾಕಷ್ಟು ಪತ್ರಿಕೆಗಳಲ್ಲಿ, ಟಿವಿ.ಮಾಧ್ಯಮಗಳಲ್ಲಿ ಸಾಕಷ್ಟು ಬಂದಿದೆ. ಆದರೆ, ಮಾನ್ಯ ಸಚಿವರು ಅವರ ಗಮನಕ್ಕೆ ಬಂದಿಲ್ಲವೆಂದು ಹೇಳುತ್ತಿದ್ದಾರೆ. ಆ ಇಲಾಖೆಯ ಅಧಿಕಾರಿಗಳು ಏನು ಕೆಲಸ ಮಾಡುತ್ತಿದ್ದಾರೆಂದು ನನಗೆ ಗೊತ್ತಿಲ್ಲ. ಮಾನ್ಯ ಸಚಿವರು ಜಿಲ್ಲಾಧಿಕಾರಿಗಳಿಗೆ ಸರಿಯಾಗಿ ಬುದ್ಧಿ ಹೇಳಲಿಲ್ಲವೆಂದರೆ, ಎಲ್ಲರೂ ಬಿದಿಗೆ ಇಳಿಯುವಂತಹ ಪರಿಸ್ಥಿತಿ ಬರಬಹುದು. ಅದಕ್ಕೆ ನಾನು ಹೇಳುವುದೇನೆಂದರೆ, ಅಧಿಕಾರಿಗಳಿಗೆ ಸ್ವಲ್ಪ ಬಿಸಿ ಮುಟ್ಟಿಸಿ. ಹಾಗಾದರೆ, ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಏಕೆಂದರೆ, ಸ್ವಾಮಿಜೀಗಳು ಮತ್ತು ದೇವಸ್ಥಾನಗಳ ಪ್ರಮುಖರು ಸೇರಿ ಅಷ್ಟೊಂದು ದೊಡ್ಡ ಮಟ್ಟದಲ್ಲಿ ಮಾಡಿದ ಪ್ರತಿಭಟನೆ ಸರ್ಕಾರದ ಗಮನಕ್ಕೆ ಬಂದಿಲ್ಲವೆಂದರೆ ಹೇಗೆ? ಹಾಗಾದರೆ, ಸರ್ಕಾರದ ಕೆಲಸವೇನು? ಎರಡನೆಯದು ತಕ್ಷಣವೇ ಸರ್ಕಾರ ಆ ಕಡೆಗೆ ಗಮನ ಹರಿಸಬೇಕು. ಜಿಲ್ಲಾಧಿಕಾರಿಗಳು ಸರ್ಕಾರದ ಮಾತನ್ನು ಕೇಳಿಲ್ಲವೆಂದರೆ, ಜಿಲ್ಲಾಧಿಕಾರಿಗಳು ಬೇರೆ ಯಾರ ಮಾತನ್ನು ಕೇಳುತ್ತಾರೆ?

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ (ಜವಳಿ ಹಾಗೂ ಮುಜರಾಯಿ ಸಚಿವರು):-** ಮಾನ್ಯ ಸಭಾಪತಿಯವರೆ, ಸಧ್ಯಕ್ಕೆ ಆ ದೇವಸ್ಥಾನಗಳು ಮುಜರಾಯಿ ಇಲಾಖೆಯ ವ್ಯಾಪ್ತಿಯಲ್ಲಿ ಬರುತ್ತವೆ. ಅವುಗಳನ್ನು ತೆಗೆದುಹಾಕಿಲ್ಲ. ತೆಗೆದುಹಾಕಿದ ಮೇಲೆ ಜಿಲ್ಲಾಧಿಕಾರಿಗಳು ಕಮಿಟಿಗಳನ್ನು ಮಾಡಬಾರದು. ಆಗ ಅವರಿಗೆ ಅಧಿಕಾರ ಬರುತ್ತದೆ. ಈಗ ಸಧ್ಯಕ್ಕೆ ಏನಾಗಿದೆ ಏನೆಂದರೆ, ವಂಶಪಾರಂಪಾರಿಕವಾಗಿ ಬಂದಿರುವಂತಹ ದೇವಸ್ಥಾನಗಳು ಆಗಿರಬಹದು, ಅರ್ಚಕರು ಆಗಿರಬಹುದು ಅಥವಾ ಅದಕ್ಕೆ ಸಂಬಂಧಪಟ್ಟರು ಸರ್ಕಾರಕ್ಕೆ ಇದನ್ನು ಕಳುಹಿಸಿದರು. ಆ ಕಡತ ಇಲಾಖೆಯಲ್ಲಿ ಇದೆ, ಸಧ್ಯಕ್ಕೆ ಎಲ್ಲಾ ದೇವಸ್ಥಾನಗಳು ನಮ್ಮ ಇಲಾಖೆಯ ವ್ಯಾಪ್ತಿಗೆ ಒಳಪಡುತ್ತವೆ. ಅದನ್ನು ತೆಗೆದುಹಾಕುವವರೆಗೂ ನಮ್ಮ ಇಲಾಖೆಯ ವ್ಯಾಪ್ತಿಗೆ ಬರುತ್ತದೆ. ಆ ರೀತಿ ತೆಗೆದುಹಾಕುವುದಕ್ಕೆ ಆದೇಶ ಆಗಬೇಕು. ಮೊನ್ನೆ ಕೆಲವರು ನಮ್ಮ

ಮನೆಗೆ ಬಂದು ನೋಟಿಸ್‌ನ್ನು ಕೊಟ್ಟರು. ಅವರು ಕೊಟ್ಟಿದ್ದ ತಕ್ಷಣವೇ ನಾನು ಕಡತವನ್ನು ಈಗಾಗಲೇ ತರಿಸಿ ನೋಡಿದ್ದೇನೆ. ನಮ್ಮಲ್ಲಿ ಇಲಾಖೆಯಲ್ಲಿ ಇದ್ದಂತಹ ಮೂರು ಜನ ಕಾರ್ಯದರ್ಶಿಗಳು ಹೋಗಿ ಬೇರೆ ಬೇರೆ ಪ್ರಭಾರದಲ್ಲಿ ಇದಿದ್ದರಿಂದ ಆಗಲಿಲ್ಲ. ಈಗ ಕಾರ್ಯದರ್ಶಿಯವರು ಬಂದಿದ್ದಾರೆ. ನಾನು ತಕ್ಷಣವೆ ಕ್ರಮ ತೆಗೆದುಕೊಂಡು ಅವರಿಗೆ ಯಾವುದೇ ರೀತಿಯಲ್ಲಿ ಅನ್ಯಾಯವಾಗದಂತೆ ಮಾಡುತ್ತೇನೆ. ಸ್ವರ್ಣವಲ್ಲಿ ಸ್ವಾಮಿಜೀಗಳು ದೇವಸ್ಥಾನಗಳನ್ನು, ಮಠಗಳನ್ನು ತೆಗೆದುಕೊಳ್ಳುತ್ತಿದ್ದಾರೆಂಬ ಒಂದು ನ್ಯೂಸ್‌ನ್ನು ಕೊಟ್ಟಿದ್ದಾರೆ. ನಾನು ಆ ಬಗ್ಗೆ ಅವತ್ತೇ ಒಂದು ಪತ್ರಿಕಾ ಹೇಳಿಕೆಯಲ್ಲಿ ಸ್ವಾಮಿಜೀಗಳು ತಪ್ಪು ತಿಳುವಳಿಕೆಯನ್ನು ಹೊಂದಿದ್ದಾರೆ. ನಾವು ಯಾವುದೇ ಮಠಗಳನ್ನು ಮತ್ತು ದೇವಸ್ಥಾನಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಬೇಕೆಂಬ ಅವಕಾಶವನ್ನು ಮಾಡಿಲ್ಲ. ಮೇಲಾಗಿ, ನಾವು ಯಾವುದೇ ದೇವಸ್ಥಾನಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಬೇಕೆಂದು ಮಾಡಿಲ್ಲ. ಕಾನೂನಿನ ಅಡಿಯಲ್ಲಿ ಕೆಲಸ ಮಾಡುತ್ತೇನೆಂಬ ಹೇಳಿಕೆಯನ್ನು ಪ್ರತಿಕೆ ಮೂಲಕ ಕೊಟ್ಟಿದ್ದೇನೆ. ಆದರೆ, ಮಾನ್ಯ ಸದಸ್ಯರು ‘ಸಿ’ ವರ್ಗದ ಪ್ರಶ್ನೆಗಳನ್ನು ಕೇಳಿಲ್ಲ. ಮಾನ್ಯ ಸದಸ್ಯರು ಒಟ್ಟಾರೆಯಾಗಿ, ಯಾವುದೇ ದೇವಸ್ಥಾನಗಳನ್ನು ಕಮಿಟಿಗಳನ್ನು ಮಾಡಬಾರದೆಂಬ ಪ್ರಶ್ನೆಗಳನ್ನು ಕೇಳಿದ್ದಾರೆ. ನಾನು ಅದನ್ನು ಗಮನದಲ್ಲಿ ಇಟ್ಟುಕೊಂಡು ಹೇಳಿದ್ದೇನೆ ಹೊರತು ಅವರು ಪ್ರತ್ಯೇಕವಾಗಿ ಉತ್ತರ ಕನ್ನಡ ಜಿಲ್ಲೆ ಎಂದು ಎಲ್ಲೂ ಕೇಳಿರುವುದಿಲ್ಲ. ಅದಕ್ಕೆ ನಾನು ಉತ್ತರ ಕೊಟ್ಟಿದ್ದೇನೆ. ಅದು ಸರಿ ಇದೆ. ಈಗ ಮಾನ್ಯ ಸದಸ್ಯರು ಕೊಟ್ಟಿರುವಂತಹ ಪ್ರಶ್ನೆ ಏನಿದೆ, ಅದಕ್ಕೆ ಮುಂದುವರೆದ ಭಾಗವನ್ನು ಕೇಳಿದ್ದಾರೆ. ಅದು ಏನೆಂದರೆ, ಈಗ ಇರುವಂತಹ ಕಾನೂನಿನಲ್ಲಿ ಲೋಪದೋಷಗಳು ಇವೆ. ಈ ಕಾನೂನು ಸರಿ ಇಲ್ಲ. ಅದರಿಂದ ಮಾನ್ಯ ಉಚ್ಚ ನ್ಯಾಯಾಲಯ ಅದನ್ನು ರದ್ದು ಪಡಿಸಿದೆ. ಮಾನ್ಯ ಉಚ್ಚ ನ್ಯಾಯಾಲಯ ರದ್ದು ಪಡಿಸಿದ ಮೇಲೆ, ನಾವು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆಯನ್ನು ತೆಗೆದುಕೊಂಡಿದ್ದೇವೆ. ಇದಕ್ಕೆ ಹೊಸ ಕಾನೂನನ್ನು ರಚನೆ ಮಾಡಬೇಕೆಂದು ಕೇಳಿದ ಮೇಲೆ, ನಾನು ಈಗಾಗಲೇ ರಾಜ್ಯ ಧಾರ್ಮಿಕ ಪರಿಷತ್ತಿನಲ್ಲಿ ಇಟ್ಟು ಅದನ್ನು ಚರ್ಚೆ ಮಾಡಿದ್ದೇನೆ. ಹೊಸ ಸಮಿತಿಯನ್ನು ಸಹ ರಚನೆ ಮಾಡಿದ್ದೇನೆ. ಈಗ ಸನ್ಮಾನ್ಯ ಕಾನೂನು ಸಚಿವರಿಗೆ ಮತ್ತು ಮುಖ್ಯಮಂತ್ರಿಯವರಿಗೆ ಇದರ ಬಗ್ಗೆ ಹೊಸ ಕಾನೂನನ್ನು ರಚನೆ ಮಾಡುವುದಕ್ಕೆ ಒಂದು ಉನ್ನತ ಮಟ್ಟದ ಸಮಿತಿಯನ್ನು ಮಾಡಬೇಕೆಂದು ಕೋರಿದ್ದೇನೆ. ಈ ಪ್ರಕ್ರಿಯೆ ಈಗಾಗಲೇ ಜಾರಿಯಲ್ಲಿದೆ. ಮಾನ್ಯ ಸದಸ್ಯರು ನಿಖರವಾಗಿ ಪ್ರಶ್ನೆ ಕೇಳಿದ್ದರೆ, ನಾನು ಉತ್ತರ ಕೊಡುತ್ತಿದ್ದೆ. ಆದರೆ, ಮಾನ್ಯ ಸದಸ್ಯರು ನಿಖರವಾಗಿ ಪ್ರಶ್ನೆಗಳನ್ನು ಕೇಳಿಲ್ಲ. ಒಟ್ಟಾರೆಯಾಗಿ ಪ್ರಶ್ನೆ ಕೇಳಿರುವುದರಿಂದ ನಾನು ಉತ್ತರವನ್ನು ಸಹ ಒಟ್ಟಾರೆಯಾಗಿ ಕೊಟ್ಟಿದ್ದೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ನಮಗೂ ಆಸಕ್ತಿ ಇದೆ. ಮಾನ್ಯ ಸಚಿವರ ಬಗ್ಗೆ ನಾನು ಖಂಡಿತವಾಗಿ ಟೀಕೆ ಮಾಡುತ್ತಿಲ್ಲ. ಈಗ ಮಾನ್ಯ ಸದಸ್ಯರು ಸ್ಪಷ್ಟ ಪಡಿಸಿದ್ದಾರೆ. ಉತ್ತರ ಕನ್ನಡ ಜಿಲ್ಲೆಯಲ್ಲೂ ಸಹ, 126 ದೇವಸ್ಥಾನಗಳನ್ನು ಧಾರ್ಮಿಕ ಸಮಿತಿಯವರು ಸ್ವರ್ಣವಲ್ಲಿ ಸ್ವಾಮಿಜೀಗಳ ನೇತೃತ್ವದಲ್ಲಿ ಎಲ್ಲರೂ ಸೇರಿಕೊಂಡು ಮಾಡಿದ್ದಾರೆ. ಜಿಲ್ಲಾಧಿಕಾರಿಯವರು ಸಹ, ಬೇರೆ ಬೇರೆ ಇಲಾಖೆಗಳ ಜೊತೆಗೂ ಮಾತನಾಡುತ್ತೇವೆಂದು ಮಾಡಿ. ದಯವಿಟ್ಟು ಮಾನ್ಯ ಸಚಿವರು ಅಲ್ಲಿಗೆ ಹೋಗಿ ಯಾರು ಸಂಬಂಧಪಟ್ಟ ಪ್ರಮುಖರಿದ್ದಾರೆ ಅಥವಾ ಸ್ವಾಮಿಜೀಗಳು ಯಾರು ಇದ್ದಾರೆ ಅವರ ಜೊತೆ ಒಟ್ಟಿಗೆ ಕುಳಿತುಕೊಂಡು ಒಂದು ಸಭೆ ಮಾಡಿ. ಆ ಸಭೆಯಲ್ಲಿ ಇರುವಂತಹ ಸಮಸ್ಯೆಗಳನ್ನು ಚರ್ಚೆ ಮಾಡಿ ಅದಕ್ಕೆ ಪರಿಹಾರ ಮಾಡಿ. ಮುಜರಾಯಿ ಸಚಿವರಿಗೆ ಇದಕ್ಕಿಂತ ಬೇರೆ ಏನೂ ಕೆಲಸ ಇದೆ? ಇದು ದೇವರ ಕೆಲಸ. ಇಂತಹ ಒಂದು ಅವಕಾಶ ಮಾನ್ಯ ಸಚಿವರಿಗೆ ಸಿಕ್ಕಿರುವುದು ಅವರ ಅದೃಷ್ಟ. ಬೇರೆ ಯಾರಿಗೂ ಸಹ ಇಂತಹ ಅದೃಷ್ಟ ಸಿಕ್ಕಿರುವುದಿಲ್ಲ. ಮಾನ್ಯ ಸೀತಾರಾಂ ರವರಿಗೂ ಇಂತಹ ಅದೃಷ್ಟ ಸಿಕ್ಕಿರುವುದಿಲ್ಲ. ಮಾನ್ಯ ಸಚಿವರಾದ ಡಿ.ಕೆ.ಶಿಮಕುಮಾರ್ ರವರಿಗಂತೂ ಎಂದೂ ಸಿಗಲೇ ಇಲ್ಲ. ಮುಜರಾಯಿ ಸ್ಥಾನ ಎಂದು ಸಿಗಲಿಕ್ಕೂ ಇಲ್ಲ. ಅಂತಹ ಒಂದು ಪವಿತ್ರವಾದಂತಹ ಸ್ಥಾನ ಮಾನ್ಯ ಸಚಿವರಿಗೆ ಸಿಕ್ಕಿದೆ.

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಅವಕಾಶ ಇದ್ದಾಗ ಅವರು ತೆಗೆದುಕೊಳ್ಳಲಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನನಗೆ ಆ ಯೋಗ ಸಿಕ್ಕಿಲ್ಲ.

**ಶ್ರೀ ಟ.ಎ.ಶರವಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಅವರ ಸರ್ಕಾರದ ಅವಧಿಯಲ್ಲಿ ಮನಸ್ಸು ಮಾಡಿದ್ದರೆ ತೆಗೆದುಕೊಳ್ಳಬಹುದಿತ್ತು.

**ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯರೆ, ಯಾರು ಧಾರ್ಮಿಕ ದತ್ತಿ ಇಲಾಖೆ ಮಂತ್ರಿ ಆಗುತ್ತಾರೋ, ಅವರು ಮುಂದಿನ ಚುನಾವಣೆಯಲ್ಲಿ ಸೋಲುತ್ತಾರೆ ಎನ್ನುವ ಭಯದಿಂದ ಆ ಖಾತೆಯನ್ನು ಯಾರು ತೆಗೆದುಕೊಳ್ಳುವುದಿಲ್ಲ. ಮಾನ್ಯ ಈಶ್ವರಪ್ಪನವರು ಮುಂದೆ ತೆಗೆದುಕೊಳ್ಳುವುದಾದರೆ, ತೆಗೆದುಕೊಳ್ಳಲಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ನಾನು ಇವತ್ತಿನ ತನಕ ಉಪ ಮುಖ್ಯಮಂತ್ರಿಯಾಗಲಿ, ನೀರಾವರಿ ಮಂತ್ರಿಯಾಗಲಿ, ಇಂಧನ ಸಚಿವನಾಗಲಿ, ಗ್ರಾಮೀಣಾಭಿವೃದ್ಧಿ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಚಿವನಾಗಲಿ, ಯಾವ ಯಾವ ಮಂತ್ರಿಯಾಗಿದ್ದೆ ಒಂದಕ್ಕೂ ಸಹ, ನಾನು ಮುಖ್ಯಮಂತ್ರಿಯವರಿಗೆ ಕೇಳಿಲ್ಲ. ಅವರು ಏನು ಕೊಟ್ಟಿದ್ದಾರೆ ಅದನ್ನು ತೆಗೆದುಕೊಂಡಿದ್ದೇನೆ. ಭಗವಂತನ ಕೃಪೆಯಿಂದ ಮುಂದಿನ ಬಾರಿ ಈ ಧಾರ್ಮಿಕ ದತ್ತಿ ಇಲಾಖೆ ನನಗೆ ಸಿಕ್ಕರೆ ಅದು ನನ್ನ ಸೌಭಾಗ್ಯವೆಂದು ಭಾವಿಸುತ್ತೇನೆ. ಅದು ಎರಡು ಕಾರಣಕ್ಕೆ ಒಂದು ಆಡಳಿತ ಪಕ್ಷ ಬಿದ್ದು ಹೋಗಲಿ ಎಂದು, ಎರಡನೆಯದು, ನಮ್ಮ ಸರ್ಕಾರ ಬರುತ್ತದೆಂದು ಒಪ್ಪಿಕೊಂಡ ಹಾಗೆ. ಮುಖ್ಯಮಂತ್ರಿಯವರು ಧಾರ್ಮಿಕ ದತ್ತಿ ಇಲಾಖೆಯನ್ನು ಕೊಟ್ಟರೆ, ನಾನು ಖಂಡಿತವಾಗಿ ಅದನ್ನು ತೆಗೆದುಕೊಳ್ಳುತ್ತೇನೆ. ಈಗ ಆ ವಿಷಯ ಬಿಡಿ. ನಾನು ಕೊನೆಯದಾಗಿ ಹೇಳುವುದೇನೆಂರೆ, ಇದರ ಬಗ್ಗೆ ಸಭೆಯಲ್ಲಿ ಇಷ್ಟೆಲ್ಲಾ ಚರ್ಚೆ ಮಾಡಿದ ಸಂದರ್ಭದಲ್ಲಿ ಮಾನ್ಯ ಸಚಿವರು ದಯವಿಟ್ಟು ಅಲ್ಲಿ ಒಂದು ಸಭೆ ಮಾಡಿ. ಮಾನ್ಯ ಸಚಿವರಿಗೆ ಅವಕಾಶ ಸಿಕ್ಕರೆ ನನಗೂ ಸಹ ಒಂದು ಪೋನ್ ಮಾಡಿ. ನಾನು ಸಹ ಬರುತ್ತೇನೆ. ಇದು ಬಹಳ ಒಳ್ಳೆಯ ಕೆಲಸ. ಮಾನ್ಯ ಸಚಿವರು ಸ್ವರ್ಣವಲ್ಲಿ ಸ್ವಾಮಿಜೀಗಳ ಹತ್ತಿರ ಹೋಗಿ ಅವರನ್ನು ಕರೆಸಿ ಒಂದು ಸಭೆಯನ್ನು ಮಾಡಿದರೆ, ಅದಕ್ಕೆ ನಾನು ಸಹ ಬರುತ್ತೇನೆ. ಇದು ಬಹಳ ಒಳ್ಳೆಯ ಕೆಲಸ ಇದಾಗುತ್ತದೆ. ದಯವಿಟ್ಟು ಮಾನ್ಯ ಸಚಿವರು ಅಲ್ಲಿ ಒಂದು ಸಭೆ ಮಾಡಿ ಈ ಸಮಸ್ಸೆಯನ್ನು ಬಗೆಹರಿಸಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ಮಾನ್ಯ ಯತ್ನಾಳ್‌ರವರು ಮಾತನಾಡುವುದಕ್ಕೆ ಅವಾಗಿನಿಂದ ಕೈ ಎತ್ತುತ್ತಿದ್ದಾರೆ. ಅದಕ್ಕೆ ಅವರ ಪ್ರಶ್ನೆ ಏನೆಂದು ಕೇಳೋಣ. ಯತ್ನಾಳ್‌ರವರೆ, ನಿಮ್ಮ ಪ್ರಶ್ನೆ ಏನೆಂದು ಕೇಳಿ.

**ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಹಿಂದೂ ಧಾರ್ಮಿಕ ಸಂಸ್ಥೆಗಳ ಅಧಿನಿಯಮವನ್ನು ಕರ್ನಾಟಕ ಉಚ್ಚ ನ್ಯಾಯಾಲಯ ಈಗಾಗಲೇ ಸಂಪೂರ್ಣವಾಗಿ ಅದನ್ನು ರದ್ದು ಮಾಡಬೇಕೆಂದು ಆದೇಶ ಹೊರಡಿಸದೆ, ರಾಜ್ಯ ಸರ್ಕಾರ ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಹೋಗಿದೆ. ಒಂದು ವೇಳೆ ಹಿಂದೂ ದೇವಲಾಯಲಗಳನ್ನು ತೆಗೆದುಕೊಳ್ಳಬಾರದೆಂಬ ಪ್ರಮಾಣಿಕವಾದಂತಹ ಕಳಕಳಿ ಸರ್ಕಾರಕ್ಕೆ ಇದ್ದರೆ, ಸರ್ವೋಚ್ಚ ನ್ಯಾಯಾಲಯದಲ್ಲಿ ತೆಗೆದುಕೊಂಡಿರುವಂತಹ ತಡೆಯಾಜ್ಞೆಯನ್ನು ವಾಪಸ್ಸು ತೆಗೆದುಕೊಳ್ಳಿ. ಸರ್ಕಾರ ಒಂದು ಕಡೆ ತಡೆಯಾಜ್ಞೆಯನ್ನು ತೆಗೆದುಕೊಳ್ಳುತ್ತೀರಿ.

(ಮುಂದು...)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(945)14.11.2017-12.10-ಎಂವಿ-ಜಿಆರ್

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಮುಂದು):-**

ಸದನದಲ್ಲಿ ಹೇಳುತ್ತಿದ್ದೀರಿ, ಕುಟುಂಬಕ್ಕೆ ಸಂಬಂಧಪಟ್ಟಂತಹ, ಒಂದು ಜಾತಿ ಅಥವಾ ವರ್ಗಕ್ಕೆ ಸಂಬಂಧಪಟ್ಟಂತಹ ದೇವಸ್ಥಾನಗಳು ಇಂದಿಗೂ ಇವೆ. ಮಾನ್ಯ ಸಭಾಪತಿಯವರೆ, ನಮ್ಮದೇ ಶ್ರೀ ಸಿದ್ಧೇಶ್ವರ ದೇವಸ್ಥಾನ ಇದೆ. ಕೆಲವೊಂದು ಹಿಂದೂ ದೇವಸ್ಥಾನಗಳನ್ನು ಸರ್ಕಾರ ಕಟ್ಟಿರುವುದಿಲ್ಲ, ಅವುಗಳನ್ನು ಭಕ್ತರು ಕಟ್ಟಿರುತ್ತಾರೆ. ಈ ದೇಶದಲ್ಲಿ ಏನಾಗಿದೆ ಎಂದರೆ, ಕೆಲವು ಹಿಂದೂ ದೇವಾಲಯಗಳ ಮೇಲೆ ಸರ್ಕಾರದ ನಿಯಂತ್ರಣ ಇದೆ. ಆದರೆ, ಮಸೀದಿಗಳ ಮೇಲೆ ನಿಯಂತ್ರಣವಿಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರು ತಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್):-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರಲ್ಲಿ ಕೇಳುತ್ತಿದ್ದೇನೆ. ತಾವು ಇವತ್ತಿನ ದಿವಸ ಏನು ಹೇಳಿದ್ದೀರಿ, ನೀವು ಸುಪ್ರೀಂ ಕೋರ್ಟ್‌ನಲ್ಲಿ ಹಾಕಿರುವಂತಹ ಮೇಲ್ಮನವಿಯನ್ನು ತಕ್ಷಣ ವಾಪಸ್ಸು ತೆಗೆದುಕೊಳ್ಳಿ. ಯಾರು ಪರಂಪರಾಗತವಾಗಿ ಪ್ರತಿಯೊಂದು ದೇವಸ್ಥಾನದ ಮೇಲೂ ಆಯಾಯ ಗ್ರಾಮದಲ್ಲಿ ಸಹ ಒಂದೊಂದು ಆಡಳಿತ ಮಂಡಳಿ ಇದೆ.

**ಸಭಾಪತಿಯವರು:-** ಈಗ ಮಾನ್ಯ ಸಚಿವರು ಏನು ಮಾಡಬೇಕೆಂದು ಹೇಳಿ, ನಿಮ್ಮ ವ್ಯಾಖ್ಯಾನಾ ಬೇಡ. ಪ್ರಶ್ನೆಯನ್ನು ಕೇಳಿ, ಇದು ಪ್ರಶ್ನೋತ್ತರ ವೇಳೆ.

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್):-** ಮಾನ್ಯ ಸಭಾಪತಿಯವರೇ, ಕೆಲವೊಂದು ಸಮಯ ಭಕ್ತರು ಬೇರೆ, ಕಟ್ಟಿದವರು ಬೇರೆ ಇರುತ್ತಾರೆ. ಈ ಸರ್ಕಾರ ತಮ್ಮ ಪಕ್ಷದ ಕಾರ್ಯಕರ್ತರನ್ನು ಆ ದೇವಸ್ಥಾನಗಳ ಟ್ರಸ್ಟಿಗಳನ್ನಾಗಿ ನಾಮನಿರ್ದೇಶನ ಮಾಡುವಂತಹ ಕೆಟ್ಟ ಸಂಸ್ಕೃತಿ ಬಂದಿದೆ, ಇದು ಹೋಗಬೇಕು. ಈ ರೀತಿಯಾಗಿ ನಾಮ ನಿರ್ದೇಶನ ಮಾಡುವುದು. ಅಗತ್ಯವಿದ್ದರೆ ಯಾರು ನಿಜವಾದಂತಹವರು ಇದ್ದಾರೆ ಅಂತಹವರನ್ನು ನೇಮಕ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ಸಚಿವರಿಗೆ ಸಂಬಂಧಪಟ್ಟಂತೆ ನನ್ನದೊಂದು ಪ್ರಶ್ನೆ ಇದೆ.

**ಸಭಾಪತಿಯವರು:-** ಮಾನ್ಯ ಸಚಿವರು ಉತ್ತರ ಹೇಳಲಿ. ಚರ್ಚೆ ದೇವಸ್ಥಾನಗಳ ಬಗ್ಗೆ ಅಲ್ಲ. ಮಾನ್ಯ ಸದಸ್ಯರಾದಂತಹ ಶ್ರೀ ಘೋಟ್ನೆಕರ್‌ರವರು ನಿರ್ದಿಷ್ಟವಾಗಿ ಒಂದು ಪ್ರಶ್ನೆಯನ್ನು ಕೇಳಿದ್ದಾರೆ. ಆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪ್ರಶ್ನೆಯ ಬಗ್ಗೆ ಅವರು ಉತ್ತರವನ್ನು ಕೇಳಿದ್ದಾರೆ. ಪ್ರಾಸಂಗಿಕವಾಗಿ ಇಬ್ಬರಿಗೆ ಅವಕಾಶ ಕೊಟ್ಟಿದ್ದೇನೆ. ಈಗ ಮಾನ್ಯ ಸಚಿವರು ಉತ್ತರ ಹೇಳುವುದು.

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:-** ಮಾನ್ಯ ಸಭಾಪತಿಯವರೇ, ಸ್ವರ್ಣವಲ್ಲಿ ಮಠದ ಸ್ವಾಮಿಗಳು ಅಲ್ಲಿ ಹೋಗಿ ಚರ್ಚೆ ಮಾಡಬೇಕೆಂದು ಎಂದು ಹೇಳಿದ್ದಾರೆ. ಅದರ ಅವಶ್ಯಕತೆ ಇಲ್ಲ. ಏಕೆಂದರೆ, ಕಾನೂನಿನಲ್ಲಿ ಏನಿದೆ ಆ ಪ್ರಕಾರ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ. ನಾನು ಸ್ವಾಮೀಜಿಗಳ ಜೊತೆ ಪ್ರತ್ಯೇಕವಾಗಿ ಮಾತನಾಡುತ್ತೇನೆ ಮತ್ತು ಪತ್ರಿಕೆ ಮುಖಾಂತರ ಆಹ್ವಾನವನ್ನು ಕೂಡ ಕೊಟ್ಟಿದ್ದೇನೆ. ಈಗ ಸದ್ಯಕ್ಕೆ ಕುಟುಂಬ ವರ್ಗಕ್ಕೆ ಸೇರಿರುವಂತಹ ಕೆಲವು ದೇವಸ್ಥಾನಗಳು ಏನಿವೆ, ಅಂತಹವುಗಳನ್ನು ಕೈಬಿಡಬೇಕೆಂದು ಜಿಲ್ಲಾಧಿಕಾರಿಗಳು ಶಿಫಾರಸ್ಸು ಮಾಡಿದ್ದಾರೆ. ಆ ಶಿಫಾರಸ್ಸು ಮಾಡಿರುವಂತಹ ದೇವಸ್ಥಾನಗಳನ್ನು ಈ ತಕ್ಷಣದಿಂದಲೆ ನಾವು ಅವುಗಳನ್ನು ಕೈ ಬಿಡುತ್ತೇವೆ. ಅದರ ಜೊತೆಗೆ ಈ ರೀತಿ ಸಂಬಂಧಪಟ್ಟಂತಹ ದೇವಸ್ಥಾನಗಳು ಏನಾದರೂ ಉಳಿದಿದ್ದರೆ, ಅವುಗಳಿಗೆ ಸಂಬಂಧಪಟ್ಟವರು ಜಿಲ್ಲಾಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದರೆ, ನಾವು ಅವುಗಳ ಬಗ್ಗೆಯೂ ಖಂಡಿತವಾಗಿ ಪರಿಗಣನೆ ಮಾಡುತ್ತೇವೆ. ಯಾವುದಾದರೂ ದೇವಸ್ಥಾನಗಳನ್ನು ನಡೆಸಬೇಕೆನ್ನುವುದು ಸರ್ಕಾರದ ಕೆಲಸವಲ್ಲ. ಸರ್ಕಾರದ ಮುಜರಾಯಿ ಇಲಾಖೆಯ ವ್ಯಾಪ್ತಿಯಲ್ಲಿ 'ಎ', 'ಬಿ', 'ಸಿ' ವರ್ಗದ ಸುಮಾರೂ 34,559 ದೇವಾಲಯಗಳಿವೆ ಅವುಗಳು ಸರ್ಕಾರದ ಸುಪರ್ದಿಯಲ್ಲಿವೆ. ಅವುಗಳು ಮೊದಲಿನಿಂದ ಮಾಡಿಕೊಂಡು ಬಂದಿರುವಂತಹ ದೇವಸ್ಥಾನಗಳು. ಆ ದೇವಸ್ಥಾನಗಳ ವ್ಯವಸ್ಥಾಪನಾ ಸಮಿತಿಗಳನ್ನು ರಚನೆ ಮಾಡುವಂತಹ ಅಧಿಕಾರ ಕಾನೂನಿನಲ್ಲಿ ಇರುವುದರಿಂದ ಅವುಗಳಿಗೆ ಸಂಬಂಧಿಸಿದಂತೆ ವ್ಯವಸ್ಥಾಪನಾ ಸಮಿತಿಗಳನ್ನು ರಚನೆ ಮಾಡುತ್ತೇವೆ. ನಾವು ಯಾರಾದರೂ ಕಟ್ಟಿರುವಂತಹ ದೇವಸ್ಥಾನಗಳಿಗೆ ಹೋಗಿ, ನೀವು ಕಟ್ಟಿರುವಂತಹ ದೇವಸ್ಥಾನಗಳನ್ನು ನಮಗೆ ಕೊಡಿ ಎಂದು ಕೇಳುವಂತಹ ಪ್ರಮೇಯವೆ ನಮಗೆ ಇಲ್ಲ. ಏಕೆಂದರೆ ಸರ್ಕಾರಕ್ಕೆ ನಮ್ಮ ರಾಜ್ಯವನ್ನು ಕಲ್ಯಾಣ ರಾಜ್ಯವನ್ನಾಗಿ ಮಾಡುವಂಥದ್ದಕ್ಕೆ ಸಾಕಷ್ಟು ಕೆಲಸಗಳಿವೆ. ಯಾರಾದರೂ ಅದರ ನಿರ್ವಹಣೆ ಮಾಡದೆ, ಅಲ್ಲಿ ಜಗಳಗಳು ಬಂದಾಗ, ಅವರಾಗಿಯೇ ಬಂದು ನಮಗೆ ಬೇಡವೆಂದು, ಅದನ್ನು ನಿಮ್ಮ ಮುಜರಾಯಿ ಇಲಾಖೆಗೆ ತೆಗೆದುಕೊಳ್ಳಿ ಎಂದು ಅವರು ಅರ್ಜಿ ಕೊಟ್ಟಾಗ ಮಾತ್ರ ಅಂತಹ ದೇವಸ್ಥಾನಗಳನ್ನು ನಾವು ನೋಡಿಕೊಳ್ಳುತ್ತೇವೆ. ಉದಾಹರಣೆಗೆ ಮೊನ್ನೆ ಶಿವಮೊಗ್ಗದಲ್ಲಿ ಈ ತರಹದ ಘಟನೆಯಾಗಿತ್ತು. ನಾವುಗಳು ಅದರ ಬಗ್ಗೆ ಚರ್ಚೆ ಮಾಡಿ ಅದನ್ನು ಸರ್ಕಾರದ ವಶಕ್ಕೆ ಪಡೆದಿದ್ದೇವೆ. ದೇವಸ್ಥಾನಗಳನ್ನು ನಮಗೆ ಕೊಡಿ ಎಂದು ನಾವಾಗಿ ಯಾರನ್ನೂ ಕೇಳುವುದಕ್ಕೆ ಹೋಗುವುದಿಲ್ಲ. ಅವರಾಗಿಯೇ ಬಂದು ದೇವಸ್ಥಾನ ನಮಗೆ ಬೇಡ ಎಂದು ಎರಡು ಪಕ್ಷದವರು ಜಗಳ ಮಾಡುತ್ತಿದ್ದಾರೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೀಗಾಗಿ ಈ ದೇವಸ್ಥಾನವನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಿ ಎಂದು ಹೇಳಿದಾಗ, ಅದನ್ನು ಸರ್ಕಾರದ ವಶಕ್ಕೆ ಪಡೆಯುತ್ತೇವೆ. ನೀವು ಸಿದ್ಧೇಶ್ವರ ದೇವಸ್ಥಾನದ ಬಗ್ಗೆ ಹೇಳಿದ್ದೀರಿ. ಸರ್ಕಾರ ಯಾವುದೇ ದೇವರುಗಳನ್ನು ಹುಡುಕಿಕೊಂಡು ಹೋಗಿ, ದೇವಸ್ಥಾನಗಳನ್ನು ಮತ್ತು ಮಠಗಳನ್ನು ನಾವು ತೆಗೆದುಕೊಳ್ಳಬೇಕೆಂಬುದು ಸರ್ಕಾರದ ಉದ್ದೇಶವಲ್ಲ.

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್):-** ಮಾನ್ಯ ಸಭಾಪತಿಯವರೇ, ಈಗ ನಮ್ಮದೇ ಒಂದು ಉದಾಹರಣೆ ಇದೆ.

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದಂತಹ ಬಸನಗೌಡ ಆರ್. ಪಾಟೀಲ್ ಯತ್ನಾಳ್‌ರವರು ಇದಕ್ಕೆ ಸಂಬಂಧಪಟ್ಟಂತೆ ಈ ಹಿಂದೆ ಪ್ರಶ್ನೆಯನ್ನು ಕೇಳಿದ್ದರು, ಅದಕ್ಕೆ ಉತ್ತರವನ್ನು ಕೊಟ್ಟಿದ್ದೇವೆ. ಯಾವುದೇ ರೀತಿಯಿಂದ, ಯಾವುದೇ ದೇವಸ್ಥಾನಗಳನ್ನು ವಶಕ್ಕೆ ಪಡೆಯುವಂತಹ ಉದ್ದೇಶ ಸರ್ಕಾರಕ್ಕೆ ಇಲ್ಲ. ಆದರೆ, ನಾನು ಇನ್ನೊಂದು ಮಾತನ್ನು ಹೇಳುತ್ತೇನೆ. ದೇವರ ಖಾತೆಯಾದ ಧಾರ್ಮಿಕ ಮತ್ತು ಮುಜರಾಯಿ ಮಂತ್ರಿಯಾದವರು ಮತ್ತೊಂದು ಬಾರಿ ಚುನಾವಣೆಯಲ್ಲಿ ಆರಿಸಿ ಬರುವುದಿಲ್ಲವೆಂದು ಹೇಳಿದ್ದಾರೆ. ಆದರೆ, ಶ್ರೀ ಪ್ರಕಾಶ್ ಹುಕ್ಕೇರಿಯವರು ಇದೇ ಸಂಪುಟದಲ್ಲಿ ಮಂತ್ರಿಯಾಗಿ ಸದರಿ ಖಾತೆಯನ್ನು ನಿರ್ವಹಣೆ ಮಾಡಿ, ಈಗ ಅವರು ಲೋಕಸಭಾ ಸದಸ್ಯರಾಗಿದ್ದಾರೆ. ನಾನು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದೇನೆ, ಆದುದರಿಂದ ದೇವರು ನನಗೆ ಒಳ್ಳೆಯದನ್ನು ಮಾಡುತ್ತಾನೆ ಎಂದು ಕೆಲವರು ಅಭಿಪ್ರಾಯಪಡುತ್ತಾರೆ.

**ಸಭಾಪತಿಯವರು:-** ಸಾಕು, ಈಗ ಅದರ ಚರ್ಚೆ ಬೇಡ. ಮಾನ್ಯ ಸದಸ್ಯರಾದ ಶ್ರೀ ಕೆ.ಬಿ.ಶಾಣಪ್ಪನವರು ಯಾವುದಾದರೂ ನಿರ್ದಿಷ್ಟವಾದಂತಹ ದೇವಸ್ಥಾನದ ಪ್ರಶ್ನೆ ಇದ್ದರೆ ಕೇಳುವುದು.

**ಶ್ರೀ ಕೆ.ಬಿ.ಶಾಣಪ್ಪ:-** ನೀವು ದೇವರುಗಳ ಬಗ್ಗೆ ವರ್ಗೀಕರಣ ಮಾಡಿದ್ದೀರಾ? ಈ ತರಹದ ವರ್ಗೀಕರಣ ಮಾಡುವಾಗ ದಲಿತರಿಗೆ ಮರ್ಗಮ್ಮ, ದುರ್ಗಮ್ಮ ಮತ್ತು ಪೋಚಮ್ಮ ಎಂದು ಇವುಗಳನ್ನು ಕೊಟ್ಟಿರುವುದು ಯಾವಾಗ? Why you have given these goddesses to us? ಈ ರೀತಿ ಯಾರು ಮಾಡಿ ಹೋಗಿದ್ದಾರೆ? ನಿಮ್ಮ ದೇವರು ಭೀರಪ್ಪ, ನಮ್ಮ ಭೀರಪ್ಪ ಗುಡಿಗೆ ಹಣ ನೀಡಿ ಎಂದು ನಾವು ಕೇಳಿದರೆ, ನೀವು ಇದುವರೆವಿಗೂ ಸಹ ಆ ಗುಡಿಗೆ ಹಣವನ್ನು ಕೊಟ್ಟಿಲ್ಲ. ಆದರೆ, ನೀವು ಬೇರೆ ಬೇರೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ದೇವಸ್ಥಾನಗಳಿಗೆ, ಬೇರೆ ಬೇರೆ ಮಂದಿಗೆ ಎಂದು ಹಣ ಕೊಡುತ್ತೀರಿ. ಏನಾದರೂ plan ಅನ್ನು exchange ಮಾಡುವುದಕ್ಕೆ ಆಗುತ್ತದೆಯೆ? ದೇವರುಗಳನ್ನು exchange ಮಾಡಬೇಕು.

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:-** ಮಾನ್ಯ ಸಭಾಪತಿಯವರೇ, ಈಗ ಆರಾಧನಾ ಯೋಜನೆಯಲ್ಲಿ ಎಲ್ಲಾ ಜಿಲ್ಲೆಗಳಿಗೂ ಹಣವನ್ನು ಬಿಡುಗಡೆ ಮಾಡುತ್ತೇವೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಚಿವರೇ ಒಂದು ನಿಮಿಷ. ಇದು ಮುಜರಾಯಿ ಇಲಾಖೆಯ ಬಗ್ಗೆ ಸಾಮಾನ್ಯ ಚರ್ಚೆಯಲ್ಲ ಮತ್ತು ದೇವಸ್ಥಾನಗಳ ಬಗ್ಗೆ ಚರ್ಚೆಯಲ್ಲ. ಮಾನ್ಯ ಸದಸ್ಯರಾದ ಘೋಟ್ನೇಕರ್‌ರವರು ನಿರ್ದಿಷ್ಟವಾಗಿ ಒಂದು ಪ್ರಶ್ನೆಯನ್ನು ಕೇಳಿದ್ದಾರೆ, ಅದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರು ಉತ್ತರ ನೀಡಿದ್ದಾರೆ. ಈಗ ಸಾಕು ಇದರ ಚರ್ಚೆ ಮುಗಿಯಿತು, ದೇವಸ್ಥಾನಗಳ ಬಗ್ಗೆ ಚರ್ಚೆ ಇಲ್ಲ, ಮುಂದಕ್ಕೆ ಹೋಗೋಣ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ನಾನು ಯೋಜನಾ ಆಯೋಗದ ಉಪಾಧ್ಯಕ್ಷನಾಗಿ, ದೇವಸ್ಥಾನಗಳ ಅರ್ಚಕರಿಗೆ ಕೊಡುತ್ತಿದ್ದಂತಹ ನಾಲ್ಕು ನೂರು ರೂಪಾಯಿಗಳನ್ನು ಐದು ಸಾವಿರ ರೂಪಾಯಿಗಳನ್ನು ಮಾಡಬೇಕೆಂದು ಒಂದು ಸಲಹೆಯನ್ನು ಕೊಟ್ಟಿದ್ದೆ.

**ಸಭಾಪತಿಯವರು:-** ಹೌದು ತಾವು ಸಲಹೆಯನ್ನು ಕೊಟ್ಟಿದ್ದೀರಿ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಈಗ ಅದನ್ನು ನಾಲ್ಕು ಸಾವಿರ ಮಾಡಿದ್ದಾರೆ. ದಯವಿಟ್ಟು ಅದನ್ನು ಏಳು ಸಾವಿರ ಮಾಡಿ. ಏಕೆಂದರೆ, ಸುಮಾರು 23 ಸಾವಿರ ಜನ ಅರ್ಚಕರು ಮಂಗಳಾರತಿ ತಟ್ಟೆಯ ಮೇಲೆ ಅವಲಂಬಿತರಾಗಿದ್ದಾರೆ.  ಇದಕ್ಕೆ ಸಂಬಂಧಪಟ್ಟಂತೆ ಯಾರು ಸಹ 60 ವರ್ಷದಿಂದ ಚಿಂತನೆ ಮಾಡಲಿಲ್ಲ.  ಇಮಾಮ್ ಸಾಬರಿಗೂ ಗೋಕುಲಾಷ್ಟಮಿಗೂ ಸಂಬಂಧ ಇದೆ ಎಂದು ತೋರಿಸುವ ಸಲುವಾಗಿ ಅದನ್ನು ಶಿಫಾರಸ್ಸು ಮಾಡಿದ್ದು, ದಯವಿಟ್ಟು ಅದನ್ನು ಈ ಸಲದ ಬಜೆಟ್‌ನಲ್ಲಿ ನಾಲ್ಕು ಸಾವಿರ ಇರುವುದನ್ನು ಏಳು ಸಾವಿರ ಮಾಡುವಂಥದ್ದಕ್ಕೆ ಮಾನ್ಯ ಮುಜರಾಯಿ ಇಲಾಖೆಯವರು ತಯಾರಿದ್ದಾರೆಯೆ ಎನ್ನುವುದಷ್ಟೆ ನನ್ನ ಪ್ರಶ್ನೆ.

**ಸಭಾಪತಿಯವರು:-** ಈಗ ಇದು ಸಾಕು. ಮುಂದಿನ ಪ್ರಶ್ನೆಗೆ ಹೋಗೋಣ. ಇದು ಪ್ರಶ್ನೋತ್ತರ ವೇಳೆ. ಮುಜರಾಯಿ ಇಲಾಖೆಯ ಬಗ್ಗೆ ಚರ್ಚೆ ಅಲ್ಲ. ಮಾನ್ಯ ಸದಸ್ಯರಾದ ಶ್ರೀ ಘೋಟ್ನೆಕರ್‌ರವರು ಕೇಳಿರುವಂತಹ ಪ್ರಶ್ನೆಗೂ ಮತ್ತು ನೀವು ಕೇಳಿರುವಂತಹ ಪ್ರಶ್ನೆಗೂ ಏನೂ ಸಂಬಂಧವಿಲ್ಲ. ಮುಂದಿನ ಪ್ರಶ್ನೆ ಸದಸ್ಯರಾದ ಶ್ರೀ ಸೋಮಣ್ಣ ಮ. ಬೇವಿನಮರದರವರದ್ದು, ಆದರೆ ಅವರು ಗೈರು ಹಾಜರಿದ್ದಾರೆ. ಆದುದರಿಂದ ಮುಂದಿನ ಪ್ರಶ್ನೆ ಮಾನ್ಯ ಸದಸ್ಯರಾದ ಶ್ರೀ ರಘುನಾಥ ರಾವ್ ಮಲ್ಕಾಪೂರೆಯವರದ್ದು.

**ಚುಕ್ಕೆ ಪ್ರಶ್ನೆ ಸಂಖ್ಯೆ: 369 (3539)**
(ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)

**ಚುಕ್ಕೆ ಪ್ರಶ್ನೆ ಸಂಖ್ಯೆ: 3476**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ನಾನು ಕೇಳಿರುವಂತಹ ಪ್ರಶ್ನೆಗೆ ಮಾನ್ಯ ಸಚಿವರು ಸವಿಸ್ತಾರವಾಗಿ ಉತ್ತರವನ್ನು ಕೊಟ್ಟಿದ್ದಾರೆ. ನಾನು ಕೇಳಿರುವಂತಹ ಪ್ರಶ್ನೆ ಏನೆಂದರೆ, ಕಳೆದ ಮೂರು ವರ್ಷಗಳಲ್ಲಿ ಬೀದರ್-ಔರಾದ್ ನಡುವೆ ಸಂಪರ್ಕ ಕಲ್ಪಿಸುವ ಎಸ್.ಹೆಚ್.-15ರ ರಸ್ತೆ ಅಭಿವೃದ್ಧಿಗೆ ಬಿಡುಗಡೆಯಾಗಿರುವ ಹಣವೆಷ್ಟು, ವರ್ಷವಾರು ವಿವರ ನೀಡುವುದು ಮತ್ತು ಈ ರಸ್ತೆಯು ತುಂಬಾ ಹಾಳಾಗಿದ್ದು ಸಾರ್ವಜನಿಕರ ಓಡಾಟಕ್ಕೆ ತುಂಬಾ ತೊಂದರೆಯಾಗಿದ್ದು, ಇದನ್ನು ಯಾವ ಕಾಲಮಿತಿಯೊಳಗೆ ದುರಸ್ಥಿಪಡಿಸಲಾಗುವುದು ಎಂದು ಪ್ರಶ್ನೆಯನ್ನು ಕೇಳಿದ್ದೇನೆ. ಮಾನ್ಯ ಮಂತ್ರಿಗಳು ಸವಿಸ್ತಾರವಾಗಿ ಉತ್ತರವನ್ನು ಕೊಟ್ಟಿರುವ ಪ್ರಕಾರ, 2014-15ರಲ್ಲಿ 39.45 ಕಿಲೋಮೀಟರ್ ರಸ್ತೆಯನ್ನು ದುರಸ್ತಿ ಮಾಡಿದ್ದಾರೆ. 118.15 ಲಕ್ಷ ಹಣವನ್ನು ಖರ್ಚು ಮಾಡಿದ್ದಾರೆ. 2015-16ರಲ್ಲಿ 23.02 ಕಿಲೋಮೀಟರ್ ರಸ್ತೆಯನ್ನು ದುರಸ್ತಿ ಮಾಡಿದ್ದಾರೆ. 56.03 ಲಕ್ಷ ಹಣವನ್ನು ಖರ್ಚು ಮಾಡಿದ್ದಾರೆ. 2016-17ರಲ್ಲಿ 26.76 ಕಿಲೋಮೀಟರ್ ರಸ್ತೆಯನ್ನು ದುರಸ್ತಿ ಮಾಡಿದ್ದಾರೆ. ಸುಮಾರು 143.42 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅಂದರೆ, ಮೂರು ವರ್ಷಗಳಲ್ಲಿ 89.41 ಕಿಲೋಮೀಟರ್ ರಸ್ತೆಯನ್ನು ಮಾಡಿದ್ದಾರೆ. 317.6 ಲಕ್ಷ ಹಣವನ್ನು ಖರ್ಚು ಮಾಡಿದ್ದಾರೆ. ಈ ವರ್ಷ 2017-18ರಲ್ಲಿ 28.44 ಕಿಲೋಮೀಟರ್ ರಸ್ತೆಗೆ ಯೋಜನೆ ಮಾಡಿದ್ದಾರೆ.

**ಸಭಾಪತಿಯವರು:-** ನಿಮ್ಮ ಪ್ರಶ್ನೆ ಏನು?

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಏನೆಂದರೆ, ಅವರ ಉತ್ತರದಲ್ಲಿ ಹೇಳಿರುವ ಪ್ರಕಾರ ಈ ರಸ್ತೆಯು ಸುಮಾರು ೯೦.೩೮ ಕಿಲೋಮೀಟರ್ ಇದೆ. ಅವರು ಕೊಟ್ಟಿರುವ ಉತ್ತರದ ಪ್ರಕಾರ ಕಳೆದ ಮೂರು ವರ್ಷಗಳಲ್ಲಿ ಮತ್ತು ಈ ವರ್ಷದಲ್ಲಿ 118.4 ಕಿಲೋಮೀಟರ್ ರಸ್ತೆಯನ್ನು ರಿಪೇರಿ ಮಾಡುತ್ತಿದ್ದಾರೆ. ಆದರೆ, ರಸ್ತೆ ಇರುವುದು ಸುಮಾರು ೯೦.೩೮ ಕಿಲೋಮೀಟರ್. ಅದಕ್ಕೆ ಖರ್ಚು ಮತ್ತು ಯೋಜನೆ ಮಾಡಿರುವುದು ೩೭೭.೯೨ ಲಕ್ಷ ರೂಪಾಯಿಗಳು. ಅಂದರೆ ಸುಮಾರು ೩೯೮ ಲಕ್ಷ ರೂಪಾಯಿಗಳು. ನಾನು ಮಾನ್ಯ ಮಂತ್ರಿಗಳಿಗೆ ಮತ್ತು ಇಲಾಖೆಯವರಿಗೆ ಅಭಿನಂದನೆಯನ್ನು ಸಲ್ಲಿಸಬೇಕೋ?

**Mr.CHAIRMAN:-** What is your Question?

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, my question is, ಆ ೯೦.೩೮ ಕಿಲೋಮೀಟರ್ ರಸ್ತೆಯ formation ಮಾಡಿ ಅದಕ್ಕೆ ಖರ್ಚು ಮಾಡಿರುವುದು ಕೋಟಿಗಟ್ಟಲೆ ದುಡ್ಡು. ಅದನ್ನು ರಿಪೇರಿ ಕಳೆದ ಮೂರು ವರ್ಷಗಳಲ್ಲಿ ಖರ್ಚು ಮಾಡುತ್ತಿರುವುದು ೩18 ಲಕ್ಷ ರೂಪಾಯಿ ಮತ್ತು ಈಗ 60.31 ಲಕ್ಷ ರೂಪಾಯಿಗಳ ಯೋಜನೆಯನ್ನು ಮಾಡಿದ್ದಾರೆ.

**(ಮುಂದು...)**

(946)14.11.2017-12.20-ಎಲ್‌ಎಲ್-ಎಂಡಿ

**(ಶ್ರೀ ರಘುನಾಥ ರಾವ್ ಮಲ್ಕಾಪೂರೆ:- (ಮುಂದುವರೆದಿದ್ದು...)**

ಆದರೆ, ಇವತ್ತಿಗೂ ಆ ರಸ್ತೆ ೯೦.೩೮ ಕಿಲೋ ಮೀಟರ್ ರಸ್ತೆ ಕ್ರಮಿಸುವುದಕ್ಕೆ ಕನಿಷ್ಠ ಪಕ್ಷ ೩ ರಿಂದ 4 ಗಂಟೆ ಸಮಯ ಬೇಕು. ಪ್ರತಿ ವರ್ಷ ರಸ್ತೆ ನಿರ್ವಹಣೆಗೆ ಹಣ ಖರ್ಚು ಮಾಡಿದರೂ ಈ ಸಮಸ್ಯೆ ಪರಿಹಾರವಾಗುತ್ತಿಲ್ಲ. ಸದರಿ ಕಾಮಗಾರಿಗೆ ಹಣ ನಿಜವಾಗಿಯೂ ಖರ್ಚಾಗುತ್ತಿದೆಯೋ ಅಥವಾ ಕೇವಲ ಪುಸ್ತಕದಲ್ಲಿ ಖರ್ಚಾಗುತ್ತಿದೆಯೋ ಎನ್ನುವುದರ ಬಗ್ಗೆ ನನಗೆ ಅನುಮಾನ ಬರುತ್ತಿದೆ. ಮಾನ್ಯ ಮಂತ್ರಿಗಳಿಗೂ ಸಹ ಈ ಬಗ್ಗೆ ಅನುಮಾನ ಬಂದಿರಬಹುದೆಂದು ನಾನು ಭಾವಿಸುತ್ತೇನೆ. ಏಕೆಂದರೆ, ಮಾನ್ಯ ಮಂತ್ರಿಗಳ ಬಗ್ಗೆ ನನಗೆ ಅಪಾರವಾದ ಗೌರವವಿದೆ. ಆದರೆ, ಇಷ್ಟು ಹಣ ಖರ್ಚು ಮಾಡಿದರೂ ಆ ರಸ್ತೆ ಇದುವರೆವಿಗೂ trafficable ಆಗಿರುವುದಿಲ್ಲ. ಅಲ್ಲದೇ, ಇದು ಯಾವುದೋ ಒಂದು ಹಳ್ಳಿ ಅಥವಾ ತಾಲ್ಲೂಕು ರಸ್ತೆ ಅಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇದೊಂದು ರಾಜ್ಯ ಹೆದ್ದಾರಿಯಾಗಿದ್ದು, ಇದುವರೆವಿಗೂ ಆ ರಸ್ತೆ ಸಂಚಾರಕ್ಕೆ ಯೋಗ್ಯವಾಗಿಲ್ಲವೆಂದು ಹೇಳಿದರೆ ಈ ಬಗ್ಗೆ ಮಾನ್ಯ ಮಂತ್ರಿಗಳು ಯಾವ ಉತ್ತರ ನೀಡುತ್ತಾರೋ ಗೊತ್ತಿಲ್ಲ. ಜೊತೆಗೆ ಸದರಿ ಕಾಮಗಾರಿಗೆ ಹಣ ನಿಜವಾಗಿಯೂ ಖರ್ಚಾಗುತ್ತಿದೆಯೋ ಅಥವಾ ಕೇವಲ ಪುಸ್ತಕದಲ್ಲಿ ಖರ್ಚಾಗುತ್ತಿದೆಯೋ ಎನ್ನುವುದರ ಬಗ್ಗೆ ಒಂದು ತನಿಖೆಯನ್ನು ನಡೆಸಬೇಕೆಂದು ನಾನು ಕೂಡ ಮಾನ್ಯ ಮಂತ್ರಿಯವರಲ್ಲಿ ವಿನಂತಿ ಮಾಡುತ್ತೇನೆ.

**ಡಾ|| ಹೆಚ್.ಸಿ. ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರಾದ ಶ್ರೀ ರಘುನಾಥ ರಾವ್ ಮಲ್ಕಾಪೂರೆಯವರು ರಾಜ್ಯ ಹೆದ್ದಾರಿ-15 ಬೀದರ್‌ನಿಂದ ಔರಾದ್‌ವರೆಗೆ ಹುಮನಾಬಾದ್ ಮುಖಾಂತರ...

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ನಾಗಮಾರಪಳ್ಳಿ ಮುಖಾಂತರ...

**(ಗೊಂದಲ)**

**ಡಾ|| ಹೆಚ್.ಸಿ. ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಹೌದು, ಸರಿ. ಬೀದರ್ ಜಿಲ್ಲೆಯಲ್ಲಿ ಇದು ಒಂದು ಪ್ರಮುಖವಾಗಿರುವಂತಹ ರಸ್ತೆ. ರಾಜ್ಯ ಹೆದ್ದಾರಿಯಲ್ಲಿ SHDP (*State Highway Development Project) Phase-1* ನಲ್ಲಿ 2012-13 ರಲ್ಲಿ ಕೆಲಸ ಪ್ರಾರಂಭ ಮಾಡಿ ಕೆಲಸ ಮಾಡಿರುವುದು. ಅದರಲ್ಲಿ 22 ಕಿಲೋ ಮೀಟರ್ ರಸ್ತೆ ದೊಡ್ಡ ಗುಂಡಿ ಬಿದ್ದು ತುಂಬಾ ಕೆಟ್ಟು ಹೋಗಿದೆ. ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ ರಾಜ್ಯಗಳಿಂದ ಹೆಚ್ಚು ತೂಕದ ಮರಳು ಲಾರಿಗಳು ಸಂಚರಿಸುತ್ತವೆ. ಮತ್ತೊಂದು ವಿಷಯವೆಂದರೆ, ಬೀದರ್ ಜಿಲ್ಲೆಯಲ್ಲಿ ಅತ್ಯಂತ ಪ್ರಮುಖವಾದಂತಹ ಗುರುದ್ವಾರವಿದೆ. It is an important religious tourist place. ಹೀಗಾಗಿ, ವಾಹನ ಸಂದಣಿ ಜಾಸ್ತಿ ಇದೆ ಮತ್ತು ಈ ರಸ್ತೆ 22 ಕಿಲೋ ಮೀಟರ್‌ವರೆಗೂ ದೊಡ್ಡ ದೊಡ್ಡ ಗುಂಡಿ ಬಿದ್ದು ಬಹಳ ಹಾಳಾಗಿದೆ. ಅದನ್ನು ವಾಹನ ಸಂಚಾರವಾಗುವಂತೆ ದುರಸ್ತಿ ಮಾಡುವುದಕ್ಕೆ ಹಣ ಕೊಟ್ಟಿದ್ದೇವೆ. ಆ ಕೆಲಸವನ್ನು ಸಂಬಂಧಪಟ್ಟವರು ಮಾಡುತ್ತಾರೆ. ಏತನ್ಮಧ್ಯೆ, ಅಷ್ಟು ಹಣದಿಂದ ಹಾಳಾದ ರಸ್ತೆ ಸರಿ ಹೋಗುತ್ತದೆಯೆಂದು ನಾನು ಹೇಳುತ್ತಿಲ್ಲ. ಮಹಾರಾಷ್ಟ್ರದಿಂದ ಬರುವಂತಹ ವಾಹನಗಳು ಅದರಲ್ಲಿಯೂ ಪ್ರಮುಖವಾಗಿ ಭಾರೀ ತೂಕದ ಮರಳು ಲಾರಿಗಳು ರಸ್ತೆಯನ್ನು ಹಾಳು ಮಾಡುತ್ತಿವೆ. ಇತ್ತೀಚೆಗೆ, 'ಹೈದರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯವರು 371 ಜೆ' ವಿಶೇಷ ಅನುದಾನದ ಅಡಿಯಲ್ಲಿ ರಸ್ತೆ ನಿರ್ವಹಣೆಗಾಗಿ 5 ಕೋಟಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರೂಪಾಯಿಗಳ ಅನುದಾನ ಕೊಟ್ಟಿದ್ದಾರೆ. ಇದರ ಜೊತೆಗೆ ಸದರಿ ರಸ್ತೆಯ ಪ್ರಾಮುಖ್ಯತೆಯನ್ನು ಗಮನಿಸಿ ಕೇಂದ್ರ ಸರ್ಕಾರದ ಭೂಸಾರಿಗೆ ಸಚಿವರ ಗಮನಕ್ಕೆ ಈ ವಿಷಯವನ್ನು ತಂದಿದ್ದೇವೆ. Knowing the importance of that particular road ಅವರು in principle ರಾಷ್ಟ್ರೀಯ ಹೆದ್ದಾರಿ ಮಾಡುವುದಕ್ಕೆ ಒಪ್ಪಿದ್ದಾರೆ. ಅದನ್ನು DPR (Detailed Project Report) ಮಾಡುವುದಕ್ಕೆ 6 ತಿಂಗಳು, ಪ್ರಸ್ತಾವನೆ ಸಲ್ಲಿಸಿ ಅದಕ್ಕೆ ಅನುಮೋದನೆ ನೀಡುವುದಕ್ಕೆ 6 ತಿಂಗಳು, ಕೆಲಸ ಮಾಡುವುದಕ್ಕೆ 6 ರಿಂದ 8 ತಿಂಗಳು ಸಮಯ ಬೇಕಾಗುತ್ತದೆ. ಈ ಮಧ್ಯದಲ್ಲಿ till it is made National Highway ಕನಿಷ್ಠ ಒಂದು ಅಥವಾ ಒಂದೂವರೆ ವರ್ಷ ಸದರಿ ರಸ್ತೆ ನಿರ್ವಹಣೆ ಮಾಡುವುದಕ್ಕೆ ಸರ್ಕಾರದಿಂದ ಏನೆಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ, sincerely we are trying our level best. Money is being provided and tender has been called. We will see that the road is made motorable. ಮಾನ್ಯ ಸದಸ್ಯರು ಸದರಿ ರಸ್ತೆ ಗುಂಡಿ ಬಿದ್ದು ಹಾಳಾಗಿದೆ ಎಂದು ಏನು ಹೇಳಿದ್ದಾರೆ, it is a fact. We will see that the said road is made motorable.

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಬಹಳ ನಿರ್ದಿಷ್ಟವಾಗಿದೆ. ಸರ್ಕಾರ ರಸ್ತೆ ಮಾಡಿಲ್ಲವೆಂದು ನಾನು ಹೇಳುತ್ತಿಲ್ಲ. ಆ ರಸ್ತೆ ರಿಪೇರಿ ಮಾಡುತ್ತಿಲ್ಲವೆಂದು ನಾನು ಹೇಳುತ್ತಿಲ್ಲ. 2012-13 ರಲ್ಲಿ ಅನುದಾನ ಮಂಜೂರಾಗಿ ನಿರ್ಮಾಣದಂತಹ ರಸ್ತೆ, 2014-15 ರಿಪೇರಿ, 2015-16 ರಿಪೇರಿ, 2016-17 ರಿಪೇರಿ ಮತ್ತು 2017-18 ನೇ ಇಸವಿಗೆ 60 ಲಕ್ಷ ರೂಪಾಯಿ ಹಣ ಬಜೆಟ್‌ನಲ್ಲಿ ಇಟ್ಟಿದ್ದಾರೆ. ಬಜೆಟ್‌ನಲ್ಲಿ ಹಣ ಇಟ್ಟಿಲ್ಲವೆಂದು ನಾನು ಹೇಳುತ್ತಿಲ್ಲ, ಸದರಿ ಬಜೆಟ್ ಹಣ ಖರ್ಚು ಮಾಡುತ್ತಿಲ್ಲವೆಂದು ನಾನು ಹೇಳುತ್ತಿಲ್ಲ. ಆದರೆ, ಅದರಿಂದಾಗಿ ಏನು ಉಪಯೋಗವಾಗುತ್ತಿದೆ? ಇದು ಕಳಪೆ ಮಟ್ಟದ ಕೆಲಸವಾಗಿದೆ ಎಂದು ನಾನು ನೇರವಾಗಿ ಆರೋಪ ಮಾಡುತ್ತಿದ್ದೇನೆ. ಮಾನ್ಯ ಸಚಿವರು ಇದಕ್ಕೆ ಕುಮ್ಮಕ್ಕು ಕೊಡುತ್ತೀರಲ್ಲಾ ಅದಕ್ಕೆ ನನ್ನ ಅಭ್ಯಂತರವಿಲ್ಲ. ಆದರೆ, ಅದನ್ನು ನಾನು ಮಾನ್ಯ ಸಚಿವರಿಂದ ನಿರೀಕ್ಷೆ ಮಾಡುವುದಿಲ್ಲ. ಹಾಗಾಗಿ, ಈ ಹಣ 2017-18 ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ: 3084-ರಾಜ್ಯ ಹೆದ್ದಾರಿ ನಿರ್ವಹಣೆ ಯೋಜನೆಯಡಿಯಲ್ಲಿ ಹಣ ಖರ್ಚು ಮಾಡಿದ್ದು...

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಡಾ॥ ಹೆಚ್.ಸಿ. ಮಹದೇವಪ್ಪ:–** ಮಾನ್ಯ ಸಭಾಪತಿಯವರೇ, 2017–18 ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ: 3054–ರಾಜ್ಯ ಹೆದ್ದಾರಿ ನಿರ್ವಹಣೆ ಯೋಜನೆಯಡಿ ಹಣ ಖರ್ಚು ಮಾಡಿರುವುದು.

**ಶ್ರೀ ರಘುನಾಥರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, ಹೌದು. ಲೆಕ್ಕ ಶೀರ್ಷಿಕೆ: 3054 ರಡಿಯಲ್ಲಿ ಖರ್ಚು ಮಾಡಿರುವುದು. it is there for the maintenance. Maintenance ಮಾಡಿದ ನಂತರ ಕೂಡ if the road is not trafficable, then who is to be held responsible for this? Whether the Engineer is to be held responsible or the Contractor? ಈ ಕಾಮಗಾರಿಗೆ ಮಾನ್ಯ ಸಚಿವರು ಹೊಣೆಯಾಗುವುದಕ್ಕೆ ಸಾಧ್ಯವಿಲ್ಲವೆನ್ನುವುದು ನನಗೆ ಗೊತ್ತು. ಆದರೆ, ಮಾನ್ಯ ಸಚಿವರು ಆರೋಪಿತರ ವಿರುದ್ಧ ಕ್ರಮ ತೆಗೆದುಕೊಳ್ಳುವುದಕ್ಕೆ ತಯಾರಾಗಿಲ್ಲವೆಂದರೆ, ಅವರ ಗಮನಕ್ಕೆ ಬಂದೇ ಈ ಕೆಲಸವಾಗುತ್ತಿದೆಯೆಂದು ಅನಿವಾರ್ಯವಾಗಿ ನಾನು ಅವರ ಮೇಲೆ ಆರೋಪ ಮಾಡಬೇಕಾಗುತ್ತದೆ.

**(ಗೊಂದಲ)**

**ಡಾ॥ ಹೆಚ್.ಸಿ. ಮಹದೇವಪ್ಪ:–** ಮಾನ್ಯ ಸಭಾಪತಿಯವರೇ, ಈ ವಿಷಯ ನನ್ನ ಗಮನಕ್ಕೆ ಬಂದ ನಂತರವೂ ನಾನು ಸುಮ್ಮನೇ ಕೂರುವಂತಹ ಗಿರಾಕಿ ಅಲ್ಲ. ಈ ಬಗ್ಗೆ ನಿರ್ದಿಷ್ಟವಾದಂತಹ...

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಎಂತಹ ಗಿರಾಕಿ ಎಂಬುದು ನಮಗೆ ಗೊತ್ತಿಲ್ಲ. ಆದುದರಿಂದ, ದಯಮಾಡಿ ಅವರು ಈ ಕಾಮಗಾರಿ ಬಗ್ಗೆ ಒಂದು ತನಿಖೆ ಮಾಡಲಿ.

**ಶ್ರೀ ರಘುನಾಥರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, ಹೌದು. ಸರಿಯಿದೆ.

**ಡಾ॥ ಹೆಚ್.ಸಿ. ಮಹದೇವಪ್ಪ:–** ಮಾನ್ಯ ಸಭಾಪತಿಯವರೇ, ಈ ಬಗ್ಗೆ ನಿರ್ದಿಷ್ಟವಾದಂತಹ ಮಾಹಿತಿ ಇದ್ದರೆ, I will get the report.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಸದರಿ ವಿಷಯದ ಬಗ್ಗೆ ಮಾನ್ಯ ಸದಸ್ಯರು ಇಷ್ಟು ನಿರ್ದಿಷ್ಟವಾಗಿ ಹೇಳಿದ್ದಾರೆ. ಆದರೂ, ಅವರಿಗೆ ಇನ್ನು ಹೇಗೆ ನಿರ್ದಿಷ್ಟವಾಗಿ ಹೇಳಬೇಕು? ಒಂದು ತನಿಖೆ ಮಾಡಿ ಎಂದು ಹೇಳಿದರೆ ಅದನ್ನು ಮಾಡುವುದಕ್ಕೆ ಏನು ಕಷ್ಟ ಇದೆ?

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಡಾ|| ಹೆಚ್.ಸಿ. ಮಹದೇವಪ್ಪ:–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸದಸ್ಯರ ಮೇಲೆ ಅನುಮಾನ ಪಡುತ್ತಿಲ್ಲ. He is also a sincere legislator.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಈ ವಿಷಯದಲ್ಲಿ ತಮ್ಮ ಬಗ್ಗೆ ಆರೋಪವಿಲ್ಲ. ಆ ವಿಷಯವನ್ನು ಮಾನ್ಯ ಸದಸ್ಯರು ಸ್ಪಷ್ಟಪಡಿಸಿದ್ದಾರೆ.

**ಡಾ|| ಹೆಚ್.ಸಿ. ಮಹದೇವಪ್ಪ:–** ಮಾನ್ಯ ಸಭಾಪತಿಯವರೇ, ನಾನು ಈ ವಿಷಯದ ಬಗ್ಗೆ ಏನು ಹೇಳುತ್ತೇನೆಂದರೆ, ಮಹಾರಾಷ್ಟ್ರದಿಂದ ಭಾರೀ ತೂಕದ ವಾಹನಗಳು(Heavy Vehicles) ಬರುತ್ತಿವೆ. ಇದರಿಂದ ರಸ್ತೆ ಹಾಳಾಗುತ್ತಿದೆ, ಟ್ರಾಫಿಕ್ ಸಮಸ್ಯೆ ಇದೆ. ಈ ಎಲ್ಲಾ ಸಮಸ್ಯೆಗಳನ್ನು ಹೇಗೆ ನಿವಾರಣೆ ಮಾಡಬೇಕು ಎನ್ನುವುದನ್ನು ನೋಡಬೇಕಾಗುತ್ತದೆ. ಈ ಭಾರಿ ಗಾತ್ರದ ವಾಹನಗಳ ತೂಕವನ್ನು ground level gravitation ಗೆ ವರ್ಗಾವಣೆ ಮಾಡಲು according to the norms ಇವುಗಳಿಗೆ ನಾಲ್ಕು ಚಕ್ರ ಇರಬೇಕು.

**ಶ್ರೀ ರಘುನಾಥರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, ಸರ್ಕಾರದವರು ಒಂದು ರಸ್ತೆಯನ್ನು ಅಭಿವೃದ್ಧಿ ಮಾಡಬೇಕಾದರೆ, ಆ ಟ್ರಾಫಿಕ್ ಅನ್ನು ಪ್ರತಿ ವರ್ಷ ಸರ್ವೇ ಮಾಡುತ್ತಾರೆ. ಅದರ ಪ್ರಕಾರ ಎಷ್ಟು ವಾಹನಗಳು, ಎಷ್ಟು ಭಾರದ ವಾಹನಗಳು ಸದರಿ ರಸ್ತೆಯಲ್ಲಿ ಓಡಾಡುತ್ತವೆ, ಈ ಎಲ್ಲಾ ಅಂಶಗಳನ್ನು ಪರಿಶೀಲನೆ ಮಾಡಿ ರಸ್ತೆ ಮಾಡುತ್ತಾರಲ್ಲವೇ?

**ಡಾ|| ಹೆಚ್.ಸಿ. ಮಹದೇವಪ್ಪ:–** ಮಾನ್ಯ ಸಭಾಪತಿಯವರೇ, ಪಿ.ಸಿ.ಯು. ನಲ್ಲಿ...

**ಶ್ರೀ ರಘುನಾಥರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, my question is, ೯೦.೩೮ ಕಿಲೋ ಮೀಟರ್ ರಸ್ತೆಯನ್ನು ಕಳೆದ ೩ ವರ್ಷದಲ್ಲಿ ಅಂದರೆ ಈ ವರ್ಷವನ್ನೂ ಸೇರಿಸಿಕೊಂಡು 118 ಕಿಲೋ ಮೀಟರ್ ರಿಪೇರಿ ಮಾಡುತ್ತಿದ್ದಾರೆ. ಆದರೆ, ರಸ್ತೆ ಉದ್ದ ಇರುವುದೇ ೯೦.೩೮ ಕಿಲೋ ಮೀಟರ್. But you are spending the amount for 118 km. ಉಳಿದ ರಸ್ತೆ ಎಲ್ಲಿಂದ ಬಂತು? ರಸ್ತೆಯ ಉದ್ದ ೯೦.೩೮. ಆದರೆ, ಮಾನ್ಯ ಸಚಿವರು ಹೇಳುವ ಪ್ರಕಾರ 118 ಕಿಲೋ ಮೀಟರ್ ರಿಪೇರಿ ಮಾಡುತ್ತಿದ್ದಾರೆ. ಅದರಿಂದಾಗಿ, ಈ ರಸ್ತೆ ಆಗಿದೆಯೋ ಅಥವಾ ಕೇವಲ ಬಿಲ್ ಪಾವತಿ ಮಾಡಿಕೊಳ್ಳುತ್ತಿದ್ದಾರೆಯೋ?

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಮಾನ್ಯ ಸದಸ್ಯರು ಕೇಳಿದಂತಹ ಪ್ರಶ್ನೆಗೆ ತಾವು ಈಗ ಉತ್ತರ ನೀಡಿ.

**ಡಾ|| ಹೆಚ್.ಸಿ. ಮಹದೇವಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸದರಿ ರಸ್ತೆ ಕಾಮಗಾರಿ ಬಗ್ಗೆ ಯಾವ ಸಲಹೆಗಳನ್ನು ತಿಳಿಸಿದ್ದಾರೆ, ಅದರ ಬಗ್ಗೆ I will send my Secretary and get a detailed report. There is no question of hiding or seeking anything. The road should be in a motorable condition. ಕಾಮಗಾರಿಗೆ ಬೇಕಾದಂತಹ ಹಣವನ್ನು ಕೊಟ್ಟು ಕಾಮಗಾರಿ ಆಗದೇ ಇದ್ದರೆ the Government will not keep quiet.

**ಸಭಾಪತಿಯವರು:–** ಮಾನ್ಯ ಸದಸ್ಯರು ಎರಡು ಪ್ರಶ್ನೆ ಕೇಳಿದ್ದಾರೆ. ಒಂದನೆಯದು, ಪ್ರತಿ ವರ್ಷ ರಸ್ತೆ ಕಾಮಗಾರಿಗಾಗಿ ಹಣ ಕೊಟ್ಟರೂ ರಸ್ತೆ ಚೆನ್ನಾಗಿರುವುದಿಲ್ಲ. ಎರಡನೆಯದು, ಸರ್ಕಾರ ನೀಡಿರುವ ಲಿಖಿತ ಉತ್ತರದ ಪ್ರಕಾರ ೯೦.೩೮ ಕಿಲೋ ಮೀಟರ್ ಇರುವ ರಸ್ತೆಯಲ್ಲಿ ರಿಪೇರಿ ಮಾಡಿರುವುದು 130 ಕಿಲೋ ಮೀಟರ್. ಈ 40 ಕಿಲೋ ಮೀಟರ್ ರಸ್ತೆ ಅಧಿಕವಾಗಿ ಹೇಗೆ ಬಂತು ಎಂದು ಕೇಳುತ್ತಿದ್ದಾರೆ. ಆ ವಿಚಾರವನ್ನು ತಾವು ಸ್ವಲ್ಪ ಗಮನಿಸಿ.

**ಡಾ|| ಹೆಚ್.ಸಿ. ಮಹದೇವಪ್ಪ:–** ಮಾನ್ಯ ಸಭಾಪತಿಯವರೇ, ಆ ರೀತಿಯ ಪ್ರಶ್ನೆ ಇಲ್ಲ. ನಾನು ಈ ಬಗ್ಗೆ ಸರಿಯಾಗಿ ಉತ್ತರ ನೀಡಿದ್ದೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರು ಹೇಳಿದ ವಿಚಾರವನ್ನು ನಾನು ತಮಗೆ ತಿಳಿಸುತ್ತಿದ್ದೇನೆ ಅಷ್ಟೇ.

**ಡಾ|| ಹೆಚ್.ಸಿ. ಮಹದೇವಪ್ಪ:–** ಮಾನ್ಯ ಸಭಾಪತಿಯವರೇ, ಸದರಿ ರಸ್ತೆ 42 ಕಿಲೋ ಮೀಟರ್ ಉದ್ದ ಇದೆ. ಅದರಲ್ಲಿ 20 ಕಿಲೋ ಮೀಟರ್ ರಸ್ತೆ ಸರಿ ಇದೆ. ಉಳಿದ 22 ಕಿಲೋ ಮೀಟರ್ ರಸ್ತೆ ಮಹಾರಾಷ್ಟ್ರ ಮತ್ತು ಇತರೆ ನೆರೆಯ ರಾಜ್ಯಗಳಿಂದ ಓಡಾಡುವ ಭಾರೀ ತೂಕದ ಮರಳು ಲಾರಿಗಳಿಂದಾಗಿ ಹಾಳಾಗಿದೆ. ಇದು ವಾಸ್ತವಾಂಶ ಇರುವುದು. ಅಲ್ಲದೇ, ಆ ರಸ್ತೆ ನಿರ್ವಹಣೆ ಮಾಡುವುದಕ್ಕೆ ಎಷ್ಟು ಹಣ ಬೇಕೋ ಅಷ್ಟು ಹಣವನ್ನು ಸರ್ಕಾರ ಬಿಡುಗಡೆ ಮಾಡಿರುತ್ತದೆ. ಪ್ರತಿ ವರ್ಷ ರಸ್ತೆ ನಿರ್ವಹಣೆ ಮಾಡಬೇಕಾಗುತ್ತದೆ. ರಸ್ತೆ ನಿರ್ಮಿಸಿ ಸುಮ್ಮನೆ ಮನೆಯಲ್ಲಿ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. Maintenance of road is a continuous process, ಅದನ್ನು ಮಾಡುತ್ತಿದ್ದೇವೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆದಾಗ್ಯೂ, ಈ ಕಾಮಗಾರಿಯಲ್ಲಿ ಮಾನ್ಯ ಸದಸ್ಯರಿಗೆ ಅನುಮಾನವಿದೆಯೆಂದು ಹೇಳಿದಾಗ, I will send my Secretary and get the inspection done properly and get the report.

**ಪ್ರಶ್ನೆ ಸಂಖ್ಯೆ: 3630**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅಮರನಾಥ ಪಾಟೀಲ**:- ಮಾನ್ಯ ಸಭಾಪತಿಯವರೇ, ರಾಯಚೂರು ಜಿಲ್ಲೆಯಲ್ಲಿ ಸ್ಥಾಪಿಸಲಾದ ಯರಮರಸ್ ಶಾಖೋತ್ಪನ್ನ ವಿದ್ಯುತ್ ಕೇಂದ್ರ(ವೈ.ಟಿ.ಪಿ.ಎಸ್) ಹಾಗೂ ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರ(ಆರ್.ಟಿ.ಪಿ.ಎಸ್)ಗಳು ರಾಷ್ಟ್ರದ ಅತ್ಯಂತ ಪ್ರತಿಷ್ಟಿತ ಮೆಗಾ ಶಾಖೋತ್ಪನ್ನ ಘಟಕಗಳಾಗಿವೆ. ಈ ಶಾಖೋತ್ಪನ್ನ ಯೋಜನೆಗಳಲ್ಲಿ ತಮ್ಮ ಭೂಮಿಯನ್ನು, ಮನೆಗಳನ್ನು ಕಳೆದುಕೊಂಡಂತಹ ರೈತರಿಗೆ ಮತ್ತು ನಾಗರಿಕರಿಗೆ ಸರಿಯಾದಂತಹ ಪರಿಹಾರವನ್ನು ಒದಗಿಸಿಕೊಡಬೇಕು. ಜೊತೆಗೆ ಅನುಕಂಪದ ಆಧಾರದ ಮೇರೆಗೆ ಅವರಿಗೆ ಉದ್ಯೋಗವನ್ನು ಕೊಡಬೇಕೆನ್ನುವ ಪ್ರಶ್ನೆಯನ್ನು ನಾನು ಕೇಳಿದ್ದೆನು. ಅದಕ್ಕೆ ಮಾನ್ಯ ಇಂಧನ ಸಚಿವರು ಸವಿಸ್ತಾರವಾದಂತಹ ಪಟ್ಟಿಯನ್ನು ಕೊಟ್ಟಿದ್ದಾರೆ. ಆದರೆ, ನಾನು ಹೇಳುವುದಕ್ಕೆ ಬಯಸುವ ವಿಚಾರವೇನೆಂದರೆ, ಭೂಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆ 1977 ರಲ್ಲಿ ಶುರುವಾದಂತಹ ಪ್ರಕ್ರಿಯೆಯಾಗಿದ್ದು, ಇವತ್ತಿಗೆ ಸುಮಾರು 40 ವರ್ಷವಾಯಿತು. ಇದುವರೆವಿಗೂ ಕೂಡ ಸದರಿ ಯೋಜನೆಯಲ್ಲಿ ಭೂ ಸ್ವಾಧೀನ ಪಡಿಸಿಕೊಂಡ ರೈತರಿಗೆ/ನಾಗರಿಕರಿಗೆ ಸರಿಯಾದಂತಹ ಪರಿಹಾರ ಸಿಕ್ಕಿಲ್ಲ ಮತ್ತು ಅವರಿಗೆ ಒಂದು ಉದ್ಯೋಗ ಕೂಡ ನೀಡಿರುವುದಿಲ್ಲ. ಸರ್ಕಾರದವರು ನೀಡಿರುವ ಮಾಹಿತಿ ಪ್ರಕಾರ RTPS (Raichur Thermal Power Station) ಯೋಜನೆಯಲ್ಲಿ ಸುಮಾರು 1016 ಕುಟುಂಬಗಳು ಅರ್ಜಿ ಸಲ್ಲಿಸಿವೆ. ಅದರಲ್ಲಿ 402 ಕುಟುಂಬಗಳಿಗೆ ಉದ್ಯೋಗವನ್ನು ನೀಡಲಾಗಿದೆ. ಹೀಗಾಗಿ, 614 ಕುಟುಂಬಗಳಿಗೆ RTPS ಯೋಜನೆಯಲ್ಲಿ ಉದ್ಯೋಗ ನೀಡುವುದು ಬಾಕಿ ಉಳಿದಿವೆ. ಅದೇ ರೀತಿ, YTPS (Yarmarus Thermal Power Station) ಪ್ರಾಜೆಕ್ಟ್‌ನಲ್ಲಿ ಸುಮಾರು 235 ಕುಟುಂಬಗಳು ಅರ್ಜಿ ಸಲ್ಲಿಸಿದ್ದು, 108 ಕುಟುಂಬದ ಅರ್ಜಿಗಳನ್ನು ವಿಲೇವಾರಿ ಮಾಡಿ ಫಲಾನುಭವಿಗಳಿಗೆ ಉದ್ಯೋಗವನ್ನು ನೀಡಿದ್ದಾರೆ. 127 ಕುಟುಂಬಗಳ ಅರ್ಜಿಗಳು ಮಾತ್ರ ಬಾಕಿ ಉಳಿದಿವೆ. ಕಳೆದ ಬಾರಿ ಇದೇ ಸದನದಲ್ಲಿ ನಾನು ಸದರಿ ವಿಷಯವನ್ನು ಮಾನ್ಯ ಸಚಿವರ ಗಮನಕ್ಕೆ ತಂದಾಗ ಅವರು ತ್ವರಿತವಾಗಿ ಆ ಬಗ್ಗೆ ಆದೇಶ ಮಾಡಿ ಇಲಾಖೆಗೆ ಕೂಡ ಕಳುಹಿಸಿದರು. ಆ ನಿಟ್ಟಿನಲ್ಲಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಆದರೆ,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇದುವರೆವಿಗೂ ಕೂಡ ಸಚಿವರ ಆದೇಶ ಮೇರೆಗೆ ಯಾವುದೇ ಕೆಲಸವಾಗಿರುವುದಿಲ್ಲ. ಇವತ್ತಿನ ದಿವಸ ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇಡೀ ರಾಜ್ಯಕ್ಕೆ ಬೆಳಕನ್ನು ಕೊಟ್ಟಂತಹ ಯೋಜನೆಗೆ ಭೂಮಿಯನ್ನು ಕಳೆದುಕೊಂಡ ರಾಯಚೂರು ಜಿಲ್ಲೆಯ ರೈತರು ಮತ್ತು ನಾಗರಿಕರ ಕುಟುಂಬಗಳು ಇವತ್ತಿನ ದಿವಸ ಅಂಧಕಾರದಲ್ಲಿ ಇರುವಂತಹ ಸಂದರ್ಭದಲ್ಲಿ ಮಾನ್ಯ ಸಚಿವರು ಯಾವ ಕಾಲಮಿತಿಯಲ್ಲಿ ಫಲಾನುಭವಿಗಳಿಗೆ ಪರಿಹಾರ ನೀಡುತ್ತಾರೆ ಎನ್ನುವುದನ್ನು ತಿಳಿಸಬೇಕು. ಏಕೆಂದರೆ, ಚುನಾವಣೆಗೆ ಕ್ಷಣಗಣನೆ ಆರಂಭವಾಗಿದ್ದು, ಸಮಯ ಯಾರ ಕೈಯಲ್ಲಿಯೂ ಸಹ ಇರುವುದಿಲ್ಲ. ನಾವು ಚುನಾವಣೆಯ ಹೊಸ್ತಿಲಲ್ಲಿ ನಿಂತಿದ್ದೇವೆ. ಆದುದರಿಂದ, ಈ ಬಗ್ಗೆ ಸರ್ಕಾರ ಯಾವ ಕ್ರಮ ತೆಗೆದುಕೊಳ್ಳಬಹುದು ಅದನ್ನು ತಿಳಿಸಿ ಅಥವಾ ಮುಂದೆ ನಮ್ಮ ಸರ್ಕಾರ ಅಧಿಕಾರ ಬಂದರೆ ಯಾವ ಕ್ರಮ ತೆಗೆದುಕೊಳ್ಳಬಹುದೆಂಬ ಬಗ್ಗೆ ಮಾರ್ಗದರ್ಶನ ನೀಡಬಹುದೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

**(ಗೊಂದಲ)**

ಅದಕ್ಕಾಗಿಯೇ ನಾನು, ನಮ್ಮ ಸರ್ಕಾರ ಮುಂದೆ ಅಧಿಕಾರಕ್ಕೆ ಬಂದು ಯಾವ ಕ್ರಮ ತೆಗೆದುಕೊಳ್ಳಬಹುದೆಂದು ಮಾರ್ಗದರ್ಶನ ನೀಡಬೇಕೆಂದು ಕೇಳುತ್ತಿದ್ದೇನೆ. ಏಕೆಂದರೆ, ಈಗಿನ ಸರ್ಕಾರದ ಆಡಳಿತಾವಧಿಗೆ ಇನ್ನು ಕೇವಲ ಒಂದು ಅಥವಾ ಎರಡು ತಿಂಗಳು ಮಾತ್ರ ಕಾಲಾವಕಾಶವಿದೆ. ಆದುದರಿಂದ, ನಾನು ಈ ರೀತಿ ಸಲಹೆ ಕೇಳುತ್ತಿದ್ದೇನೆ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಸರ್ಕಾರ ಅಧಿಕಾರಕ್ಕೆ ಬರುವುದಿಲ್ಲ. ಪುನಃ ನಮ್ಮ ಸರ್ಕಾರವೇ ಅಧಿಕಾರಕ್ಕೆ ಬರುವುದು.

**(ಗೊಂದಲ)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಈ ಎರಡು ಸದಸ್ಯರುಗಳ ಸರ್ಕಾರ ಮುಂದಿನ ಚುನಾವಣೆಯಲ್ಲಿ ಅಧಿಕಾರಕ್ಕೆ ಬರುವುದಿಲ್ಲ. ಬದಲಾಗಿ ಮುಂದಿನ ಚುನಾವಣೆಯಲ್ಲಿ ನಮ್ಮ ಸರ್ಕಾರವೇ ಅಧಿಕಾರಕ್ಕೆ ಬರುತ್ತದೆ.

(ಮುಂದುವರೆದಿದೆ...)

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(947) 14.11.2017/12.30/ವೈಎಲ್-ಎಂಡಿ

**ಶ್ರೀ ಡಿ.ಕೆ.ಶಿವಕುಮಾರ್**:- ಮಾನ್ಯ ಸಭಾಪತಿಯವರೇ, ರಾಯಚೂರು ಜಿಲ್ಲೆಯಲ್ಲಿ ಸ್ಥಾಪಿಸಲಾಗಿರುವ RTPS (Raichur Thermal Power Station) and YTPS (Yarmarus Thermal Power Station) ಯೋಜನೆಯು 1999ನೇ ಸಾಲಿನಲ್ಲಿ ಪ್ರಾರಂಭಗೊಂಡಿದೆ ಎಂಬುದು ತಮಗೂ ಗೊತ್ತಿರತಕ್ಕಂಥ ವಿಚಾರವಾಗಿದೆ. ಯರಮರಸ್ ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಯೋಜನೆಗಾಗಿ ಮೊದಲನೇ ಹಂತದಲ್ಲಿ 826 ಎಕರೆ ಜಮೀನನ್ನು ಕೆಐಎಡಿಬಿ ಗೆ ಪ್ರತಿ ಎಕರೆಗೆ ರೂ.2,75,000 ಹಣ ಪಾವತಿಸಿ ಪಡೆದುಕೊಳ್ಳಲಾಗಿದೆ. 2009ನೇ ಸಾಲಿನಲ್ಲಿ ಎರಡನೇ ಹಂತಕ್ಕಾಗಿ 167 ಎಕರೆ ಜಮೀನನ್ನು ಕೆಐಎಡಿಬಿ ಗೆ ಪ್ರತಿ ಎಕರೆಗೆ ರೂ.16,00,000 ಹಣ ಪಾವತಿಸಿ ಪಡೆದುಕೊಳ್ಳಲಾಗಿದೆ. 2013ನೇ ಸಾಲಿನಲ್ಲಿ ಮೂರನೇ ಹಂತದಲ್ಲಿ 134 ಎಕರೆ ಜಮೀನನ್ನು ಕೆಐಎಡಿಬಿ ಯಿಂದ ಪ್ರತಿ ಎಕರೆಗೆ ರೂ.24,00,000 ಪಾವತಿಸಿ ಪಡೆದುಕೊಳ್ಳಲಾಗಿದೆ. ಮತ್ತೆ ಭೂಮಿಯನ್ನು ಕಳೆದುಕೊಂಡಂತಹ ಭೂಸಂತ್ರಸ್ಥರಿಗೆ ಉದ್ಯೋಗವನ್ನು ನೀಡಲು ಅರ್ಹತೆಯನ್ನು ಹೊಂದಿರತಕ್ಕಂಥವರಿಗೆ ಹಾಗೂ ಅರ್ಜಿಯನ್ನು ಹಾಕಿರತಕ್ಕಂಥವರಿಗೆಲ್ಲಾ ಕೆಲಸವನ್ನು ಕೊಟ್ಟಿದ್ದೇವೆ. ಆದರೆ ಕೆಲವರದ್ದು ಬಾಕಿ ಇದೆ. ಏಕೆಂದರೆ, ಆ ಸಮಯದಲ್ಲಿ ಕೆಲವರು ಏನು ಮಾಡಿದ್ದಾರೆಂದರೆ, ಸರ್ಕಾರದ ಒಂದು ನಿಯಮದ ಪ್ರಕಾರ ಭೂಮಿಯನ್ನು ಕಳೆದುಕೊಳ್ಳುವಂಥವರು 3 ವರ್ಷಕ್ಕೂ ಮೊದಲೇ landlord ಆಗಿರಬೇಕು ಹಾಗೂ ಒಂದು ಕುಟುಂಬದಲ್ಲಿ ಒಬ್ಬರಿಗೆ ಮಾತ್ರ ಉದ್ಯೋಗ ಒದಗಿಸಬೇಕೆಂದು ಸರ್ಕಾರದ ಆದೇಶವಾಗಿದೆ. ಆ ಆದೇಶದ ಪ್ರಕಾರ ಎಷ್ಟು ಜನರಿಗೆ ಉದ್ಯೋಗ ಕಲ್ಪಿಸುವುದಕ್ಕಾಗುತ್ತದೆಯೋ ಅಷ್ಟನ್ನು ಒದಗಿಸಲಾಗಿದೆ. ಉಳಿದ ಕೆಲವು ಅರ್ಜಿಯಲ್ಲಿ ಏನಾಗಿದೆಯೆಂದರೆ, ಕೆಲವು ಕುಟುಂಬದಲ್ಲಿಯೇ internal family dispute ಇದೆ. ಹಣವನ್ನು ಒಬ್ಬರು ತೆಗೆದುಕೊಂಡು, ಉದ್ಯೋಗಕ್ಕಾಗಿ ಇನ್ನೊಬ್ಬರು ಅರ್ಜಿಯನ್ನು ಹಾಕಿಕೊಂಡಿದ್ದಾರೆ. ಹಾಗಾಗಿ ಕೆಲವು ಸಮಸ್ಯೆಗಳಿವೆ. ಜೊತೆಗೆ ಇನ್ನೊಂದು major issue ಎಂದರೆ, ಅರ್ಹತೆಯ ಸಮಸ್ಯೆ ಇದೆ ಎಂದು ಕೆಲವು ಅರ್ಜಿಗಳನ್ನು ನಾವು ತಿರಸ್ಕರಿಸಿದ್ದೇವೆ. ಕೆಲವು ಅಭ್ಯರ್ಥಿಗಳು ಅಧಿಸೂಚನೆ ಹೊರಡಿಸಿದ ತಕ್ಷಣ ಒಂದು ಕುಟುಂಬಕ್ಕೆ ಒಂದು ಉದ್ಯೋಗ ಮಾತ್ರ ಸಿಗುತ್ತದೆ ಎಂದು ಒಂದೇ ಕುಟುಂಬದಲ್ಲಿಯೇ ಇರತಕ್ಕಂಥ ಇನ್ನೊಂದು ಕುಟುಂಬದವರು ಬಂದು ಜಮೀನನ್ನು ತೆಗೆದುಕೊಂಡಿದ್ದಾರೆ. ಅವರು claim ಮಾಡುತ್ತಿದ್ದಾರೆ. ಇದರಿಂದಾಗಿ ಎರಡೆರಡು ಸಲ ಆಗುತ್ತಿದೆ. ಅಧಿಸೂಚನೆ ಹೊರಡಿಸುವ ಮೊದಲು ಒಂದು ರೀತಿ. ಅಧಿಸೂಚನೆ ಹೊರಡಿಸಿದ ಮೇಲೆ ಮತ್ತೊಂದು ರೀತಿ,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನೋಂದಾಯಿಸಿಕೊಳ್ಳುವಂಥದ್ದು ಆಗಿದೆ. ಇದು ಬಹಳ ದೊಡ್ಡ ಸಮಸ್ಯೆಯಾಗುತ್ತಿದೆ. ಏಕೆಂದರೆ, ನಮ್ಮ financial position ನ್ನು ಕೂಡ ನಾವು ನೋಡಬೇಕಾಗುತ್ತದೆ. Mundra Thermal Power Stationನ್ನು ನಾವು ಕೂಡ ಹೋಗಿ ನೋಡಿಕೊಂಡು ಬಂದಿದ್ದೇವೆ. 4600 ಮೆಗಾ ವ್ಯಾಟ್ಸ್ capacity ಇದ್ದು, ಕೇವಲ 900 ಜನ ಮಾತ್ರ ಕೆಲಸ ಮಾಡುತ್ತಿದ್ದಾರೆ. ನಮ್ಮ Udupi Power Corporation Limited ಯಲ್ಲಿ 1200 ಮೆಗಾ ವ್ಯಾಟ್ಸ್ capacity ಇದ್ದು, ಕೇವಲ 300 ಜನ ಕೆಲಸ ಮಾಡುತ್ತಿದ್ದಾರೆ. ಜಿಂದಾಲ್‌ನಲ್ಲಿ 1320 ಮೆಗಾ ವ್ಯಾಟ್ಸ್ capacity ಇದ್ದು, 408 ಜನ ಕೆಲಸ ಮಾಡುತ್ತಿದ್ದಾರೆ. ಆದರೆ, ನಮ್ಮ ವೈಟಿಪಿಎಸ್ ಹಾಗೂ ಆರ್‌ಟಿಪಿಎಸ್ ನಲ್ಲಿ 1720 ಮೆಗಾ ವ್ಯಾಟ್ಸ್ capacity ಇದ್ದು 2037 ಜನ ಕೆಲಸ ಮಾಡುತ್ತಿದ್ದಾರೆ. ಕೇವಲ employment generation ಮಾಡುವುದಕ್ಕಾಗಿಯೇ ನಾವು ಅನುದಾನವನ್ನು ಒದಗಿಸುತ್ತಿದ್ದೇವೆ. ಆದರೆ, ಭೂಸಂತ್ರಸ್ತ ರೈತರಿಗೂ ಉದ್ಯೋಗ ಕೊಡಬೇಕೆಂದು ನಮ್ಮ ಸರ್ಕಾರದ ನೀತಿಯಾಗಿದೆ. ಕುಟುಂಬದ ಒಬ್ಬರಿಗೆ ಉದ್ಯೋಗ ಕೊಡಬೇಕೆಂದು ನೀತಿ ಏನಿದೆ ಅದನ್ನು ಕೊಡುವುದಕ್ಕೆ ನಾವು ತಯಾರಿದ್ದೇವೆ. ಹಾಗೆಯೇ ಏನೇನು disputes ಇದೆ ಅದನ್ನು ಭೂಮಾಲೀಕರು settlement ಮಾಡಿಕೊಂಡು ಬರಬೇಕು. ಡೆಪ್ಯೂಟಿ ಕಮೀಷನರ್‌ರವರು he is the eligible family holder ಎಂದು ಹೇಳಬೇಕು. ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಏನಾದರೂ ನಿರ್ದಿಷ್ಟವಾದ ಸಲಹೆ ಇದ್ದರೆ ನೀಡಲಿ. We will try to solve it. ಏಕೆಂದರೆ, ಜಮೀನನ್ನು ಕಳೆದುಕೊಂಥ ಪ್ರತಿ ಕುಟುಂಬದ ಒಬ್ಬರಿಗೆ ಉದ್ಯೋಗವನ್ನು ಒದಗಿಸಲು ಸರ್ಕಾರ ಬದ್ಧವಾಗಿದೆ.

**ಶ್ರೀ ಅಮರನಾಥ ಪಾಟೀಲ**:- ಮಾನ್ಯ ಸಭಾಪತಿಯವರೆ, ಅದಕ್ಕೆ prescribed norms ಇದೆ, certain period ನಲ್ಲಿ apply ಮಾಡಬೇಕೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಆದರೆ, ಈ ಪ್ರಕ್ರಿಯೆಯೂ ನಡೆದು 3-4 ದಶಕಗಳಾಗುತ್ತಾ ಬಂದಿದೆ. ಇದರಿಂದಾಗಿ ಒಂದೊಂದು generation pass ಆಗಿದೆ. ನಾನು ಒಂದು ಮಾಹಿತಿಯನ್ನು ತಂದಿದ್ದೇನೆ. ಶ್ರೀ ಪ್ರಶಾಂತ್ ಅಜಗರ್ಣಿ ಬಿನ್ ತೂಗೂರಪ್ಪ ಎಂಬ ಅಭ್ಯರ್ಥಿಯು ಬಿ.ಬಿ.ಎಂ., ಎಂ.ಬಿ.ಎ., ಪಾಸ್ ಮಾಡಿಕೊಂಡು ಇವತ್ತಿನ ದಿನ ನಿರುದ್ಯೋಗಿಯಾಗಿದ್ದಾನೆ. ಆತ ತನ್ನ ತಂದೆಯನ್ನು ಕಳೆದುಕೊಂಡಿದ್ದಾನೆ. ಮನೆಯಲ್ಲಿ ಆ ಕುಟುಂಬವನ್ನು ನೋಡಿಕೊಳ್ಳುವವರ್‍ಯಾರೂ ಇಲ್ಲದಂತಾಗಿದೆ. ಅಂತಹ ಕುಟುಂಬ ನಮ್ಮ ಎದುರುಗಡೆ ಇದೆ. ಇದರ ಬಗ್ಗೆ

ಕೂಡ ನಾನು ಮಾನ್ಯ ಸಚಿವರ ಗಮನಕ್ಕೆ ತಂದಿದ್ದೇನೆ. ಇಂತಹ ಪ್ರಕರಣದಲ್ಲಿ ಕೆಲವು norms ನ್ನು ಸ್ವಲ್ಪ ಪಕ್ಕಕ್ಕೆ ಇಟ್ಟು, ಯಾರು ಮನೆ, ಮಠವನ್ನು ಕಳೆದುಕೊಂಡು, ಇವತ್ತಿನ ದಿನ ಅವರ ಜಮೀನಿನಿಂದ ಇಡೀ ರಾಜ್ಯಕ್ಕೆ ಬೆಳಕನ್ನು ಕೊಡುತ್ತಿದ್ದೇವೆ ಅಂತಹ ಕುಟುಂಬಕ್ಕೆ ಉದ್ಯೋಗವನ್ನು ಒದಗಿಸಬೇಕು. ಮಾನ್ಯ ಸಚಿವರೆ ಈಗಾಗಲೇ 614 ಖಾಲಿ ಹುದ್ದೆ ಇದೆ ಎಂದು ಹೇಳಿದ್ದಾರೆ. ಬಾಕಿ ಹುದ್ದೆ ಇರುವುದರಿಂದ ದಯವಿಟ್ಟು ಕಾಲಮಿತಿಯೊಳಗೆ ಅರ್ಹ ಭೂಸಂತ್ರಸ್ತ ರೈತರಿಗೆ ಉದ್ಯೋಗವನ್ನು ಒದಗಿಸಬೇಕು. ಏಕೆಂದರೆ, ಮಾನ್ಯ ಸಚಿವರು ಕೂಡ ಸ್ಪಂದಿಸುತ್ತಿದ್ದಾರೆ. ಅದರ ಪ್ರಕಾರ ಮುಖ್ಯ ಕಛೇರಿಗೆ ಬಂದಾಗ ಅಲ್ಲಿಂದಲೂ response ಬಂದಿದೆ. ಈ ನಿಟ್ಟಿನಲ್ಲಿ ಆದಷ್ಟು ಬೇಗ ಕಾಲಮಿತಿಯೊಳಗೆ ಈ ಒಂದು ಕಾರ್ಯವನ್ನು ಮಾಡಿ, ಜಮೀನನ್ನು ಕಳೆದುಕೊಂಡ ಕುಟುಂಬಕ್ಕೆ ಒಂದು ಸಾಂತ್ವನ ಅಥವಾ ಧೈರ್ಯ ತುಂಬುವಂತಹ ಕೆಲಸವನ್ನು ಮಾಡಬೇಕೆಂದು ತಮ್ಮ ಮೂಲಕ ವಿನಂತಿಸುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ನಿರ್ದಿಷ್ಟ ಪ್ರಕರಣದ ಬಗ್ಗೆ ವಿವರವಾಗಿ ಬರೆದು ಕೊಡುವುದಕ್ಕೆ ಹೇಳಿ. ಇಲ್ಲಿ ಬಹಳ overlapping ಆಗುತ್ತಿದೆ.

**ಶ್ರೀ ಅಮರನಾಥ ಪಾಟೀಲ:-** ಮಾನ್ಯ ಸಭಾಪತಿಯವರೇ, ಕೊಟ್ಟಿದ್ದೇನೆ.

**ಸಭಾಪತಿಯವರು:-** ನೀವು ನಿರ್ದಿಷ್ಟ ಪ್ರಕರಣದ ಬಗ್ಗೆ ವಿವರ ಕೊಡಿ, ಮಾಡಿ ಕೊಡುತ್ತೇವೆಂದು ಸಚಿವರು ಹೇಳುತ್ತಿದ್ದಾರೆ.

**ಶ್ರೀ ಅಮರನಾಥ ಪಾಟೀಲ:-** ಮಾನ್ಯ ಸಭಾಪತಿಯವರೇ, ವೈಟಿಪಿಎಸ್ ಎದುರು ಧರಣಿಯಲ್ಲಿ ಕುಳಿತ್ತಿದ್ದಾರೆ. ಅವರಿಗೆ ಪರಿಹಾರ ನೀಡುವುದರಲ್ಲಿಯೂ ತಾರತಮ್ಯವಾಗುತ್ತಿದೆ. ಈಗಾಗಲೇ ಸುಮಾರು ತಿಂಗಳನಿಂದ ಧರಣಿ ನಡೆಯುತ್ತಿದೆ. ಅದನ್ನು ಸಹಾ ಸರ್ಕಾರ ಕೂಲಂಕಷವಾಗಿ ಪರಿಶೀಲನೆಯನ್ನು ಮಾಡಿ, ಪರಿಹಾರ ನೀಡುವ ನಿಟ್ಟಿನಲ್ಲಿ ಮತ್ತು ಅನುಕಂಪದ ಆಧಾರದ ಮೇಲೆ ಉದ್ಯೋಗವನ್ನು ಕಲ್ಪಿಸುವ ನಿಟ್ಟಿನಲ್ಲಿ ಮಾನ್ಯ ಸಚಿವರು ಮುತುವರ್ಜಿವಹಿಸಬೇಕು.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಈ ಯೋಜನೆಗೆ ಜಮೀನು ತೆಗೆದುಕೊಂಡಿದ್ದರೆ ಅವರ್ಯಾರು ಇರುತ್ತಾರೆಯೋ ಅವರಿಗೆ ಕೆಲಸವನ್ನು ಒದಗಿಸುವುದಕ್ಕೆ ನಮ್ಮ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಭ್ಯಂತರವೇನಿಲ್ಲ. ಆದರೆ, ಯಾರೋ ಬೇರೆಯವರಿಗೆ ಜಮೀನನ್ನು ಒದಗಿಸಿ, ನಮಗೆ ಕೆಲಸವನ್ನು ನೀಡಿ ಎಂದರೆ ಅದು ಸಾಧ್ಯವಾಗುವುದಿಲ್ಲ.

**ಶ್ರೀ ಅಮರನಾಥ ಪಾಟೀಲ**:- ಮಾನ್ಯ ಸಭಾಪತಿಯವರೇ, ಪಟ್ಟಿಯಲ್ಲಿ ಒದಗಿಸಿರತಕ್ಕಂಥ ವಿವರವೇನಿದೆ ಅದರ ಪ್ರಕಾರ ಕೊಡಲಿ. ಮಾನ್ಯ ಸಚಿವರೆ ಪಟ್ಟಿಯನ್ನು ಕೊಟ್ಟಿದ್ದಾರೆ.

**ಶ್ರೀ ಡಿ.ಕೆ.ಶಿವಕುಮಾರ್**:- ಮಾನ್ಯ ಸಭಾಪತಿಯವರೇ, ಕೆಐಎಡಿಬಿಯವರು ಜಮೀನನ್ನು ಸ್ವಾಧೀನ ಪಡಿಸಿಕೊಂಡಾಗ ವೈಟಿಪಿಎಸ್ ಗೆಂದು ಪಡೆದುಕೊಂಡಿದ್ದರೆ ನಾವು ಅಂತಹ ಕುಟುಂಬಕ್ಕೆ ಉದ್ಯೋಗವನ್ನು ಒದಗಿಸುವುದಕ್ಕೆ ಸಿದ್ಧರಿದ್ದೇವೆ.

**ಶ್ರೀ ಅಮರನಾಥ ಪಾಟೀಲ**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೊಟ್ಟಿರತಕ್ಕಂಥ ಪಟ್ಟಿ ಏನಿದೆ ಅದರ ಆಧಾರದ ಮೇಲೆಯೇ ಒದಗಿಸಲಿ ಎಂದು ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್**:- ಮಾನ್ಯ ಸಭಾಪತಿಯವರೇ, ಸದಸ್ಯರಿಗೆ ಎಲ್ಲಾ ಮಾಹಿತಿಯೂ ಇರಲಿ ಎಂದೇ for the first time we have given all the details. ಪ್ರತಿಯೊಬ್ಬ ರೈತರು ಯಾರ್ಯಾರು ಎಷ್ಟೆಷ್ಟು ಎಕರೆ ಜಮೀನನ್ನು ಕಳೆದುಕೊಂಡಿದ್ದಾರೆಂಬ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಒದಗಿಸಿದ್ದೇವೆ. ನಾಳೆ ದಿನ ದೂಷಿಸಬಾರದು.

**ಶ್ರೀ ಅಮರನಾಥ ಪಾಟೀಲ**:- ಮಾನ್ಯ ಸಭಾಪತಿಯವರೇ, ಪಟ್ಟಿಯನ್ನು ಒದಗಿಸಿದ್ದಾರೆ. ಆದರೆ, ಇನ್ನು ನ್ಯಾಯ ಸಿಕ್ಕಿಲ್ಲ. ವೈಟಿಪಿಎಸ್‌ನ ಹತ್ತಿರ ಅವರು ಧರಣಿಯಲ್ಲಿ ಕುಳಿತ್ತಿದ್ದಾರೆ.

**ಸಭಾಪತಿಯವರು**:- ಆಯಿತು. ಪಟ್ಟಿ ಇದೆ. Specific ಆಗಿ ಯಾರಿಗಾದರೂ ಅನ್ಯಾಯವಾಗಿದ್ದರೆ ಕೊಡಿ ನಾನು ಬಗೆಹರಿಸುತ್ತೇನೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ತಕ್ಷಣವೇ ಕೊಡಿ.

**ಶ್ರೀ ಅಮರನಾಥ ಪಾಟೀಲ**:- ಮಾನ್ಯ ಸಭಾಪತಿಯವರೇ, ನಮಗೆ ಯಾವ ಕಾಲಮಿತಿಯೊಳಗೆ ಬಾಕಿ ಇರತಕ್ಕಂಥ ಕುಟುಂಬದ ಸಮಸ್ಯೆಯನ್ನು ಬಗೆಹರಿಸುತ್ತಾರೆ ಎನ್ನುವುದರ ಬಗ್ಗೆ ಉತ್ತರ ಬಂದಿಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ದಾಖಲೆಗಳನ್ನು ವಿವರವಾಗಿ ಇಟ್ಟುಕೊಂಡಿರತಕ್ಕಂಥ ಕುಟುಂಬಗಳಿಗೆ ಯಾವ ಕಾಲಮಿತಿಯೊಳಗೆ ಉದ್ಯೋಗವನ್ನು ಒದಗಿಸುತ್ತಾರೆ ಎಂದು ಮಾನ್ಯ ಸಚಿವರು ಹೇಳಬೇಕು.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ದಾಖಲೆಗಳು ಸರಿಯಾಗಿದ್ದು, Deputy Commissioner certify ಮಾಡಿದ ಒಂದು ತಿಂಗಳೊಳಗೆ ಉದ್ಯೋಗವನ್ನು ಒದಗಿಸುತ್ತೇವೆ.

**ಶ್ರೀ ಅಮರನಾಥ ಪಾಟೀಲ:-** ಮಾನ್ಯ ಸಭಾಪತಿಯವರೇ, Deputy Commissioner ಗೆ ಮಾನ್ಯ ಸಚಿವರು ಹೇಳಬೇಕು. ಮಾನ್ಯ ಸಚಿವರು ಹೇಳಿದರೆ ಮಾತ್ರ ಅದು ವಾಪಸ್ಸು ಬರುವುದಕ್ಕೆ ಸಾಧ್ಯ. ಇಲ್ಲದಿದ್ದರೆ ಮಾನ್ಯ ಸಚಿವರ ಅವಧಿಯೇ ಮುಗಿದು ಹೋಗುತ್ತದೆ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಅವಧಿ ಮುಗಿಯುವುದರ ಬಗ್ಗೆ ಸುಮ್ಮನೆ ಏತಕ್ಕೆ ಮಾನ್ಯ ಸದಸ್ಯರು ಕನಸು ಕಾಣುತ್ತಿದ್ದಾರೆ.

**ಶ್ರೀ ಅಮರನಾಥ ಪಾಟೀಲ:-** ಮಾನ್ಯ ಸಭಾಪತಿಯವರೇ, ನ್ಯಾಯ ಸಿಗಬೇಕಲ್ಲವೇ? ಮಾನ್ಯ ಡಿ.ಕೆ.ಶಿವಕುಮಾರ್‌ರವರು ಬಹಳ ಹೆಸರುವಾಸಿ, ಬಹಳ ಧೀಮಂತ ಮಂತ್ರಿಗಳು ಎಂದು ಹೇಳಿಕೊಳ್ಳುತ್ತಾರೆ. ಇಂತಹ ಕೆಲಸವನ್ನು ಮಾಡಬೇಕಾದರೆ ಹಿಂದೆ ಹೋದರೆ ಹೇಗೆ?

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ಎಲ್ಲಿಯೂ ಹೇಳಿಕೊಂಡಿಲ್ಲ. ನನಗೆ ಸರ್ಟಿಫಿಕೇಟ್ ಬೇಡ. ಮಾನ್ಯ ಸದಸ್ಯರು ಚಿಂತೆ ಮಾಡುವುದಕ್ಕೂ ಹೋಗುವುದು ಬೇಡ. ಹಾಗೆಯೇ short period ಇದೆ ಎಂಬುದರ ಬಗ್ಗೆ ತಲೆಕೆಡಿಸಿಕೊಳ್ಳುವುದಕ್ಕೆ ಮಾನ್ಯ ಸದಸ್ಯರು ಹೋಗುವುದು ಬೇಡ.

**ಶ್ರೀ ಅಮರನಾಥ ಪಾಟೀಲ:-** ಮಾನ್ಯ ಸಭಾಪತಿಯವರೇ, ನ್ಯಾಯವಾಗಿ ಮಾಡಿಕೊಡುವುದಕ್ಕೆ ಮಾನ್ಯ ಸಚಿವರಿಗೆ ಹೇಳಿ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಯಾರು ಖಾಯಂ ಇಲ್ಲ. ಮಾನ್ಯ ಸದಸ್ಯರು ಖಾಯಂ ಇಲ್ಲ. ನಾವು ಖಾಯಂ ಇಲ್ಲ. (ಗೊಂದಲ) ನಮಗೆ ಅವಕಾಶ ಸಿಕ್ಕಿದಾಗ ಖಂಡಿತ ಮಾಡುತ್ತೇವೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಅಮರನಾಥ ಪಾಟೀಲ**:- ಮಾನ್ಯ ಸಭಾಪತಿಯವರೇ, ಯಾರ ಕುರ್ಚಿ ಬಗ್ಗೆ ಮಾನ್ಯ ಸಚಿವರು ಹೇಳುತ್ತಿದ್ದಾರೆ.

**ಸಭಾಪತಿಯವರು**:- ಚರ್ಚೆ ಮಾಡುವುದು ಬೇಡ ಬಿಡಿ. ಎಷ್ಟು ಸಲ ಚರ್ಚೆ ಮಾಡುತ್ತೀರಿ?

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 3613**

**(ಉತ್ತರವನ್ನು ಲಗತಿಸಲಾಗಿದೆ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ**:- ಮಾನ್ಯ ಸಭಾಪತಿಯವರೇ, Mysore is an international heritage city.

**ಸಭಾಪತಿಯವರು**:- ನಿಮ್ಮ ಉಪ ಪ್ರಶ್ನೆ ಏನು? ಏನಾಗಬೇಕಿದೆ ಅದನ್ನು ಕೇಳಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ**:- ಮಾನ್ಯ ಸಭಾಪತಿಯವರೇ, ಮೈಸೂರು ಯದುವಂಶದವರು ಆಡಳಿತ ನಡೆಸಿದಂತಹ ಕೇಂದ್ರ. ನಮ್ಮ ಹಾಲಿ ರಾಜಧಾನಿ ಮತ್ತು ಹಿಂದಿನ ರಾಜಧಾನಿಯಲ್ಲಿರತಕ್ಕಂಥ ಈ ರಸ್ತೆ ಅತ್ಯಂತ ಶೋಚನೀಯ ಸ್ಥಿತಿಯಲ್ಲಿರುವುದು ಮಾನ್ಯ ಸಚಿವರ ಗಮನಕ್ಕೆ ಬಂದಿರುವುದನ್ನು ಒಪ್ಪಿಕೊಂಡಿದ್ದಾರೆ. ಈ ಹಿಂದೆ ಮೈಸೂರು ರಸ್ತೆ, ರಾಜ್ಯ ಹೆದ್ದಾರಿ-17 ರ ಗುತ್ತಿಗೆದಾರರ ನಿರ್ವಹಣಾ ಜವಾಬ್ದಾರಿ 2016ಕ್ಕೆ ಮುಗಿದಿದೆ. ಗುತ್ತಿಗೆದಾರರು ಪ್ರತಿವರ್ಷ ಒಂದು layer ಡಾಂಬರೀಕರಣ ಮಾಡಿ, ರಸ್ತೆಯನ್ನು ಸುಸ್ಥಿತಿಯಲ್ಲಿಟ್ಟಿದ್ದರು. ಸರ್ಕಾರದ ಜವಾಬ್ದಾರಿಗೆ ಬಂದ ಮೇಲೆ ಆಯ್ದ ಭಾಗಗಳಿಗೆ ಮರು ಡಾಂಬರೀಕರಣವೆಂದರೆ, ಆ ರಸ್ತೆಯ ಗುಣಮಟ್ಟವನ್ನು ಹೇಗೆ ಕಾಪಾಡುವುದಕ್ಕೆ ಸಾಧ್ಯವಾಗುತ್ತದೆ? ಮುಂದಿನ ಸಾಲಿನ ಏಪ್ರಿಲ್ ಮಾಹೆಯವರೆಗೂ ಮಾನ್ಯ ಸಚಿವರು ಕಾಲಾವಧಿಯನ್ನು ತೆಗೆದುಕೊಂಡಿದ್ದಾರೆ. ಈಗಾಗಲೇ ಸಾಕಷ್ಟು ಗುಂಡಿಗಳು ಬಿದ್ದು ರಸ್ತೆ ಹಾಳಾಗಿದೆ. ಪ್ರತಿ ದಿನ ಲಕ್ಷಾಂತರ ವಾಹನಗಳು ಸಂಚರಿಸುತ್ತವೆ. ಮೈಸೂರು ಹೆದ್ದಾರಿ ಇಡೀ ರಾಜ್ಯದಲ್ಲಿ ಅತ್ಯಂತ ದಟ್ಟ ವಾಹನ ಸಂಚಾರಣೆಯ ರಸ್ತೆಯಾಗಿದೆ. ಹಾಗಾಗಿ ದಯಮಾಡಿ ಮಾನ್ಯ ಸಚಿವರು ಮುಂದಿನ ವರ್ಷ ಏಪ್ರಿಲ್ ಮಾಹೆಯವರೆಗೆ ಏನು ಕಾಲಮಿತಿಯನ್ನು ಹಾಕಿಕೊಂಡಿದ್ದಾರೆ ಕೂಡಲೇ ಸಂಪೂರ್ಣವಾಗಿ ಅದನ್ನು ಡಾಂಬರೀಕರಣ ಮಾಡಬೇಕೆಂದು ಏಕೆ ಆಗ್ರಹಿಸುತ್ತಿದ್ದೇನೆಂದರೆ, ಈಗ ಅದು 275 ಹೆದ್ದಾರಿಯಾದ ಮೇಲೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಎರಡು ಪ್ಯಾಕೇಜ್‌ಗಳಾಗಿ ಮಾಡಿ ಒಂದು ಟೆಂಡರ್ ಕರೆದಿದ್ದಾರೆ. ಪ್ಯಾಕೇಜ್-1 ರಲ್ಲಿ ಬೆಂಗಳೂರಿನಿಂದ ನಿಡಘಟ್ಟದವರೆಗೆ 1984 ಕೋಟಿ ರೂಪಾಯಿಗಳು (56.2) ಕಿಲೋ ಮೀಟರ್. ಮತ್ತು ಪ್ಯಾಕೇಜ್-2 ರಲ್ಲಿ ನಿಡಘಟ್ಟದಿಂದ-ಮೈಸೂರಿನವರೆಗೆ 2169 ಕೋಟಿ ರೂಪಾಯಿಗಳು (61 ಕಿಲೋ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮೀಟರ್), ಟೆಂಡರ್ ಅರ್ಜಿ ಸಲ್ಲಿಸಲು ದಿನಾಂಕ: 20.07.2017 ಕಡೆಯ ದಿನವಾಗಿತ್ತು. ಆದರೆ ಅನಿರ್ಧಿಷ್ಟ ಕಾಲದವರೆಗೆ ಆ ಟೆಂಡರನ್ನು ಮುಂದೂಡಿದ್ದಾರೆ. ಸದ್ಯಕ್ಕೆ ಟೆಂಡರನ್ನು ಸ್ವೀಕರಿಸುವ ಸಂದರ್ಭ ಕಾಣಿಸುತ್ತಿಲ್ಲ. ಆದರೆ, ಶುಕ್ರವಾರ, ಶನಿವಾರ, ಭಾನುವಾರ, ಸೋಮವಾರ ವಾಹನ ಸಂಚಾರ ದಟ್ಟಣೆ ಕಡಿಮೆ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಅಷ್ಟು ದಟ್ಟಣೆ ಇದೆ. ಇನ್ನುಳಿದ ದಿನಗಳಲ್ಲಿಯೂ ಯತೇಚ್ಛವಾಗಿ ಸಂಚಾರ ಆರಂಭವಾಗಿ ಬಿಟ್ಟಿದೆ. ಹಾಗಾಗಿ ರಾಜ್ಯ ಸರ್ಕಾರ ಏನು ಆಯ್ದ ಭಾಗಗಳಲ್ಲಿ ಮರು ಡಾಂಬರೀಕರಣವೆಂದು ಹೇಳುತ್ತಾರೆ, ಅದರ ಬದಲು ಪೂರ್ಣ ರಸ್ತೆ ಮರು ಡಾಂಬರೀಕರಣ ಮಾಡಬೇಕು. ಹಾಗೆಯೇ ಆ ಹೆದ್ದಾರಿಯನ್ನು 6 ಪಥದ ರಸ್ತೆಯನ್ನು ಮಾಡುವುದಕ್ಕೆ ಮಾನ್ಯ ಸಚಿವರು ಹೊರಟಿದ್ದಾರೆ. ಅಲ್ಲಿ ತುಂಬಾ ಹಳ್ಳಿಗಳು ಬರುತ್ತವೆ. ರಸ್ತೆಯನ್ನು ದಾಟುವುದು ಬಹಳ ಕಷ್ಟವಾಗುತ್ತಿದೆ. ವ್ಯವಸಾಯದ ಅನುಕೂಲಕ್ಕೆ ಹೋಗುವುದು ಕಷ್ಟವಾಗಿದೆ. ಸರ್ವೀಸ್ ರಸ್ತೆಯನ್ನು ಸೇರಿಸಿಕೊಂಡು 6 ಪಥದ ರಸ್ತೆಯನ್ನು ಮಾಡುತ್ತಿದ್ದಾರೆ. ಅದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟಪಡಿಸಬೇಕಾಗಿದೆ ಹಾಗೂ ಮುಂದಿನ ವರ್ಷದ ಏಪ್ರಿಲ್ ಮಾಹೆಯವರೆಗೆ ಎನ್ನುವುದನ್ನು ಬಿಟ್ಟು ಈ ಕೂಡಲೇ ಮರು ಡಾಂಬರೀಕರಣ ಮಾಡಿ ರಸ್ತೆ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು. ಏನಾದರೂ ಮಾಡಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರ ಮೇಲೆ ಒತ್ತಡ ತಂದು ಕೂಡಲೇ 6 ಪಥದ ರಸ್ತೆ ಸರ್ವೀಸ್ ರಸ್ತೆಯನ್ನೊಳಗೊಂಡಂತೆ ಆಗುವ ಹಾಗೆ ನೋಡಿಕೊಳ್ಳಬೇಕು ಮತ್ತು ಎಷ್ಟು ಕಾಲಮಿತಿಯೊಳಗೆ ಕೆಲಸವಾಗುತ್ತದೆ ಎನ್ನುವುದನ್ನು ದಯಮಾಡಿ ತಿಳಿಸಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ.

(ಮುಂದು) . . .

(948)/14.11.2017/12.40/ಎಸ್‌ಕೆ-ಎಕೆ

**ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಮ್ಮ ಮೈಸೂರಿಗೆ ಇಂತಹ ಸುವರ್ಣ ಅವಕಾಶ ಇನ್ನು ಯಾವತ್ತು ಬರುವುದಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ಇದಕ್ಕೆ ಕಾರಣವೇನೆಂದರೆ ಮೈಸೂರಿನವರೇ ಮುಖ್ಯಮಂತ್ರಿಗಳು ಮತ್ತು ಲೋಕೋಪಯೋಗಿ ಸಚಿವರು ಕೂಡ ಮೈಸೂರಿನವರಾಗಿದ್ದಾರೆ. ಆದರೆ ಮುಖ್ಯ ಮಂತ್ರಿಗಳು ರಸ್ತೆಯಲ್ಲಿ ಸಂಚರಿಸುವುದಿಲ್ಲ. ಅವರು ವಾಯು ಮಾರ್ಗದಲ್ಲಿ ಸಂಚರಿಸುವುದರಿಂದ ಅವರಿಗೆ ರಸ್ತೆಯಲ್ಲಿ ಗುಂಡಿ ಬಿದ್ದಿರುವುದು ಗೊತ್ತಾಗುವುದಿಲ್ಲ. ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಮುಂದಿನ ಸಲ ಮುಖ್ಯ ಮಂತ್ರಿಗಳು ಮೈಸೂರಿಗೆ ಬರುವಾಗ ರಸ್ತೆಯಲ್ಲಿ ಓಡಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ನಾನು ಮೊನ್ನೆ ಭಾನುವಾರದಂದು ಬೆಳಗ್ಗೆ ಸುಮಾರು 5 ಗಂಟೆಗೆ ಬೆಂಗಳೂರಿನಿಂದ ಹೊರಟಿದ್ದು, ಸುಮಾರು 11

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಗಂಟೆಗೆ ಮೈಸೂರಿಗೆ ತಲುಪಿದ್ದೇನೆ. ಅಲ್ಲಿ ರಸ್ತೆಗಳು ಯಾವ ಮಟ್ಟದಲ್ಲಿವೆ ಎಂಬುದನ್ನು ನೋಡಿ. ತಾವು ವಾರಕ್ಕೆ ಮೂರು ಬಾರಿ ಸಂಚರಿಸುತ್ತೀರಿ. ತಾವು ರಸ್ತೆಯಲ್ಲಿ ಸಂಚರಿಸುತ್ತಿರೋ ಅಥವಾ ವಾಯು ಮಾರ್ಗದಲ್ಲಿ ಸಂಚರಿಸುತ್ತಿರೋ ಎಂಬುದು ನಿಜವಾಗಿಯೂ ನಮಗೆ ಗೊತ್ತಿಲ್ಲ. ನಿಜವಾಗಿಯೂ ಆ ರಸ್ತೆಯಲ್ಲಿ ಸಂಚರಿಸುವಾಗ ಕಣ್ಣೀರು ಬರುತ್ತದೆ. ಅದರಲ್ಲಿಯೂ ಮೈಸೂರು ಬೆಂಗಳೂರು ರಸ್ತೆ ಈ ಮಟ್ಟಕ್ಕೆ ಬರಬಾರದು. ನೀವು ಯಾವಾಗಲಾದರೂ ಟೆಂಡರ್ ಕರೆದುಕೊಳ್ಳಿ. ಮಾನ್ಯ ಶ್ರೀಕಂಠೇಗೌಡರು ಹೇಳಿದ ಹಾಗೆ ಒಂದು layer ಮಾಡಲೇಬೇಕು. ಆ ಕಾಮಗಾರಿಯನ್ನು ದಯವಿಟ್ಟು, ನಾಳೆಯಿಂದಲೇ ಪ್ರಾರಂಭಿಸಬೇಕಾದ ಅನಿವಾರ್ಯತೆ ಇದೆ. ಅದನ್ನು ಮಾಡುತ್ತಾರೆ ಎಂದು ನಾನು ಭಾವಿಸಿಕೊಂಡಿದ್ದೇನೆ.

**ಡಾ. ಹೆಚ್.ಸಿ. ಮಹದೇವಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಶ್ರೀಕಂಠೇಗೌಡರು ಮೈಸೂರು-ಬೆಂಗಳೂರು ಹೆದ್ದಾರಿ ರಸ್ತೆಯ ಬಗ್ಗೆ ತಿಳಿಸಿದ್ದಾರೆ. ಅದು ಮೂಲತಃ M.D.R. (Major District Road) ಆಗಿತ್ತು. 2004 ನೇ ಇಸವಿಯಲ್ಲಿ K.R.D.C.L. (Karnataka Road Development Corporation Limited) ವತಿಯಿಂದ ಆ ರಸ್ತೆಯನ್ನು ಅಭಿವೃದ್ಧಿ ಪಡಿಸಿದ್ದರು. ಆದಾದ ನಂತರ 2014ನೇ ಇಸವಿಯಲ್ಲಿ ಕೇಂದ್ರದಲ್ಲಿ ಯುಪಿಎ ಸರ್ಕಾರವಿದ್ದಾಗ ಶ್ರೀ ಅಸ್ಕರ್ ಫರ್ನಾಂಡಿಸ್‌ರವರು ರಾಷ್ಟ್ರೀಯ ಹೆದ್ದಾರಿಯಾಗಿ ಅದನ್ನು ಘೋಷಣೆ ಮಾಡಿದರು. ಆ ರೀತಿ ಘೋಷಣೆ ಮಾಡಿದ ಸಂದರ್ಭದಲ್ಲಿ D.P.R. (Detailed Project Report) ಮಾಡಿ, ಅದನ್ನು ಕೆಲಸ ಪ್ರಾರಂಭ ಮಾಡಬೇಕೆಂದು ಕಳುಹಿಸಿದಾಗ, ಅದು ಟೆಂಡರ್ ಆಗಿ ಒಪ್ಪಿಗೆಯಾಗುವ ಸಮಯದಲ್ಲಿ ಈ ನಾಲ್ಕು ಪಥಕ್ಕಿಂತ ಹೆಚ್ಚಿಗೆ ಇರುವ ರಸ್ತೆಗಳನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಹಸ್ತಾಂತರಿಸಿದರು. ಅದರಲ್ಲಿ ಎರಡು ಭಾಗ ಮಾಡಿದರು. ಅದರಲ್ಲಿ ಮೊದಲನೆಯದು ಫೇಸ್-1 ಬೆಂಗಳೂರಿನಿಂದ-ನಿಡಘಟ್ಟದವರೆಗೆ ಮತ್ತು ಎರಡನೆಯದು, ನಿಡಘಟ್ಟದಿಂದ-ಮೈಸೂರು ಒಟ್ಟು 117 ಕಿ.ಮೀ. ರಸ್ತೆ. ಸುಮಾರು 2000 ಕೋಟಿ ರೂಪಾಯಿಗಳಗಿಂತ ಕಡಿಮೆ ಅಂದಾಜು ವೆಚ್ಚದ ಕಾಮಗಾರಿಯನ್ನು within the purview of the Hon'ble Surface Transport Minister, he himself can take a decision. ರೂ. 2000 ಕೋಟಿಗಿಂತ ಹೆಚ್ಚು ಅಂದಾಜು ವೆಚ್ಚದ ಕಾಮಗಾರಿಗಳನ್ನು the Sub-Committee on Economic Affairs of the Union Government has to propose to the Cabinet. ನಾನು ಬೆಳಗ್ಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಸದಸ್ಯರವರಿಗೆ ಮಾತನಾಡಿದ್ದೇನೆ. ಅವರು ಆದಷ್ಟು ಬೇಗ ಜನವರಿ ತಿಂಗಳನಲ್ಲಿ ರಸ್ತೆಯನ್ನು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಬೇಕೆಂಬ ಉತ್ಸುಕತೆಯನ್ನು ಹೊಂದಿದ್ದಾರೆ. Personally, the Hon'ble Minister for Surface Transport is himself interested to ground the work. ಅದು ಮಾಡಬೇಕೆಂದು ಟೆಂಡರ್ ಕರೆದು, ರಸ್ತೆಯನ್ನು ಮಾಡುತ್ತೇವೆ.

ಈ ನಡುವೆ ರಸ್ತೆಗಳಲ್ಲಿ ಗುಂಡಿ ಬಿದ್ದು ಹೋಗಿದೆ. ಮುಖ್ಯ ಮಂತ್ರಿಗಳು ವಾಯು ಮಾರ್ಗ ಸಂಚಾರ ಬಿಟ್ಟು ರಸ್ತೆಯಲ್ಲಿಯೇ ಸಂಚರಿಸುವರು. ಮಾನ್ಯ ಸದಸ್ಯರಿಗೆ ನಾವು ಎಲ್ಲಿ ಸಂಚರಿಸುತ್ತೇವೆಂದು ಗೊತ್ತಿರುವುದಿಲ್ಲ. I want to get a thorough eye check of my beloved friend, Mr. Sandesh Nagaraj. ಅವರನ್ನು ಒಂದು best Opthalmalogist ಬಳಿ ಕರೆದುಕೊಂಡು ನಾನು ತೋರಿಸಿಕೊಂಡು ಬರಬೇಕು. ನಾವು ಓಡಾಡುತ್ತಿರುವುದು ರಸ್ತೆ ಮಾರ್ಗದಲ್ಲಿಯೇ, ದಸರಾ ಹಬ್ಬದ ವೇಳೆಯಲ್ಲಿ ಮಳೆಯಾದ್ದರಿಂದ ನಿಜವಾಗಿಯೂ ರಸ್ತೆಗಳು ಹಾಳಾಗಿದ್ದವು. ನಾವು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರಿಗೆ, ರಸ್ತೆ ದುರಸ್ತಿಗಾಗಿ ಹಣವನ್ನು ನೀಡಿದ್ದು, ಮದ್ದೂರಿನಿಂದ ಮೈಸೂರಿನವರೆಗೆ ರಸ್ತೆಗಳು ಹಾಳಾಗಿರುವುದರಿಂದ ಸುಮಾರು 15 ರಿಂದ 20 ದಿನಗಳೊಳಗಾಗಿ ರಸ್ತೆಯನ್ನು ಸರಿಪಡಿಸುತ್ತೇವೆ. ಮಂಡ್ಯ ಜಿಲ್ಲೆಯಲ್ಲಿ Annual Maintenance Grant ಅಡಿಯಲ್ಲಿ ಇದನ್ನು ಮಾಡಬೇಕು. Out of 117 kms ಸುಮಾರು 60 ಕಿ.ಮೀಟರ್ ಬೈಪಾಸ್ ಹೋಗುತ್ತದೆ. 60 ಕಿ.ಮೀಟರ್ ಐದು ಕಡೆಗಳಲ್ಲಿ ಬೈಪಾಸ್ ಆಗುತ್ತದೆ. So, Annual Maintenance Grant ಅಡಿಯಲ್ಲಿ ಮಂಡ್ಯದ ರಸ್ತೆಯನ್ನು ಮಾಡುತ್ತೇವೆ. ಕೆಲವು ಕಡೆ ರಸ್ತೆಗಳನ್ನು ಮಾಡಿರುವ ಬಗ್ಗೆ ನಾನೇ ಸ್ವತಃ ಭೇಟಿ ನೀಡಿ, ಅವರಿಗೆ ಸೂಚನೆಯನ್ನು ಕೊಡುತ್ತಾ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರಿಗೆ ಕಾಲಕಾಲಕ್ಕೆ ಹಣ ಕೊಡಿಸುವುದರಿಂದ ಅವರು ರಸ್ತೆ ಮಾಡುತ್ತಿದ್ದಾರೆ. ಇನ್ನು ಮದ್ದೂರಿನಲ್ಲಿ ರಸ್ತೆ ಮಾಡುವುದರ ಬಗ್ಗೆ ಟೆಂಡರ್ ಕರೆಯುವ ಕೆಲಸವಿದೆ. In a matter of 15-20 days, I will see that the rest of the road is completed.

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಟೆಂಡರ್ indefinite ಆಗಿ postpone ಆಯಿತು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಡಾ. ಹೆಚ್.ಸಿ. ಮಹದೇವಪ್ಪ:–** ಮಾನ್ಯ ಸಭಾಪತಿಯವರೆ, it will not get postponed. ಅವರಿಗೆ ನಾನು ಹೇಳಿದ್ದೇನೆಂದರೆ, ರೂ. 2000 ಕೋಟಿಗಿಂತ ಕಡಿಮೆ ಅಂದಾಜು ವೆಚ್ಚದ ಕಾಮಗಾರಿಗಳೇನಿವೆ, ಅದರ ಬಗ್ಗೆ the Hon'ble Union Minister for Surface Transport himself will take a decision.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ರಸ್ತೆಯನ್ನು ಮರು ಡಾಂಬರೀಕರಣ ಮಾಡಬೇಕೆಂಬುದು ನಮ್ಮ ಒತ್ತಾಯವಾಗಿದೆ.

**ಡಾ. ಹೆಚ್.ಸಿ. ಮಹದೇವಪ್ಪ:–** ಮಾನ್ಯ ಸಭಾಪತಿಯವರೆ, N.H.A.I. (National Highways Authority of India) ವತಿಯಿಂದ ಮಾಡುತ್ತಿದ್ದೇವೆ. ಮದ್ದೂರಿನಿಂದ ಈಚೆಗೆ ಸ್ವಲ್ಪ ಮಟ್ಟಿಗೆ ರಸ್ತೆಗಳು ಹಾಳಾಗಿವೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ :–** ಮಾನ್ಯ ಸಭಾಪತಿಯವರೆ, ಇವರು selected point ನಲ್ಲಿ ಮಾಡುತ್ತಿದ್ದಾರೆ.

**ಡಾ. ಹೆಚ್.ಸಿ. ಮಹದೇವಪ್ಪ:–** ಮಾನ್ಯ ಸಭಾಪತಿಯವರೆ, ಮದ್ದೂರಿನಿಂದ ಆ ಕಡೆಗೆ ರಸ್ತೆ ಸ್ವಲ್ಪ ಹಾಳಾಗಿದೆ. ಉಳಿದ ನಾಲ್ಕು ಕಡೆ ಕೆಲಸ ನಡೆಯುತ್ತಿದೆ. ಮಳೆ ಬಂದಿದ್ದರಿಂದ ರಸ್ತೆ ಕೆಲಸ ಮಾಡುವುದನ್ನು ನಾವು ಮಧ್ಯೆ ಮಧ್ಯೆ ನಿಲ್ಲಿಸಿದ್ದೇವೆ. ನಾನು ಅಲ್ಲಿಗೆ ಭೇಟಿ ನೀಡಿ ಇನ್ಸ್‌ಪೆಕ್ಟ್ ಮಾಡಿ, ಅವರಿಗೆ ಸೂಚನೆಯನ್ನು ಕೊಟ್ಟು ರಸ್ತೆಯ ಕೆಲಸವನ್ನು ಮಾಡಿಸುತ್ತಿದ್ದೇನೆ. ಮದ್ದೂರಿನ ಕೆಲವು ಕಡೆ ರಸ್ತೆಗಳು ಹಾಳಾಗಿವೆ. I will take care of that.

ಮಾನ್ಯ ಸಭಾಪತಿಯವರೆ, ಮಾನ್ಯ ಶ್ರೀಕಂಠೇಗೌಡರು ತಿಳಿಸಿರುವ ರಸ್ತೆ ಏನಿದೆ. ಇದು six lane ಇದೆ, Service Road ಮತ್ತು Shoulders ಇದೆ. ಹೆಚ್ಚು ಕಡಿಮೆ 10 lane ಗಳಾಗುತ್ತವೆ. High Speed Road ತರಹವಿದೆ. ಯಾರ್ಯಾರು ಎಲ್ಲೆಲ್ಲಿ ಬರುತ್ತಾರೆ. ಅಲ್ಲಿ ಮಧ್ಯೆ ಅಷ್ಟು length ನಲ್ಲಿ ಟೋಲ್ ಕಟ್ಟಬೇಕಾಗುತ್ತದೆ. ಎಷ್ಟರಿಂದ ಎಷ್ಟು ದೂರಕ್ಕೆ ಹೋಗುತ್ತಾರೋ ಅಷ್ಟಕ್ಕೆ ಮಾತ್ರ ಸೀಮಿತವಿದೆ. ಐದು ಕಡೆ ರಸ್ತೆಗಳಲ್ಲಿ ಬೈಪಾಸ್ ಕೊಟ್ಟಿದ್ದೇವೆ. It will be one of the best roads in the country.

**Sri K.T. SRIKANTEGOWDA:** Thank you.

**ಸಭಾಪತಿಯವರು:–** ಧನ್ಯವಾದಗಳು.

**ಚುಕ್ಕೆ ಗುರುತಿನ ಪ್ರಶ್ನೆ ೩೫೮೦**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಆರ್.ಪ್ರಸನ್ನಕುಮಾರ್:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ವಿವರವಾದಂತಹ ಉತ್ತರವನ್ನು ಒದಗಿಸಿದ್ದಾರೆ. ಅವರು ಜವಳಿ ಕಾರ್ಖಾನೆಗಳು ಏನಾದರೂ ಮುಚ್ಚಲ್ಪಟ್ಟಿವೆಯೇ ಎಂಬ ಪ್ರಶ್ನೆಗೆ 'ಅನ್ವಯಿಸುವುದಿಲ್ಲ' ಎಂದು ಉತ್ತರ ಕೊಟ್ಟಿದ್ದಾರೆ. ಕಾರಣ, ಹೊಸ ಜವಳಿ ನೀತಿಯಿಂದ ಯಾವುದೇ ಕಾರ್ಖಾನೆಗಳು ಸ್ಥಗಿತಗೊಂಡಿಲ್ಲ ಎಂಬ ವಿಚಾರವಾಗಿ ತಿಳಿಸುತ್ತಾ, ಇವತ್ತು ಅದು 'ಅನ್ವಯಿಸುವುದಿಲ್ಲ' ಎನ್ನುವ ಉತ್ತರವನ್ನು ಅವರು ನೀಡಿದ್ದಾರೆ. ಅಂದರೆ, ಯಾವುದೇ ಕಾರ್ಖಾನೆ ಮುಚ್ಚಿಲ್ಲ ಎನ್ನುವ ಉತ್ತರವನ್ನು ಕೊಟ್ಟಿರುವುದರಿಂದ ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಎಷ್ಟು ಜನ ಕಾರ್ಮಿಕರು ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿದ್ದಾರೆಂದು ಕೇಳಿದಾಗ, ಅವರು ಸುಮಾರು 4,56,428 ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಜೊತೆಗೆ ಸುಮಾರು ೯೦,೦೦೦ ಜನ ಕಾರ್ಮಿಕರಿಗೆ ತರಬೇತಿ ಕೊಡುವಂತಹ ಕೆಲಸವನ್ನು ಮಾಡಿದ್ದೇವೆ. ಅದರಲ್ಲಿ ಸುಮಾರು ೭೦,೦೦೦ ಜನರಿಗೆ ಸ್ವಯಂ ಉದ್ಯೋಗ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿರುವುದಾಗಿ ತಿಳಿಸಿ, ಅದರ ವಿವರಗಳನ್ನು ಉತ್ತರದಲ್ಲಿ ನೀಡಿದ್ದಾರೆ. ಇವತ್ತು ಕಾರ್ಖಾನೆಗಳಲ್ಲಿ ಎಷ್ಟು ಪ್ರಮಾಣದ ಬಟ್ಟೆ ತಯಾರಾಗುತ್ತದೆಂಬ ವಿಚಾರದ ಬಗ್ಗೆ ಸುಮಾರು ೫೦೯ ಲಕ್ಷ ಮೀಟರ್‌ಗಳಷ್ಟು ಬಟ್ಟೆ ಉತ್ಪಾದನೆಯಾಗುತ್ತಿದೆ ಮತ್ತು ಸುಮಾರು ೨೭,೦೦೦ ವಿದ್ಯುತ್ ಮಗ್ಗ ಘಟಕಗಳಿಂದ ಅಂದಾಜು ೫೦೦೦ ಲಕ್ಷ ಮೀಟರ್ ಬಟ್ಟೆಯನ್ನು ಉತ್ಪಾದಿಸುತ್ತಿರುವುದಾಗಿ ತಿಳಿಸಿದ್ದಾರೆ. ಆದರೆ, ನಮ್ಮ ರಾಜ್ಯದ ಶಾಲಾ ಮಕ್ಕಳಿಗೆ ಮತ್ತು ವಿವಿಧ ಇಲಾಖೆಗಳಿಗೆ ಏನು ಸಮವಸ್ತ್ರ ನೀಡಲಾಗುತ್ತಿದೆ, ಇದಕ್ಕೆ ಈಗ ತಯಾರಾಗುವಂತಹ ಬಟ್ಟೆ ಸಾಕಾಗುತ್ತದೆಯೇ ಅಥವಾ ಇವತ್ತು ಬೇರೆ ರಾಜ್ಯಗಳಿಂದ ಬಟ್ಟೆಗಳನ್ನು ಆಮದು ಮಾಡಿಕೊಳ್ಳುತ್ತಿದ್ದಾರೆಯೇ ಎನ್ನುವ ವಿಚಾರವನ್ನು ಮಾನ್ಯ ಸಚಿವರು ತಿಳಿಸಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ.

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ನಾನು ಉತ್ತರವನ್ನು ಒದಗಿಸಿದ್ದೇನೆ. ಅದರ ಜೊತೆಗೆ ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಯಾವುದೇ ಕಾರ್ಖಾನೆಗಳು ಮುಚ್ಚಿರುವುದಿಲ್ಲ ಮತ್ತು ಜವಳಿ ಉದ್ಯಮದಲ್ಲಿ 3,25,೦೦7 ಸ್ತ್ರೀಯರು ಮತ್ತು 1,31,421

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪುರುಷರು ಕಾರ್ಯನಿರ್ವಹಿಸುತ್ತಿದ್ದಾರೆ. ಆದರೆ ವಿದ್ಯಾ ವಿಕಾಸ ಯೋಜನೆಯಡಿಯಲ್ಲಿ ಕಳೆದ ಬಾರಿ K.H.D.C. (Karnataka Handloom Development Corporation) ಯಿಂದ ಸುಮಾರು 65 ಲಕ್ಷ ಮೀಟರ್‌ಗಳಷ್ಟು ಬಟ್ಟೆಯನ್ನು ಶಾಲಾ ಮಕ್ಕಳಿಗೆ ಸಮವಸ್ತ್ರ ಉದ್ದೇಶಕ್ಕಾಗಿ ಒದಗಿಸಿದ್ದೇವೆ. ಕಾರ್ಖಾನೆಯಿಂದ ತಯಾರಾಗುವ ಸುಮಾರು 15 ಲಕ್ಷ ಮೀಟರ್‌ಗಳಷ್ಟು ಬಟ್ಟೆಯನ್ನು ಒದಗಿಸುವುದಕ್ಕೆ ಬೇಡಿಕೆ ಇದ್ದು, ಅದರಲ್ಲಿ ಸುಮಾರು 5 ಲಕ್ಷ ಮೀಟರ್‌ಗಳಷ್ಟು ಬಟ್ಟೆಯನ್ನು ಈಗಾಗಲೇ ಒದಗಿಸಿದ್ದೇವೆ. ಇನ್ನುಳಿದ ಬಟ್ಟೆಯನ್ನು ಒದಗಿಸುವುದಕ್ಕೆ ಸಾಧ್ಯವಾಗಿಲ್ಲವಾದ್ದರಿಂದ ಅದನ್ನು ಬಿಟ್ಟಿದ್ದೇವೆ ಅದು ಬೇರೆ ಪ್ರಶ್ನೆ. ಆದರೆ ನಮ್ಮ ರಾಜ್ಯದಲ್ಲಿರುವ ವಿವಿಧ ಕಾರ್ಖಾನೆಗಳು ಮತ್ತು ಮಿಲ್‌ಗಳಲ್ಲಿ ತಯಾರಾಗುವಂತಹ ಬಟ್ಟೆಗಳು ನಮ್ಮ ರಾಜ್ಯದ ಅಗತ್ಯಕ್ಕಿಂತಲೂ ಹೆಚ್ಚು ತಯಾರಾಗುತ್ತಿದೆ. ಆದ್ದರಿಂದ, ಅದನ್ನು ಬೇರೆ ದೇಶಗಳಿಗೂ ಕೂಡ ರಫ್ತು ಮಾಡುವಂಥದ್ದು ನಮ್ಮ ರಾಜ್ಯದಿಂದ ಆಗುತ್ತಿದೆ. ಕೌಶಲ್ಯಾಭಿವೃದ್ಧಿಗಾಗಿ 45 ದಿವಸಗಳ ಕೈಮಗ್ಗ ನೇಯ್ಗೆ, ವಿದ್ಯುತ್‌ಮಗ್ಗ ನೇಯ್ಗೆ ಮತ್ತು sewing machine operator ತರಬೇತಿ ನೀಡಲಾಗುತ್ತಿದೆ. ಇನ್ನು ಹೆಚ್ಚು ಮಾಹಿತಿ ಬೇಕಾದರೆ, ನಾನು ಮಾನ್ಯ ಸದಸ್ಯರ ಜೊತೆ ಮಾತನಾಡಿ, ಎಲ್ಲಾ ಮಾಹಿತಿಯನ್ನು ಕೂಡ ನಾನು ಒದಗಿಸುತ್ತೇನೆ.

**ಸಭಾಪತಿಯವರು:–** ಧನ್ಯವಾದಗಳು

**ಚುಕ್ಕೆ ಗುರುತಿನ ಪ್ರಶ್ನೆ 3563**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎನ್.ಎಸ್.ಬೋಸ್‌ರಾಜು:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಬಹಳ ಸ್ಪಷ್ಟವಾಗಿ ಹಾಗೂ ವಿವರವಾಗಿ ನೀಡಿದ್ದಾರೆ. 220 ಕೆ.ವಿ. ವಿದ್ಯುತ್ ಕೇಂದ್ರಗಳು ಮತ್ತು 110/11 ಕೆ.ವಿ. ವಿದ್ಯುತ್ ಉಪಕೇಂದ್ರಗಳ ಬಗ್ಗೆ ಸಾಕಷ್ಟು ವಿವರವಾಗಿ ಮಾಹಿತಿಯನ್ನು ನೀಡಿದ್ದಾರೆ. ಮಾನ್ಯ ಸ್ನೇಹಿತರು ಕೇಳಿರುವ ಪ್ರಶ್ನೆಯಲ್ಲಿ ಆರ್‌ಟಿಪಿಎಸ್ ಮತ್ತು ವೈಟಿಪಿಎಸ್ ಭೂಸಂತ್ರಸ್ಥರಿಗೆ ಕೊಡುವ ಉದ್ಯೋಗದಲ್ಲಿ ಈಗಾಗಲೇ ಸಾಕಷ್ಟು ಸಚಿವರು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಅಧಿಕಾರಿಗಳು ಸಹಿತ ಸ್ಪಂದಿಸಿ, ಅನೇಕ ಸಭೆಗಳಲ್ಲಿ ಸಹಿತ ಅವರ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಆರ್‌ಟಿಪಿಎಸ್‌ನಲ್ಲಿ ಈಗಾಗಲೇ CHP-1 ನಲ್ಲಿ ಈಗಾಗಲೇ 13 ವರ್ಷ contract labour ಮೇಲೆ ಕೆಲಸ ಮಾಡಿದಂತಹ ನೌಕರರ ಪಟ್ಟಿ ಮಾಡಲಾಗಿದೆ. CHP-2 ನಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

1996 ನೇ ಇಸವಿಯಿಂದ ಕೆಲಸ ಮಾಡಿರುವಂತಹವರು, ಈಗ 13 ಜನ labourers ಅವರುಗಳ ಬೇಡಿಕೆಯಿದೆ. ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಮಾನ್ಯ ಕಾರ್ಮಿಕ ಮಂತ್ರಿಗಳು ಸಹಿತ ಮಾನ್ಯ ಇಂಧನ ಸಚಿವರಿಗೆ ಪತ್ರ ಬರೆದಿದ್ದಾರೆ. ಇದನ್ನು ಆದಷ್ಟು ಬೇಗ ಸರಿಪಡಿಸಬೇಕು. ಈಗಾಗಲೇ ಅಧಿಕಾರಿಗಳು ಮತ್ತು  ನಮ್ಮ ರಾಯಚೂರು ಸಂಸದರು ಮತ್ತು ನಮ್ಮನ್ನು ಸೇರಿಸಿಕೊಂಡು ಮೀಟಿಂಗ್ ಮಾಡಿ,  ಒಂದು ಸಣ್ಣ ಕಮಿಟಿ ಮಾಡಿ, ಆ ಕಮಿಟಿಯ ಮುಖಾಂತರ ಈ ಒಂದು ಪರಿಶೀಲನೆ ಮಾಡಿ ಶೀಘ್ರಗತಿಯಲ್ಲಿ ಆರ್‌ಟಿಪಿಎಸ್ ಮತ್ತು  ವೈಟಿಪಿಎಸ್‌ನಲ್ಲಿರುವ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಅವರು ಒಪ್ಪಿಕೊಂಡಿದ್ದಾರೆ. ಮಾನ್ಯ ಸಚಿವರು ಸಹಿತ ಇದಕ್ಕೆ ಸ್ಪಂದಿಸಿದ್ದಾರೆ.

(ಮುಂದು..)

(949)14.11.2017/12.50/ಟಿಸಿಹೆಚ್-ಎಕೆ

**ಶ್ರೀ ಎನ್.ಎಸ್.ಎಸ್,ಬೋಸ್ ರಾಜು:- (ಮುಂದು...)**

ಹಾಗಾಗಿ ಆರ್.ಟಿ.ಪಿ.ಎಸ್ ಮತ್ತು ವೈ.ಟಿ.ಪಿ.ಎಸ್‌ನಲ್ಲಿ ಭೂ ಸಂತ್ರಸ್ಥರಿಗಿರತಕ್ಕಂಥ ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನ ಮಾಡಬೇಕಾಗಿ ಮತ್ತೊಂದು ಬಾರಿ ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಕೊನೆಯದಾಗಿ ಈಗಾಗಲೇ ಅನೇಕ ಬಾರಿ ಈ ವಿಚಾರದ ಬಗ್ಗೆ ನಾವು ಸನ್ಮಾನ್ಯ ಸಚಿವರಿಗೆ ವಿನಂತಿ ಮಾಡಿದ್ದೇವೆ. ಇದಕ್ಕೆ ಅವರು ಸಹಾನುಭೂತಿಯಿಂದ ನಮಗೆ ಸಹಕಾರ ಮಾಡಲು ಒಪ್ಪಿಕೊಂಡಿದ್ದಾರೆ. ಇವತ್ತಿನ ದಿವಸ ಆ ರಾಯಚೂರು ರೂರಲ್ ಭಾಗ್‌ನಲ್ಲಿ 10 ಸಾವಿರ ಪಂಪ್‌ಸೆಟ್‌ಗಳಿವೆ. ಅದರಲ್ಲಿ ತುಂಗಭದ್ರಾ ಹಾಗೂ ಕೃಷ್ಣಾದಿಂದ 5 ಸಾವಿರ ಪಂಪ್‌ಸೆಟ್‌ಗಳು ಲಿಫ್ಟ್ ಇರಿಗೇಷನ್ ಇದೆ, 5 ಸಾವಿರ ಗ್ರೌಂಡ್‌ವಾಟರ್ ಪಂಪ್‌ಸೆಟ್‌ಗಳಿವೆ. ಅದಕ್ಕೆ 24 ತಾಸು ವಿದ್ಯುತ್ ಕೊಡಬೇಕು. ರಾಯಚೂರು ತಾಲ್ಲೂಕು tail end ಪ್ರದೇಶವಾಗಿದೆ. ಎನ್‌ಆರ್‌ಬಿಸಿ ಕೆನಾಲ್‌ಗೆ ಮತ್ತು ತುಂಗಭದ್ರಾ ಕೆನಾಲ್ ಕೆಳಗೆ ನೀರು ಬೇರೆ ರಾಜ್ಯಕ್ಕೆ ಹರಿದು ಹೋಗುತ್ತಿದ್ದು, ಡ್ಯಾಂನ ಕೆಳಗೆ ಇರುವ ನೀರನ್ನು ಲಿಫ್ಟ್ ಮಾಡಿಕೊಳ್ಳುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸನ್ಮಾನ್ಯ ಸಚಿವರು ಅಲ್ಲಿಗೆ ಬಂದಾಗ ಅನೇಕ ಬಾರಿ ಕೇಳಿಕೊಂಡಿದ್ದೇವೆ. ಅವರು ಸಹಿತ ಇದನ್ನು ನಾವು ಪರಿಶೀಲನೆ ಮಾಡಿ, ಎಷ್ಟರಮಟ್ಟಿಗೆ ಸಾಧ್ಯವಾಗುತ್ತದೆಯೋ ಮಾಡೋಣ ಎನ್ನುವ ಮಾತನ್ನು ಸನ್ಮಾನ್ಯ ಸಚಿವರು ಹೇಳಿದ್ದಾರೆ.  ಆದಷ್ಟು ಬೇಗ ರಾಯಚೂರು ರೂರಲ್ ಭಾಗ್‌ನಲ್ಲಿರುವ 10 ಸಾವಿರ ಪಂಪ್‌ಸೆಟ್‌ಗಳಿಗೆ ಈಗಾಗಲೇ 3 ಫೇಸ್ 7 ತಾಸು ವಿದ್ಯುತ್‌ನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೊಡುತ್ತಿದ್ದೀರಿ. 24 ತಾಸು ವಿದ್ಯುತ್‌ನ್ನು ಕೊಡತಕ್ಕಂಥ ಒಂದು ಪ್ರಯತ್ನಕ್ಕೆ ಆದಷ್ಟು ಬೇಗ ಸನ್ಮಾನ್ಯ ಸಚಿವರು ಪರಿಶೀಲನೆ ಮಾಡಿ, ಆ ಭಾಗದ ರೈತರಿಗೆ ಅನುಕೂಲ ಮಾಡಿಕೊಡಬೇಕು. ಸಾಕಷ್ಟು ಭೂಮಿಯನ್ನು ಅಂದರೆ ಆರ್.ಟಿ.ಪಿ.ಎಸ್ ಮತ್ತು ವೈ.ಟಿ.ಪಿ.ಎಸ್‌ಗೆ ಬೇಕಾಗಿರುವ ಜಮೀನನ್ನು ಸರ್ಕಾರಕ್ಕೆ ಕೊಟ್ಟಿದ್ದೇವೆ. ಅದೇ ರೀತಿಯಾಗಿ ಕೆ.ಐ.ಎ.ಡಿ.ಬಿ ಸಹಿತವಾಗಿ ಅಲ್ಲಿ Growth Centre ಮಾಡಿ, ಅದೇ ರಾಯಚೂರು ರೋಲ್‌ಭಾಗ್‌ನಲ್ಲಿ ಸಾಕಷ್ಟು ಭೂಮಿಯನ್ನು ಸಂಗ್ರಹಣೆ ಮಾಡಿದ್ದಾರೆ. ಹಾಗಾಗಿ, ಆ ಭಾಗದಲ್ಲಿರತಕ್ಕಂಥ ಬಡ ರೈತರು, ಬೇರೆ ರಾಜ್ಯಕ್ಕೆ ಹೋಗತಕ್ಕಂಥ, downstream of both the dams i.e. Krishna and Tungabhadra ನೀರನ್ನು ಅವರೇ ಲಿಫ್ಟ್ ಮಾಡಿಕೊಳ್ಳುತ್ತಾರೆ. ಸರ್ಕಾರ ನೀರಾವರಿ ಇಲಾಖೆಯಿಂದ ಒಂದು ರೂಪಾಯಿಯನ್ನು ಖರ್ಚು ಮಾಡಿಲ್ಲ. ಇವರೇ ಪಂಪ್‌ಸೆಟ್‌ಗಳನ್ನು ಅಳವಡಿಸಿಕೊಂಡು ಲಿಫ್ಟ್ ಮಾಡುತ್ತಿದ್ದಾರೆ. Humanitarian grounds ಮೇಲೆ ಆ ರಾಯಚೂರು ರೋಲ್ ಭಾಗ್‌ಗೆ ದಿನದ 24 ತಾಸು ವಿದ್ಯುತ್‌ನ್ನು ಕೊಡುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕೆಂದು ಸನ್ಮಾನ್ಯ ಸಚಿವರಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್ (ಇಂಧನ ಸಚಿರು)**:- ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಬಹಳ ಧೀರ್ಘವಾಗಿ ಗಮನ ಸೆಳೆಯುವ ಇವರಿಗೂ ಅಂತಹ ಹಲವಾರು ಸಂದರ್ಭದಲ್ಲಿ ತಿಳಿಸಿದ್ದೇನೆ. ಆದರೆ ಈಗಾಗಲೇ ತಾವು ಹೇಳಿದಂತೆ, ಯಾರು ಜಮೀನನ್ನು ಕಳೆದುಕೊಂಡಿದ್ದಾರೆ ಅವರಿಗೆಲ್ಲಾ settlement ಮಾಡುತ್ತಿದ್ದೇನೆ. ಇದರಲ್ಲಿ ತಾವು ಒಂದನ್ನು ಗಮನಿಸಬೇಕು. ಆರ್.ಟಿ.ಪಿ.ಎಸ್ 1720 ಮೆಗಾವ್ಯಾಟ್ ಸಾಮರ್ಥ್ಯವನ್ನು ಹೊಂದಿದೆ, 2037 ಜನ ಅಲ್ಲಿ ಈಗಾಗಲೇ ನೌಕರರು ಇದ್ದಾರೆ. ಬೇರೆ ಕಡೆ 1300 ಮೆಗಾವ್ಯಾಟ್ ಸಾಮರ್ಥ್ಯಕ್ಕೆಲ್ಲಾ ಬರೀ 400 ಜನ ನೌಕರರು ಇರುತ್ತಾರೆ. ಅಂದರೆ ಒಬ್ಬರಿಗೆ 1.18% ಆಗುತ್ತದೆ. ನಮ್ಮ ವೆಚ್ಚ ಬಹಳ ವಿಪರೀತ ಜಾಸ್ತಿಯಾಗಿದ್ದು, ಇದು ಬೇರೆ ಬೇರೆ scheme ನಲ್ಲಿ ಆಗಿದೆ. ಆದರೆ ಅಲ್ಲಿ ತಾತ್ಕಾಲಿಕವಾಗಿ ಕೆಲಸ ಮಾಡುವವರನ್ನೆಲ್ಲಾ ಖಾಯಂ ಮಾಡಿಕೊಳ್ಳಬೇಕೆಂದು ಹೇಳುತ್ತಿದ್ದಾರೆ. There are different provisions. ಅದನ್ನು ನಾನು ನೋಡುತ್ತೇನೆ. ಮುಖ್ಯವಾಗಿ ಅವರದ್ದೇನು ಬೇಡಿಕೆ ಇದೆಯೆಂದರೆ, ಬಳ್ಳಾರಿಯ ಆರ್.ಟಿ.ಪಿ.ಎಸ್‌ನಲ್ಲಿ ಯೂನಿಟ್‌ನ್ನು ಮಾಡಿದ್ದೇವೆ. ಆ ಯೂನಿಟ್ ಮಾಡಿರುವಂಥದ್ದು, ಅವರೆಲ್ಲಾ ಇದು ನಮ್ಮ ತಾಲ್ಲೂಕು, ಇದರಿಂದ ನಮಗೆ ಹವಾಮಾನ ಕೆಡುತ್ತಿದೆ. ಆದ್ದರಿಂದ ನಮಗೆ ಸೌಲಭ್ಯಗಳನ್ನು ಕೊಡಿ. ನಾವು ನಮ್ಮ ಜಮೀನುಗಳನ್ನೆಲ್ಲಾ ಕಳೆದುಕೊಂಡಿದ್ದೇವೆ. ನಮಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ದಿನದ 24 ತಾಸು ವಿದ್ಯುತ್ ಕೊಡಬೇಕೆಂದು ಕೇಳುತ್ತಿದ್ದಾರೆ. ಮಂಗಳೂರು ಮತ್ತು ಕಾರವಾರದಲ್ಲಿ we have taken a stand. ಅಲ್ಲಿ ಈ ವರ್ಷ ಮಳೆ ಜಾಸ್ತಿ ಇರುವುದರಿಂದ ವಿದ್ಯುತ್ ಬಳಕೆ ಕೂಡ ಸ್ವಲ್ಪ ಕಡಿಮೆ ಇದೆ. ಇಲ್ಲೇನಾಗಿದೆ ಎಂದರೆ, 9667 ಪಂಪ್‌ಸೆಟ್‌ಗಳು ಇಲ್ಲಿವೆ. ಅದರಲ್ಲಿ ಸುಮಾರು 5000 ಪಂಪ್‌ಸೆಟ್‌ಗಳನ್ನು ಹೊಳೆಗಳಿಗೆಲ್ಲಾ ಹಾಕಿಕೊಂಡಿದ್ದಾರೆ. ಅದಕ್ಕೆ ವೆಚ್ಚ ಕೂಡ ಜಾಸ್ತಿ ಆಗುತ್ತಿದೆ. ಕೆಲವು ರೈತರು, ಶ್ರೀ ಎನ್.ಎಸ್.ಭೋಸರಾಜುರವರು, ಶ್ರೀ ರವಿ ಬೋಸ್‌ರಾಜುರವರು, M.P.(Member of Parliament) ಮತ್ತು ಅವರ ಸ್ನೇಹಿತರುಗಳು ನನ್ನನ್ನು ಭೇಟಿ ಮಾಡಿ ಒಂದು ಪ್ರಸ್ತಾವನೆಯನ್ನು ಕೊಟ್ಟಿದ್ದಾರೆ. ಅವರು ಹೇಳುವುದೇನೆಂದರೆ, ನೀವು ಈಗ 7 ತಾಸು ವಿದ್ಯುತ್‌ನ್ನು ಕೊಡುತ್ತಿರುವುದನ್ನು ಕೊಡಿ. 7 ತಾಸಿಗೆ ನಂತರ ವಿದ್ಯುತ್‌ನ್ನು ಕೊಟ್ಟಲ್ಲಿ, ಕಡಿಮೆ ವೆಚ್ಚದಲ್ಲಿ ವಿದ್ಯುತ್‌ನ್ನು ಸರಬರಾಜು ಮಾಡಬೇಕೆಂದು ಒಂದು ಪ್ರಸ್ತಾವನೆಯನ್ನು ಕೊಟ್ಟಿದ್ದಾರೆ. ಸದ್ಯದಲ್ಲೇ ಅದರ ಬಗ್ಗೆ ಮಾತನಾಡಲು ಅವರನ್ನು ಕರೆಯುತ್ತೇನೆ. ಏಕೆಂದರೆ, ನಾವು ಇದನ್ನು ಕೊಡಬೇಕಾದರೆ K.E.R.C. (Karnataka Electricity Regulatory Commission)ಯವರು ಅದಕ್ಕೆ ಒಪ್ಪಿಕೊಳ್ಳಬೇಕಾಗುತ್ತದೆ. ಈಗಾಗಲೇ 9600 ಕೋಟಿ ರೂಪಾಯಿಗಳ ಹಣವನ್ನು ಈ ರಾಜ್ಯದ ರೈತರಿಗೆ, ಸರ್ಕಾರದಿಂದ ಉಚಿತ ವಿದ್ಯುತ್‌ಗೆ ಬಜೆಟ್‌ನಿಂದ ಕೊಡುತ್ತಿದ್ದೇವೆ. ಇದು ಬಹಳ ಹೆಚ್ಚಿಗೆ ಆಗಿದೆ. ಈ ರೀತಿ ಯಾವ ವರ್ಷವೂ ಇರಲಿಲ್ಲ. ಈ ಹಿಂದೆ ಎಲ್ಲಾ 2000 ಕೋಟಿ ರೂಪಾಯಿಗಳು ಇದ್ದಿದ್ದು, ಈಗ 9000 ಕೋಟಿ ರೂಪಾಯಿಗಳಿಗೆ ಹೆಚ್ಚಿಗೆ ಆಗಿದೆ. ನಾವೇ ಈಗ ವಿದ್ಯುತ್‌ನ್ನು ಒಂದು ಯೂನಿಟ್‌ಗೆ 4 ರೂಪಾಯಿ, 4.50 ರೂಪಾಯಿ, 5 ರೂಪಾಯಿ ಮತ್ತು 6 ರೂಪಾಯಿಗಳಿಗೆ ಖರೀದಿ ಮಾಡುತ್ತಿದ್ದೇವೆ. K.E.R.C ಯವರು ರೈತರಿಗೆ 4.50 ರೂಪಾಯಿಗಳಿಗೆ ಫಿಕ್ಸ್ ಮಾಡಿದ್ದಾರೆ. ಇದಕ್ಕೇನಾದರೂ via-media ಮಾಡಿ, K.E.R.C. ಯವರು ಮತ್ತು ಅವರ ಹತ್ತಿರ ಕೂಡ ಮಾತನಾಡಿ, ಇಂತಹ ಕಡೆ ಕೆಲವರು separate express feeder ಹಾಕಿಕೊಳ್ಳುವುದಕ್ಕೆ ಇಲ್ಲಿ ಅವಕಾಶ ಇದೆ. ಇಂತಹ ಒಂದು ಥರ್ಮಲ್ ಪ್ಲಾಂಟ್ ಹಾಕಿಕೊಳ್ಳುವುದಕ್ಕೆ ಬೇರೆ ರಾಜ್ಯದಲ್ಲಿ ಎಲ್ಲೂ ಅವಕಾಶವಿಲ್ಲ. ನಮ್ಮ ರಾಜ್ಯದಲ್ಲಿ ಅವಕಾಶವಿದೆ, ಅವರು ಸಹಾಯ ಮಾಡಿದ್ದಾರೆ. ಅವರ ಹತ್ತಿರ ಮಾತನಾಡಿ ಇದಕ್ಕೆ ಏನಾದರೊಂದು amicable settlement ನ್ನು ಮಾಡುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ಧನ್ಯವಾದಗಳು. ಮುಂದಿನ ಪ್ರಶ್ನೆ ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರದ್ದು. ಅವರು ಸಮಯಾವಕಾಶವನ್ನು ಕೇಳಿದ್ದಾರೆ. ಈಗ ಪ್ರಶ್ನೋತ್ತರ ಅವಧಿ ಮುಗಿದಿದೆ.

**ಶ್ರೀ ಆರ್.ಧರ್ಮಸೇನ:-** ಮಾನ್ಯ ಸಭಾಪತಿಯವರೇ, ನನ್ನದೊಂದು ಪ್ರಶ್ನೆ ಇದೆ.

**ಸಭಾಪತಿಯವರು:-** ಮಾನ್ಯ ಸದಸ್ಯರೆ ಈಗ ಪ್ರಶ್ನೋತ್ತರ ಅವಧಿ ಮುಗಿದಿರುತ್ತದೆ. You are late.

**ಶ್ರೀ ಆರ್.ಧರ್ಮಸೇನ:-** ಮಾನ್ಯ ಸಭಾಪತಿಯವರೇ, ಜೆ.ಡಿ.ಎಸ್. ರೈತ ವಿಭಾಗದವರು ಹುಬ್ಬಳ್ಳಿಯಿಂದ ಬರುವ ರಸ್ತೆಯಲ್ಲಿ ಮುಷ್ಕರ ಮಾಡುತ್ತಿದ್ದರು. ಅದರಲ್ಲಿ ನನ್ನ ತಪ್ಪು ಏನೂ ಇಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರೆ, ಅದಕ್ಕೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ. ನಾನು ನಮ್ಮ ಪದ್ಧತಿಯಂತೆ ಸದನವನ್ನು ನಡೆಸಬೇಕೇ ಹೊರತು, ಹೊಸ ಪದ್ಧತಿಯನ್ನು ಮಾಡುವುದಕ್ಕೆ ಬರುವುದಿಲ್ಲ.

**ಶ್ರೀ ಆರ್.ಧರ್ಮಸೇನ:-** ಮಾನ್ಯ ಸಭಾಪತಿಯವರೇ, ನಿಮಗೆ ಸಂಬಂಧಪಟ್ಟಂತೆ ಪ್ರಶ್ನೆ ಇದೆ.

(ಗೊಂದಲ)

**ಸಭಾಪತಿಯವರು:-** ಇದಕ್ಕೆ ಪದ್ಧತಿ ಇಲ್ಲವೇ? ಸದನದಲ್ಲಿ ಯಾವಾಗ ಬೇಕಾದರೂ ಪ್ರಶ್ನೋತ್ತರ ಅವಧಿ ನಡೆಸಬಹುದಾ? ಇದಕ್ಕೆ ಯಾವುದೇ ನಿಯಮ ಇಲ್ಲವೇ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಅವರು ಪ್ರಶ್ನೋತ್ತರ ಅವಧಿ ಮುಗಿಯುವುದಕ್ಕೆ ಮುಂಚೆ ಸದನಕ್ಕೆ ಬಂದಿದ್ದಾರಲ್ಲಾ?

**ಸಭಾಪತಿಯವರು:-** ಯಾರು ಶ್ರೀಕಂಠೇಗೌಡ ರವರೆ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಸಂಚಾರದ ದಟ್ಟಣೆಯಿಂದ ಅವರು ಸದನಕ್ಕೆ ಬರುವುದು ತಡವಾಗಿದೆ, ಅದಕ್ಕೆ ಅವರಿಗೆ ಅವಕಾಶ ಕೊಡಿ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಹೌದು, ನನಗೇ ಅಯ್ಯೋ ಪಾಪ ಅನ್ನಿಸುತ್ತದೆ. ಆದರೆ ನಾನು 30 ವರ್ಷದಿಂದ ಈ ಸದನದ ಸದಸ್ಯ. ನಾನು ಸಹ ತಡವಾಗಿ ಈ ಸದನಕ್ಕೆ ಬಂದಾಗ, ಅಂದು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪೀಠದಲ್ಲಿದ್ದ ಸಭಾಪತಿಗಳು ನನ್ನ ಪ್ರಶ್ನೆಗೆ ಮಾತನಾಡಲು ಅವಕಾಶ ಕೊಡಲಿಲ್ಲ. ಆಗ ಅವರು ನನಗೆ "ತಾವು ಸದನಕ್ಕೆ ಬಂದಿರುವುದು ವಿಳಂಬವಾಗಿದೆ, I am sorry" ಎಂದರು. ನಾನೂ ಕೂಡ ಹಾಗೆಯೇ ಮಾಡಿಕೊಂಡು ಬಂದಿದ್ದೇನೆ. ಹಾಗಾದರೆ ಒಂದು ಕೆಲಸ ಮಾಡೋಣ. ಯಾರು ಯಾವಾಗ ಬೇಕಾದರೂ ಸದನಕ್ಕೆ ಬರಬಹುದು, ಪ್ರಶ್ನೆ ಕೇಳಬಹುದು ಎಂದು ನೀವು ಕಾನೂನು ಮಾಡಿ, ಆಗ ನನ್ನದೇನೂ ಅಭ್ಯಂತರವಿಲ್ಲ. ಮಾನ್ಯ ಸದಸ್ಯರು ದಯವಿಟ್ಟು ಕ್ಷಮಿಸಿ. ಆ ರೀತಿ ಅವಕಾಶ ಕಲ್ಪಿಸಲು ಸಾಧ್ಯವಿಲ್ಲ.

ಆ) **ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಎಂ.ಆರ್.ಸೀತಾರಾಂ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ: 14ನೇ ನವೆಂಬರ್ 2017 ಸಮೂಹ-2ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 122 ಪ್ರಶ್ನೆಗಳ ಪೈಕಿ, 92 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸುತ್ತಿದ್ದೇನೆ.

**(ಉತ್ತರಗಳನ್ನು ಲಗತ್ತಿಸಲಾಗಿದೆ)**

**ಸಭಾಪತಿಯವರು:-** ಈಗ ಹೊಸದಾಗಿ ಸಚಿವ ಸಂಪುಟಕ್ಕೆ ಸೇರ್ಪಡೆಯಾಗಿರುವ ಸಚಿವರು ಸದನಕ್ಕೆ ಬಂದಿದ್ದಾರೆ. ಅವರ ಪರಿಚಯ ಮಾಡಿಕೊಡಿ.

**2. ನೂತನ ಸಚಿವರ ಪರಿಚಯ**

**ಶ್ರೀ ಎಂ.ಆರ್.ಸೀತಾರಾಂ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನೂತನ ಸಚಿವರಾದ ಶ್ರೀಮತಿ ಎಂ.ಸಿ.ಮೋಹನ ಕುಮಾರಿ ಉರುಫ್ ಗೀತಾ, ಸಣ್ಣ ಕೈಗಾರಿಕೆ ಮತ್ತು ಸಕ್ಕರೆ ಸಚಿವರು ಸದನಕ್ಕೆ ಬಂದಿದ್ದಾರೆ, ಅವರನ್ನು ನಾನು ಸ್ವಾಗತ ಮಾಡುತ್ತಿದ್ದೇನೆ.

**(ಈ ಹಂತದಲ್ಲಿ ಆಡಳಿತ ಪಕ್ಷದವರು ಮೇಜು ಕುಟ್ಟುವ ಮೂಲಕ ಅವರನ್ನು ಸದನಕ್ಕೆ ಸ್ವಾಗತ ಕೋರಿದರು.)**

**ಶ್ರೀ ಕಾಂತರಾಜು (ಬಿ.ಎಂ.ಎಲ್):-** ಮಾನ್ಯ ಸಭಾಪತಿಯವರೇ, ಏನಾಗಿದೆ ಕಳೆದ ಅಧಿವೇಶನದಲ್ಲಿ ಕೊಟ್ಟಂತಹ ಚುಕ್ಕೆ ಗುರುತಿನ ಪ್ರಶ್ನೆಗಳು ಇರಬಹುದು ಅಥವಾ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳು ಇರಬಹುದು ಯಾವುದಕ್ಕೂ ಸಹ ಉತ್ತರಗಳನ್ನು ಕೊಟ್ಟಿಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಹೇಳಿದ್ದು ಸರಿಯಾಗಿದೆ. ಇದರ ಬಗ್ಗೆ ಮಾನ್ಯ ಸಭಾನಾಯಕರು ಗಮನಿಸಬೇಕು. ಸದನದಲ್ಲಿ ಮುಖ್ಯಮಂತ್ರಿಗಳಾದಿಯಾಗಿ ಎಲ್ಲರೂ ಅಂದಿನ ಮಾನ್ಯ ಸಭಾನಾಯಕರು, ಮಾನ್ಯ ಮುಖ್ಯಮಂತ್ರಿಗಳು ಮಾತನ್ನು ಕೊಟ್ಟಿದ್ದಾರೆ. ಏನು ಮಾತನ್ನು ಕೊಟ್ಟಿದ್ದಾರೆ ಎಂದರೆ, ಯಾವುದೋ ಕಾರಣಕ್ಕೆ ಉತ್ತರ ಬರುವುದು ತಡ ಆಗಬಹುದು. ಸಮಯ ತೆಗೆದುಕೊಳ್ಳಬಹುದು. ಉದಾಹರಣೆಗೆ, ಇವತ್ತಿನ ದಿವಸ 122 ಪ್ರಶ್ನೆಗಳಿಗೆ 92 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಉಳಿದ 30 ಪ್ರಶ್ನೆಗೆ ಉತ್ತರ ಬಂದಿರುವುದಿಲ್ಲ. ಅದಕ್ಕೆ ಈ ಸದನ ಮುಗಿದ ಕೂಡಲೇ ಅದು dead ಆಗುವುದಿಲ್ಲ. ಆ ಪ್ರಶ್ನೆಗಳಿಗೆ ಉತ್ತರವನ್ನು ಕಳುಹಿಸಿಕೊಡಲೇಬೇಕೆಂದು ಮಾನ್ಯ ಸದಸ್ಯರು ಕೇಳಲಾಗಿ, ಮಾನ್ಯ ಮುಖ್ಯಮಂತ್ರಿಗಳು ಹೌದು ಇದಕ್ಕೆ ಉತ್ತರಗಳನ್ನು ಕೊಡಲೇಬೇಕೆಂದು ಅಧಿಕಾರಿಗಳಿಗೆ ಹೇಳಿದ್ದರು. ಆದರೆ, ಆ ರೀತಿಯ ಉತ್ತರಗಳು ನಮಗೆ ಬರಲಿಲ್ಲವೆಂದು ನಮ್ಮ ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಆದ್ದರಿಂದ ತಾವು ದಯಮಾಡಿ ಇದರ ಕಡೆ ಗಮನಿಸಬೇಕು. ಅಧಿಕಾರಿಗಳು ಕೂಡ ಇದು lapse ಆಗುವುದಕ್ಕೆ ಬಿಡಕೂಡದು. ಹಾಗೇನಾದರೂ ಮಾಡಿದರೆ ಅಧಿಕಾರಿಗಳ ತಪ್ಪಾಗುತ್ತದೆ.

**ಶ್ರೀ ಎಂ.ಆರ್.ಸೀತಾರಾಂ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಈಗ ಈ ಉಳಿದ 30 ಪ್ರಶ್ನೆಗಳಿಗೆ ಅದಕ್ಕೆ ಸಂಬಂಧಪಟ್ಟ ಇಲಾಖೆಗಳಿಗೆ ನಾವೇ monitor ಮಾಡಿ ಉತ್ತರ ತರಿಸುವ ವ್ಯವಸ್ಥೆ ಮಾಡುತ್ತೇವೆ.

**ಸಭಾಪತಿಯವರು:-** ಆಯಿತು ಮಾಡಿ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸದ ಪ್ರಶ್ನೆಗಳಿಗೆ ಉತ್ತರಗಳನ್ನು ಇವತ್ತು ಸದನದಲ್ಲಿ ಮಂಡಿಸಿದ್ದರೆ ಒಳ್ಳೆಯದಾಗುತ್ತಿತ್ತು. ನಿನ್ನೆ ದಿವಸ ...

**ಸಭಾಪತಿಯವರು:-** ಮಾನ್ಯ ಸದಸ್ಯರೆ, ಒಟ್ಟಿಗೆ ಎಲ್ಲಾ ಪ್ರಶ್ನೆಗಳನ್ನು ಸದನದಲ್ಲಿ ಮಂಡಿಸುತ್ತೇವೆ.

**೩. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು**

**ಅ) ವಿಷಯ:- ಶಿಕ್ಷಕರ ವರ್ಗಾವಣೆ ಬಗ್ಗೆ.**

---

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ರಾಜ್ಯದಲ್ಲಿ ಪ್ರಾಥಮಿಕ, ಪ್ರೌಢ ಹಾಗೂ ಪದವಿಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ ವರ್ಗಾವಣೆ ಪ್ರಕ್ರಿಯೆ ಇದುವರೆಗೆ ಪ್ರಾರಂಭವಾಗದೇ ಸಹಸ್ರಾರು ಶಿಕ್ಷಕರು/ಉಪನ್ಯಾಸಕರು ಆತಂಕಕ್ಕೆ ಒಳಗಾಗಿದ್ದಾರೆ. ಈ ಶೈಕ್ಷಣಿಕ ವರ್ಷವು ಪ್ರಾರಂಭವಾಗಿ ನವೆಂಬರ್ ತಿಂಗಳ 14ನೇ ದಿವಸ ಬಂದರೂ ಇಲ್ಲಿಯವರೆಗೆ ವರ್ಗಾವಣೆ ಪ್ರಕ್ರಿಯೆ ಜಾರಿಯಾಗುತ್ತದೆಯೋ ಇಲ್ಲವೋ ಎಂಬ ಭಯದಲ್ಲಿ ಶಿಕ್ಷಕ ಸಮುದಾಯ ಇರುವುದು.

ಶಿಕ್ಷಕರ ವರ್ಗಾವಣೆ ಕರಡು ಪ್ರತಿಗೆ ಆಕ್ಷೇಪಣೆಗಳನ್ನು ಸೆಪ್ಟೆಂಬರ್ 7 ರಿಂದ 27 ರವರೆಗೆ ಶಿಕ್ಷಕರಿಂದ ಸ್ವೀಕರಿಸಿ, ವರ್ಗಾವಣೆ ನಿಯಮಗಳನ್ನು ಅಂತಿಮಗೊಳಿಸಲಾಗಿರುವುದು. ಅಕ್ಟೋಬರ್ 23 ರಂದು ಒಂದು ವಾರದೊಳಗಾಗಿ ವರ್ಗಾವಣೆ ಪ್ರಕ್ರಿಯೆ ಆರಂಭಿಸುತ್ತೇವೆ ಎಂದು ಮಾನ್ಯ ಶಿಕ್ಷಣ ಸಚಿವರು ಪತ್ರಿಕಾ ಹೇಳಿಕೆ ನೀಡಿದ್ದುಂಟು. ಅದೇ ರೀತಿ ನವೆಂಬರ್ ಒಂದರಂದು ಪುನಃ ವರ್ಗಾವಣೆ ಪ್ರಕ್ರಿಯೆ ಪ್ರಾರಂಭಿಸುವುದಾಗಿ ಕನ್ನಡ ಪ್ರಭ ದಿನ ಪತ್ರಿಕೆಯಲ್ಲಿ ಭರವಸೆ ನೀಡಿದ್ದುಂಟು. ಆದರೆ ವರ್ಗಾವಣೆ ಪ್ರಕ್ರಿಯೆ ಕುರಿತು ಪತ್ರಿಕೆಗಳಲ್ಲಿ ಬರೀ ಹೇಳಿಕೆಗಳು ಬರುತ್ತಿವೆಯೇ ವಿನಃ ಕಾರ್ಯರೂಪದಲ್ಲಿ ಬಂದಿರುವುದಿಲ್ಲ. ಆದ್ದರಿಂದ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ವರ್ಗಾವಣೆ ಪ್ರಕ್ರಿಯೆ ನಿಖರವಾಗಿ ಪ್ರಾರಂಭಿಸುವ ದಿನಾಂಕವನ್ನು ಸದನದಲ್ಲಿ ಪ್ರಕಟಿಸಲು ಒತ್ತಾಯಿಸುತ್ತೇನೆ.

**ಶ್ರೀ ಎಂ.ಆರ್.ಸೀತಾರಾಂ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಮೂಲಕ ಆದಷ್ಟು ಬೇಗ ಉತ್ತರಗಳನ್ನು ಒದಗಿಸಿಕೊಡಲಾಗುವುದು.

**ಸಭಾಪತಿಯವರು:-** ಧನ್ಯವಾದಗಳು.

**(ಮುಂದು...)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(೯೫೦)14.11.2017/1.00/ಎಂ.ಎಂ/ಆರ್.ಎನ್

**ಆ) ವಿಷಯ:– ವೈದ್ಯರ ಮುಷ್ಕರದಿಂದ ಮೂವರು ಮೃತರಾಗಿರುವ ಬಗ್ಗೆ.**

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ದಿನಾಂಕ: 14–11–2017ರ ಮಂಗಳವಾರದ ವಿಜಯವಾಣಿ ಕನ್ನಡ ದಿನ ಪತ್ರಿಕೆಯಲ್ಲಿ "ವೈದ್ಯರ ಮುಷ್ಕರ ೩ ಜೀವಗಳು ಬಲಿ" ಎಂಬ ಶಿರೋನಾಮೆಯಡಿಯಲ್ಲಿ ಪ್ರಕಟವಾದಂತೆ, ಜನಸಾಮಾನ್ಯರ ಹಿತಾಸಕ್ತಿ ಮರೆತು ಪ್ರತಿಷ್ಠೆಗೆ ಬಿದ್ದಿರುವ ಸರ್ಕಾರ ಹಾಗೂ ಖಾಸಗಿ ವೈದ್ಯರ ಜಟಾಪಟಿಗೆ ರಾಜ್ಯದಲ್ಲಿ ಸೋಮವಾರ ಮೂರು ಅಮಾಯಕ ಜೀವಗಳು ಬಲಿಯಾಗಿವೆ. ಕೆಪಿಎಂಇ ಕಾಯ್ದೆ ತಿದ್ದುಪಡಿಗೆ ಪಟ್ಟು ಹಿಡಿದಿರುವ ಖಾಸಗಿ ವೈದ್ಯರು ಬೆಳಗಾವಿ ಚಲೋ ನಡೆಸುವ ಮೂಲಕ ನಿನ್ನೆಯ ದಿನ ಸುಮಾರು ಹತ್ತು ಸಾವಿರ ವೈದ್ಯರು ಬೆಳಗಾವಿಯಲ್ಲಿ ಸರ್ಕಾರದ ಎದುರು ಬಲ ಪ್ರದರ್ಶನ ನಡೆಸಿದರೆ ಇವರ ಯಾವುದೇ ನ್ಯಾಯೋಚಿತ ಬೇಡಿಕೆಗಳನ್ನು ಸರ್ಕಾರ ಅಂಗೀಕರಿಸದ ಹಿನ್ನೆಲೆಯಲ್ಲಿ ಪರಿಸ್ಥಿತಿ ಗಂಭೀರಗೊಂಡಿದೆ. ಸಂಧಾನ ಸಭೆ ವಿಫಲಗೊಂಡಿರುವುದರಿಂದ ಮಂಗಳವಾರದಿಂದ ಪ್ರತಿಭಟನೆಯನ್ನು ಅನಿರ್ಧಿಷ್ಟಾವಧಿ ಕಾಲ ಮುಂದುವರಿಸಲು ಖಾಸಗೀ ವೈದ್ಯರು ತೀರ್ಮಾನಿಸಿದ್ದಾರೆ. ಈ ಮುಷ್ಕರದಿಂದ ಈಗಾಗಲೇ ರಾಜ್ಯದಲ್ಲಿ ಮೂರು ಜೀವಗಳು ಬಲಿಯಾಗಿವೆ. ಇನ್ನೂ ಎಷ್ಟು ಜೀವಗಳು ಬಲಿಯಾಗಬೇಕು. ಆದ್ದರಿಂದ ಈ ಗಂಭೀರವಾದ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಬಯಸುತ್ತೇನೆ.

**ಸಭಾಪತಿಯವರು:–** ಸರ್ಕಾರದ ಪರವಾಗಿ ಉತ್ತರಿಸಲು ಮಾನ್ಯ ಸಚಿವರಿದ್ದಾರೆ. ಮಾನ್ಯ ಸಚಿವರು ಉತ್ತರವು ರೆಡಿಯಾಗಿದ್ದರೆ ಹೇಳಬಹುದು ಇಲ್ಲದಿದ್ದರೆ ಸಮಯವನ್ನು ತೆಗೆದುಕೊಳ್ಳಬಹುದು.

**ಶ್ರೀ ಕೆ.ಆರ್. ರಮೇಶ್ ಕುಮಾರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೆ, ನಮ್ಮ ಇಲಾಖೆಯವರು ತಂದಿದ್ದ ಲಿಖಿತ ಸ್ಟೇಟ್‌ಮೆಂಟ್ ನೋಡಿದ್ದು, ಅದು ನನಗೆ ತೃಪ್ತಿಯಾಗಲಿಲ್ಲ. ತಾವು ಅನುಮತಿ ಕೊಟ್ಟರೆ ನಾನು suo-moto ಸ್ಟೇಟ್‌ಮೆಂಟ್ ಮಾಡುತ್ತೇನೆ.

**ಸಭಾಪತಿಯವರು:–** ಮಾನ್ಯ ಸಚಿವರೆ, suo-moto statement ಮಾಡಬಹುದು ಅಥವಾ ಸಮಯಾವಕಾಶವನ್ನು ತೆಗೆದುಕೊಂಡು ಸಾಯಂಕಾಲದ ವೇಳೆಗೆ ಉತ್ತರವನ್ನು ಒದಗಿಸಬಹುದು.

**ಶ್ರೀ ಕೆ.ಆರ್. ರಮೇಶ್ ಕುಮಾರ್:–** ಮಾನ್ಯ ಸಭಾಪತಿಯವರೆ, ಸಮಯಾವಕಾಶ ಬೇಕಾಗಿಲ್ಲ, suo-moto statement ಮಾಡುತ್ತೇನೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಆಯಿತು ಹಾಗೆ ಮಾಡಿ.

**ಶ್ರೀ ಕೆ.ಆರ್. ರಮೇಶ್ ಕುಮಾರ್:–** ಮಾನ್ಯ ಸಭಾಪತಿಯವರೆ, ಮೊದಲನೆಯದಾಗಿ ವೈದ್ಯರ ಮುಷ್ಕರದಿಂದಾಗಿ ಮೂರು ಸಾವು ಆಗಿದೆ ಎಂಬುದನ್ನು ನಾನು ಪತ್ರಿಕೆಯಲ್ಲಿ ನೋಡಿದ್ದೇನೆ. ಅವರು ಹೇಳುರುವಂತಹ ಕಾರಣದಿಂದಲೇ ಆಗಿರುವುದಾದರೆ, ನಾನು ಒಬ್ಬ ನಾಗರಿಕನಾಗಿ, ಒಬ್ಬ ಮನುಷ್ಯನಾಗಿ, ವಿಶೇಷವಾಗಿ ಆ ಇಲಾಖೆಯ ಜವಾಬ್ದಾರಿ ಹೊತ್ತಿರುವ ಒಬ್ಬ ಸಚಿವನಾಗಿ ವಿಷಾದವನ್ನು ವ್ಯಕ್ತಪಡಿಸುತ್ತೇನೆ. ಆ ಕುಟುಂಬಗಳ ಕ್ಷಮೆಯನ್ನು ಯಾಚಿಸುತ್ತೇನೆ. ಎರಡನೆಯದಾಗಿ, 2007ರಲ್ಲಿ ಸರ್ಕಾರವು ಪಾಸ್ ಮಾಡಿದ ಒಂದು ಶಾಸನ ಜಾರಿಯಲ್ಲಿದೆ. ಅದು ಖಾಸಗಿ ವೈದ್ಯಕೀಯ ಸಂಸ್ಥೆಗಳ ನಿರ್ವಹಣೆಗಾಗಿ ಇರುವಂತಹ ಕಾಯಿದೆಯಾಗಿದೆ. ಸರ್ಕಾರದಿಂದ ಅನೇಕ ಪ್ರಾಯೋಜಿತ ಯೋಜನೆಗಳನ್ನು ಅನುಷ್ಠಾನಗೊಳಿಸುವುದಕ್ಕೆ ಖಾಸಗಿಯವರನ್ನು ಅವಲಂಬಿಸುವ ಕಾರಣದಿಂದ ಉತ್ತರಗಳು ಇತ್ಯಾದಿ ಬೇರೆ ವಿಚಾರಗಳಲ್ಲಿ ಪುನರ್ವಿಮರ್ಶೆ ಮಾಡಬಹುದಾದಂತಹ ಅಗತ್ಯ ನಮ್ಮ ಸರ್ಕಾರದ ಗಮನಕ್ಕೆ ಬಂದಿದೆ. ಸಾರ್ವಜನಿಕ ದೂರುಗಳು ಕೂಡ ಬಂದಿವೆ. ಸರ್ಕಾರಕ್ಕೆ ಇದರಲ್ಲಿ ಯಾವುದೇ ಪ್ರತಿಷ್ಠೆ ಇಲ್ಲ. ಇದು ವೈದ್ಯ ವೃತ್ತಿಯ ವಿರುದ್ಧ ಅಥವಾ ವೈದ್ಯರ ವಿರುದ್ಧ ಅಥವಾ ಖಾಸಗಿ ಸಂಸ್ಥೆಗಳ ವಿರುದ್ಧವೂ ಅಲ್ಲ. ಒಂದು ಜನಪರವಾದ ಸರ್ಕಾರ ಜವಾಬ್ದಾರಿಯಿಂದ ತನ್ನ ಕಾರ್ಯನಿರ್ವಹಣೆ ಮಾಡುವಂತಹ ಒಂದು ಚಿಕ್ಕ ಪ್ರಯತ್ನವಷ್ಟೆ. ಕರಡು ಸಿದ್ಧ ಮಾಡಿದ ಹಂತದಲ್ಲಿಯೇ ಖಾಸಗಿ ವೈದ್ಯಕೀಯ ಸಂಸ್ಥೆಗಳ ಪ್ರತಿನಿಧಿಗಳು ನಮ್ಮನ್ನು ಭೇಟಿಯಾಗಿದ್ದರು. ವಿಧಾನಸಭೆಯಲ್ಲಿ ಅದನ್ನು introduce ಮಾಡುವ ಮೊದಲೇ draft amendment ಅನ್ನು ಅವರ ಕೈಗೆ ಕೊಟ್ಟಿದ್ದೆ. ಅವರು ಒಂದು ದಿವಸ ಸಮಯವನ್ನು ತೆಗೆದುಕೊಂಡು ನಂತರ ನನ್ನನ್ನು ಭೇಟಿಯಾದರು. ಅದರ ಬಗ್ಗೆ ಸಮಾಧಾನವನ್ನು ವ್ಯಕ್ತಪಡಿಸಿದರು ಹಾಗೂ ಕೆಲವೊಂದು ಬದಲಾವಣೆಗಳನ್ನು ಅವರು ಸೂಚಿಸಿದರು. ಆದರೆ ಮಾರನೆಯ ದಿನ ಪುನಃ ಮಾನ್ಯ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿದರು. ಇದರಿಂದ ನನ್ನ ಬಳಿ ಸಮಾಧಾನವನ್ನು ವ್ಯಕ್ತಪಡಿಸಿ ಮಾನ್ಯ ಮುಖ್ಯಮಂತ್ರಿಯವರ ಬಳಿಗೇಕೆ ಹೋದರು ಎಂದು ನನಗೆ ಆಶ್ಚರ್ಯವಾಯಿತು. ಆದರೆ ಮಾನ್ಯ ಮುಖ್ಯಮಂತ್ರಿಯವರು ನಮ್ಮ ನಾಯಕರಾಗಿದ್ದಾರೆ. ಅವರ ಬಳಿ ಹೋದರೆ ನನ್ನ ಯಾವುದೇ ಆಕ್ಷೇಪಣೆ ಇಲ್ಲ. ಅದು ಅಲ್ಲಿಗೆ ನಿಲ್ಲದೇ ಅವರು ಮಾನ್ಯ ರಾಜ್ಯಪಾಲರ ಬಳಿಯೂ ಹೋಗಿದ್ದರು. ಅಷ್ಟರಲ್ಲಿ ಮಸೂದೆಯ ತಿದ್ದುಪಡಿಗಳ introduction ಕೂಡ ವಿಧಾನಸಭೆಯಲ್ಲಿ ಆಗಿರಲಿಲ್ಲ. ವಿಧಾನಸಭೆಯಲ್ಲಿ ತಿದ್ದುಪಡಿಗಳನ್ನು introduce ಮಾಡಿದ ಮೇಲೆ ಸದನದಲ್ಲಿ ಪಕ್ಷಗಳನ್ನು ಮೀರಿ ಬಹಳ ಜನರು ಅದರ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಗತ್ಯತೆ ಬಗ್ಗೆ ಸಹಮತ ವ್ಯಕ್ತಪಡಿಸಿದರು. ಕೆಲವರು ಬೇಡ ಇದರ ಬಗ್ಗೆ ಇನ್ನೂ ಹೆಚ್ಚು ಚರ್ಚೆ ಮಾಡಬೇಕಾದ ಅಗತ್ಯವಿದೆ ಎಂದು ಹೇಳಿದರು. ಮಾನ್ಯ ಮುಖ್ಯಮಂತ್ರಿಯವರು ಸ್ವತಃ ಈ ಮಸೂದೆಯನ್ನು ಪಾಸ್ ಮಾಡಲು ಮುಂದಾದಾಗ ನಾನು ಅವರಲ್ಲಿ ವಿನಂತಿ ಮಾಡಿಕೊಂಡೆನು. ಇದು ಸ್ವಲ್ಪ ವಿವಾದಾತ್ಮಕವಾಗಿ ಕಾಣುತ್ತಿದೆ, ಸಮಯವನ್ನು ತೆಗೆದುಕೊಂಡು ಜಂಟಿ ಪರಿಶೀಲನಾ ಸಮಿತಿಗೆ ಕಳುಹಿಸಲು ನಾವು ಆಕ್ಷೇಪಣೆ ಮಾಡುವುದು ಬೇಡ ಎಂದು ತಿಳಿಸಿದೆ. ಜಂಟಿ ಪರಿಶೀಲನಾ ಸಮಿತಿಯು ಕೂಡ ನಾವು ಸೂಚಿಸಿದ ತಿದ್ದುಪಡಿಗಳನ್ನು ವ್ಯಾಪಕವಾಗಿ ತನ್ನ ಕಾರ್ಯವ್ಯಾಪ್ತಿಯಲ್ಲಿ ಪರಿಶೀಲನೆ ಮಾಡಿದೆ. ಆ ಹಂತದಲ್ಲಿಯು ಕೂಡ stake holders ಯಾರಿದ್ದರು ಅವರನ್ನೆಲ್ಲಾ ಕರೆಸಿ ಅವರ ಅಭಿಪ್ರಾಯಗಳನ್ನು ಕೇಳಿದ್ದಾರೆ ಇವರ ಅಭಿಪ್ರಾಯಗಳನ್ನೂ ಕೇಳಿದ್ದಾರೆ. ಇದಾದ ನಂತರ ಅವರು ಇದು ಯಥಾವತ್ತಾಗಿ ಅನುಷ್ಠಾನಗೊಂಡರೆ ತಮಗೆ ಕೆಲವು ತೀವ್ರವಾದಂತಹ ತೊಂದರೆಗಳಾಗುತ್ತದೆ ಎಂಬ ಒಂದು ಅನಿಸಿಕೆಯ ಮೇಲೆ ಇಲ್ಲಿಗೆ ಬಂದಿದ್ದಾರೆ. ಅಧಿವೇಶನವು ನಿನ್ನೆ ಬೆಳಗ್ಗೆ ಪ್ರಾರಂಭವಾಗಿದೆ. ಆರೋಗ್ಯ ಸಚಿವನಾದ ನನಗೆ ನಿನ್ನೆಯ ದಿವಸ ಇಲ್ಲಿ ಪ್ರಶ್ನೋತ್ತರ ಕಾರ್ಯಕ್ರಮವಿತ್ತು. ನಾನು ನೇರವಾಗಿ ಇಲ್ಲಿಗೆ ಬಂದು ಕುಳಿತುಕೊಂಡಿದ್ದರಿಂದ ನನಗೆ ಅವರನ್ನು (ಧರಣಿ ನಿರತರನ್ನು) ಹೋಗಿ ನೋಡಲು ಆಗಲಿಲ್ಲ. ಅವರು ಮಾನ್ಯ ಮುಖ್ಯಮಂತ್ರಿಯವರನ್ನು ಹೋಗಿ ಭೇಟಿಯಾಗಿದ್ದರು. ನಮ್ಮ ಇತರೆ ಸಚಿವ ಸಹೋದ್ಯೋಗಿಗಳು ಕೂಡ ಅವರ ಜೊತೆಗೆ ಇರುತ್ತಾರೆ. ಮಾನ್ಯ ಮುಖ್ಯಮಂತ್ರಿಯವರು ನಿನ್ನೆ ಸಾಯಂಕಾಲ ನನ್ನ ಬಳಿ ಮಾತನಾಡಿದ್ದಾರೆ. ಪತ್ರಿಕೆಯಲ್ಲಿ ಹೇಳಿರುವಂತೆ ಸಂಧಾನ ವಿಫಲವಾಗಿಲ್ಲ. ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳಿದ್ದಿಷ್ಟು; ಮೊದಲನೆಯದಾಗಿ, ನಾಯಕರಾಗಿ ಸಾರ್ವಜನಿಕ ಹಿತವನ್ನು ಅವರು ನೋಡಬೇಕಾಗುತ್ತದೆ. ಅದಕ್ಕೆ ನಾನು ಸಹಮತವನ್ನು ವ್ಯಕ್ತಪಡಿಸುತ್ತೇನೆ. ಪ್ರಜಾಪ್ರಭುತ್ವದಲ್ಲಿ ನಮ್ಮ ಅಭಿಪ್ರಾಯಗಳೇನೇ ಇದ್ದರೂ ಕೂಡ, ಬಹುತೇಕ ಹೆಚ್ಚು ಅಭಿಪ್ರಾಯಗಳು ಏನು ಬರುತ್ತವೆಯೋ ಅದಕ್ಕೆ ನಾವು ತಲೆಬಾಗಬೇಕಾಗುತ್ತದೆ. ಇವಿಷ್ಟು ವಿಷಯಗಳನ್ನು ನಾನು ಸ್ಪಷ್ಟಪಡಿಸುತ್ತೇನೆ. ಇವರು ಮುಷ್ಕರ ಮಾಡುವ ವೇಳೆಯಲ್ಲಿ ಜನಸಾಮಾನ್ಯರಿಗೆ ತೊಂದರೆಯಾಗಬಾರದೆಂದು ಸರ್ಕಾರಿ ಆಸ್ಪತ್ರೆಗಳಲ್ಲಿ ಏನೆಲ್ಲಾ ಮುನ್ನೆಚ್ಚರಿಕೆಗಳನ್ನು ವಹಿಸಬೇಕೋ ಆ ಕೆಲಸವನ್ನೆಲ್ಲಾ ಮಾಡಿದ್ದೇವೆ. ಇಷ್ಟು ಅದಕ್ಕೆ ಸಂಬಂಧಿಸಿದ ವಿವರಗಳಾಗಿವೆ.

ನಮಗೆ ನಮ್ಮದೇ ಆದ ಕೆಲವು ಆದರ್ಶಗಳಿವೆ. ನಾನು ಪುಟ್ಟಪರ್ತಿಯ ಭಗವಾನ್ ಸತ್ಯ ಸಾಯಿಬಾಬರವರ ಭಕ್ತನಾಗಿದ್ದೇನೆ. ನಾನು ಏಕೆ ಅವರ ಭಕ್ತನಾಗಿದ್ದೇನೆಂದರೆ, ಆರೋಗ್ಯ, ಶಿಕ್ಷಣ ಮತ್ತು ಕುಡಿಯುವ ನೀರಿನ ವಿಚಾರದಲ್ಲಿ ಅವರು ತೆಗೆದುಕೊಂಡಿದ್ದ ನಿರ್ಣಯಗಳು. ಅದು ಮಠ ಅಲ್ಲ, ಅಲ್ಲಿ ಪೀಠ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇಲ್ಲ, ಉತ್ತರಾಧಿಕಾರಿಗಳೂ ಇಲ್ಲ. ಟ್ರಸ್ಟ್ ಒಂದು ಅದನ್ನು ನಡೆಸುತ್ತದೆ. ಬೆಂಗಳೂರಿನಲ್ಲಿರುವ ವೈಟ್‌ಫೀಲ್ಡ್‌ನಲ್ಲಿ ಸಾವಿರ ಹಾಸಿಗೆಯುಳ್ಳ ಆಸ್ಪತ್ರೆಯೊಂದನ್ನು ಅವರು ನಡೆಸುತ್ತಾರೆ. ಬೈಪಾಸ್ ಸರ್ಜರಿಯಿಂದ ಹಿಡಿದು ನ್ಯೂರಾಲಜಿ, ನೆಫ್ರಾಲಜಿ ಎಲ್ಲವನ್ನೂ ಶೇಕಡ ನೂರರಷ್ಟು ಉಚಿತವಾಗಿ ನಡೆಸುತ್ತಾರೆ. ಅಲ್ಲಿ ಬಿಲ್ಲಿಂಗ್ ಸೆಕ್ಷನ್ನೇ ಇಲ್ಲ, ರಶೀದಿ ಪುಸ್ತಕವೂ ಇಲ್ಲ. ಆಸ್ಪತ್ರೆಯ ಉದ್ಘಾಟನಾ ಸಮಾರಂಭದಲ್ಲಿ ಮೂರು ಜನ ಮುಖ್ಯಮಂತ್ರಿಗಳಾದ ಶ್ರೀ ವಿಲಾಸರಾವ್ ಪಾಟೀಲ್, ಶ್ರೀ ಚಂದ್ರಬಾಬು ನಾಯ್ಡು ಮತ್ತು ಶ್ರೀ ಎಸ್.ಎಂ. ಕೃಷ್ಣ ಇವರುಗಳು ಕುಳಿತಿದ್ದಾಗ ಬಾಬಾರವರು ಹೇಳಿದ್ದಿಷ್ಟೇ; "ಒಬ್ಬ ಸನ್ಯಾಸಿಯಾಗಿ ನನಗೆ ನಡೆಸುವುದಕ್ಕಾಗುತ್ತದೆ, ನಿಮಗೇಕೆ ಕಷ್ಟವಾಗುತ್ತದೆ" ಎಂದು ಹೇಳುತ್ತಾರೆ. ನನಗೆ ಆ ರೀತಿಯ ಒಂದು ಮಾರ್ಗದರ್ಶನವಿದ್ದು, ಅಂತಹವರ ನೆರಳಿನಲ್ಲಿ ನೋಡಿದವನಾಗಿದ್ದು, ಜನರಿಗೆ ಒಳ್ಳೆಯದನ್ನು ಮಾಡಬೇಕೆಂಬ ಒಂದು ಆಸೆಯಿದೆ. ನಾನು ರಾಜಕಾರಣದಲ್ಲಿ ದಿ॥ ಶ್ರೀ ದೇವರಾಜ ಅರಸುರವರ ನೆರಳಿನಲ್ಲಿ ಬೆಳೆದಿದ್ದೇನೆ. ಅವರಿಗೆ ಕೆಲವು ಹುಚ್ಚುಗಳಿದ್ದವು. ಅವರು ಯಾರ್ಯಾರಿಗೆ ಏನೇನು ಬಿಟ್ಟು ಹೋಗಿದ್ದಾರೋ ಗೊತ್ತಿಲ್ಲ. ಆದರೆ ನನಗೆ ಕೆಲವು ಹುಚ್ಚುಗಳನ್ನು ಬಿಟ್ಟು ಹೋಗಿದ್ದಾರೆ. ಸಂಸ್ಕೃತಿಯನ್ನು, ಸಂಸ್ಕಾರವನ್ನು ನನಗೆ ಹೇಳಿಕೊಟ್ಟವರು, ಸಂಸದೀಯ ಕಲಾಪಗಳ ಬಗ್ಗೆ ಹೇಳಿಕೊಟ್ಟವರು ನನಗೆ ಪಿತೃಸಮಾನರಾದ ಶ್ರೀ ಕೆ.ಹೆಚ್. ರಂಗನಾಥ್‌ರವರು. ಹಾಗಾಗಿ ನನ್ನ ಭಾಷೆ, ಮಾತು, ನಡವಳಿಕೆ ಮತ್ತು ಅಭಿಪ್ರಾಯಗಳು ಎಲ್ಲವೂ ಕೂಡ ಎಲ್ಲೋ ಒಂದು ಕಡೆ ಆ ದಾರಿಯಲ್ಲಿ ಹೋಗುತ್ತವೆ. ನಾನು ಒಂದು ಸಲ ವಿಧಾನಸಭೆಯಲ್ಲಿ ಬಹಳ ಆವೇಶಕ್ಕೊಳಗಾಗಿಬಿಟ್ಟೆನು. ಆಗ ಶ್ರೀ ರಂಗನಾಥ್‌ರವರು ಬದುಕಿದ್ದು, ನನ್ನನ್ನು ಕರೆದು ಹೀಗೆ ಹೇಳಿದರು. "ನೀನು ಹೀಗೆ ಮಾಡುವುದಾದರೆ ಇನ್ನು ಮುಂದೆ ಎಲ್ಲಿಯೂ ಕೂಡ ನೀನು ನನ್ನ ಜೊತೆಗಿದ್ದೆ, ನಿನ್ನನ್ನು ತಯಾರು ಮಾಡಿದ್ದು ನಾನು ಎಂದು ಹೇಳಬಾರದು" ಎಂದು ಒಂದು ನಿರ್ಬಂಧವನ್ನು ಹಾಕಿದರು. ಅದೇ ಕೊನೆ, ಅತ್ಯಂತ ನಮ್ರತೆಯಿಂದ ಅವರನ್ನು ನೆನೆಸಿಕೊಂಡು ನನ್ನನ್ನು ನಾನು ನಿಗ್ರಹಿಸಿಕೊಳ್ಳುತ್ತೇನೆ. ಮಾನ್ಯ ಪ್ರತಿಪಕ್ಷದ ನಾಯಕರು ನಿನ್ನೆ ದಿವಸ ಪ್ರತಿಕ್ರಿಯಿಸುತ್ತಾ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ; ನಾನು ಕೊಲೆಗಡುಕ, ನನಗೆ ಮಕ್ಕಳಿಲ್ಲ, ವಯಸ್ಸು ಕೂಡ ಆಗಿದೆ ಎಂದರು. ಈಗ ನನಗೆ ಸುಮಾರು 68 ವರ್ಷ ವಯಸ್ಸಾಗಿದ್ದು, ಇತ್ತೀಚೆಗೆ ಸ್ವಲ್ಪ ಮರೆವು ಕೂಡ ಇದೆ. ಯಾರ ಕೊಲೆಯಾಗಿದೆ ಎಂಬುದು ನನಗೆ ನೆನಪಿಲ್ಲ. ನನಗೆ ತಿಳಿದ ಹಾಗೆ ಒಂದು ಕೊಲೆಯಾದರೆ ಅದು ಐ.ಪಿ.ಸಿ ಸೆಕ್ಷನ್ ಪ್ರಕಾರ cognizable offence ಆಗುತ್ತದೆ. ಪೊಲೀಸ್ ಸ್ಟೇಷನ್‌ಗೆ ಹೋಗಬೇಕು, ಅವರು ತಕ್ಷಣವೇ ಮ್ಯಾಜಿಸ್ಟ್ರೇಟ್‌ಗೆ ಮೆಸೇಜ್ ಕೊಡಬೇಕು. ಮ್ಯಾಜಿಸ್ಟ್ರೇಟ್‌ರವರು ಸಿ.ಆರ್ ನಂಬರನ್ನು ಇಟ್ಟುಕೊಳ್ಳುತ್ತಾರೆ. ಇದು ಮರಣದಂಡನೆ ಹಾಗೂ ಜೀವಾವಧಿ ಶಿಕ್ಷೆ ಕೊಡುವ ವ್ಯಾಪ್ತಿಯಲ್ಲಿರುವುದರಿಂದ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅದನ್ನು ವಿಚಾರಣೆ ಮಾಡಲು ಮ್ಯಾಜಿಸ್ಟ್ರೇಟ್‌ರವರಿಗೆ ಬರುವುದಿಲ್ಲ, ಅದನ್ನು ಸೆಷನ್ಸ್ ಕೋರ್ಟ್‌ಗೆ ಕಳುಹಿಸುತ್ತಾರೆ. ಆಗ ಸಿ.ಆರ್ ನಂಬರ್ ಹೋಗಿ ಎಸ್.ಸಿ ನಂಬರ್ ಬರುತ್ತದೆ. ಯಾವ ಪೋಲೀಸ್ ಸ್ಟೇಷನ್, ಯಾವ ಸಿ.ಆರ್. ನಂಬರ್, ಯಾವ ಎಸ್.ಸಿ ನಂಬರ್, ಮೃತರಾದವರು ಯಾರು, ನಾನು ಎಷ್ಟನೇ ಆರೋಪಿ, ಒಬ್ಬನೇ ಆರೋಪಿಯೇ ಅಥವಾ ಜೊತೆಗೆ ಬೇರೆಯವರು ಇದ್ದಾರಾ? ಇದ್ಯಾವುದೂ ನನಗೆ ಗೊತ್ತಿಲ್ಲ. ನಿನ್ನೆ ದಿವಸ ನನ್ನ ಮಗ ನನಗೆ ಕರೆ ಮಾಡಿ ‘ಏನಪ್ಪಾ ಇದು ಯಾವುದು? ನನಗೆ ಗೊತ್ತೇ ಇಲ್ಲ, ನೀವು ಹೇಳಿಯೂ ಇಲ್ಲ. ಬೇಲ್ ಆದರೂ ತೆಗೆದುಕೊಳ್ಳಬಹುದಿತ್ತಲ್ಲ’ ಎಂದು ಕೇಳಿದನು.

(951)14-11-2017/1-10/ಕೆಹೆಚ್/ಆರ್‌ಎನ್

**ಶ್ರೀ ಕೆ.ಆರ್.ರಮೇಶ್ ಕುಮಾರ್ (ಮುಂದು):-** ಆಗ “ಗೊತ್ತಿಲ್ಲ ಮಗಾ, ನನಗೆ ವಯಸ್ಸಾಗಿ ಬಿಟ್ಟಿದೆ. ನೀನು ಒಮ್ಮೆ ಪರಿಶೀಲನೆ ಮಾಡಿ ನೋಡಪ್ಪಾ” ಎಂದು ಹೇಳಿದೆ. ಒಂದು ವೇಳೆ “ಅವರ ವಿಷಯ ಏಕಪ್ಪಾ, ಅವರು ದೊಡ್ಡವರಪ್ಪಾ, ಅವರು ರಾಜ್ಯದ ಉಪ ಮುಖ್ಯಮಂತ್ರಿಗಳಾಗಿದ್ದವರು, ಭಾರತೀಯ ಜನತಾ ಪಕ್ಷದ ರಾಜ್ಯದ ಅಧ್ಯಕ್ಷರಾಗಿದ್ದರು, ಅವರು ಮೇಲ್ಮನೆಯ ಪ್ರತಿ ಪಕ್ಷದ ನಾಯಕರು, ಬಹುಶಃ ನಮ್ಮ ಸೌಭಾಗ್ಯವಿದ್ದರೆ ಅವರು ಸಂಭವನೀಯ ಮುಖ್ಯಮಂತ್ರಿ, ಅಂಥವರ ವಿಷಯವನ್ನು ನಾವು ಮಾತನಾಡಬಾರದು, ನಾವು ಅಷ್ಟು ಎತ್ತರಕ್ಕೆ ಬೆಳೆದಿಲ್ಲ” ಎಂದು ಹೇಳಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ,

(ಗೊಂದಲ)

**ಶ್ರೀ ಕೆ.ಆರ್.ರಮೇಶ್ ಕುಮಾರ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಶ್ರೀನಿವಾಸ ಪೂಜಾರಿಯವರೆ, ದಯಮಾಡಿ. . . .

**ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು, ಅವರ ಬಗ್ಗೆ ಒಳ್ಳೆಯದನ್ನೇ ಹೇಳುತ್ತಿದ್ದಾರೆ. ಅವರು ಸ್ವಲ್ಪ ಸಮಧಾನವಾಗಿ ಕೇಳಲಿ.

(ಗೊಂದಲ)

**ಶ್ರೀ ಕೆ.ಆರ್.ರಮೇಶ್ ಕುಮಾರ್:-** ಮಾನ್ಯ ಶ್ರೀನಿವಾಸ ಪೂಜಾರಿಯವರೆ, ದಯಮಾಡಿ. . .

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಮಾನೆ ಶ್ರೀನಿವಾಸ್**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಒಳ್ಳೆಯ ವಿಚಾರಗಳನ್ನೆ ಹೇಳುತ್ತಿದ್ದಾರೆ. ಅವರ ಬಗ್ಗೆ ಇಷ್ಟೆಲ್ಲಾ ಹೊಗಳ ಮಾತನಾಡುತ್ತಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ಅವರು ಏಕೆ ಗಲಾಟೆ ಮಾಡುತ್ತಿದ್ದಾರೆ?

**ಶ್ರೀ ಮಾನೆ ಶ್ರೀನಿವಾಸ್**:- ಮಾನ್ಯ ಸಭಾಪತಿಯವರೇ, ಆಯಿತು, ಕುಳಿತುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ಅವರು ನಮಗೇಕೆ ಕುಳಿತುಕೊಳ್ಳಿ ಎಂದು ಹೇಳುತ್ತಿದ್ದಾರೆ?

**ಶ್ರೀ ಕೆ.ಆರ್.ರಮೇಶ್ ಕುಮಾರ್**:- ಮಾನ್ಯ ಸಭಾಪತಿಯವರೇ, ಇಲ್ಲ. ಆ ರೀತಿಯಾಗಿ ಅವರು ಹೇಳಿದ್ದು ತಪ್ಪು. ನಾನು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ನನಗೆ ಅರ್ಥವಾಗಲಿಲ್ಲ. ನಾನು ಕುಳಿತುಕೊಳ್ಳುತ್ತೇನೆ. ಅವರು ಏಕೆ ಮೈಮೇಲೆ ಬೀಳುತ್ತಿದ್ದಾರೆ?

**ಶ್ರೀ ಕೆ.ಆರ್.ರಮೇಶ್ ಕುಮಾರ್**:- ಮಾನ್ಯ ಸಭಾಪತಿಯವರೇ, ನಾವು ದೊಡ್ಡವರ ವಿಚಾರದಲ್ಲಿ ಆತುರಪಡಬಾರದಪ್ಪ, ಏನೋ ನಮ್ಮಿಂದ ತಪ್ಪುಗಳು ಆಗಿರಬಹುದು. "ನೀನು ಒಂದು ವೇಳೆ ಕೊಲೆಗಡುಕನಾದರೆ, ನಾನು ನಾಗರೀಕವಾಗಿ ಬದುಕುತ್ತಿದ್ದೇನೆ, ನಾವಿಬ್ಬರೂ ಒಟ್ಟಿಗೆ ಬದುಕುವುದಕ್ಕೆ ಆಗುವುದಿಲ್ಲ" ಎಂದು ನನ್ನನ್ನು ನನ್ನ ಮಗ ಕೇಳುತ್ತಾನೆ. "ಅದಕ್ಕೆ ಏನು ಮಾಡುವುದಕ್ಕೆ ಆಗುತ್ತದೆ? ಒಂದು ವೇಳೆ ನಿನಗೆ ಏನಾದರೂ ಆ ರೀತಿಯ ಮಾಹಿತಿ ಸಿಕ್ಕಿದರೆ ನಿನ್ನ ಪಾಡಿಗೆ ನೀನು ಇರಪ್ಪಾ. ನಾನು ಹೇಗೋ ತಲೆಮರೆಸಿಕೊಂಡು ಬದುಕುತ್ತೇನೆ" ಎಂದು ನನ್ನ ಮಗನಿಗೆ ಹೇಳಿದೆ. ಅದಕ್ಕೆ ಏನು ಮಾಡುವುದಕ್ಕೆ ಆಗುತ್ತದೆ?

**ಶ್ರೀ ಡಿ.ಕೆ.ಶಿವಕುಮಾರ್ (ಇಂಧನ ಸಚಿವರು)**:- ಮಾನ್ಯ ಸಭಾಪತಿಯವರೇ, ಸಚಿವರು ಮಕ್ಕಳು ಇಲ್ಲವೆಂದು ಹೇಳಿದರು.

**ಶ್ರೀ ಕೆ.ಆರ್.ರಮೇಶ್ ಕುಮಾರ್**:- ಮಾನ್ಯ ಸಭಾಪತಿಯವರೇ, ನನಗೆ ಇಬ್ಬರು ಮಕ್ಕಳಿದ್ದಾರೆ. ಮಕ್ಕಳು ಇರುವ ವಿಷಯ ಅವರಿಗೆ ಗೊತ್ತಿಲ್ಲ. ಮಕ್ಕಳು ಇದ್ದಾರೋ, ಇಲ್ಲವೋ ಎನ್ನುವುದು ನನಗೆ ಈಗ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಗೊಂದಲವಾಗುತ್ತಿದೆ. ನನಗೆ ಒಬ್ಬಳು ಮಗಳಿದ್ದಾಳೆ. ಸರ್ಕಾರಿ ಕಾನೂನು ಕಾಲೇಜಿನಲ್ಲಿ ಕಾನೂನು ಪದವಿಯನ್ನು ಪಡೆದುಕೊಂಡು, ಮದುವೆ ಆದ ಮೇಲೆ ಅಮೇರಿಕಾದ ಬೋಸ್ಟನ್‌ನಲ್ಲಿ ವಾಸವಾಗಿದ್ದಾಳೆ. ಅಲ್ಲಿ ಸ್ನಾತಕೋತ್ತರ ಪದವಿಯನ್ನು ಮಾಡಿದ್ದಾಳೆ ಮತ್ತು ವಕೀಲ ವೃತ್ತಿಯಲ್ಲಿದ್ದಾಳೆ. ಅಳಿಯ ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದಾರೆ. ನನಗೆ ಇಬ್ಬರು ಮಕ್ಕಳೆಂದರೆ, ಅವರಿಗೂ ಇಬ್ಬರೂ ಮಕ್ಕಳಿದ್ದಾರೆ. ಮಗ ಮಿಲಿಟರಿ ಸ್ಕೂಲಿನಲ್ಲಿ ಓದಿದ್ದಾನೆ. ಮಿಲಿಟರಿ ಸ್ಕೂಲಿನಲ್ಲಿ ಮಿಲಿಟರಿ ಸೇವೆಯಲ್ಲಿರುವವರಿಗೆ ಮಾತ್ರ ಸೀಟುಗಳನ್ನು ಕೊಡುತ್ತಾರೆ. ಶೇಕಡಾ ೫ ರಷ್ಟು ಸಿವಿಲಿಯನ್ ಕೋಟಾದವರಿಗೆ ಕೊಡುತ್ತಾರೆ. All India Competition Examinations ಪರೀಕ್ಷೆಯಲ್ಲಿ ಅರ್ಹತೆಯನ್ನು ಪಡೆದುಕೊಂಡು, ನನ್ನ ಮಗ ಮಿಲಿಟರಿ ಸ್ಕೂಲಿನಲ್ಲಿ ಓದಿದ. ಅವನು ಪಿ.ಯು.ಸಿ. ವ್ಯಾಸಂಗ ಮಾಡಬೇಕಾದರೆ ಪಾಕಿಸ್ತಾನದ ಗಡಿಯಿಂದ 7 ಕಿ.ಮೀ ದೂರದಲ್ಲಿನ ರಾಜಸ್ಥಾನದ ಶ್ರೀಗಂಗಾನಗರದಲ್ಲಿ ಓದಿದ. ಅವನು ಮಿಲಿಟರಿಗೆ ಹೋಗಬೇಕೆಂದು ನನ್ನ ಆಸೆಯಾಗಿತ್ತು. ಆದರೆ, ಅವನು ಬೇರೆ ಏನೋ ತೀರ್ಮಾನವನ್ನು ತೆಗೆದುಕೊಂಡ. ಅವನು Saginaw Valley ವಿಶ್ವವಿದ್ಯಾನಿಲಯದಲ್ಲಿ ಬಿ.ಬಿ.ಎಂ ಮಾಡಿಕೊಂಡು ಬಂದ.

ಮಾನ್ಯ ಸಭಾಪತಿಯವರೇ, ನಾವು ಓಟ್ ಕೇಳುವವರು ಅಲ್ಲವೇ? ನಮಗೆ ಮಾನ, ಮರ್ಯಾದೆ ಮತ್ತು ಲಜ್ಜೆಯೆಂದರೆ ಏನು? ನಾನು ಮಾನಗೆಟ್ಟವನು. ನನ್ನ ಮಕ್ಕಳು ಮರ್ಯಾದೆಯಿಂದ ಬದುಕುತ್ತಿದ್ದಾರೆ. ನನಗೆ ನಿನ್ನೆಯಿಂದ ನಿದ್ದೆ ಬಂದಿಲ್ಲ. ಬಹಳ ಗೊಂದಲ ಇದೆ. ನನ್ನ ಬೇಜವಬ್ದಾರಿತನದಿಂದ, ನನ್ನ ಹಠದಿಂದ ಒಂದು ವೇಳೆ ಮೂರು ಜನರ ಪ್ರಾಣ ಹೋಗಿದ್ದರೆ, I am directly responsible and I become a murderer. ನನಗೆ ಚಿಕ್ಕಂದಿನಿಂದ ಸಾರ್ವಜನಿಕರ ಸಭೆಗಳಿಗೆ ಹೋಗುವುದು, ಅಲ್ಲಿನ ಉಪನ್ಯಾಸವನ್ನು ಕೇಳುವುದು ಅಭ್ಯಾಸವಿತ್ತು. ಅದು ನನಗೆ ಬಹಳ ಖುಷಿಯನ್ನು ಕೊಡುತ್ತಿತ್ತು. ಮಾನ್ಯ ವಾಜಪೇಯಿರವರ ಮಾತುಗಳನ್ನು ಕೇಳುತ್ತಿದ್ದೆ. ಚಕ್ರವರ್ತಿ ರಾಜ್‌ಗೋಪಾಲಾಚಾರಿರವರ ಮಾತುಗಳನ್ನು ಕೇಳಿದ್ದೇನೆ. ಶ್ರೀ ಮೀನು ಮಸಾನಿ, ಶ್ರೀ. ಇ.ಎಂ.ಎಸ್. ನಂಬೂದರಿಪಾದ್, ಶ್ರೀ. ವಿ.ಕೆ. ಕೃಷ್ಣ ಮೆನನ್, ಶ್ರೀ ಬಲರಾಜ್ ಮಧೋಕ್, ಎಂಥೆಂಥವರ ಮಾತುಗಳನ್ನು ಕೇಳಿದ್ದೇನೆ. ಆಮೇಲೆ ಸೈದ್ಧಾಂತಿಕವಾಗಿ ನಾನು ಎಂದಿಗೂ ಸಹ ಆರ್.ಎಸ್.ಎಸ್ ಮತ್ತು ಬಿ.ಜೆ.ಪಿ ಯವರ ಜೊತೆಗೆ ಅಭಿಪ್ರಾಯ ಮತ್ತು ಸಹಮತವನ್ನು ವ್ಯಕ್ತಪಡಿಸಿದವನಲ್ಲ. ಆರ್.ಎಸ್.ಎಸ್. ಕಾರ್ಯಕರ್ತರು ಸೈದ್ಧಾಂತಿಕವಾಗಿ ಏನೇ ಇರಲಿ, ಅವರ ಸರಳತೆ, ಪ್ರಾಮಾಣಿಕತೆ, ಅವರದೇ ಆದಂತಹ ನಿಲುವು ಬಹಳ ಇದೆ. ತಮ್ಮ ಮುಖೇನ ಅವರಲ್ಲಿ ನಾನೊಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ನಾನು ಮಾಡಿರುವಂತಹದ್ದು, ಜನ ವಿರೋಧಿಯಲ್ಲ. ಅವರು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆರ್.ಎಸ್.ಎಸ್. ಕಾರ್ಯಕರ್ತರ ಒಂದು ಸಭೆಯನ್ನು ಸೇರಿಸಿ, ಅವರೂ ಸಹ ಮಾತನಾಡಲಿ, ನಾನು ಸಹ ಮಾತನಾಡುತ್ತೇನೆ. ಅವರೆಲ್ಲ ಸೇರಿ ನಾನು ಮಾಡಿರುವುದು ತಪ್ಪೋ–ಸರಿಯೋ ಎಂಬ ಬಗ್ಗೆ ತೀರ್ಮಾನವನ್ನು ಕೊಡಲಿ. ಅವರುಗಳು "ಇದರಿಂದ ಬಡವರಿಗೆ, ಜನರಿಗೆ ತೊಂದರೆಯಾಗುತ್ತದೆ, ರಾಜ್ಯವನ್ನು ಹಠಮಾರಿತನದಿಂದ ನಾಶ ಮಾಡಬೇಡಿ, ವೈದ್ಯರೆಲ್ಲ ಹೊರಟು ಹೋಗುತ್ತಾರೆಂದು" ಹೇಳಿದರೆ, ನಾನು ಅಲ್ಲೇ ಸಾರ್ವಜನಿಕ ಜೀವನದಿಂದಲೇ ನಿವೃತ್ತಿ ಆಗಿಬಿಡುತ್ತೇನೆ. ನನಗೆ ನ್ಯಾಯಾಂಗ ವಿಚಾರಣೆ ಬೇಡ. ಸಿ.ಐ.ಡಿ. ವಿಚಾರಣೆ ಬೇಡ. ಸದನ ಸಮಿತಿಯ ವಿಚಾರಣೆ ಏನು ಬೇಡ? ನಾನು ಕೆಲವು ಆದರ್ಶಗಳನ್ನು ನಂಬಿಕೊಂಡು ಇಲ್ಲಿಯವರೆವಿಗೆ ಬಂದಿದ್ದೇನೆ. ಅವರಿಗೆ ಏನು ಸಾಕ್ಷ್ಯಾಧಾರಗಳು ಸಿಕ್ಕಿತೋ, ಆ ರೀತಿ ಏಕೆ ಮಾತನಾಡಿದರೋ ನನಗೆ ಗೊತ್ತಿಲ್ಲ. ನಾನು ಅವರ ಮೇಲೆ ಹಕ್ಕುಚ್ಯುತಿಯನ್ನು ಮಂಡಿಸಬಹುದಿತ್ತು. ಹಕ್ಕುಚ್ಯುತಿ, obituary ಇದೆಲ್ಲಾ ಏನು ಎಂದು ನಂತರ ನನಗನಿಸಿತು. It has lasts its sanctity in our forum. ನಿನ್ನೆಯ ದಿವಸ obituary ಯನ್ನು ಗಮನಿಸಿದರಲ್ಲವೇ! ನೀವು ಸಂತಾಪ ಸೂಚನೆಯನ್ನು ಮಂಡಿಸಲೇಬೇಕು? ಆಡಳಿತ ಪಕ್ಷದ ಕಡೆ ಮತ್ತು ವಿರೋಧ ಪಕ್ಷದ ಕಡೆ ಸಾಂಪ್ರದಾಯಿಕವಾಗಿ ನಾಲ್ಕು ಮಾತುಗಳನ್ನು ಹೇಳಿ, ಕುಳಿತುಕೊಳ್ಳಬೇಕು. ಹೃದಯದಿಂದ ಮಾತುಗಳೇ ಬರುವುದಿಲ್ಲ. ಆಮೇಲೆ ಅಪರೂಪಕ್ಕೆ ಮಸೂದೆ, ತಿದ್ದುಪಡಿ ವಿಷಯದಲ್ಲಿ ನನ್ನ ಮನಸ್ಸಿಗೆ ಒಂದು ಸಮಧಾನ ಇದೆ. ಕಾಂಗ್ರೆಸ್, ಜೆ.ಡಿ.ಎಸ್., ಬಿ.ಜೆ.ಪಿ., ಎಲ್ಲ ಪಕ್ಷಗಳಲ್ಲೂ ಇದನ್ನು ಸ್ವಾಗತಿಸುವವರು ಇದ್ದಾರೆ. ವಿರೋಧಿಸುವವರು ಇದ್ದಾರೆ. ಈ ರೀತಿಯ ಒಂದು ಒಟ್ಟು ಅಭಿಪ್ರಾಯವಿದೆಯಲ್ಲಾ, ಎಷ್ಟು ತೀವ್ರ ವಿರೋಧವಿದ್ದರೂ ಕೂಡ ಈ ವಿಷಯದಲ್ಲಿ ಸ್ವಲ್ಪ ತಡೆಯೋಣ, ನಿಧಾನಕ್ಕೆ ಹೋಗೋಣ, ಇದನ್ನು dilute ಮಾಡೋಣ ಎನ್ನುವಂತಹದ್ದು ನಿನ್ನೆಯ ದಿವಸ obituary reference ಆದಮೇಲೆ ಈ ರೀತಿಯ ಏಕತೆ ಕಾಣಿಸಿತು. I am very glad. ತಾವು ಅಗತ್ಯಕ್ಕಿಂತ ಹೆಚ್ಚು ಮಾತನಾಡುವುದಕ್ಕೆ ಅನುಮತಿಯನ್ನು ಕೊಟ್ಟಿದ್ದೀರಿ. ನೀವು ಕೊಟ್ಟಂತಹ ಸ್ವಾತಂತ್ರ್ಯವನ್ನು ಮತ್ತು ಸಲಗೆಯನ್ನು ದುರುಪಯೋಗ ಮಾಡಿಕೊಳ್ಳುವುದು ನನ್ನ ಉದ್ದೇಶವಲ್ಲ. ಮಾನ್ಯ ಪ್ರತಿಪಕ್ಷದ ನಾಯಕರು ದೊಡ್ಡ ಮನಸ್ಸು ಮಾಡಿ, ಸಿ.ಆರ್. ನಂಬರ್, ಎಸ್.ಸಿ. ನಂಬರ್, ಆ ಪ್ರಕರಣವು ಇತ್ಯರ್ಥವಾಯಿತೆ? Conviction ಆಯಿತೆ? Acquittal ಆಯಿತೆ? ನನಗೆ ವಯಸ್ಸಾಗಿ ಮರೆವು ಬಂದಿರುವುದರಿಂದ, by chance conviction ಆಗಿ ಇಲ್ಲಿ ಎಲ್ಲಾದರೂ ತಿರುಗಾಡುತ್ತಿದ್ದರೆ, ಬೇಲ್ ಆದರೂ ತೆಗೆದುಕೊಳ್ಳಬೇಕಲ್ಲವೇ? ಅವರು ಮಾಹಿತಿಯನ್ನು ನೀಡಿದರೆ ಸಹಾಯವಾಗುತ್ತದೆ. ತಾವು ಇದೇನೂ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮೊದಲನೇ ಬಾರಿ ಅಲ್ಲ. ಅನೇಕ ಸಲ ಹೇಳಿದ್ದೀರಿ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಕನ್ನಡ ಭಾಷೆಯಲ್ಲಿ ಬಹಳ ಪ್ರಬುದ್ಧತೆ ಇದೆ. ಅತ್ಯಂತ ಉತ್ಕೃಷ್ಟವಾದಂತಹ ಕನ್ನಡ ಭಾಷೆಯನ್ನು ಬಲ್ಲವರಾಗಿದ್ದಾರೆ. ನನ್ನ ಮಾತೃ ಭಾಷೆ ತೆಲುಗು. ನಾನು ಬೆಂಗಳೂರಿಗೆ ವ್ಯಾಸಂಗ ಮಾಡುವುದಕ್ಕೆ ಬಂದ ಮೇಲೆ ಕನ್ನಡ ಭಾಷೆ ಕಲಿಯುವುದಕ್ಕೆ ಪ್ರಯತ್ನ ಮಾಡಿದೆ. ಬಹುಶಃ ನನ್ನ ಭಾಷೆ ಅಷ್ಟು ಪರಿಶುದ್ಧವಾಗಿ ಇರುವುದಕ್ಕೆ ಸಾಧ್ಯವಿಲ್ಲ. ವಿರೋಧ ಪಕ್ಷದ ನಾಯಕರು ದೊಡ್ಡ ಮನಸ್ಸು ಮಾಡಿ ಮತ್ತು ನನ್ನ ಮೇಲೆ ಕರುಣೆ ಇಟ್ಟು ನನಗೆ ಮಾರ್ಗದರ್ಶನವನ್ನು ನೀಡಿದರೆ ಮುಂದೆ ನನಗೆ ಪರಿಹಾರವನ್ನು ಕಂಡುಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ದಿವಂಗತರಾದ ಶ್ರೀ ಕೆ.ಹೆಚ್.ರಂಗನಾಥ್ ರವರು ನನಗೆ ಹೀಗೆ ಮಾತನಾಡುವುದಕ್ಕೆ ಹೇಳಿಕೊಟ್ಟಿರುವುದು. ಅವರನ್ನು ಪಿತೃ ಸಮಾನರು ಎಂದು ನಾನು ಹೇಳಿದ್ದೇನೆ. ನಾನು ಒಂದು ವೇಳೆ ಈ ಸಂದರ್ಭದಲ್ಲಿ ಮಾತನಾಡುವಾಗ ಏನಾದರೂ ತಪ್ಪು ಮಾತನಾಡಿದ್ದರೆ, ಪಿತೃಲೋಕದಲ್ಲಿ ಇರುವಂತಹ ನನ್ನ ತಂದೆಯ ಸಮಾನರಾದ ಶ್ರೀ ಕೆ.ಹೆಚ್.ರಂಗನಾಥ್ ರವರ ಕ್ಷಮೆಯನ್ನು ಕೋರುತ್ತೇನೆ ಮತ್ತು ನಿಮಗೆ ನಮಸ್ಕಾರವನ್ನು ಹೇಳುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನನ್ನ ಹೆಸರನ್ನು ಮಾನ್ಯ ಸಚಿವರು ಪ್ರಸ್ತಾಪ ಮಾಡಿದ್ದಾರೆ. ನಾನು ಚರ್ಚೆ ಮಾಡುವುದಕ್ಕೆ ಹೋಗುವುದೇ ಇಲ್ಲ.

(ಗೊಂದಲ)

**ಸಭಾಪತಿಯವರು:–** ಈಗ ಇದರ ಬಗ್ಗೆ ಚರ್ಚೆ ಬೇಡ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ.

**ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ಶೂನ್ಯ ವೇಳೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿದೆಯೇ?

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಸಚಿವರೆ, ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೇ, ಶೂನ್ಯ ವೇಳೆಯಲ್ಲಿ ಚರ್ಚೆ ಮಾಡುವ ಅಗತ್ಯವಿಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ನಾನು ಖಂಡಿತವಾಗಿ ಚರ್ಚೆಗೆ ಹೋಗುವುದಿಲ್ಲ. ಮಾನ್ಯ ಸಚಿವರು ನನ್ನ ಹೆಸರನ್ನು ಪ್ರಸ್ತಾಪ ಮಾಡಿದ್ದಾರೆ. ನನಗೆ ಮಾತನಾಡಲು ಅವಕಾಶವನ್ನು ಕೊಡಬೇಕು.

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೇ, ಶೂನ್ಯ ವೇಳೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿದೆಯೇ?

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ತಾವು ಶೂನ್ಯ ವೇಳೆಯಲ್ಲಿ ಅವಕಾಶವನ್ನು ಕಲ್ಪಿಸಿಕೊಟ್ಟರೆ ಅವಕಾಶವಿದೆ.

(ಗೊಂದಲ)

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೇ, ಶೂನ್ಯ ವೇಳೆಯಲ್ಲಿ ಪ್ರಸ್ತಾಪವಾದ ವಿಷಯದ ಮೇಲೆ ಚರ್ಚೆಗೆ ಅವಕಾಶ ಕೊಡಬಾರದು. ಇದು ಹೊಸ ಸಂಪ್ರದಾಯವಾಗಬಾರದು. ಸದನದ ನಿಯಮಾವಳಿಗಳನ್ನು ಮುರಿಯಬಾರದು. ದಯಮಾಡಿ, ಈ ಚರ್ಚೆಯನ್ನು ಬೇರೆ ರೂಪದಲ್ಲಿ ತೆಗೆದುಕೊಳ್ಳಬಹುದು. ಈಗ ಶೂನ್ಯ ವೇಳೆಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡುವುದು ಸರಿಯಲ್ಲ. ದಯಮಾಡಿ ತಾವು ಸರಿಯಾದ ನಿರ್ಣಯವನ್ನು ತೆಗೆದುಕೊಳ್ಳಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ನಾನು ಚರ್ಚೆಗೆ ಹೋಗುವುದಿಲ್ಲ. ನಾನು ಒಂದು ನಿಮಿಷವನ್ನು ಮಾತ್ರ ತೆಗೆದುಕೊಳ್ಳುತ್ತೇನೆ. ಅದಕ್ಕೆ ಅವಕಾಶವನ್ನು ಮಾಡಿಕೊಡಿ.

**ಶ್ರೀ ಹೆಚ್.ಎಂ.ರೇವಣ್ಣ (ಸಾರಿಗೆ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಈಶ್ವರಪ್ಪನವರು ಮಾತನಾಡಿರುವ  ಬಗ್ಗೆಯೇ ಒಂದು ಪಟ್ಟಿಯನ್ನು ಮಾಡೋಣ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ಅಷ್ಟೆ ಮಾತನಾಡುತ್ತೇನೆ.

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಈಶ್ವರಪ್ಪನವರು ಅಧಿವೇಶನದಲ್ಲಿ ಮಾತನಾಡಿದ್ದಾರೆ ಎನ್ನುವುದೇ ಒಂದು ಅಧಿವೇಶನ ಮಾಡಬೇಕಾಗುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಅವರೆ ಮಾತನಾಡಲಿ.

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಕೇಳಿರುವಂತಹ ವಿಚಾರಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಇದರ ಮೇಲೆ ಚರ್ಚೆ ಮಾಡುವುದಕ್ಕೆ ನಿಯಮಾವಳಿಯಲ್ಲಿ ಅವಕಾಶವಿಲ್ಲ. ಅವರು ಏನಾದರೂ ಕೇಳುವುದಿದ್ದರೆ ಬೇರೆ ರೂಪದಲ್ಲಿ ಕೇಳಲಿ ಎಂದು ತಮ್ಮಲ್ಲಿ ಮನವಿ ಮಾಡುತ್ತೇನೆ. ತಾವು ದಯಮಾಡಿ ಇದರ ಬಗ್ಗೆ ಹೇಳಬೇಕು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ವಿರೋಧ ಪಕ್ಷದ ಸಚೇತಕರು):–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರ ಮಾತನ್ನು ನಿಲ್ಲಿಸುವಂತಹದ್ದು ಯಾವಾಗಿನಿಂದ ಪ್ರಾರಂಭವಾಯಿತು. ಅವರು ಮಾತನಾಡುತ್ತಲೇ ಇದ್ದಾರೆ. ದಯವಿಟ್ಟು ಅವರಿಗೆ ಮಾತನಾಡುವುದಕ್ಕೆ ಬಿಡಬೇಕು.

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೇ, ಶೂನ್ಯ ವೇಳೆಯಲ್ಲಿ ಮಾತನಾಡುವುದಕ್ಕೆ ಅವಕಾಶವಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ಅವಕಾಶವನ್ನು ಕೊಟ್ಟರೆ ನಾನು ಮಾತನಾಡುತ್ತೇನೆ. ಅವಕಾಶವನ್ನು ಕೊಡಲಿಲ್ಲವೆಂದರೆ ನಾನು ಮಾತನಾಡುವುದಿಲ್ಲ.

**ಶ್ರೀ ಎಂ.ಆರ್. ಸೀತಾರಾಂ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಶೂನ್ಯ ವೇಳೆಯಲ್ಲಿ ಅವಕಾಶವಿಲ್ಲದಿರುವುದರಿಂದ . . . .

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರು, ಒಂದು ನಿಮಿಷ ಮಾತನಾಡಲು ಅವಕಾಶವನ್ನು ಕೊಡಿ ಎಂದು ಕೇಳುತ್ತಿದ್ದಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಹಿರಿಯರಾದ ಮಾನ್ಯ ರಮೇಶ್ ಕುಮಾರ್‌ರವರು ಅವರ ಭಾವನೆಗಳನ್ನು ಸದನದಲ್ಲಿ ಹಂಚಿಕೊಂಡಿದ್ದಾರೆ. ಅವರ ಭಾವನೆಗಳನ್ನು ಹಂಚಿಕೊಂಡಿರುವುದಕ್ಕೆ ಮತ್ತು ಆರ್.ಎಸ್.ಎಸ್ ಬಗ್ಗೆ ಹಾಗೂ ಎಲ್ಲಾ ಮಹಾ ಪುರುಷರ ಹೆಸರುಗಳನ್ನು ಪ್ರಸ್ತಾಪ ಮಾಡಿರುವುದಕ್ಕೆ ನಾನು ಖಂಡಿತವಾಗಿ ಇಲ್ಲಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಖಾಸಗಿಯಾಗಿ ಅಥವಾ ಸಭೆ ಮಾಡಬೇಕೋ ಎಂಬುದನ್ನು ನಂತರ ನೋಡೋಣ.

(ಮುಂದು)

**(952)14-11-2017/1.20/ಎಸ್‌ಪಿಆರ್/ವಿಕೆ**

**ಶ್ರೀ ಕೆ.ಎಸ್.ಈಶ್ವರಪ್ಪ (ಮುಂದು):-**
ಈ ಸದನದಲ್ಲಿ ನಾನು ಮನವಿ ಮಾಡಿಕೊಳ್ಳುವುದೇನೆಂದರೆ ಇವತ್ತಿನ ದಿವಸ ಖಾಸಗಿ ಆಸ್ಪತ್ರೆಗಳ ನಿಯಂತ್ರಣ ವಿಧೇಯಕವು ತಿದ್ದುಪಡಿಗಾಗಿ ಬಂದಿದೆ, ಈ ವಿಚಾರವಾಗಿ ಇಡೀ ರಾಜ್ಯದಲ್ಲಿ ಚರ್ಚೆಯು ನಡೆಯುತ್ತಿದೆ. ಅನೇಕ ವೈದ್ಯರುಗಳು ಇವತ್ತಿನ ದಿವಸದಿಂದ ಉಪವಾಸ ಕೈಗೊಂಡಿದ್ದಾರೆ. ಈ ವಿಚಾರದಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಯಾವುದೋ ಒಂದು ಕಾರಣಕ್ಕಾಗಿ ಮಾನ್ಯ ಮುಖ್ಯ ಮಂತ್ರಿಗಳು ನಿನ್ನೆಯ ದಿವಸದ ಸಭೆಗೆ ಹಾಜರಾಗಿರುವುದಿಲ್ಲ. ಒಂದು ವೇಳೆ ಮಾನ್ಯ ಮುಖ್ಯ ಮಂತ್ರಿಗಳು ಸಭೆಗೆ ಹಾಜರಾಗಿದ್ದರೆ ಈ ವಿಚಾರವು ಒಂದು ರೂಪಕ್ಕೆ ಬರುತ್ತಿತ್ತು. ಈ ಸಂದರ್ಭದಲ್ಲಿ ನಾನು ಪ್ರಾರ್ಥಿಸಿಕೊಳ್ಳುವುದೇನೆಂದರೆ, ಮಾನ್ಯ ಸಚಿವರು ಸರ್ಕಾರವನ್ನು ಸಮರ್ಥನೆ ಮಾಡಿಕೊಳ್ಳಲು ಬಹಳಷ್ಟು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಸಚಿವರು ತಮ್ಮ ಮಾತಿನ ಧಾಟಿಯಲ್ಲಿ ಸರ್ಕಾರವನ್ನೇ ಬಿಟ್ಟುಕೊಡುವುದಿಲ್ಲ, ಅಷ್ಟು ಚೆನ್ನಾಗಿ ಮಾತನಾಡುವ ಅಭ್ಯಾಸ ಅವರಿಗಿದೆ. ಆದರೆ ನನಗೆ ಅಷ್ಟು ಚೆನ್ನಾಗಿ ಮಾತನಾಡುವುದಕ್ಕೆ ಬರುವುದಿಲ್ಲ. ಮಾನ್ಯ ಸಚಿವರಿಗೆ ತಮ್ಮ ಮುಖಾಂತರ ಹೇಳುವುದೇನೆಂದರೆ, ಇವತ್ತಿನ ದಿವಸ ಇದು ರಾಜ್ಯದಲ್ಲಿ ಜ್ವಲಂತ ಸಮಸ್ಯೆ ಉಂಟಾಗಿದೆ. ಅಂತಹ ಸಮಸ್ಯೆಗೆ ಸಂಬಂಧಪಟ್ಟ ಇಲಾಖೆಗೆ ಮಾನ್ಯ ಸಚಿವರು ಮಂತ್ರಿಗಳಾಗಿದ್ದಾರೆ. ಪ್ರಸ್ತುತ ಮಾನ್ಯ ಸಚಿವರು ಮನಸ್ಸು ಮಾಡಿದರೆ ಏನಾದರೂ ತೀರ್ಮಾನವನ್ನು ತೆಗೆದುಕೊಳ್ಳಬಹುದು.

**ಶ್ರೀ ಡಿ.ಕೆ.ಶಿವಕುಮಾರ್(ಇಂಧನ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಈಗ ವಿಧೇಯಕದ ಬಗ್ಗೆ ಚರ್ಚೆಯನ್ನು ಮಾಡುತ್ತಾರೆಯೇ?

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾನು ವಿಧೇಯಕದ ಬಗ್ಗೆ ಚರ್ಚೆಯನ್ನು ಮಾಡುತ್ತಿಲ್ಲ.

**ಶ್ರೀ ಡಿ.ಕೆ.ಶಿವಕುಮಾರ್:–** ಮಾನ್ಯ ಸಭಾಪತಿಯವರೇ, ಹಾಗಾದರೆ why are you allowing for this? It is not in the subject.

**(ಗೊಂದಲ)**

ಮಾನ್ಯ ಸಭಾಪತಿಯವರೇ, this is a zero hour. ವಿಧೇಯಕ ಬಂದಾಗ ಮಾತನಾಡಲಿ.

**ಸಭಾಪತಿಯವರು:–** ವಿಧೇಯಕ ಬರುತ್ತದೆ.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ನಾನು ಮಾತನಾಡಬಾರದೇ?

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಅವರೂ ಮಾತನಾಡಲಿ, ಆದರೆ, ತಾವು ಬೇರೆ ಸದಸ್ಯರ ಹೆಸರನ್ನು ಕರೆದಾಗ ಅವರಿಗೂ ಇವರು ಮಾತನಾಡಲು ಅವಕಾಶ ಮಾಡಿಕೊಡಬೇಕಲ್ಲವೆ.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ತಾವು ನನಗೆ ಅವಕಾಶವನ್ನು ಕೊಟ್ಟಿದ್ದೀರಿ. ಹೀಗಾಗಿ ನಾನು ಒಂದು ನಿಮಿಷ ಮಾತನಾಡುತ್ತೇನೆ.

**(ಗೊಂದಲ)**

**ಶ್ರೀ ಡಿ.ಕೆ.ಶಿವಕುಮಾರ್:–** ಮಾನ್ಯ ಸಭಾಪತಿಯವರೇ, ಬೇರೆ ವಿಚಾರಗಳನ್ನು ಇಲ್ಲಿ ಮಾತನಾಡಬಾರದು.

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ತಾವು ವಿರೋಧ ಪಕ್ಷದ ನಾಯಕರಿಗೆ ಒಂದು ನಿಮಿಷವಾದರೂ ಸರಿ, ಒಂದು ಗಂಟೆಯಾದರೂ ಸರಿ, ಮಾತನಾಡಲು ಅವಕಾಶವನ್ನು ಕೊಟ್ಟು ಇಂತಹ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸನ್ನಿವೇಶಗಳನ್ನು ಸೃಷ್ಟಿ ಮಾಡುತ್ತೀರಿ, ಹೊಸ ಹೊಸ ನಿಯಮಾವಳಿಗಳನ್ನು ಸೃಷ್ಟಿ ಮಾಡುತ್ತೀರಿ. ಮಾತನಾಡಲು ಯಾವುದೇ ರೀತಿಯ ಕಾನೂನುಗಳಿಲ್ಲವೇ?

**ಸಭಾಪತಿಯವರು:–** ನೀವುಗಳು ಯಾವ ರೀತಿಯ ಚರ್ಚೆಯನ್ನು ಮಾಡುತ್ತೀರಿ? ಮಾನ್ಯ ವಿರೋಧ ಪಕ್ಷದ ನಾಯಕರು ಅವರ ಮಾತನ್ನು ಮುಕ್ತಾಯ ಮಾಡುವುದು ಬೇಡವೇ? ಅವರಿಗೆ ಬೇಗ ಮಾತನ್ನು ಮುಕ್ತಾಯಗೊಳಿಸಲು ಬಿಡಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಗೆ ನಾನು ಒಂದು ಸಲಹೆಯನ್ನು ಕೊಡುವುದೇನೆಂದರೆ, ನಮ್ಮ ರಾಜ್ಯದಲ್ಲಿ ಜ್ವಲಂತ ಸಮಸ್ಯೆಯಾಗಿದೆ. ಅವರು ಇಲಾಖೆಯ ಮಂತ್ರಿಗಳಾಗಿರುವುದರಿಂದ ಮಾನ್ಯ ಮುಖ್ಯಮಂತ್ರಿಗಳು, ವಿರೋಧ ಪಕ್ಷದವರನ್ನು ಹಾಗೂ ವೈದ್ಯಕೀಯ ಸಂಸ್ಥೆಯ ಪ್ರಮುಖರನ್ನು ಒಳಗೊಂಡಂತೆ ಒಂದು ಸಭೆಯನ್ನು ಕರೆಯಲಿ. ಅಲ್ಲಿ ಉಳಿದೆಲ್ಲ ವಿಷಯಗಳು ಚರ್ಚೆಯಾಗಲಿ. ಇದನ್ನು ಬಿಟ್ಟು ನಾನು ಬೇರೆ ಯಾವ ವಿಷಯವನ್ನೂ ಹೇಳುವುದಿಲ್ಲ.

**ಇ) ವಿಷಯ:– ಅಧಿವೇಶನ ಕರ್ತವ್ಯಕ್ಕೆ ನಿಯೋಜನೆಗೊಂಡಿರುವ ಪೋಲೀಸರಿಗೆ ಮೂಲ ಸೌಕರ್ಯ ಇಲ್ಲದಿರುವ ಬಗ್ಗೆ**

---

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ವಂದನೆಗಳು. ಚಳಿಗಾಲದ ಅಧಿವೇಶನದ ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದ ಪೋಲೀಸರಿಗೆ ಶೌಚಾಲಯದ ಕೊರತೆಯಿಂದಾಗಿ ಬಯಲಿನ ಹಾದಿ ಹಿಡಿದು, ಮೈ ಕೊರೆಯುವ ಚಳಿಯಲ್ಲಿ ಬಯಲಿನಲ್ಲೇ ನಿಂತು ಸ್ನಾನ ಮಾಡುವ ಹಾಗೂ ಬಯಲಿನ ಕಡೆಗೆ ಬಹಿರ್ದೆಸೆಗೆ ತೆರಳುತ್ತಿರುವ ದೃಶ್ಯಗಳು ಬೆಳಗಾವಿಯಲ್ಲಿ ಸಾಮಾನ್ಯ ದೃಶ್ಯದಂತಿದ್ದು, ಅಧಿವೇಶನದ ಕರ್ತವ್ಯಕ್ಕೆ ಹಾಜರಿರುವ ಪೋಲೀಸರಿಗೆ ಸರಿಯಾದ ವ್ಯವಸ್ಥೆಯಾಗದಿರುವುದು ಈ ದಿನದ ವಿಜಯವಾಣಿ ಪತ್ರಿಕೆಯಲ್ಲಿ ವರದಿಯಾಗಿದೆ. ಬೆಳಗಾವಿಯ ಗಾಂಧಿ ನಗರದ ಬಂಟರ ಭವನದಲ್ಲಿ 150 ಪೋಲೀಸರಿಗೆ ವಾಸ್ತವ್ಯ ಕಲ್ಪಿಸಲಾಗಿದ್ದು, ಅವರುಗಳ ಅಗತ್ಯಕ್ಕೆ ತಕ್ಕಷ್ಟು ಸ್ನಾನ ಗೃಹಗಳು ಹಾಗೂ ಶೌಚಾಲಯಗಳು ಇಲ್ಲದಿರುವುದರಿಂದ ಪೋಲೀಸರು ಭವನದ ಆವರಣದ ಕಸದ ಮಧ್ಯದಲ್ಲೇ ಸ್ನಾನ ಮಾಡುತ್ತಿರುವುದು ತುಂಬಾ ಮುಜುಗರದ ಸಂಗತಿಯಾಗಿದ್ದು, ಅಧಿವೇಶನಕ್ಕೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಂಪೂರ್ಣ ಭದ್ರತೆಯನ್ನು ನೀಡುತ್ತಿರುವ ಪೋಲೀಸರಿಗೆ ಈ ರೀತಿಯ ಅವ್ಯವಸ್ಥೆ ಉಂಟಾಗಿರುವುದು ಖಂಡನೀಯ. ಆದುದರಿಂದ ಈ ಕೂಡಲೇ ಸಮಸ್ಯೆಯನ್ನು ಬಗೆಹರಿಸಬೇಕೆಂದು ಹಾಗೂ ಮುಂದಿನ ದಿನಗಳಲ್ಲಿ ಈ ರೀತಿ ಸಮಸ್ಯೆ ಆಗದಂತೆ ಕ್ರಮ ಕೈಗೊಳ್ಳಬೇಕೆಂದು ಶೂನ್ಯ ವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳಿಂದ ಈ ವಿಚಾರದಲ್ಲಿ ಉತ್ತರವನ್ನು ತರಿಸಿಕೊಡುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

. **ಈ) ವಿಷಯ:- ಸರ್ಕಾರಿ ಜಾಗದಲ್ಲಿ ಅಕ್ರಮವಾಗಿ ನಿರ್ಮಾಣ ಮಾಡಿರುವ ಮನೆಗಳನ್ನು ಸಕ್ರಮಗೊಳಿಸುವ ಕುರಿತು.**

---

**ಶ್ರೀ ಮಾನೆ ಶ್ರೀನಿವಾಸ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ವಂದನೆಗಳು. ಸರ್ಕಾರಿ ಜಾಗಗಳಲ್ಲಿ ಅಕ್ರಮವಾಗಿ ನಿರ್ಮಾಣವಾಗಿರುವ ಮನೆಗಳನ್ನು ದಿನಾಂಕ 31 ನೇ ಡಿಸೆಂಬರ್ 2017ರೊಳಗಾಗಿ ಸಕ್ರಮಗೊಳಿಸಲು ಅವಕಾಶವನ್ನು ಒದಗಿಸಲಾಗಿದೆ. ಆದರೆ ಕಂದಾಯ ಇಲಾಖೆಯ ಸರ್ಕಾರಿ ಜಾಗವನ್ನು ಹೊರತುಪಡಿಸಿ, ಇನ್ನಿತರ ಸರ್ಕಾರಿ ಜಾಗಗಳಲ್ಲಿ ಅಕ್ರಮವಾಗಿ ನಿರ್ಮಿಸಿಕೊಂಡಿರುವ ಮನೆಗಳನ್ನು ಸಕ್ರಮಗೊಳಿಸಲು ಅರ್ಜಿಯನ್ನು ಸಲ್ಲಿಸಿದ್ದರೂ ಸಹ ಯಾವುದೇ ಅರ್ಜಿಯನ್ನು ಸ್ವೀಕರಿಸುತ್ತಿಲ್ಲ ಎಂದು ಸಾವಿರಾರು ಸಾರ್ವಜನಿಕರು ಪ್ರತಿಭಟನೆಗಳನ್ನು ನಡೆಸುತ್ತಿರುವುದು ಗಮನಕ್ಕೆ ಬಂದಿರುತ್ತದೆ. ಆದ್ದರಿಂದ ಕಂದಾಯ ಇಲಾಖೆಗೆ ಸಂಬಂಧಿಸಿದ ಸರ್ಕಾರಿ ಜಾಗಗಳನ್ನು ಹೊರತುಪಡಿಸಿ, ಇನ್ನಿತರ ಸರ್ಕಾರಿ ಜಾಗಗಳಲ್ಲಿ ಅಕ್ರಮವಾಗಿ ನಿರ್ಮಿಸಲಾಗಿರುವ ಮನೆಗಳನ್ನು ಸಕ್ರಮಗೊಳಿಸಲು ಅರ್ಜಿಗಳನ್ನು ಸ್ವೀಕರಿಸಿ, ಶೀಘ್ರವೇ ಕ್ರಮ ಕೈಗೊಳ್ಳುವಂತೆ, ಜಿಲ್ಲಾಡಳಿತಕ್ಕೆ ನಿರ್ದೇಶನ ನೀಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಪ್ರಸ್ತುತ ಅಧಿವೇಶನ ಪೂರ್ಣಗೊಳ್ಳುವುದರೊಳಗೆ ಮಾನ್ಯ ಕಂದಾಯ ಮಂತ್ರಿಗಳಿಂದ ಈ ವಿಚಾರದಲ್ಲಿ ಉತ್ತರವನ್ನು ತರಿಸಿಕೊಡುತ್ತೇನೆ.

**ಉ) ವಿಷಯ:- ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ನಾಮನಿರ್ದೇಶಿತ ಸದಸ್ಯರ ಬಗ್ಗೆ.**

---

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ನಗರಾಭಿವೃದ್ಧಿ ಇಲಾಖೆಯಡಿ ಬರುವ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಆಡಳಿತ ವರ್ಗಕ್ಕೆ ಆರು ಸದಸ್ಯರನ್ನು ನಾಮನಿರ್ದೇಶನ ಮಾಡಲಾಗಿರುತ್ತದೆ. ಬಿಡಬ್ಲ್ಯೂಎಸ್ಎಸ್‌ಬಿ ನಿಯಮಾವಳಿಗಳನ್ವಯ ನಾಮನಿರ್ದೇಶಿತ ಸದಸ್ಯರು ಮಂಡಳಿಯ ಸಭೆಗಳಿಗೆ ಹಾಜರಾಗಲು ಮತ್ತು ಸಲಹೆ ಸೂಚನೆಗಳನ್ನು ನೀಡಲು ಅವಕಾಶವಿರುತ್ತದೆ. ಆದರೆ, ಮಂಡಳಿಯ ನಿವೃತ್ತ ನೌಕರರನ್ನು ನಿಯಮಾವಳಿಗೆ ವಿರುದ್ಧವಾಗಿ ನಾಮನಿರ್ದೇಶನ ಮಾಡಿ ವಾಹನ ಸೌಲಭ್ಯವನ್ನು ಒದಗಿಸಲಾಗಿರುತ್ತದೆ. ಆರ್ಥಿಕ ವಿಷಯಗಳಲ್ಲಿ ನಾಮನಿರ್ದೇಶಿತ ಸದಸ್ಯರು ಹಸ್ತಕ್ಷೇಪ ಮಾಡಲು ಅವಕಾಶವಿಲ್ಲದಿದ್ದರೂ ನಾಮನಿರ್ದೇಶಿತ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸದಸ್ಯರು ಕಾನೂನು ಬಾಹಿರವಾಗಿ ಆರ್ಥಿಕ ವಿಷಯಗಳಲ್ಲಿ ಭಾಗಿಯಾಗಿ ಮಂಡಳಿಯ ಆರ್ಥಿಕ ನಷ್ಟಕ್ಕೆ ಕಾರಣರಾಗಿರುತ್ತಾರೆ. ಇದರಿಂದ ರಾಜ್ಯ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟಾಗುವುದರ ಜೊತೆಗೆ ಕೆಟ್ಟ ಪರಂಪರೆಗೆ ಅವಕಾಶ ನೀಡಿದಂತಾಗಿದೆ. ಜಲ ಮಂಡಳಿಯ ವಿಷಯದಲ್ಲಿ ರಾಜ್ಯ ಸರ್ಕಾರವು ಹೊರಡಿಸಿರುವ ಜ್ಞಾಪನಾ ಪತ್ರಗಳ ನಿರ್ದೇಶನಗಳಿಗೆ ವಿರುದ್ಧವಾಗಿ ಆಡಳಿತದಲ್ಲಿ ನಾಮನಿರ್ದೇಶಿತ ಸದಸ್ಯರು ಭಾಗಿಯಾಗಿರುತ್ತಾರೆ ಮತ್ತು ಮಂಡಳಿಯ ತೀರ್ಮಾನಗಳಿಗೆ ವಿರುದ್ಧವಾಗಿ ವರ್ತಿಸಿರುತ್ತಾರೆ. ಇದರಿಂದ ಮಂಡಳಿಗೆ ನಷ್ಟವಾಗುವುದರ ಜೊತೆಗೆ ಮಂಡಳಿಯ ಅಧಿಕಾರಿಗಳು ಹಸ್ತಕ್ಷೇಪ ಮುಕ್ತವಾಗಿ ಕಾರ್ಯನಿರ್ವಹಿಸಲು ಅಡಚಣೆಯುಂಟಾಗಿರುತ್ತದೆ. ಸದರಿ ವಿಷಯವು ಮಂಡಳಿಯ ಹಿತದೃಷ್ಟಿಯಿಂದ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಮುಖವಾಗಿರುವುದರಿಂದ ದಯಮಾಡಿ ರಾಜ್ಯ ಸರ್ಕಾರವು ಈ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸುತ್ತೇನೆ.

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಪ್ರಸ್ತುತ ಅಧಿವೇಶನ ಪೂರ್ಣಗೊಳ್ಳುವುದರೊಳಗೆ ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಮಂತ್ರಿಗಳಿಂದ ಈ ವಿಚಾರದಲ್ಲಿ ಉತ್ತರವನ್ನು ತರಿಸಿಕೊಡುತ್ತೇನೆ.

**ಊ) ವಿಷಯ:- ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ ಜಿಲ್ಲೆಗಳಲ್ಲಿರುವ ಕುಡುಬಿ/ಕುಣಬಿ ಎಂದು ಕರೆಯಲ್ಪಡುವ ಜನಾಂಗವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಬಗ್ಗೆ.**

---

**ಶ್ರೀ ಐವನ್ ಡಿ'ಸೋಜಾ(ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಲು ಅವಕಾಶ ನೀಡಿದ್ದಕ್ಕಾಗಿ ಅಭಿನಂದನೆಗಳು. ರಾಜ್ಯದಲ್ಲಿರುವ ಕುಡುಬಿ/ಕುಣಬಿ ಜನಾಂಗದ ಜನರು ತುಂಬಾ ಹಿಂದುಳಿದ ಹಾಗೂ ತುಳಿತಕ್ಕೊಳಪಟ್ಟ ಜನಾಂಗವಾಗಿದ್ದು, ಇವರನ್ನು ದಕ್ಷಿಣ ಕನ್ನಡ, ಉಡುಪಿ ಹಾಗೂ ಶಿವಮೊಗ್ಗ ಜಿಲ್ಲೆಯಲ್ಲಿ ಕುಡುಬಿ ಜನಾಂಗವೆಂದು, ಉತ್ತರ ಕರ್ನಾಟಕದಲ್ಲಿ ಕುಣಬಿ ಜನಾಂಗವೆಂದು ಕರೆಯಲಾಗುತ್ತಿದೆ. ಆದರೆ, ಎರಡೂ ಪಂಗಡವು ಒಂದೇ ಜನಾಂಗವಾಗಿದ್ದಾಗ್ಯೂ ಸಹ, ಹಾಲಿ ಕುಣಬಿ ಜನಾಂಗವನ್ನು ಮಾತ್ರ ಪರಿಶಿಷ್ಟ ಪಂಗಡಕ್ಕೆ ಸೇರಿಸುವಂತೆ ಸರ್ಕಾರದ ಹಂತದಲ್ಲಿ ತೀರ್ಮಾನಿಸಲಾಗಿದೆ. ಅಂತೆಯೇ ಗೋವಾ ರಾಜ್ಯದಲ್ಲಿರುವ ಕುಣಬಿ (ಕುಡುಬಿ) ಜಾತಿಯವರನ್ನು 2003 ರಲ್ಲಿ ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರ್ಪಡೆಗೊಳಿಸಲಾಗಿದೆ. ಕುಡುಬಿ/ಕುಣಬಿ ಜಾತಿಯು ಮೂಲತಃ ಒಂದೇ ಜಾತಿಯಾಗಿರುತ್ತದೆ ಎಂಬುದಾಗಿ ಅನೇಕ ಸಂಶೋಧಕರ ದಾಖಲೆ-ಪ್ರಬಂಧ-ಪುಸ್ತಕಗಳಿಂದ ತಿಳಿದುಬಂದಿರುತ್ತದೆ. ಇದೇ ಪಂಗಡಕ್ಕೆ ಸೇರಿದ ಕುಡುಬಿ ಎಂದು ಕರೆಯಲ್ಪಡುವ

ಜನ ಬಡತನ ರೇಖೆಗಿಂತ ತುಂಬ ಕೆಳಮಟ್ಟದಲ್ಲಿ ಜೀವಿಸುತ್ತಿದ್ದು, ಕೂಲಿ ಕಾರ್ಮಿಕರಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದು ರಾಜಕೀಯ ಬೆಂಬಲದಿಂದಲು ವಂಚಿತರಾಗಿರುವುದರಿಂದ ಸದರಿ ಕುಡಚಿ ಜನಾಂಗವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದಲ್ಲಿ ಸೇರ್ಪಡೆಗೊಳಿಸಲು ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕೆಂದು ಈ ಸದನದ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಪ್ರಸ್ತುತ ಅಧಿವೇಶನ ಪೂರ್ಣಗೊಳ್ಳುವುದರೊಳಗೆ ಮಾನ್ಯ ಸಮಾಜ ಕಲ್ಯಾಣ ಸಚಿವರನ್ನು ಸಂಪರ್ಕಿಸಿ, ಅವರಿಂದ ಈ ವಿಚಾರದಲ್ಲಿ ಉತ್ತರವನ್ನು ತರಿಸಿಕೊಡುತ್ತೇನೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಶ್ರೀ ರಮೇಶ್ ಕುಮಾರ್‌ರವರು ವಿಧೇಯಕದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ.

**ಸಭಾಪತಿಯವರು:-** ಆ ವಿಚಾರಗಳು ಇಲ್ಲಿ ಅಪ್ರಸ್ತುತ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ತಮ್ಮ ಉತ್ತರವನ್ನು ನೀಡಲಿಲ್ಲ. ಸದರಿಯವರು ಲಿಖಿತವಾಗಿ ಅಥವಾ ಮೌಖಿಕವಾಗಿ ಉತ್ತರವನ್ನು ನೀಡುತ್ತಾರೆಯೋ ಹೇಗೆ?

**(ಗೊಂದಲ)**

**ಸಭಾಪತಿಯವರು:-** ವಿಧೇಯಕದ ಬಗ್ಗೆ ಅಲ್ಲ ಆದರೆ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲ್ಪಟ್ಟ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರು ತಮ್ಮ ಅಭಿಪ್ರಾಯವನ್ನು ನೀಡಿದ್ದಾರೆ. ಇದೇ ಅವರ ಉತ್ತರವಾಗಿರುತ್ತದೆ. ಅವಶ್ಯವಿದ್ದಲ್ಲಿ ಅದರ ಪ್ರತಿಯನ್ನು ತಮಗೆ ಕಳುಹಿಸಿಕೊಡಲಾಗುವುದು.

**೩. <u>ಸಭೆಯ ಮುಂದಿಡಲಾದ ಕಾಗದ ಪತ್ರಗಳು</u>**

**(ಪ್ರತಿಯನ್ನು ಲಗತ್ತಿಸಲಾಗಿದೆ)**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

## 4. ಕಾರ್ಯದರ್ಶಿಯವರ ವರದಿ

**ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್**:- ಮಾನ್ಯ ಸಭಾಪತಿಯವರ ಅನುಮತಿಯ ಮೇರೆಗೆ, ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು**:- ಮಂಡಿಸಲಾಯಿತು.

## 6. ವರದಿಯನ್ನೊಪ್ಪಿಸುವುದು

**ಅ) ಶ್ರೀ ಐವನ್ ಡಿ'ಸೋಜಾ (ಸದಸ್ಯರು, ಕರ್ನಾಟಕ ವಿಧಾನ ಮಂಡಲದ ಜಂಟಿ ಪರಿಶೀಲನಾ ಸಮಿತಿ)**:- ಮಾನ್ಯ ಸಭಾಪತಿಯವರೇ, 2017 ನೇ ಸಾಲಿನ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕವನ್ನು ಪರಿಶೀಲಿಸಲು ರಚಿಸಲಾಗಿರುವ ಕರ್ನಾಟಕ ವಿಧಾನ ಮಂಡಲದ ಜಂಟಿ ಪರಿಶೀಲನಾ ಸಮಿತಿಯ ವರದಿಯನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಆ) ಶ್ರೀ ಎನ್.ಎಸ್.ಬೋಸ್‌ರಾಜು (ಅಧ್ಯಕ್ಷರು, ಕರ್ನಾಟಕ ವಿಧಾನ ಪರಿಷತ್ತಿನ ಹಕ್ಕುಬಾಧ್ಯತಾ ಸಮಿತಿ)**:- ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಾವಳಿಗಳ ನಿಯಮ 213 ರ ರೀತ್ಯ ವಿಧಾನ ಪರಿಷತ್ತಿನ ಹಕ್ಕುಬಾಧ್ಯತಾ ಸಮಿತಿಯ ಎಂಭತ್ತೈದನೆಯ ವರದಿಯನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು**:- ಮಂಡಿಸಲಾಯಿತು.

(ಮುಂದು)

(953)1.30/14.11.2017/**cs/vk**

## 7. ಅರ್ಜಿಯನ್ನೊಪ್ಪಿಸುವುದು

**ಶ್ರೀ ಆರ್.ಪ್ರಸನ್ನಕುಮಾರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಸಣ್ಣ ನೀರಾವರಿ ಇಲಾಖೆಯಿಂದ ಉಡುಪಿ ಕಾಡೂರು ಗ್ರಾಮದ ಯಾಪಿಕಡುವಿನಲ್ಲಿ ಹರಿಯುತ್ತಿರುವ ಸೀತಾ ನದಿಗೆ ನಿರ್ಮಿಸಿದ ವೆಂಟೆಡ್ ಡ್ಯಾಂನ ಕಳಪೆ ಕಾಮಗಾರಿ ಮತ್ತು ನಿರ್ವಹಣೆಯ ಕೊರತೆಯಿಂದ

ಪೋಲಾಗುತ್ತಿರುವ ನೀರನ್ನು ಸಮರ್ಪಕ ರೀತಿಯಲ್ಲಿ ಬಳಕೆ ಮಾಡಲು ಅವಕಾಶ ಕಲ್ಪಿಸುವ ಬಗ್ಗೆ ಅರ್ಜಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:-** ಅರ್ಜಿಯನ್ನು ಒಪ್ಪಿಸಲಾಯಿತು. ಈಗ ಸದನವನ್ನು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 3 ಗಂಟೆ 15 ನಿಮಿಷಗಳವರೆಗೆ ಮುಂದೂಡುತ್ತಿದ್ದೇನೆ.

(954)/14-11-2017/3-15/ಎಲ್ಎಂ/ಬಿಎನ್ಎಸ್

**(ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 1.32ಕ್ಕೆ ಮುಂದೂಡಲ್ಪಟ್ಟ ಸದಯವು ಪುನಃ ಮಧ್ಯಾಹ್ನ 3 ಗಂಟೆ 26ನಿಮಿಷಕ್ಕೆ ಪ್ರಾರಂಭವಾಯಿತು)**

**(ಮಾನ್ಯ ಸಭಾಪತಿಯವರು ಸಭಾಪೀಠವನ್ನು ಅಲಂಕರಿಸಿದ್ದರು)**

**ಸಭಾಪತಿಯವರು:-** ಮಾನ್ಯ ಕವಟಗಿಮಠರವರ ಗಮನ ಸೆಳೆಯುವ ಸೂಚನೆಗೆ ಉತ್ತರ ಕೊಡಲು ಮಾನ್ಯ ಗ್ರಾಮೀಣಾಭಿವೃದ್ಧಿ ಇಲಾಖೆಯ ಸಚಿವರು ಸದನಕ್ಕೆ ಬರಬೇಕು. ಅದಕ್ಕಾಗಿ ಈಗ ಮಾನ್ಯ ಐವನ್ ಡಿ'ಸೋಜಾರವರ ಗಮನ ಸೆಳೆಯುವ ಸೂಚನೆಯನ್ನು ಮೊದಲು ತೆಗೆದುಕೊಳ್ಳುತ್ತೇನೆ. ನಂತರ ಮಾನ್ಯ ಕವಟಗಿಮಠರವರ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳುತ್ತೇನೆ.

೦೮. <u>ಗಮನ ಸೆಳೆಯುವ ಸೂಚನೆಗಳು</u>

**ಅ) ರಾಜ್ಯದಲ್ಲಿ ವ್ಯಾಪಕವಾಗಿ ಮಾದಕ ದ್ರವ್ಯಗಳ ಸಾಗಾಣಿಕೆ ಮತ್ತು ಸೇವನೆ ಕುರಿತು ಅನೇಕ ಪ್ರಕರಣಗಳು ದಾಖಲಾಗಿದ್ದು, ಇಲಾಖೆ ಕೈಗೊಂಡಿರುವ ಕ್ರಮಗಳ ಬಗ್ಗೆ.**

--------

**ಶ್ರೀ ಐವನ್ ಡಿ'ಸೋಜಾ(ಸರ್ಕಾರದ ಮುಖ್ಯ ಸಚೇತಕರು):- ಮಾನ್ಯ ಸಭಾಪತಿಗಳೆ,** ರಾಜ್ಯದಲ್ಲಿ ವ್ಯಾಪಕವಾಗಿ ಮಾದಕ ದ್ರವ್ಯಗಳ ಸಾಗಾಣಿಕೆ ಮತ್ತು ಸೇವನೆ ಕುರಿತು ಅನೇಕ ಪ್ರಕರಣಗಳು ದಾಖಲಾಗಿದ್ದು, ಇಲಾಖೆ ಕೈಗೊಂಡಿರುವ ಕ್ರಮಗಳ ಬಗ್ಗೆ ಮಾನ್ಯ ಗೃಹ ಸಚಿವರ ಗಮನ ಸೆಳೆಯುತ್ತೇನೆ.

**ಸಭಾಪತಿಯವರು:-** ಮಾನ್ಯ ಗೃಹ ಸಚಿವರೆ, ಇದರ ಬಗ್ಗೆ ಸ್ವಲ್ಪ ವಿವರವಾಗಿ ಸದನಕ್ಕೆ ಹೇಳಬಿಡಿ. ಏಕೆಂದರೆ ಇದು ಸದನದಲ್ಲಿ ಪದೇ-ಪದೇ ಬರುತ್ತಿರುವ ವಿಷಯವಾಗಿದೆ. ಸದಸ್ಯರೆಲ್ಲರೂ ಇದರ ಬಗ್ಗೆ ತಿಳಿದುಕೊಳ್ಳಲು ಬಯಸುತ್ತಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೆ, ಹೇಳಿಕೆಯ ಪ್ರತಿಯನ್ನೆ ಕೊಟ್ಟಿರುವುದಿಲ್ಲ, ನಾವು ಹೇಗೆ ಚರ್ಚೆ ಮಾಡುವುದು?

**ಸಭಾಪತಿಯವರು:–** ಹೇಳಿಕೆಯ ಪ್ರತಿಗಳು ನಮ್ಮ ಕಛೇರಿಗೆ ಬಂದಿಲ್ಲ. ಹೇಳಿಕೆಗಳ ಪ್ರತಿಯನ್ನು ತರಲಿಲ್ಲವೆ?

**ಶ್ರೀ ರಾಮಲಿಂಗಾ ರೆಡ್ಡಿ(ಗೃಹ ಸಚಿವರು):–** ಮಾನ್ಯ ಸಭಾಪತಿಗಳೆ, ಈಗ ಬೇರೆ ವಿಷಯವನ್ನು ತೆಗೆದುಕೊಳ್ಳಿ, ಅಷ್ಟರಲ್ಲಿ ನಾನು ಹೇಳಿಕೆಯ ಪ್ರತಿಯನ್ನು ತರಿಸುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮೊದಲನೆಯ ಗಮನಸೆಳೆಯುವ ಸೂಚನೆ ತೆಗೆದುಕೊಳ್ಳಲು ಸಂಬಂಧಪಟ್ಟ ಮಂತ್ರಿಗಳು ಇಲ್ಲ. ಎರಡನೆಯದಕ್ಕೆ ಉತ್ತರವಿಲ್ಲ. ಈಗ ಯಾವುದನ್ನು ತೆಗೆದುಕೊಳ್ಳುತ್ತಾರೆ ?

**ಸಭಾಪತಿಯವರು:–** ಹೇಳಿಕೆಯ ಪ್ರತಿಗಳನ್ನು ತರಿಸಲು ಸಮಯ ಬೇಕಾಗುತ್ತದೆಯೇ?

**ಶ್ರೀ ರಾಮಲಿಂಗಾ ರೆಡ್ಡಿ:–** ಹೇಳಿಕೆಯನ್ನು ಓದಿಬಿಡುತ್ತೇನೆ,

**ಶ್ರೀ ಕೆ.ಎಸ್.ಈಶ್ವರಪ್ಪ:–** ಓದುತ್ತಾರೆ, ಅದೇನೋ ಸರಿ, ಆದರೆ ಹೇಳಿಕೆಯ ಪ್ರತಿಯೇ ನಮ್ಮ ಹತ್ತಿರವಿಲ್ಲ, ಹೇಗೆ ಚರ್ಚೆ ಮಾಡುವುದು?

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಗಳೆ, ಇದು ಜನರಲ್ ಚರ್ಚೆಯಾಗಿದೆ, ಹೇಳಿಕೆಯ ಪ್ರತಿಗಳು ಬರುವವರೆಗೆ ಮಾನ್ಯ ಮಂತ್ರಿಗಳು ಅದರ ಬಗ್ಗೆ ವಿವರಣೆಯನ್ನು ಕೊಡಬಹುದು, ನನಗೆ ಅವಕಾಶ ಕೊಟ್ಟರೆ ನಾನು ನನ್ನ ಅಭಿಪ್ರಾಯಗಳನ್ನು ಹೇಳುತ್ತೇನೆ.

**ಸಭಾಪತಿಯವರು:–** ಹಾಗೆ ಚರ್ಚೆ ಮಾಡಲು ಬರುವುದಿಲ್ಲ. ಮಾನ್ಯ ಗೃಹ ಮಂತ್ರಿಗಳೆ, ತಾವು ವಿಷಯವನ್ನು ಪ್ರಸ್ತಾಪ ಮಾಡಿ. ಅಷ್ಟರಲ್ಲಿ ನಿಮ್ಮ ಅಧಿಕಾರಿಗಳಿಗೆ ಹೇಳಿ ಹೇಳಿಕೆಯ ಕಾಪಿಗಳನ್ನು ತರಿಸಿ. ಆ ಮೇಲೆ ನೋಡೋಣ ಚರ್ಚೆ ಯಾವ ರೀತಿ ಹೋಗುತ್ತದೆ ಎಂದು.

**( ಮುಂದು)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(955)/14-11-2017/3-30/ಎಲ್ಎಂ(ಬಿಎಸ್ಡಿ)/ಬಿಎನ್ಎಸ್

**ಶ್ರೀ ರಾಮಲಿಂಗಾ ರೆಡ್ಡಿ(ಗೃಹ ಸಚಿವರು):-** ಮಾನ್ಯ ಸಭಾಪತಿಗಳೆ, ನಮ್ಮಲ್ಲಿ ಕೆ.ಜಿ.ಎಫ್. ಸೇರಿ 31 ಪೊಲೀಸ್ ಜಿಲ್ಲೆಗಳು ಇವೆ. 7 Ranges ಮತ್ತು 5 Commissionerates ಇವೆ. 7 Ranges ಮತ್ತು 5 Commissionerates ಗೆ ಭೇಟಿಮಾಡಿದ ಸಂದರ್ಭದಲ್ಲಿ ನಮ್ಮ Police Manual ನಲ್ಲಿ ಇರತಕ್ಕಂಥದ್ದು ಮತ್ತು Indian Penal Code (IPC) ನಲ್ಲಿ ಇರತಕ್ಕಂಥದ್ದು, ಇವುಗಳಲ್ಲಿ ಯಾವುದಕ್ಕೆ ಹೆಚ್ಚು ಒತ್ತು ಕೊಟ್ಟರೆ, Law and order ಇರಬಹುದು, ರೌಡಿಸಂ ಇರಬಹುದು, ವಿಶೇಷವಾಗಿ ಯುವಜನತೆ ಹಾಳಾಗುತ್ತಿರುವಂತಹ ಸಂಗತಿಗಳನ್ನು ಪಾಯಿಂಟ್ಸ್ ಮಾಡಿ ನಮ್ಮ Superintendent of Police (SP) ಗಳು ಮತ್ತು Deputy Inspector General of Police (DIG) rank level ಅಧಿಕಾರಿಗಳೊಡನೆ ನಾನು ಸಭೆ ನಡೆಸಿದ ಸಂದರ್ಭದಲ್ಲಿ ಅಫೀಮು ಮತ್ತು ಗಾಂಜಾ ವಿಚಾರಕ್ಕೆ ಹೆಚ್ಚು ಒತ್ತನ್ನು ಕೊಡಲಾಗಿದೆ. ಇದು ನಮ್ಮ ರಾಜ್ಯದಲ್ಲಿ ಅದು ವಿಶೇಷವಾಗಿ ಶಾಲಾ-ಕಾಲೇಜುಗಳಲ್ಲಿ ಹೆಚ್ಚಾಗಿ ಬಳಕೆಯಾಗುತ್ತಿದೆ. ಇದರ ಬಗ್ಗೆ ಸಭೆ ನಡೆಸಿದ ಸಮಯದಲ್ಲಿ ಅಫೀಮು, ಗಾಂಜಾ ಮಾರಾಟ ಪತ್ತೆಯಾದರೆ ಕೇಸ್ ಹಾಕುತ್ತೇವೆ ಎಂದು ಹೇಳಿದ್ದಾರೆ. ಆದರೆ ಇದು ಎಲ್ಲಿಂದ ಬರುತ್ತಿದೆ ಎನ್ನುವುದನ್ನು ಕಂಡು ಹಿಡಿಯುವುದು ಮುಖ್ಯವಾಗಿದೆ. ಮಂಗಳೂರಿನಲ್ಲಿ ಸಭೆ ನಡೆಸಿದಾಗ ಮುಳಬಾಗಿಲಿನಿಂದ ಬಂದಿದೆ ಎಂದು ಹೇಳಿದರು. ಮುಳಬಾಗಿಲಿನಿಂದ ಬರುತ್ತದೆ ಎನ್ನುವುದಾದರೆ ಅಲ್ಲಿಗೆ ಹೋಗಿ ಏಕೆ ಪತ್ತೆ ಮಾಡಲಿಲ್ಲ ಎಂದು ಕೇಳಲಾಗಿದೆ. ಒರಿಸ್ಸಾದಿಂದಲೂ ಅಫೀಮು ಮತ್ತು ಗಾಂಜಾ ತುಂಬಾ ಬರುತ್ತಿದೆ. ಆದ್ದರಿಂದ ಒರಿಸ್ಸಾಕ್ಕೆ ಹೋಗಿ ಪತ್ತೆ ಮಾಡಿ ಇಲ್ಲಿಗೆ ಬರುವುದನ್ನು ನಿಲ್ಲಿಸಿ ಎಂದು ನಾನು ಹೇಳಿದ್ದೇನೆ. ಇಲ್ಲಿಗೆ ಬರುವುದನ್ನೆ ನಿಲ್ಲಿಸಬೇಕಾಗಿದೆ. ಚಾಮರಾಜನಗರ ಮುಂತಾದ ಕಡೆಗಳಲ್ಲಿ ಗಾಂಜಾವನ್ನು ಬೆಳೆಯುತ್ತಾರೆ. ಅಂತಹ ಬೆಳೆ ಬೆಳೆದವರ ಮೇಲೆಯು Goonda ಕಾಯಿದೆ ಅಡಿಯಲ್ಲಿ ಕೇಸ್ ದಾಖಲು ಮಾಡಬೇಕೆಂದು ನಾನು ಹೇಳಿದ್ದೇನೆ. ಇದಕ್ಕೆ ಸಂಬಂಧಪಟ್ಟಂತೆ Central Act ಇದೆ. ಬೆಂಗಳೂರಿನಲ್ಲಿ ಶಾಲಾ-ಕಾಲೇಜುಗಳ ಮಕ್ಕಳು ಇದನ್ನು ತುಂಬಾ ಉಪಯೋಗಿಸುತ್ತಾರೆ. ಅದರಂತೆ ಬೇರೆಯವರು ಉಪಯೋಗಿಸುತ್ತಾರೆ. ಇದನ್ನು ತಡೆಗಟ್ಟುವ ಪ್ರಯತ್ನಕ್ಕೆ ಹೆಚ್ಚು ಒತ್ತನ್ನು ಕೊಡಲಾಗಿದೆ. ಪದೇ-ಪದೇ ರೌಡಿಸಂ ಮಾಡುವವರನ್ನು ಗೂಂಡಾ ಕಾಯಿದೆಯಡಿಯಲ್ಲಿ ಕ್ರಮ ತೆಗೆದುಕೊಂಡು ಅವರನ್ನು ಜಿಲ್ಲೆಯಿಂದ ಹೊರಗೆ ಹಾಕುವ ಬಗ್ಗೆ ಹೆಚ್ಚಿನ ಕಾರ್ಯಕ್ರಮಗಳನ್ನು ಹಾಕಿಕೊಂಡು ಮಕ್ಕಳಿಗೆ ಇದು ಸಿಗದ ಹಾಗೆ ಮಾಡಬೇಕಾಗಿದೆ.

ತಿದ್ದುಪಡಿಯಾಗದ ಪ್ರತಿ: ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹುಕ್ಕಾ ಬಾರ್‌ಗಳನ್ನು ಎಲ್ಲ ಕಡೆಗಳಲ್ಲಿಯು ಬಂದ್ ಮಾಡಲು ಹೇಳಿದ್ದೇನೆ. ಹುಕ್ಕಾ ಬಾರ್‌ಗಳಲ್ಲಿ ನಾವು ಕೊಡುವುದಿಲ್ಲ ಎಂದು ಹೇಳುತ್ತಾರೆ, ಆದರೆ ಹೊಗೆಸೊಪ್ಪಿನಲ್ಲಿ ಹಾಕಿ ಕೊಡುತ್ತಾರೆ. ಗಾಂಜಾ ಎಲ್ಲಾ ಕೊಡುತ್ತಾರೆ. ಅಲ್ಲದೆ ಹುಕ್ಕಾಬಾರ್‌ನಲ್ಲಿ ಹೆಣ್ಣುಮಕ್ಕಳು ಇರುತ್ತಾರೆ. ಇದೆಲ್ಲವನ್ನು ತಪ್ಪಿಸಬೇಕಾಗಿದೆ. ಹುಕ್ಕಾಬಾರ್, ಓಸಿ, ಮಟ್ಕಾ, ಕ್ರಿಕೆಟ್ ಬೆಟ್ಟಿಂಗ್ ಇವುಗಳನ್ನು ತಡೆಗಟ್ಟಲು ಇರುವುದೆ ಗೂಂಡಾ ಕಾಯಿದೆ. ಈ ಕಾಯಿದೆ ಪ್ರಕಾರ ಗಡಿಪಾರು ಮಾಡುವುದು ಇಂತಹ ಹೆಚ್ಚಿನ ಕ್ರಮಗಳನ್ನು ತೆಗೆದುಕೊಳ್ಳಿ ಎಂದು ನಾನು ಹೇಳಿದ್ದೇನೆ. ಹೇಳಿಕೆಯ ಕಾಪಿಗಳನ್ನು ಎಲ್ಲರಿಗೂ ಕೊಡುತ್ತೇವೆ. ಇದರ ಬಗ್ಗೆ ಇನ್ನು ಏನಾದರೂ ಸಲಹೆ–ಸೂಚನೆಗಳನ್ನು ಕೊಟ್ಟರೆ ಇನ್ನು ಹೆಚ್ಚಿನ ಕಠಿಣ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಗಳೆ, ನಾನು ಈ ವಿಚಾರವನ್ನು ಏಕೆ ಪ್ರಸ್ತಾಪ ಮಾಡಿದ್ದೇನೆಂದರೆ, ಪ್ರಸ್ತುತ, ಈಗಿನ ಸಮಾಜದಲ್ಲಿ, ಯುವ ಜನತೆ, ಶಾಲಾ–ಕಾಲೇಜುಗಳ ಮಕ್ಕಳು ಈ ದುಶ್ಚಟಕ್ಕೆ ಬಲಿಯಾಗುತ್ತಿದ್ದಾರೆನ್ನುವುದು ಒಂದು ಕಡೆಯಾದರೆ, ಇನ್ನೊಂದು ಕಡೆ ಸಮಾಜದಲ್ಲಿ ನಡೆಯುವ ಅನೇಕ ಘಟನೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೇ ಈ ಎಲ್ಲಾ ಘಟನೆಗಳ ಹಿಂದೆ ಇವುಗಳ ಸೇವನೆಯ ಪರಿಣಾಮ ಏನು ಎನ್ನುವುದನ್ನು ತಿಳಿಯಬಹುದಾಗಿದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಕೇರಳದ ಗಡಿಭಾಗದಲ್ಲಿರುವ ಉಲ್ಲಾಳದಲ್ಲಿ ಒಂದು ಘಟನೆ ನಡೆಯಿತು. ಅಲ್ಲಿ ಒಂದು ಕೊಲೆಯಾಯಿತು. ಅದು ಏಕೆ ಆಯಿತು ಎಂದರೆ, ಒಬ್ಬ ಕಳ್ಳಸಾಗಾಣಿಕೆ ಮಾಡುವುದನ್ನು ಇನ್ನೊಬ್ಬ ಪೊಲೀಸರಿಗೆ ತಿಳಿಸುತ್ತಾನೆ, ನನ್ನ ಕಳ್ಳಸಾಗಾಣಿಕೆ ಬಗ್ಗೆ ಪೊಲೀಸರಿಗೆ ತಿಳಿಸಿದ್ದಿಯಾ ಎಂದು ದೊಡ್ಡ ಗಲಾಟೆಯಾಗಿ ಕೊಲೆ ಕೂಡಾ ಆಗಿ ಹೋಗುತ್ತದೆ. ಕೊಲೆ ಮಾಡಿದ ಹುಡುಗ ಕೊಲೆ ಮಾಡುವಂತಹ ಹುಡಗನೆ ಅಲ್ಲ, ಅವನು ಮಾದಕದ್ರವ್ಯ ಸೇವನೆ ಮಾಡಿದ ಸಮಯದಲ್ಲಿ ನನ್ನ ಬಗ್ಗೆ ಹೇಳಿದೆಯಾ ಎಂದು ಚಾಕುವಿನಿಂದ ಚುಚ್ಚಿ ಕೊಲೆ ಮಾಡಿದ್ದಾನೆ. ಅನೇಕ ಕೊಲೆಗಳ ಬಗ್ಗೆ ಸೂಕ್ಷ್ಮವಾಗಿ deep investigation ಮಾಡಿದರೆ, ಕೊಲೆ ಮಾಡಿದ ಆರೋಪಿಗಳು ಸಿಗುತ್ತಾರೆ. ಆಗ ಅವರಿಗೆ ಏಕೆ ನೀನು ಕೊಲೆ ಮಾಡಿದಿಯಾ ಎಂದು ಕೇಳಿದರೆ, ಅದು ನನಗೆ ಗೊತ್ತಿಲ್ಲ ಇಂತಹ ವ್ಯಕ್ತಿ ಬಂದು ಇಂತಹ ವ್ಯಕ್ತಿಯು ನನಗೆ ತೊಂದರೆ ಮಾಡುತ್ತಾನೆ ಅವನನ್ನು ಕೊಲೆ ಮಾಡು ಎಂದು ಹೇಳಿದರು ಹಾಗಾಗಿ ನಾನು ಕೊಲೆ ಮಾಡಿದೆ ಎಂದು ಹೇಳುತ್ತಾನೆ. ಸತ್ತವನು ಯಾರು ಎನ್ನುವುದು ಕೊಲೆ ಮಾಡಿದವನಿಗೆ ಏನು ಪೂರ್ವಪರ ಗೊತ್ತಿಲ್ಲ. ಆದರೆ ಮಾದಕದ್ರವ್ಯವನ್ನು ಸೇವನೆ ಮಾಡಿದಾಗ ಆತ ಯಾವ ಕೃತ್ಯವನ್ನಾದರೂ ಮಾಡುತ್ತಾನೆ ಎನ್ನುವಂತಹ ಮಟ್ಟಕ್ಕೆ ಬಂದಿದ್ದಾರೆ. ಇದು ಎಷ್ಟು ವ್ಯಾಪಕವಾಗಿ ಬೆಳೆದಿದೆ ಎಂದರೆ, ನಮ್ಮ ರಾಜ್ಯದ ಗಡಿಭಾಗದಲ್ಲಿರುವ ಆಂಧ್ರ, ಕೇರಳಾ ಗಳಿಂದ ಈ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾದಕದ್ರವ್ಯಗಳ ಸಾಗಾಣಿಕೆ ಯಥೇಚ್ಛವಾಗಿ ಆಗುತ್ತಿದೆ. ಇದೊಂದು ದಂಧೆಯಾಗಿದೆ. ಕೆಲವು ಜಿಲ್ಲೆಗಳಲ್ಲಿ ಈ ಗಾಂಜಾ ಮತ್ತು ಅಫೀಮನ್ನು ಬೆಳೆಸುತ್ತಾರೆ. ಬೆಳೆಸುವುದು ಸಮಾಜ ದ್ರೋಹಿ ಕೆಲಸ. ಇದಕ್ಕೆ ಸುಲಭವಾಗಿ ಬಲಿಯಾಗುವವರು ಮಕ್ಕಳು. ಅದರಲ್ಲಿಯೂ ವಿದ್ಯಾರ್ಥಿಗಳು ಇದಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಬಲಿಯಾಗುತ್ತಿದ್ದಾರೆ. ಈ ವ್ಯಾಪಾರಿಗಳು ವಿದ್ಯಾರ್ಥಿಗಳ ಗುಂಪು ಎಲ್ಲಿ ಇರುತ್ತದೆ ಎನ್ನುವುದನ್ನು ಟಾರ್ಗೆಟ್ ಮಾಡಿ ಮಾರಾಟ ಮಾಡುತ್ತಾರೆ. ಇದು ಗೂಡು ಅಂಗಡಿಯಲ್ಲಿ ಹೆಚ್ಚಾಗಿ ಸಿಗುತ್ತದೆ. ಸಿಗರೇಟ್‌ನಲ್ಲಿ ಇದನ್ನು ಹಾಕಿ ಕೊಟ್ಟರೆ ಅದಕ್ಕೆ 100 ರೂ.ಗಳನ್ನು ತೆಗೆದುಕೊಳ್ಳುತ್ತಾರೆ. ಇದು ಎಲ್ಲ ಪೊಲೀಸರಿಗೆ ಗೊತ್ತಿರುತ್ತದೆ. ಆದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತಿಲ್ಲ. ಗೂಡು ಅಂಗಡಿಗಳಲ್ಲಿ, ಶಾಲಾ-ಕಾಲೇಜುಗಳ ಹೊರಗೆ ಮತ್ತು unrecognized Paying Guest (PG) Centres, Homestays ಗಳಲ್ಲಿ ಈ ದಂಧೆ ಹೆಚ್ಚಾಗಿ ನಡೆಯುತ್ತದೆ. ಅಲ್ಲಲ್ಲಿ 'PG accommodations are available' ಎಂದು ಬೋರ್ಡ್ ಹಾಕಿರುತ್ತಾರೆ. ಅಂತಹ ಸ್ಥಳಗಳಲ್ಲಿ ಇರುವಂತಹ 80% ಮಕ್ಕಳು ಇಂತಹ ಚಟಗಳಿಗೆ ಬಲಿಯಾಗುತ್ತಿದ್ದಾರೆ ಎನ್ನುವುದು ಎಲ್ಲರಿಗೂ ಗೊತ್ತಿರುವಂತಹ ವಿಚಾರ. ಇವತ್ತು Crime rate ಹೇಗೆ ಇದೆ ಎನ್ನುವುದನ್ನು ಸದನದ ಗಮನಕ್ಕೆ ತರಲು ಬಯಸುತ್ತೇನೆ. ಬೆಳಗಾವಿ ಜಿಲ್ಲೆಯ Crime rate ಹೇಗೆ ಇದೆ ಎನ್ನುವ ಮಾಹಿತಿಯನ್ನು ನಾನು ಬೆಳಗ್ಗೆ ತೆಗೆದುಕೊಂಡಿದ್ದೇನೆ. NDPS (NARCOTIC DRUGS AND PSYCHOTROPIC SUBSTANCES) Cases reported for the year 2015, 2016 & 2017 (As on 12-11-2017) ಅನ್ನು ಒಂದು ಉದಾಹರಣೆಗೆ ಹೇಳುತ್ತೇನೆ, 2015ರಲ್ಲಿ, Reported cases are 49, ಅದರಲ್ಲಿ Convicted-5, Acquitted-2, Under Investigation (UI)-0, Pending Trial-42 and accused arrested are 70. These are the figures relating to the year 2015. The cases reported in the year 2015, Reported cases are 49, whereas in the year 2016, it is 239. 49 ಎಲ್ಲಿ 239 ಎಲ್ಲಿ. This is the statistics given by them. In the year 2016, Convicted-49, Under Investigation-30, Pending Trial-157. Number of accused arrested are 305. 2015 ರಲ್ಲಿ 70 accused ಇದ್ದರೆ, 2016 ರಲ್ಲಿ 305 accused ಇದ್ದಾರೆ. 2017 ರಲ್ಲಿ ಇದುವರೆಗೆ 246 cases are

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

reported. Number of accused arrested are 351. Conviction rate is also increased as in 2017, Convicted cases are 21. ಬೆಂಗಳೂರಿನ ಮಾಹಿತಿ ಪ್ರಕಾರ 2015ರಲ್ಲಿ 69 ಕೇಸ್‌ಗಳು ದಾಖಲಾಗಿವೆ, 2016 ರಲ್ಲಿ 120 ಕೇಸ್‌ಗಳು ದಾಖಲಾಗಿವೆ. 2017 ರಲ್ಲಿ 269 ಕೇಸ್‌ಗಳು ದಾಖಲಾಗಿವೆ. That means, the growth of crime rate ಹೇಗೆ ಆಗುತ್ತಿದೆ ಎಂದರೆ, ಹಿಂದೆ ಬಾರ್‌ಗಳಿಗೆ ಹೋಗಿ ಲಿಕ್ಕರ್, ಶರಾಬು ಕುಡಿಯುತ್ತಾರೆ ಇದನ್ನು ನಿಲ್ಲಿಸಬೇಕು ಎನ್ನುವ ವಿಚಾರವಿತ್ತು. ಆದರೆ ಈಗಿನ ಮಕ್ಕಳು ಬಾರ್‌ಗಳಿಗೆ, ಪಬ್‌ಗಳಿಗೆ ಹೋಗಿ ಶರಾಬು ಕುಡಿಯುವುದಿಲ್ಲ. ಅದರ ಬದಲು ಯಾವುದಾದರೂ ಒಂದು ಗೂಡು ಅಂಗಡಿ ಹತ್ತಿರ ಅಮಲಿನಲ್ಲಿ ನಿಂತುಕೊಂಡಿರುತ್ತಾರೆ. ಕೆಲವೊಂದು ಮಾಲ್‌ಗಳಿಗೆ ಅವರಿಗಾಗಿಯೇ ಬೆಂಚ್ ಹಾಕಿರುತ್ತಾರೆ. ಅಲ್ಲಿ ಕುಳಿತು ವಿಸ್ಕಿ, ಬಿಯರ್, ವೈನ್ ಕುಡಿಯುವುದಿಲ್ಲ, they will smoke ganja and others. ಇದನ್ನು ಯಾವ ರೀತಿ ಮಟ್ಟ ಹಾಕುತ್ತೀರಾ? ಇಷ್ಟೊಂದು crime rate ಜಾಸ್ತಿಯಾಗುತ್ತಿದೆ ಎಂದರೆ ಪೊಲೀಸ್ ಇಲಾಖೆಯವರು ಈ ಬಗ್ಗೆ ಏನು ಮಾಡುತ್ತಾರೆ? ಒಂದು ಪೊಲೀಸ್ ಠಾಣೆಯಲ್ಲಿ ವರ್ಷಕ್ಕೆ 250 ರಿಂದ 500 ಬೇರೆ-ಬೇರೆ ಕೇಸ್‌ಗಳು ರಿಜಿಸ್ಟರ್ ಆಗುತ್ತವೆ. ಆದರೆ, 50% NDPS cases register ಆಗುತ್ತಿವೆ ಎಂದು ದಾಖಲೆ ಹೇಳುತ್ತದೆ. Crime rate ಜಾಸ್ತಿಯಾಗುತ್ತಿದೆ, ಇದನ್ನು ಬೆಳೆಸುತ್ತಿದ್ದಾರೆ, ಇದಕ್ಕೆ ಯಥೇಚ್ಚವಾಗಿ ಬೇಡಿಕೆ ಬರುತ್ತಿದೆ... ನಾನು ಒಂದು ಪ್ರಶ್ನೆಯನ್ನು ಕೇಳಬಯಸುತ್ತೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಳ್ವಾಸ್ ಎನ್ನುವ ಶಿಕ್ಷಣ ಸಂಸ್ಥೆ ಇದೆ. ಇಲ್ಲಿ 27,000 ವಿದ್ಯಾರ್ಥಿಗಳು ಓದುತ್ತಿದ್ದಾರೆ. ಇದರಲ್ಲಿ 23,000 ವಿದ್ಯಾರ್ಥಿಗಳು within one Campus, Boarding School ನಲ್ಲಿ ಇದ್ದುಕೊಂಡು ಓದುತ್ತಿದ್ದಾರೆ. NITTE Education Trust ನಲ್ಲಿ more than 15,000 students ಓದುತ್ತಿದ್ದಾರೆ. In St. Aloysius Institute of Education ನಲ್ಲಿ more than 13,000 students are there within one Campus in Boarding School. In Manipal Education Institution, 15,000 ವಿದ್ಯಾರ್ಥಿಗಳು ಓದುತ್ತಿದ್ದಾರೆ. Yenepoya Education Institution ನಲ್ಲಿ ಇನ್ನು 20,000 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಓದುತ್ತಿದ್ದಾರೆ. Education hub ಆಗಿ ಮೂಡಿಬರುವಂತಹ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಈ ಮಾದಕದ್ರವ್ಯಗಳ ಮಾರಾಟ ವ್ಯಾಪಕವಾಗಿ ನಡೆಯುತ್ತಿದೆ. ಕೇರಳಾ ಗಡಿಯಿಂದ, ಆಂಧ್ರದ ಗಡಿಯಿಂದ ಯಥೇಚ್ಚವಾಗಿ ಬರುತ್ತಿದೆ ಅದನ್ನು

ತಂದು ಇಲ್ಲಿ ಮಾರಾಟ ಮಾಡುತ್ತಿದ್ದಾರೆ. ಶಿವಮೊಗ್ಗ, ಮಂಡ್ಯ ಜಿಲ್ಲೆಗಳ ಕಡೆಗಳಲ್ಲಿ ಇದನ್ನು ಬೆಳೆಸುತ್ತಾರೆ ಎನ್ನುವುದನ್ನು ನಾನು ಕೇಳಿದ್ದೆನೆ. ಹೀಗಾಗಿ ಇವತ್ತು ಇದರ ಬಗ್ಗೆ ಪೊಲೀಸ್‌ನವರು ಹೆಚ್ಚಾಗಿ positive point ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು. ಮಂತ್ರಿಗಳು ಹೊಸದಾಗಿ ಚಾರ್ಜ್ ತೆಗೆದುಕೊಂಡಿದ್ದಾರೆ. ಇದರ ಬಗ್ಗೆ ಈಗಾಗಲೇ ಬೇಕಾದಷ್ಟು ಕ್ರಮವನ್ನು ತೆಗೆದುಕೊಳ್ಳಲಾಗಿದೆ ಎನ್ನುವುದನ್ನು ಅವರು ಹೇಳಿದ್ದಾರೆ. ಇಂತಹ ಕೃತ್ಯಗಳಲ್ಲಿ ತೊಡಗಿದವರನ್ನು ಗೂಂಡಾ ಕಾಯಿದೆ ಅಡಿಯಲ್ಲಿ ಕ್ರಮ ತೆಗೆದುಕೊಳ್ಳಿ ಎಂದು ನಾನು ನಿರ್ದೇಶನ ಕೊಟ್ಟಿದ್ದೇನೆ ಎಂದು ಮಂತ್ರಿಗಳು ಹೇಳಿದ್ದಾರೆ.

(ಮುಂದು)

(956)14.11.2017/3.40/ಹೆಚ್‌ವಿಃಕೆಎಸ್

**ಶ್ರೀ ಐವನ್ ಡಿ'ಸೋಜಾ(ಮುಂದುವರೆದದ್ದು):-**

ಸನ್ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ಮಂಗಳೂರಿನಲ್ಲಿ ಒಂದು ಹತ್ಯೆ ನಡೆಯಿತು. ಆ ಹತ್ಯೆ ನಡೆದ ಮೇಲೆ ಮಂಗಳೂರಿನ ಸ್ಥಳೀಯ ಪತ್ರಿಕೆಗಳಾದ 'ಉದಯವಾಣಿ', 'ವಿಜಯ ಕರ್ನಾಟಕ' ದಿನಪತ್ರಿಕೆಗಳನ್ನು ತೆಗೆದು ನೋಡಿದರೆ, ಪ್ರತಿದಿನ ಒಂದು ಪುಟದ ತುಂಬಾ ಗಾಂಜಾ ಮಾರುವವರನ್ನು ಹಿಡಿದಿರುವ ಸುದ್ದಿಯೇ ಪ್ರಕಟವಾಗುತ್ತಿರುತ್ತದೆ. ಒಂದು ಪ್ರಕರಣ ಸಂಭವಿಸಿದರೆ ಅದರ ಹಿಂದೆಯೇ ಸಾಕಷ್ಟು ಪ್ರಕರಣಗಳನ್ನು ಕಂಡುಹಿಡಿಯುವುದಕ್ಕೆ ಮತ್ತು ಅದರಲ್ಲಿ ಭಾಗಿಗಳಾಗಿರುವವರನ್ನು ಅರೆಸ್ಟ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಜಾಮೀನು ರಹಿತ ಪ್ರಕರಣಗಳಲ್ಲಿ ಯಾರು ಜೈಲಿಗೆ ಹೋಗುತ್ತಾರೆ. ಅವರು ಹೊರಗೆ ಬರುವುದೇ ಇಲ್ಲ. ಸಾಧಾರಣವಾಗಿ 6-8 ತಿಂಗಳು ಜೈಲಿನಲ್ಲಿಯೇ ಇರುತ್ತಾರೆ. ಹಿಂದೆ, 'ಯಾರನ್ನಾದರು ದೊಡ್ಡ ಪ್ರಮಾಣದ ಶಿಕ್ಷೆಗೆ ಗುರಿಪಡಿಸಬೇಕಾದರೆ ಆತನ ಕಾರಿನಲ್ಲಿ ಶ್ರೀಗಂಧದ ಮರದ ತುಂಡನ್ನು ಹಾಕಿ ಅಥವಾ ಗಾಂಜಾ ಹಾಕಿ' ಎಂದು ಹೇಳುತ್ತಿದ್ದರು. ಆಗ ಆ ವ್ಯಕ್ತಿಯೂ ಜೈಲಿಗೆ ಹೋಗುತ್ತಾನೆ, ಆತನ ವಾಹನವೂ seize ಆಗುತ್ತದೆ ಮತ್ತು ಹರಾಜು ಆಗುತ್ತದೆ. ಕಾನೂನಿಗೆ ಸಾಕಷ್ಟು ಬದಲಾವಣೆಗಳನ್ನು ತಂದರೂ ಸಹ ಈಗಿನ ಪರಿಸ್ಥಿತಿಯನ್ನು ನಿಭಾಯಿಸುವುದಕ್ಕೆ ನಮ್ಮಲ್ಲಿರುವ ಪೊಲೀಸ್ ಬಲ ಕಡಿಮೆಯಾಗಿದೆ ಎನ್ನುವುದು ನನ್ನ ಭಾವನೆಯಾಗಿದೆ. ನನ್ನ ಜಿಲ್ಲೆಯ Narcotic Cellನಲ್ಲಿ ಎಷ್ಟು ಜನ ಪೊಲೀಸಿನವರು ಇದ್ದಾರೆ ಎನ್ನುವ ಪ್ರಶ್ನೆ ಕೇಳಿದ್ದೆ. 3-4 ಜನ ಪೊಲೀಸಿನವರು ಇದ್ದಾರೆ ಎನ್ನುವ ಉತ್ತರ ಬಂತು. ಅವರುಗಳು ಹೇಗೆ ಅಲ್ಲಿಗೆ ಬಂದರು ಎಂದರೆ, ಎಲ್ಲಿಯೂ ಬೇಡದವರು ಆ ಇಲಾಖೆಗೆ ಬಂದಿರುತ್ತಾರೆ. ಚುರುಕಾಗಿರುವ ಶಕ್ತಿಶಾಲಿಗಳಾಗಿರುವ ಪೊಲೀಸಿನವರು ಈ ಇಲಾಖೆಗೆ ಅವಶ್ಯಕತೆ ಇದ್ದಾರೆ. ಯಾವ ರೀತಿಯಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸ್ಕ್ವಾಡ್‌ಗಳಗೆ ಒಳ್ಳೆಯ ಪೋಲೀಸ್‌ರನ್ನು ಹುಡುಕಿ ಹಾಕುತ್ತಾರೆ, ಆ ರೀತಿಯ competition ಬರಬೇಕಾಗುತ್ತದೆ. ಆಗ ಮಾತ್ರ ಬಹುಶಃ ಇದರ ವಿರುದ್ಧ ಹೋರಾಡುವುದಕ್ಕೆ ಸಾಧ್ಯವಾಗುತ್ತದೆ. ಪೋಲೀಸಿನವರು ತಮ್ಮ ಕರ್ತವ್ಯದ ಜೊತೆಗೆ ಮತ್ತೊಂದು ಕೆಲಸವನ್ನು ಮಾಡಬೇಕಾಗಿದೆ. ಜನರ ಜೊತೆಗೆ ಸಂಬಂಧವನ್ನು ಬೆಳೆಸಿಕೊಳ್ಳಬೇಕಾಗುತ್ತದೆ. ವರ್ಷಕ್ಕೊಮ್ಮೆ 'say no to drugs', 'World Drug Day' ಎಂದು ಆಚರಣೆ ಮಾಡುವುದು ಬಿಟ್ಟರೆ, ಉಳಿದ ದಿನಗಳಲ್ಲಿ ಯಾರೂ ಇದರ ಬಗ್ಗೆ ಗಮನಹರಿಸುವುದಿಲ್ಲ. ವರ್ಷದಲ್ಲಿ ಒಂದು ದಿನ ಶಾಲಾ ಮಕ್ಕಳನ್ನು ಕರೆದುಕೊಂಡು ಹೋಗಿ placard ಹಿಡಿಸಿ '*say no to drugs*' ಎಂದು ಹೇಳಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾರೆ. ಮಾನ್ಯ ಶಿಕ್ಷಣ ಸಚಿವರು ಈ ಸದನದಲ್ಲಿ ಉಪಸ್ಥಿತರಿದ್ದಾರೆ. ಬಹಳಷ್ಟು ವಿದ್ಯಾರ್ಥಿಗಳು ಈ ಚಟಕ್ಕೆ ಬಲಿಯಾಗಿದ್ದಾರೆ. ಅನೇಕ ಪ್ರಕರಣಗಳಲ್ಲಿ ಮಾದಕ ದ್ರವ್ಯಗಳನ್ನು overdose ತೆಗೆದುಕೊಂಡು ಎಷ್ಟೋ ವಿದ್ಯಾರ್ಥಿಗಳು ಮರಣ ಹೊಂದಿದ್ದಾರೆ. ಆದರೆ, ಪೋಷಕರು ಸಮಾಜದಲ್ಲಿ ಕುಟುಂಬದ ಗೌರವದ ದೃಷ್ಟಿಯಿಂದ ನನ್ನ ಮಗ ಅಥವಾ ಮಗಳು ಮಾದಕ ದ್ರವ್ಯ ವ್ಯಸನದಿಂದ ಸಾವನ್ನಪ್ಪಿದ್ದಾರೆ ಎಂದು ಹೇಳಿಕೊಳ್ಳುವುದಕ್ಕೆ ಹಿಂಜರಿಯುತ್ತಾರೆ. ಇಂತಹ ಅನೇಕ ಪ್ರಕರಣಗಳಿವೆ. ಈ ವ್ಯಸನಕ್ಕೆ ಬಲಿಯಾದವರು lifetime total weakness suffer ಆಗಿರುತ್ತಾರೆ. ನನ್ನ ಶ್ರೀಮತಿಯವರು ವೈದ್ಯರಾಗಿದ್ದಾರೆ. ಇಂತಹ ವ್ಯಸನಿಗಳು ಅವರ ಬಳಿ ಚಿಕಿತ್ಸೆಗೆ ಬಂದಾಗ, 'ಆತನಿಗೆ ಚಿಕಿತ್ಸೆ ಮಾಡಲಾಯಿತೇ' ಎಂದು ನಾನು ಕೇಳಿದರೆ, 'ಆತನ ಶಾರೀರಿಕ ಬಲವೆಲ್ಲ ಕುಂದು ಹೋಗಿದೆ. ಆತ ಮಾದಕ ವ್ಯಸನಿಯಾಗಿದ್ದ' ಎಂದು ಹೇಳುತ್ತಾರೆ. ಆದರೆ, ಇದನ್ನು ತಡೆಗಟ್ಟುವುದಕ್ಕೆ ಏನಾದರೊಂದು ಮದ್ದು ಹುಡುಕಬೇಕಾಗುತ್ತದೆ. ವಿದ್ಯಾರ್ಥಿಗಳನ್ನು ಕರೆದು ಅವರ ಜೊತೆಗೆ ಈ ಬಗ್ಗೆ ಮಾತನಾಡಬೇಕಾಗುತ್ತದೆ. ವಿದ್ಯಾರ್ಥಿಗಳು ಮಾದಕ ವ್ಯಸನಿಗಳಾಗದಂತೆ ಕಾರ್ಯಕ್ರಮಗಳನ್ನು ನಾವು ಆಯೋಜಿಸಬೇಕಾಗುತ್ತದೆ. ಮಾಲ್‌ಗಳಲ್ಲಿ ಮಾದಕ ದ್ರವ್ಯಗಳ ಸೇವನೆಯ ಸಂಸ್ಕೃತಿ ಹೆಚ್ಚಾಗುತ್ತಿದೆ. ಮಾಲ್‌ಗಳಲ್ಲಿ ಒಂದು ಪಬ್ ಇದ್ದರೆ ಅದರೊಳಗೆ 100 ಕುರ್ಚಿಗಳನ್ನು ಹಾಕುತ್ತಾರೆ. ಅಲ್ಲಿಗೆ ಹೋದವರು ಒಂದು ಬಾಟಲ್ ಬಿಯರ್ ಅಥವಾ ವಿಸ್ಕಿಯನ್ನು ತೆಗೆದುಕೊಂಡರೆ ಸಂಜೆಯಾದರೂ ಹೊರಗೆ ಬರುವುದಿಲ್ಲ. ಅದು ವಿಸ್ಕಿಯಾಗಿರುವುದಿಲ್ಲ ಬೇರೆಯೇ ಆಗಿರುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಇಂತಹ ಮಾದಕ ದ್ರವ್ಯಗಳನ್ನು ಸಾಗಾಣಿಕೆ ಮಾಡುವ ಏಜೆಂಟ್‌ಗಳು, ಗೂಡಂಗಡಿಗಳಲ್ಲಿ ಮಾರಾಟವಾಗುವ ಗುಟ್ಕಾ ಇವುಗಳನ್ನು ban ಮಾಡಬೇಕೆಂದು ಹಿಂದೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ದೊಡ್ಡ ಪ್ರಮಾಣದಲ್ಲಿ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಆದರೆ, ಈಗ ಪ್ರತಿಯೊಂದು ಗೂಡಂಗಡಿಗಳಲ್ಲಿ ಮಾದಕ ದ್ರವ್ಯಗಳು ಯಥೇಚ್ಛವಾಗಿ ಸಿಗುತ್ತಿವೆ. ಎಲ್ಲಿ ಈ ಗೂಡಂಗಡಿಗಳನ್ನು ಮುಚ್ಚಬೇಕೆಂದು ನಾವುಗಳು ಒತ್ತಾಯ ಮಾಡಿದ್ದೆವೋ ಅಲ್ಲಿ ಅವುಗಳನ್ನು ಮುಚ್ಚಿಯೇ ಇಲ್ಲ. ಒಂದು ಅಂಶವನ್ನು ಮಾನ್ಯ ಶಿಕ್ಷಣ ಸಚಿವರ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಎಲ್ಲ ಮಾಲ್‌ಗಳು ಮತ್ತು ಅಂಗಡಿಗಳ ಮುಂದೆ ಮಾದಕ ದ್ರವ್ಯಗಳಿಂದಾಗುವ ದುಷ್ಪರಿಣಾಮಗಳ ಬಗ್ಗೆ ಒಂದು ಬೋರ್ಡ್ ಹಾಕುವುದು ಉತ್ತಮ ಎನ್ನುವುದು ನನ್ನ ಸಲಹೆಯಾಗಿದೆ. ಮಾಲ್‌ಗಳ ಪ್ರವೇಶದ್ವಾರ ಮತ್ತು ನಿರ್ಗಮನ ದ್ವಾರಗಳಲ್ಲಿ ಈ ಬೋರ್ಡ್‌ಗಳನ್ನು ಹಾಕಬೇಕಾಗುತ್ತದೆ. ಹಿಂದೆ ಧೂಮಪಾನ ಆರೋಗ್ಯಕ್ಕೆ ಶೇಕಡಾ 75 ರಿಂದ ೯೦ರಷ್ಟು ಹಾನಿಕಾರಕ ಎನ್ನುವ ಮಾತನ್ನು ಹೇಳಿದ್ದೇವೆ. ಈಗ ಬೀಡಿ ಸಿಗರೇಟ್ ಸೇವಿಸುವವರ ಸಂಖ್ಯೆ ಕಡಿಮೆಯಾಗಿದೆ. It is a dying habit ಆಗಿದೆ. ಅದೇ ರೀತಿಯಲ್ಲಿ ಮಾದಕ ದ್ರವ್ಯಗಳ ಸೇವನೆಯ ಬಗ್ಗೆಯೂ ಅರಿವು ಮೂಡಿಸಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಪರವಾನಗಿಯನ್ನು ತೆಗೆದುಕೊಂಡು ಯಾರೂ ಪೇಯಿಂಗ್ ಗೆಸ್ಟ್ ಸೆಂಟರ್‌ಗಳನ್ನು ನಡೆಸುವುದಿಲ್ಲ. ನಮ್ಮ ಭಾಗದಲ್ಲಿ ಇವುಗಳಿಗೆ ಬಹಳಷ್ಟು ಬೇಡಿಕೆಯಿದೆ. ಯಾರೋ ಒಬ್ಬರು ಒಂದು flat ತೆಗೆದುಕೊಂಡು 50 ಜನರಿಗೆ ಒಂದು ರೂಂ ಕೊಡುತ್ತಾರೆ. ಪೇಯಿಂಗ್ ಗೆಸ್ಟ್ ಸೆಂಟರ್ ನಡೆಸುವವರಿಗೆ ಯಾವುದೇ ನಿಯಮಗಳು, ಕಾನೂನು ಮತ್ತು ಬದ್ಧತೆಗಳು ಇಲ್ಲ. ಅವರಿಗೆ ಕೇವಲ ಬಾಡಿಗೆ ಕೊಟ್ಟರೇ ಸಾಕು. ಪಿ.ಜಿ. ಸೆಂಟರ್‌ಗಳಿಗೆ ಯಾವುದೇ ಲಗಾಮು ಇಲ್ಲ. ಈ ಪೇಯಿಂಗ್ ಗೆಸ್ಟ್ ಸೆಂಟರ್‌ಗಳಲ್ಲಿ ಇಂತಹ ಚಟುವಟಿಕೆಗಳು ಯಥೇಚ್ಛವಾಗಿ ನಡೆಯುತ್ತಿರುವುದನ್ನು ಮಾನ್ಯ ಸಚಿವರ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಇದರ ಬಗ್ಗೆ ವಿದ್ಯಾರ್ಥಿಗಳ ಜೊತೆಗೆ ಚರ್ಚೆ ಮಾಡಬೇಕಾಗುತ್ತದೆ. ಸಾರ್ವಜನಿಕವಾಗಿ ಇದನ್ನು ಖಂಡನೆ ಮಾಡಬೇಕಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎ.ಬಿ.ಇಬ್ರಾಹಿಂ ಎನ್ನುವಂತಹ ಒಬ್ಬ ಅಧಿಕಾರಿ ಸರ್ಕಾರ seize ಮಾಡಿದ್ದು ಮತ್ತು ಬೇರೆ ಕಡೆಗಳಿಂದ ಸಿಕ್ಕಿದಂತಹ ಎಲ್ಲ ಗಾಂಜಾವನ್ನು ಸಾರ್ವಜನಿಕವಾಗಿ ಸುಟ್ಟು *'say no to drugs'* ಎಂದು ಹೇಳುವಂತಹ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು.

ಸನ್ಮಾನ್ಯ ಸಭಾಪತಿಯವರೇ, ಅನೇಕ ಮೆಡಿಕಲ್ ಸ್ಟೋರ್‌ಗಳಲ್ಲಿ ಮಕ್ಕಳಿಗೆ ಕೊಡುವಂತಹ syrupಗಳಲ್ಲಿ ಡ್ರಗ್ ಇರುವಂತಹವುಗಳನ್ನು without prescription ಯಥೇಚ್ಛವಾಗಿ ಮಾರಾಟ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡುತ್ತಿದ್ದಾರೆ. ಇವುಗಳನ್ನು ನಿಯಂತ್ರಿಸುವವರೇ ಇಲ್ಲ. Either tablets or syrups ಇದಕ್ಕೆ ಔಷಧಿ ಚೀಟಿಯ ಅವಶ್ಯಕತೆಯೇ ಇಲ್ಲ. ಯಾರೋ ಒಬ್ಬ ವಿದ್ಯಾರ್ಥಿ ಮೆಡಿಕಲ್ ಸ್ಟೋರ್‌ಗೆ ಬಂದು ಒಂದು ಬಾಟಲಿ syrup ತೆಗೆದುಕೊಂಡು ಕುಡಿದು ಮನೆಗೆ ಹೋಗಿ ಮಲಗುತ್ತಾನೆ. ಕಾಲೇಜಿಗೆ ಹೋಗುವುದೇ ಇಲ್ಲ. ಕಾಲೇಜಿನ ಕ್ಯಾಂಪಸ್‌ಗಳನ್ನು ಗಾಂಜಾ ಮಾರಾಟ ಮಾಡುವವರು ವಿದ್ಯಾರ್ಥಿಗಳನ್ನು ಟಾರ್ಗೆಟ್ ಮಾಡಿರುತ್ತಾರೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಬೇರೆ ಬೇರೆ ದೇಶಗಳಿಂದ ಬಂದಂತಹ ಸುಮಾರು ಒಂದೂವರೆ ಎರಡು ಲಕ್ಷ ಜನ ವಿದ್ಯಾರ್ಥಿಗಳು ಉನ್ನತ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಆಫ್ರಿಕಾ ಮುಂತಾದ ಬೇರೆ ದೇಶಗಳಿಂದ ಬರುವಂತಹ ವಿದ್ಯಾರ್ಥಿಗಳು ಒಂದು ಬೈಕ್ ಇಟ್ಟುಕೊಂಡು ಬೀಚ್‌ಗಳಿಗೆ ಹೋಗಿ ಮಾದಕ ದ್ರವ್ಯ ಸೇವನೆ ಮಾಡುತ್ತಿರುತ್ತಾರೆ. ಅವರಿಗೆ ಇದೇ ಕೆಲಸವಾಗಿದೆ. ಅವರನ್ನು ಕೇಳುವವರು ಯಾರೂ ಇಲ್ಲ. ಕೆಲವರ visa ಅವಧಿ ಮುಗಿದು ಹೋಗಿದ್ದರೂ ಸಹ ತಮ್ಮ ದೇಶಕ್ಕೆ ಹಿಂದಿರುಗದೇ ನಮ್ಮ ದೇಶದಲ್ಲಿ ಉಳಿದುಕೊಂಡು ಮಾದಕ ದ್ರವ್ಯವನ್ನು ಮಾರಾಟದಂತಹ ಕೆಲಸವನ್ನು ಅವರು ಮಾಡುತ್ತಿದ್ದಾರೆ. ವಿದೇಶದಿಂದ ಬಂದು ಇಲ್ಲಿ ನೆಲಸುವವರ ಮೇಲೆ ಹೆಚ್ಚು ಗಮನವನ್ನು ಹರಿಸುವುದಕ್ಕೆ ಪೊಲೀಸ್ ವ್ಯವಸ್ಥೆಯನ್ನಾಗಲೀ ಅಥವಾ ಬೇರೆ ತನಿಖಾ ತಂಡವನ್ನು ಇಟ್ಟುಕೊಳ್ಳುವಂತಹ ಅವಶ್ಯಕತೆ ಇರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 5 ಕಿಲೋಮೀಟರ್ ವ್ಯಾಪ್ತಿಯಲ್ಲಿ we have six medical colleges. ದೇಶದ ಬೇರೆ ಯಾವ ಭಾಗದಲ್ಲಿಯೂ 5 ಕಿಲೋಮೀಟರ್ ವ್ಯಾಪ್ತಿಯಲ್ಲಿ 06 ಮೆಡಿಕಲ್ ಕಾಲೇಜುಗಳು ಇರುವುದಕ್ಕೆ ಸಾಧ್ಯವಿಲ್ಲ. ಈ ಕಾಲೇಜುಗಳಿಗೆ ಎಷ್ಟೊಂದು ಜನ ವಿದ್ಯಾರ್ಥಿಗಳು ಬರುತ್ತಿರುತ್ತಾರೆ. ಅವರುಗಳು ಇಂತಹ ಚಟಗಳಿಗೆ ಬಲಿಯಾಗುವುದನ್ನು ತಡೆಯುವುದಕ್ಕೆ ಹೆಚ್ಚು ಪೊಲೀಸ್ ಬಲವನ್ನು ಮತ್ತು Narcotic Drug Cell ಅನ್ನು ಬಲಪಡಿಸುವಂತಹ ಅವಶ್ಯಕತೆ ಇದೆ ಎನ್ನುವ ಅಂಶವನ್ನು ಮಾನ್ಯ ಸಚಿವರ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ನಿಟ್ಟಿನಲ್ಲಿ ಜಿಲ್ಲೆಗಳ ಎಲ್ಲ ಪೊಲೀಸ್ ಅಧೀಕ್ಷಕರನ್ನು ಕರೆದು ಸೂಚನೆ ನೀಡಲಾಗಿದೆ. ಅದೇ ರೀತಿ ಸರ್ಕಾರ ಕೈಗೊಂಡಿರುವ ಅನೇಕ ಕ್ರಮಗಳ ಬಗ್ಗೆ ಲಿಖಿತ ರೂಪದ ಉತ್ತರದಲ್ಲಿ ತಿಳಿಸಲಾಗಿದೆ. ಸರ್ಕಾರ ನೀಡಿರುವ ಉತ್ತರದ 16ನೇ ಅಂಶದಲ್ಲಿ "ಜಿಲ್ಲೆ/ನಗರಪ್ರದೇಶಗಳ ವ್ಯಾಪ್ತಿಯಲ್ಲಿ ಯಾವುದೇ ಭಾಗದಲ್ಲಿ ಗಾಂಜಾ/ಅಫೀಮು ಮಾರುವಂತಹ ಅಕ್ರಮ ಚಟುವಟಿಕೆ ನಡೆಯಲು ಬಿಡಬಾರದು. ಕರ್ನಾಟಕ ರಾಜ್ಯವನ್ನು ಗಾಂಜಾ/ಅಫೀಮು ಮಾದಕ ದ್ರವ್ಯಗಳಿಂದ ಮುಕ್ತವಾಗುವಂತೆ ನೋಡಿಕೊಳ್ಳಬೇಕು. ಯಾರಾದರು ಇಂತಹ ಕೆಲಸ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡುತ್ತಿರುವುದು ಕಂಡು ಬಂದರೆ, ಅಂತಹವರ ವಿರುದ್ಧ ಗೂಂಡಾ ಕಾಯಿದೆಯಡಿಯಲ್ಲಿ ಕಠಿಣ ಕ್ರಮ ಕೈಗೊಳ್ಳಬೇಕು” ಎಂದು ತಿಳಿಸಲಾಗಿದೆ. ನಾನು ಅದನ್ನು ಸ್ವಾಗತಿಸುತ್ತೇನೆ.

(ಮುಂದುವರಿದಿದೆ)

(957)14.11.2017-3.50-ಪಿಕೆ-ಕೆಎಸ್

ಶ್ರೀ ಐವನ್ ಡಿ'ಸೋಜಾ(ಮುಂದುವರೆದಿದೆ)

ಅದೇರೀತಿ, ನಗರ ಪ್ರದೇಶ ವ್ಯಾಪ್ತಿಯ ಯಾವುದೇ ಭಾಗದಲ್ಲಿ ಕ್ರಿಕೆಟ್ ಬೆಟ್ಟಿಂಗ್, ಇಸ್ಪೀಟ್, ಮಟ್ಕಾದಂತಹ ಚಟುವಟಿಕೆಗಳಿಗೆ ಆಸ್ಪದ ಕೊಡಕೂಡದು. ಇಂತಹ ಚಟುವಟಿಕೆಗಳು ಸಮಾಜದ ಸ್ವಾಸ್ಥ್ಯ ಹಾಳು ಮಾಡುವುದರಿಂದ ಇಂಥದ್ದನ್ನು ನಿರ್ದಾಕ್ಷಿಣ್ಯವಾಗಿ ಹತ್ತಿಕ್ಕಬೇಕು ಎಂದು ನೀವು ಪೋಲೀಸರಿಗೆ ಕರೆ ಕೊಟ್ಟಿದ್ದೀರಿ. ನಾನು ಅದನ್ನು ಸ್ವಾಗತ ಮಾಡುತ್ತೇನೆ. ನಮ್ಮ ಮಂಗಳೂರಿನಲ್ಲಿ ಸುಮಾರು 150ಕ್ಕಿಂತ ಅಧಿಕ ಸ್ಕಿಲ್ ಗೇಮ್ಸ್ ಮತ್ತು ಇಸ್ಪೀಟ್ ಗೇಮ್ ಕ್ಲಬ್‌ಗಳು ಯಥೇಚ್ಛವಾಗಿ ನಡೆಯುತ್ತಿವೆ. ಯಾರು, ಏನು ಎಂದು ಕೇಳುವುದಕ್ಕಾಗುವುದಿಲ್ಲ. ತಾವು ಒಳ್ಳೆಯ ಉದ್ದೇಶದಿಂದ ಕರೆ ಕೊಟ್ಟಿದ್ದೀರಿ. ಆದರೆ ಇದು ನಮ್ಮ ಜಿಲ್ಲೆಯಲ್ಲಿ ಯಥೇಚ್ಛವಾಗಿ ನಡೆಯುತ್ತಿದೆ ಎನ್ನುವುದು ಸತ್ಯ ಸಂಗತಿಯಾಗಿದೆ. ಇಂತಹ ಕೇಂದ್ರಗಳನ್ನು ಬಂದ್ ಮಾಡಿ ಎಂದು ಕರೆ ಕೊಡಿ. ನಮ್ಮಲ್ಲಿ ಮಸಾಜ್ ಪಾರ್ಲರ್‌ಗಳಿವೆ. ಮಂಗಳೂರಿನ ಮೇಯರ್‌ರವರು ಸ್ವತಃ ಇಂತಹ ಕೇಂದ್ರದ ಮೇಲೆ raid ಮಾಡಿ, ಲೈಸೆನ್ಸ್ ಇಲ್ಲ ಬಂದ್ ಮಾಡಿ ಎಂದು ಹೇಳಿದಾಗ ಅವರ ವಿರುದ್ಧವೇ ಕೆಲವು ಜನ ಕೋರ್ಟ್‌ಗೆ ಹೋದರು. ಆಗ ಹೈಕೋರ್ಟ್ ಅವರ ರಕ್ಷಣೆಗೆ ಬಂತು. ಕೋರ್ಟ್ ‘everyone has got right to visit’ ಎಂದು ಹೇಳಿತ್ತು. ಯಾರು ಲೈಸೆನ್ಸ್ ಇಲ್ಲದೇ ನಡೆಸುತ್ತಾರೋ ಅವರ ಮೇಲೆ ದಂಡವನ್ನು ಹಾಕಬೇಕು. ಏನು ಮಾಡಿದರೂ ನಡೆಯುತ್ತದೆ ಎನ್ನುವ ಮನೋಭಾವನೆ ಬರುವುದಕ್ಕೆ ಬಿಡಬಾರದು. ಇದೂ ಕೂಡ ಮಾದಕ ದ್ರವ್ಯದ ಒಂದು ಭಾಗ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಎಲ್ಲಿ ಇಂತಹ ಕೃತ್ಯಗಳು ನಡೆಯುತ್ತವೆಯೋ, ಎಲ್ಲಿ ಅಕ್ರಮವಾಗಿ ಇಸ್ಪೀಟ್, ದಂಧೆ ಇತ್ಯಾದಿಗಳು ನಡೆಯುತ್ತವೆಯೋ ಅದನ್ನು ಮಟ್ಟ ಹಾಕುವಂಥದ್ದು ಮತ್ತು ಅವುಗಳ ವಿರುದ್ಧ ಕ್ರಮ ತೆಗೆದುಕೊಳ್ಳುವಂಥದ್ದು ಆಗಬೇಕು. ಇದರ ಅನಿವಾರ್ಯತೆ ಇದೆ ಎನ್ನುವುದನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ರಾಮಲಿಂಗಾರೆಡ್ಡಿಯವರು ಈ ಇಲಾಖೆಯನ್ನು ವಹಿಸಿಕೊಂಡ ಮೇಲೆ, ಇಲಾಖೆಯನ್ನು ನಡೆಸುತ್ತಿರುವ ರೀತಿ, ಇಡೀ ಇಲಾಖೆಯ ಜೊತೆ ವ್ಯವಹಾರ ನಡೆಸುತ್ತಿರುವ ರೀತಿಯ ಬಗ್ಗೆ ಸಂತೋಷ ಇದೆ. ನಾವು ಹೇಳದೆಯೇ ನೀವು ನಿಮ್ಮದೇ ಆದ ರೀತಿಯಲ್ಲಿ ಈ ಅಂಶಗಳನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಳವಡಿಸಿದ್ದೀರಿ, ಆದರೆ ಅದು ಕಾರ್ಯಗತ ಆಗಬೇಕು ಅಲ್ಲವೇ? ಇದನ್ನು ಕಾರ್ಯಗತ ಮಾಡುವುದಕ್ಕೆ ಅಧಿಕಾರಿಗಳು ಬೇಕಲ್ಲವೇ? ಗಾಂಜಾ, ಅಫೀಮ್ ಮತ್ತು ಅಕ್ರಮ ವ್ಯವಹಾರಗಳು ಹೇಗೆ ನಡೆಯುತ್ತವೆ? ಅಲ್ಲದೇ, ಇವುಗಳಿಗೆ ಬಲಿಯಾಗಿರುವವರು ಮಕ್ಕಳು, ವಿದ್ಯಾರ್ಥಿಗಳೇ ಹೊರತು ಬೇರೆ ಯಾರೂ ಅಲ್ಲ. ಮೆಡಿಕಲ್ ಸ್ಟೋರ್‌ಗಳಲ್ಲಿ ಇಂತಹ ಅವ್ಯವಹಾರಗಳು ಯಥೇಚ್ಛವಾಗಿ ನಡೆಯುತ್ತವೆ. ಅವರನ್ನು ಕಂಟ್ರೋಲ್ ಮಾಡುವವರು ಯಾರು? ಅವರನ್ನು ಕೇಳಿದರೆ, ಅವನಲ್ಲ ಇವನು, ಇವನಲ್ಲ ಅವನು ಎಂದು ಹೇಳಿ ತಪ್ಪಿಸಿಕೊಳ್ಳುತ್ತಾರೆ. ಈ ಒಂದು ಸಮಸ್ಯೆ ಸಮಾಜಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಿದೆ and this is a big challenge for us. ನಮ್ಮ ವಿದ್ಯಾರ್ಥಿಗಳು, ನಮ್ಮ ಯುವ ಪೀಳಿಗೆ ಇಂತಹ ಕೃತ್ಯಕ್ಕೆ ಬಲಿಯಾದರೆ ಅದು ಸಮಾಜಕ್ಕೆ ದೊಡ್ಡ ಮಾರಕವಾಗಿ ಪರಿಣಮಿಸುತ್ತದೆ ಎನ್ನುವುದನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಈ ಕುರಿತು ಅನೇಕ ಜನ ಸದಸ್ಯರು ಮಾತನಾಡುವವರಿದ್ದಾರೆ ಎಂದು ನಾನು ಭಾವಿಸುತ್ತೇನೆ. ಕರ್ನಾಟಕ ರಾಜ್ಯ ಮಾದಕ ದ್ರವ್ಯಗಳ ಸಾಗಾಣಿಕೆಯಿಂದ ಮತ್ತು ಸೇವನೆ, ಇದು ಪ್ರಸ್ತುತ ಸಚಿವರ ಕಾಲದಲ್ಲೇ ಮುಕ್ತವಾಗಬೇಕು, ಅಗಬೇಕು, ಏಕೆಂದರೆ ಅವರಿಗೆ ಅಂತಹ ಶಕ್ತಿ ಇದೆ. ಅಕ್ರಮ ಚಟುವಟಿಕೆಗಳನ್ನು ಮಟ್ಟ ಹಾಕುವುದಕ್ಕೆ ಮಾನ್ಯ ಸಚಿವರು ಸೂಕ್ತ ಕ್ರಮ ಕೈಗೊಳ್ಳಬೇಕು. ನನಗೆ ಸರ್ಕಾರದ ಮೇಲೆ ವಿಶ್ವಾಸ ಇದೆ, ಮಾನ್ಯ ಸಚಿವರ ಮೇಲೆ ವಿಶ್ವಾಸ ಇದೆ. ಖಂಡಿತವಾಗಿ ಸರ್ಕಾರ ಇಂಥದ್ದನ್ನು ಮಟ್ಟ ಹಾಕುತ್ತದೆ ಎಂದು ಭಾವಿಸುತ್ತೇನೆ. ಮಟ್ಟ ಹಾಕದೇ ಇದ್ದರೆ ನಾವು ಯುವ ಪೀಳಿಗೆಯಿಂದ ದೊಡ್ಡ ಸವಾಲನ್ನು ಎದುರಿಸಬೇಕಾಗುತ್ತದೆ, ಇಲ್ಲಿ ಕುಳಿತುಕೊಂಡಿರುವ ಎಲ್ಲಾ ಶಾಸಕರು accountable ಆಗಬೇಕಾಗುತ್ತದೆ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:-** ತುಂಬಾ ಜನ ಸದಸ್ಯರು ಈ ಚರ್ಚೆಯಲ್ಲಿ ಭಾಗವಹಿಸಬೇಕು ಎಂದು ಇಚ್ಛೆ ವ್ಯಕ್ತಪಡಿಸುತ್ತಿದ್ದಾರೆ. ಹೆಚ್ಚು ಜನ ಸದಸ್ಯರಿಗೆ ಅವಕಾಶ ಕೊಡಬೇಕು ಎಂದು ನನ್ನ ಮನಸ್ಸಿನಲ್ಲಿದೆ. ಆದರೆ ಅದಕ್ಕೆ ತಮ್ಮ ಸಹಕಾರ ಬೇಕು. ವಿಚಾರಗಳನ್ನು repeat ಮಾಡಬಾರದು. ಈ ಕುರಿತು ಮಾತನಾಡಲು ಬಹಳ ವಿಷಯಗಳಿವೆ. ಒಬ್ಬೊಬ್ಬರು ಒಂದೊಂದು ವಿಷಯವನ್ನು ಮಾತನಾಡಿ. Each one of them should talk on one issue. Suppose one wants to talk about the college students, confine it to the college students, ಯಾರಾದರೂ ಒಬ್ಬರು ಗೂಡಂಗಡಿಯ ಬಗ್ಗೆ ಮಾತನಾಡಬಹುದು. ಅದು ಬಿಟ್ಟು ಸಮಗ್ರವಾಗಿ ಎಲ್ಲಾ ವಿಷಯಗಳನ್ನು ಮಾತನಾಡಿದರೆ ನನಗೆ ಸಮಯ ಕೊಡಲು ಕಷ್ಟವಾಗುತ್ತದೆ. 3-4 ನಿಮಿಷದಲ್ಲಿ ಸದಸ್ಯರುಗಳು ತಮ್ಮ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾತುಗಳನ್ನು ಮುಗಿಸಬೇಕು. ಸಚಿವರಾದ ಮಾನ್ಯ ಯು.ಟಿ.ಖಾದರ್‌ರವರು ಈ ಹಿಂದೆ ಆಹಾರ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು. ಅವರು ಕೂಡ ಕೆಲವು ಮಾತುಗಳನ್ನು ಹೇಳಬಯಸುತ್ತಿದ್ದಾರೆ.

**ಶ್ರೀ ಯು.ಟಿ.ಖಾದರ್(ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):–** ಮಾನ್ಯ ಸಭಾಪತಿಯವರೇ, ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಮಾನ್ಯ ಐವನ್ ಡಿ'ಸೋಜಾರವರು ಹೇಳಿದಂತಹ ವಿಚಾರಗಳನ್ನು ನಾನು ಒಪ್ಪಿಕೊಳ್ಳುತ್ತೇನೆ. ಮತ್ತೆ, ಸರ್ಕಾರ ಮತ್ತು ಮಾನ್ಯ ಸಚಿವರು ಇದರ ನಿಯಂತ್ರಣಕ್ಕೆ ಸೂಕ್ತ ಕಾರ್ಯಕ್ರಮವನ್ನು ರೂಪಿಸುತ್ತಾರೆ ಎಂದು ಭಾವಿಸುತ್ತೇನೆ. ಎಲ್ಲಾ ಜನಪ್ರತಿನಿಧಿಗಳು ಇದಕ್ಕೆ ಕೈಜೋಡಿಸುವ ಕೆಲಸ ಮಾಡಬೇಕು. ಸ್ಥಳೀಯ ಮಟ್ಟದ ಜನಪ್ರತಿನಿಧಿಗಳು ಎಲ್ಲಿ ಕೈಜೋಡಿಸುತ್ತಾರೋ ಅಲ್ಲಿ ಇಂತಹ ಸಮಸ್ಯೆಗಳಿರುವುದಕ್ಕೆ ಸಾಧ್ಯವಿಲ್ಲ. ನನ್ನ ಕ್ಷೇತ್ರದಲ್ಲಿ ಒಂದೇ ಒಂದು ಸ್ಕಿಲ್ ಗೇಮ್ ಇಲ್ಲ, ಒಂದೇ ಒಂದು ಕ್ಲಬ್ ಇಲ್ಲ, ಒಂದೇ ಒಂದು ಮಸಾಜ್ ಪಾರ್ಲರ್ ಇಲ್ಲ, ಇವುಗಳಿಗೆ ನಾನು ಅವಕಾಶ ಮಾಡಿಕೊಡಲಿಲ್ಲ. ಇಂತಹ ಕೇಂದ್ರಗಳನ್ನು ಓಪನ್ ಮಾಡಲು ಬಂದವರನ್ನು ಬೇರೆ ಕಡೆ ಹೋಗುವುದಕ್ಕೆ ಹೇಳಿದೆ. ಕೋರ್ಟ್‌ನ ಆರ್ಡರ್ ತಂದು force ಮಾಡಲಿಕ್ಕೆ ಪ್ರಾರಂಭ ಮಾಡಿದರು, ಆದರೆ ನಿರಂತರವಾಗಿ ೩ ದಿನಗಳ ಕಾಲ ಪೊಲೀಸ್ ರೈಡ್ ಆದನಂತರ ಅವರೇ ಆ ಜಾಗವನ್ನು ಬಿಟ್ಟು ಬೇರೆ ಕಡೆ ಹೋದರು. ಸ್ಥಳೀಯ ಮಟ್ಟದ ಜನಪ್ರತಿನಿಧಿಗಳು ನೈತಿಕವಾಗಿ, ಸಂಪೂರ್ಣ ಸಹಕಾರ ಕೊಟ್ಟಾಗ ಇಂತಹ ಕೇಂದ್ರಗಳು ಯಾವುದೇ ಕಾರಣಕ್ಕೂ ಪ್ರಾರಂಭ ಆಗುವುದಕ್ಕೆ ಸಾಧ್ಯವಿರುವುದಿಲ್ಲ. ಮಾನ್ಯ ಸಭಾಪತಿಯವರೇ, ಗಾಂಜಾ ನಿಯಂತ್ರಣಕ್ಕೆ ಸಂಬಂಧಪಟ್ಟಂತೆ ಬಹುಶಃ ಒಂದು ವಿಧೇಯಕ ತರಬೇಕೆಂದು ನಾನು ಭಾವಿಸುತ್ತೇನೆ. ಗಾಂಜಾವನ್ನು ಮೂಟೆಗಳಲ್ಲಿ ತೆಗೆದುಕೊಂಡು ಹೋಗುವುದಿಲ್ಲ. ಸಣ್ಣ ಸಣ್ಣ ಪೊಟ್ಟಣಗಳಲ್ಲಿ ತೆಗೆದುಕೊಂಡು ಹೋಗುತ್ತಾರೆ. ಪೊಲೀಸನವರು ಹಿಡಿದರೂ ಕೂಡ ಕಾನೂನಿನ ಪ್ರಕಾರ ಅಂಥವರ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ಆಗುವುದಿಲ್ಲ. ಅದಕ್ಕೆ ಇಷ್ಟೇ limit ಎಂದಿರುತ್ತದೆ. ಹಾಗಾಗಿ ಒಂದು ವಿಧೇಯಕವನ್ನು ತರುವ ಅವಶ್ಯಕತೆ ಇರುತ್ತದೆ. ಇಂತಹ ವ್ಯವಹಾರವನ್ನು ಮಾಡುವವರಿಗೆ ಕಠಿಣವಾದ ಶಿಕ್ಷೆ ಕೊಡಬೇಕಾದರೆ ಆ ನಿಟ್ಟಿನಲ್ಲಿ ವಿಧೇಯಕವನ್ನು ತರಬೇಕಾಗುತ್ತದೆ. ನಾವು ಪೊಲೀಸರಿಗೆ ಇನ್ನೂ ಹೆಚ್ಚಿನ ಅಧಿಕಾರ ಕೊಡಬೇಕಾಗುತ್ತದೆ. ವಿದ್ಯಾರ್ಥಿಗಳನ್ನು ಶಿಕ್ಷಿಸಿದರೆ ಪ್ರಯೋಜನವಾಗುವುದಿಲ್ಲ. ಅವರನ್ನು ಜೈಲಿಗೆ ಹಾಕಿದರೆ ಅವರ ಪರಿಸ್ಥಿತಿ ಇನ್ನೂ ಬಿಗಡಾಯಿಸುತ್ತದೆ. ಅಂಥವರ 'De-addiction' ಗೋಸ್ಕರ ಕೌನ್ಸೆಲಿಂಗ್ ಸೆಂಟರ್‌ಗಳನ್ನು ತೆರೆಯಬೇಕು. ಅವರ ಪೋಷಕರಿಗೆ ಈ ಕುರಿತು ಮಾಹಿತಿ ಕೊಟ್ಟು, De-

addiction centre ಗಳಿಗೆ ಸೇರಿಸಬೇಕಾಗುತ್ತದೆ. ಹೆತ್ತವರಲ್ಲೂ ಇಂತಹ ವಿಚಾರಗಳ ಬಗ್ಗೆ ಜಾಗೃತಿ ಮೂಡಿಸಬೇಕು. ಪೋಲೀಸರು ಒಬ್ಬ ವ್ಯಸನಿ ವ್ಯಕ್ತಿಯನ್ನು ಹಿಡಿದು ಆತನ ತಂದೆ-ತಾಯಿಗಳಿಗೆ ತಿಳಿಸಿದರೆ ಅವರು, ಇಲ್ಲ, ನಮ್ಮ ಮಗ ಹಾಗೆ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಪೋಲೀಸರನ್ನೇ ದೂರುತ್ತಾರೆ. ಆತನ ರಕ್ತ ಪರೀಕ್ಷೆ ಮಾಡಿ ಅದು confirm ಆಗಿ ಅದನ್ನು ತೋರಿಸಿದಾಗ ಮಾತ್ರ ಅವರು ನಂಬುತ್ತಾರೆ. ಹಾಗಾಗಿ ಹೆತ್ತವರೂ ಕೂಡ ಇಂಥದ್ದಕ್ಕೆ ಸಹಕಾರ ಕೊಡಬೇಕಾಗುತ್ತದೆ. ಇಂತಹ ಸಮಸ್ಯೆ ಕೇವಲ ನಮ್ಮ ರಾಜ್ಯಕ್ಕೆ ಸೀಮಿತವಾಗಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಂತಹ ಕೇಸ್‌ಗಳು ಸಿಕ್ಕಿ ಅದರ ತನಿಖೆ ಕೈಗೊಂಡಾಗ ಅದಕ್ಕೆ ಸಂಬಂಧಪಟ್ಟವರು ಅಂತಿಮವಾಗಿ ಕೇರಳದಲ್ಲಿ ಸಿಗುತ್ತಾರೆ. ನಮ್ಮ ಪೋಲೀಸರು ಅಲ್ಲಿಯ ತನಕ ಹೋಗಿ ನಂತರ ಕೈಬಿಡುತ್ತಾರೆ. ಈಕಡೆ ಹೋದರೆ ಗೋವಾ ಇದೆ. ಹಾಗಾಗಿ ಇದು ಅಂತರರಾಜ್ಯ ಸಮಸ್ಯೆಯಾಗಿದೆ. ನಮ್ಮ ಸರ್ಕಾರ ಇತರ ರಾಜ್ಯ ಸರ್ಕಾರಗಳೊಂದಿಗೆ ಚರ್ಚೆ ಮಾಡಬೇಕು. ಆಗಲೇ ನಾನು ಹೇಳಿದಂತೆ ಈ ನಿಟ್ಟಿನಲ್ಲಿ ಒಂದು ವಿಧೇಯಕವನ್ನು ತರಬೇಕು. ನಮ್ಮಲ್ಲಿನ Narcotic cell ಅನ್ನು ಬಲಗೊಳಿಸಬೇಕು ಎಂದು ಹೇಳಬಯಸುತ್ತೇನೆ.

**ಕ್ಯಾ.ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಸಚೇತಕರು):-** ಮಾನ್ಯ ಸಭಾಪತಿಯವರೇ, ಇದು ಅನೇಕ ಬಾರಿ ಚರ್ಚೆಯಾಗಿರುವಂತಹ, ಅತ್ಯಂತ ಗಂಭೀರವಾದ ವಿಷಯವನ್ನು ಮಾನ್ಯ ಐವನ್ ಡಿ'ಸೋಜಾರವರು ಪ್ರಸ್ತಾಪ ಮಾಡಿದ್ದಾರೆ. ಅವರು ಹೇಳಿದ ವಿಚಾರಗಳ ಬಗ್ಗೆ ನಾನು touch ಮಾಡುವುದಕ್ಕೆ ಹೋಗುವುದಿಲ್ಲ. ಆದರೆ, ಹೆಚ್ಚಿನ ಸಂದರ್ಭಗಳಲ್ಲಿ ಈ ವಿಷಯ ಚರ್ಚೆ ಆದಾಗ ಗಾಂಜಾ ಮತ್ತು ಅಫೀಮ್‌ಗೆ ಸಂಬಂಧಪಟ್ಟಂತೆ ಸೀಮಿತ ಮಾಡಿದ್ದೇವೆ. ಆದರೆ ಅದಕ್ಕಿಂತಲೂ ಗಂಭೀರವಾದ substance abuse ಅಥವಾ ದ್ರವ್ಯಗಳ ಸೇವನೆ ಇವತ್ತು ರಾಜ್ಯದಲ್ಲಿ ಪತ್ತೆಯಾಗುತ್ತಿದೆ. ಹೆರಾಯಿನ್ ಇರಬಹುದು, ಚರಸ್ ಇರಬಹುದು, ಕೊಕೇನ್ ಇರಬಹುದು, High level ಪಾರ್ಟಿಗಳಲ್ಲಿ ಇಂಥದ್ದನ್ನು ಬಳಸುತ್ತಿರುವುದರ ಬಗ್ಗೆ ಇರಬಹುದು, ಈ ಎಲ್ಲಾ ಸಂಗತಿಗಳು ರಾಜ್ಯದಲ್ಲಿ ನಡೆಯುತ್ತಿರುವುದರ ಬಗ್ಗೆ ಪತ್ರಿಕೆಗಳಲ್ಲಿ ಬಂದಿದೆ. ಹಿಂದೆ ಒಂದು ಪತ್ರಿಕೆಯಲ್ಲಿ, ಮಾದಕ ದ್ರವ್ಯಗಳ ಸೇವನೆಗೆ ಸಂಬಂಧಪಟ್ಟಂತೆ ಏನು 'ಉಡತಾ ಪಂಜಾಬ್' ಎನ್ನುವ ಚಲನಚಿತ್ರ ಬಂದಿತ್ತೋ, ಅದನ್ನೂ ಮೀರಿ ಬೆಂಗಳೂರಿನಲ್ಲಿ ಇದು ನಡೆಯುತ್ತದೆ ಎಂಬ ವರದಿ ಬಂದಿತ್ತು. ಅದು ಏಕೆ ಪ್ರಕಟ ಆಗಿತ್ತು ಎಂದರೆ, ಕರ್ನಾಟಕದಲ್ಲಿ ಮಾದಕ ದ್ರವ್ಯದ ಬಳಕೆ ಇದೆ, ಅದು ಒಂದು ಮಿತಿಗಿಂತ ಜಾಸ್ತಿಯಾಗಿದೆ ಎನ್ನುವ ಹಿನ್ನೆಲೆಯಲ್ಲಿ ಪ್ರಕಟವಾಗಿತ್ತು. ಇಲ್ಲಿ ನಾನು ಎರಡು-ಮೂರು ಸಂಗತಿಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದನೆಯದು, ಗಾಂಜಾ ಅಥವಾ ಅಫೀಮ್‌ನ ಸಾಗಾಣಿಕೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಿದರೆ ಈಗಿರುವ ಕಾನೂನಿನ ಪ್ರಕಾರ ಬಹಳ ಸುಲಭವಾಗಿ ಹೊರಗೆ ಬರುವುದಕ್ಕೆ ಅವಕಾಶ ಇದೆ. ಈ ಮಾದಕ ದ್ರವ್ಯಗಳ ಸಾಗಾಣಿಕೆ ಮಾಡುವಾಗ ಸಿಕ್ಕಿ ಹಾಕಿಕೊಂಡರೆ ಅಂಥವರನ್ನು ಶಿಕ್ಷಿಸಲು ಅತ್ಯಂತ ಕಠಿಣವಾದ ಕಾನೂನು ಇರಬೇಕು. ಎರಡನೆಯದು, ನೀವೆಷ್ಟು ಸಲ ರೈಡ್ ಮಾಡುತ್ತೀರೋ ಆಗ ಸಿಗುವವರು ಆ ಒಂದು ಸರಪಳಿಯ ಕೊನೆಯ ಹಂತದಲ್ಲಿರುವವರು ಮಾತ್ರ. ಇಂಥವರು ಗೂಡು-ಅಂಗಡಿಯಲ್ಲಿ ಮಾರುವಾಗ ಸಿಕ್ಕಿಹಾಕಿಕೊಳ್ಳುತ್ತಾರೆ. ಇಲ್ಲದೇ ಇದ್ದರೆ ಅಲ್ಲಿಗೆ ಬಂದು ಮಾದಕ ದ್ರವ್ಯಗಳನ್ನು ಖರೀದಿ ಮಾಡುವವನು ಸಿಕ್ಕಿಹಾಕಿಕೊಳ್ಳುತ್ತಾನೆ. ಮಾರುವವನು ಈ ದಂಧೆಯ ಹಿಂದೆ ಇರುವುದಿಲ್ಲ, ಆತ ಕೇವಲ ಒಬ್ಬ ವ್ಯಾಪಾರಿ ಆಗಿರುತ್ತಾನೆ. ಈ ದಂಧೆಯ ಹಿಂದೆ ಒಂದು ದೊಡ್ಡ ರಾಕೆಟ್ ಇರುತ್ತದೆ. ಕಳೆದ 50-60 ವರ್ಷಗಳಲ್ಲಿ ಅದೆಷ್ಟೋ ಸಲ ಈ ಕುರಿತು ಮಾತನಾಡಿದ್ದೇವೆ, ಆದರೆ ಈ ರಾಕೆಟ್‌ನ ಹಿಂದಿರುವ ಕಿಂಗ್‌ಪಿನ್‌ನ ಬಂಧನವಾಗಿಲ್ಲ. ಇದೊಂದು ಅಂತಾರಾಷ್ಟ್ರೀಯ ಮಟ್ಟದ ರಾಕೆಟ್ ಆಗಿರುತ್ತದೆ. ಎಮ್ಮೆಗೆ ಜ್ವರ ಬಂದರೆ ಎತ್ತಿಗೆ ಬರೆ ಹಾಕಿದರು ಎನ್ನುವ ಗಾದೆ ಮಾತೊಂದಿದೆ.

(ಮುಂದು . . .)

(958)14.11.2017.4.00 ಡಿಎಸ್-ಜಿಆರ್

ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ಮುಂದು):-

ದಂಧೆ ನಡೆಸುತ್ತಿರುವ ಮಾಫಿಯಾ ಬೇರೆ ಎಲ್ಲಿಯೋ ಇದೆ. ಅದರ king pin ಬೇರೆ ಕಡೆ ಇರುತ್ತಾನೆ. ಅವನನ್ನು ಪತ್ತೆ ಹಚ್ಚುವುದಿಲ್ಲ. ಯಾವಾಗ ನಾವು ಇಲ್ಲಿ ಮಾತನಾಡುತ್ತೇವೆ ಆಗ ನಾಳೆ ಬೆಳಗ್ಗೆ ರೈಡ್ ಆಗುತ್ತದೆ. ಈ ದಂಧೆ ಎಲ್ಲಿ ನಡೆಸುತ್ತಾರೆಂದು ಪೋಲೀಸರಿಗೆ ಗೊತ್ತಿರುತ್ತದೆ. ಅಲ್ಲಿ ಹೋಗಿ ನಾಲ್ಕು ಜನರನ್ನು ಹಿಡಿದುಕೊಂಡು ಬರುತ್ತಾರೆ, ಆಮೇಲೆ ಅವರನ್ನು ಬಿಟ್ಟುಬಿಡುತ್ತಾರೆ. ಇದು ಆಗದಿರಬೇಕಾದರೆ ಎಲ್ಲೋ ಒಂದು ಕಡೆ ನಾವು ಕಾನೂನಿಗೆ ಬದಲಾವಣೆ ತಂದುಕೊಂಡು ರಾಜ್ಯದಲ್ಲಿ ಈ ದಂಧೆಯನ್ನು ಸಂಪೂರ್ಣವಾಗಿ ಬುಡಮೇಲು ಮಾಡುವಂತಹ ಭಾವನೆಯಿಟ್ಟುಕೊಂಡು ಆ racket ನ್ನು ಮಟ್ಟ ಹಾಕುವಂತಹ ಕೆಲಸವನ್ನು ನಾವು ಮಾಡಬೇಕಾಗಿದೆ. ಆದರೆ ಅದು ಆಗುತ್ತಿಲ್ಲ. ಇನ್ನೂ ಇದಕ್ಕಿಂತ ಗಂಭೀರವಾದ ಸಂಗತಿ ಎಂದರೆ, ಮಾನ್ಯ ಐವನ್ ಡಿಸೋಜಾರವರು ಉಲ್ಲೇಖ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಮಂಗಳೂರಿನ ಜೈಲ್‌ನಲ್ಲಿ ಎರಡು-ಮೂರು ಬಾರಿ ರೈಡ್ ಆದಾಗ ಜೈಲಿನಲ್ಲಿ ಮಾದಕ ದ್ರವ್ಯ ಪತ್ತೆಯಾಗುತ್ತದೆ. ಹೊರಗಿನದು ಬಿಟ್ಟುಬಿಡಿ. ರಕ್ಷಣೆ ಇರುವಂತಹ ಜೈಲಿನೊಳಗೆ ಅಲ್ಲಿರುವಂತಹ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೈದಿಗಳಿಗೆ ಮಾದಕ ದ್ರವ್ಯಗಳನ್ನು ಮುಟ್ಟಿಸುಂತಹ ಜಾಲ ಇದೆ ಎಂದರೆ ಇನ್ನು ಇವರಿಂದ ಇದನ್ನು ನಿಲ್ಲಿಸಲು ಸಾಧ್ಯ ಇದೆಯೇ? ಜೈಲಿಗೆ ರಕ್ಷಣೆ ಇದೆ. ಪೊಲೀಸ್ ಅಧಿಕಾರಿಗಳು ಜೈಲ್‌ನ್ನು ನೋಡಿಕೊಳ್ಳುತ್ತಾರೆ. ಆ ಜೈಲಿಗೆ ಹೋಗಿ ರೈಡ್ ಮಾಡಿದರೆ ಜೈಲಿನೊಳಗೆ ನಡೆಯುವುದು ಗೊತ್ತಾಗುತ್ತದೆ. ಅಲ್ಲಿ ಗುಂಪುಗಳ ಮಧ್ಯೆ ಮಾರಾಮರಿ ಆಗುತ್ತದೆ. ನಾನು ಸುಮ್ಮನೆ ಆಪಾದನೆ ಮಾಡುತ್ತಿದ್ದೇನೆಂದು ತಿಳಿದುಕೊಳ್ಳಬೇಡಿ. ಪೊಲೀಸರಿಗೆ ಮಾಹಿತಿ ಇರುತ್ತದೆ. ಅದು ಅವರಿಗೆ ದುಡ್ಡು ತರುವಂತಹ ವ್ಯವಸ್ಥೆ. ಪೊಲೀಸರಿಗೆ ಮತ್ತು ಮಾರಾಟ ಮಾಡುವವರಿಗೆ ಸಂಪರ್ಕವಿಲ್ಲವೆಂದರೆ ಇದು ನಡೆಯುವುದಕ್ಕೆ ಸಾಧ್ಯವೇ ಇಲ್ಲ. ಅತ್ಯಂತ ಪ್ರಮುಖವಾದ ಸಂಗತಿಯನ್ನು ಅವರು ಉಲ್ಲೇಖ ಮಾಡಿದರು. Home Stay, Skill Game Centres, ಪಬ್, ಡಾಭಾಗಳಿರಬಹುದು, ಇಲ್ಲಿ ನಮಗೆ ಏನು ನಿಯಂತ್ರಣವಿದೆ? ಇಲ್ಲಿ ನಾವು ನಿಯಂತ್ರಣ ತರದಿದ್ದರೆ, ಅವುಗಳನ್ನು ವ್ಯವಸ್ಥೆಯೊಳಗೆ ರೂಢಿಸಿಕೊಳ್ಳುವಂತಹ ಕಾನೂನು ತರದಿದ್ದರೆ ಅದೆಲ್ಲವೂ ಕೂಡ ಯುವಕರನ್ನು ಈ ದಂಧೆಗೆ ಎಳೆದುಕೊಳ್ಳುವಂತಹ, ಕಾಲೇಜು ವಿದ್ಯಾರ್ಥಿಗಳನ್ನು conduit ಆಗಿ ಉಪಯೋಗ ಮಾಡುವಂತಹ ಕೇಂದ್ರಗಳಾಗುತ್ತವೆ. ಪ್ರಾರಂಭದಲ್ಲಿ ಆತನಿಗೆ ಸ್ನೇಹಿತರ ಮೂಲಕ ನಶೆಯ ಅಭ್ಯಾಸವನ್ನು ಕಲಿಸುತ್ತಾರೆ. ಅದನ್ನು ಬಿಡಲು ಸಾಧ್ಯವಿಲ್ಲವೆಂದಾಗ ಅವನು ಇದರ ಮಾರಾಟಕ್ಕೆ ಕೈ ಹಾಕುತ್ತಾನೆ. ಅವನು conduit ಆಗುತ್ತಾನೆ. ಅವನ ಮೂಲಕ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಂಪರ್ಕ ಮಾಡುವ ಕೆಲಸ ಮಾಡುತ್ತಾರೆ. ಹಾಗಾಗಿ ಒಂದು ಸಮಾಜವಾಗಿ ಈ ಸಮಸ್ಯೆ ಬಗ್ಗೆ ನಾವು ಗಂಭೀರವಾಗಿ ಆಲೋಚನೆ ಮಾಡಬೇಕಾಗುತ್ತದೆ. ಮಾದಕ ದ್ರವ್ಯವೆಂದರೆ ಕೇವಲ ಗಾಂಜಾ, ಅಫೀಮು ಮಾತ್ರವಲ್ಲ, ಅದಕ್ಕಿಂತ ಹೆಚ್ಚು ಮಾರಕವಾಗಿರುವಂತಹ ಅನೇಕ substance abuse ಇವತ್ತು ನಮ್ಮ ಸಮಾಜದಲ್ಲಿ ತಲೆ ಎತ್ತಿ ನಿಂತಿದೆ. ಯಾವ ಮಾಹಿತಿಗಳನ್ನು ಕೇಳಿದರೂ ಕೂಡ ಅವರು ಇಷ್ಟು ಜನ ಗಾಂಜಾ, ಅಫೀಮು ಸಾಗಿಸುತ್ತಿದ್ದವರು ಸಿಕ್ಕಿಹಾಕಿಕೊಂಡರು ಎಂದು ಹೇಳುತ್ತಿದ್ದಾರೆ. ಆದರೆ Cocaine, Charas, Heroin, LSD (Lysergic acid diethylamide) ಬಗ್ಗೆ ಅಥವಾ paint ನಲ್ಲಿ ಬಳಸುವ thinner ಅನ್ನು ಉಪಯೋಗ ಮಾಡುತ್ತಾರೆ. ಟೂತ್‌ಪೇಸ್ಟ್‌ನಲ್ಲಿ ನಿಕೋಟಿನ್ ಸೇರಿಸಿಕೊಂಡು ಉಪಯೋಗ ಮಾಡುವಂತಹ ದಂಧೆ ಬಂದಿದೆ. ಸಣ್ಣ ಮಕ್ಕಳಿಗೆ cola ಎಂದು ಹೇಳಿಕೊಂಡು ಆ ಚಾಕೋಲೇಟ್‌ನ್ನು ಸಣ್ಣ ಸಣ್ಣ ಗೂಡು ಅಂಗಡಿಗಳಲ್ಲಿ ಕೊಡುತ್ತಾರೆ. ಅದರಲ್ಲಿ ಅವರನ್ನು ನಶೆಗೆ ಒಳಪಡಿಸುವಂತಹ ಕೆಲಸ ಆಗುತ್ತಿದೆ. ಎಲ್ಲೋ ಒಂದು ಕಡೆ ನಾವು ಇದನ್ನು ಪತ್ತೆ ಹಚ್ಚುವುದರಲ್ಲಿ ವಿಫಲರಾಗಿದ್ದೇವೆ. ಈ Racket ಅನ್ನು ಪತ್ತೆ ಹಚ್ಚುವುದರಲ್ಲಿ ನಾವು ವಿಫಲರಾಗಿದ್ದೇವೆ. ಇದೆಲ್ಲವನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೇಳುತ್ತಾ ಅವರು ಒಂದನ್ನು ಉಲ್ಲೇಖ ಮಾಡಿದರು; ದಕ್ಷಿಣ ಕನ್ನಡ ಜಿಲ್ಲೆಯ ಪೋಲೀಸಿನವರೊಂದಿಗೆ ಮಾತನಾಡುವಾಗ ಅವರು ಹೇಳುತ್ತಾರೆ, serious crime ನಲ್ಲಿ ಸಿಕ್ಕಿಹಾಕಿಕೊಂಡ ಅಪರಾಧಿಗಳನ್ನು ಜೈಲಿನಲ್ಲಿ 48 ಗಂಟೆಗಳ ಕಾಲ ಅವರ ಹತ್ತಿರ ಬಾಯಿಬಿಡಿಸುವುದಕ್ಕೂ ಆಗುವುದಿಲ್ಲವಂತೆ. ಏಕೆಂದರೆ, ಅವರು ಪೂರ್ತಿಯಾಗಿ drugs ನಶೆಯಲ್ಲಿರುತ್ತಾರಂತೆ. ಅವರಿಗೆ ಹೊಡೆದರೂ, ಬಡಿದರೂ ಸಹ ಅವರು ಯಾವುದಕ್ಕೂ ಉತ್ತರ ಕೊಡುವುದಿಲ್ಲ. ಈ ನಶೆಯಲ್ಲಿ ಸಿಕ್ಕಿಹಾಕಿಕೊಂಡಿರುವಂತಹ ವ್ಯಕ್ತಿಗಳು ಸಮಾಜದಲ್ಲಿ ಅಕ್ರಮ ಚಟುವಟಿಕೆಗಳಿಗೆ, ಕ್ರಿಮಿನಲ್ ಚಟುವಟಿಕೆಗಳಿಗೆ ಕಾರಣೀಕರ್ತರಾಗುತ್ತಿದ್ದಾರೆ. ಮಾನ್ಯ ಗೃಹ ಸಚಿವರೇ, ಪೋಲೀಸ್ ಇಲಾಖೆಯಲ್ಲಿ ಎಲ್ಲಾ ಮಾಹಿತಿಗಳಿವೆ. ಆದರೆ ಒಂದು ಜಾಗೃತ ಸಮಾಜವಾಗಿ ನಾವು ಇದನ್ನು ಹತ್ತಿಕ್ಕುವಂತಹ ಕೆಲಸ ಮಾಡದಿದ್ದರೆ ನಮ್ಮ ಮಕ್ಕಳು, ಯುವ ಸಮಾಜ ನಮ್ಮ ಕೈತಪ್ಪಿ ಹೋಗುವಂತಹ ಪರಿಸ್ಥಿತಿಯಲ್ಲಿ ಇವತ್ತು ನಾವಿದ್ದೇವೆ. ಮಾದಕ ದ್ರವ್ಯಗಳ ಬಗ್ಗೆ Udta Punjab ಚಿತ್ರದಲ್ಲಿ ತೋರಿಸಿರುವಂತೆ ಕರ್ನಾಟಕದಲ್ಲಿ ಅಥವಾ ಬೆಂಗಳೂರಿನಲ್ಲಿ ಆ ಪರಿಸ್ಥಿತಿ ನಿರ್ಮಾಣವಾಗಬಾರದು. ಶಾಲಾ-ಕಾಲೇಜಿನ ಶಿಕ್ಷಣಕ್ಕಾಗಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿಕೊಂಡು ಹೆತ್ತವರು ತಮ್ಮ ಮಕ್ಕಳನ್ನು ಶಾಲಾ-ಕಾಲೇಜುಗಳಿಗೆ ಕಳುಹಿಸುತ್ತಾರೆ, Professional colleges ಗೆ ಕಳುಹಿಸುತ್ತಾರೆ. ಅಲ್ಲಿ ನಾವು ವ್ಯವಸ್ಥೆಗಳನ್ನು ಸರಿ ಮಾಡದಿದ್ದರೆ ಆ ಮಕ್ಕಳ ಭವಿಷ್ಯ, ಕುಟುಂಬದ ಭವಿಷ್ಯ ಮಣ್ಣಾಗಿಬಿಡುತ್ತದೆ. ಒಂದೂವರೆ-ಎರಡು ಲಕ್ಷ ವಿದ್ಯಾರ್ಥಿಗಳನ್ನು ದಕ್ಷಿಣ ಕನ್ನಡ ಉಡುಪಿ ಜಿಲ್ಲೆಯಲ್ಲಿ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳು ಗುಣಮಟ್ಟದ ಶಿಕ್ಷಣ ಕೊಡುತ್ತೇವೆಂದು ಅಲ್ಲಿಗೆ ಕರೆದುಕೊಂಡು ಬಂದರೆ, ಅಲ್ಲಿ ವ್ಯಾಪಕವಾಗಿ ದಂಧೆ ನಡೆಯುತ್ತಿದ್ದು ಇದು ಕೇವಲ ಅಲ್ಲಿಗೆ ಮಾತ್ರ ಸೀಮಿತವಾಗಿಲ್ಲ, ಅದು ಎಲ್ಲೆಲ್ಲಿ professional colleges ಗಳಿವೆ, ಎಲ್ಲೆಲ್ಲಿ ಕಾಲೇಜುಗಳಿಗೆ ಹೊರಗಿನಿಂದ ವಿದ್ಯಾರ್ಥಿಗಳು ಬರುತ್ತಾರೆ, ಎಲ್ಲೆಲ್ಲಿ ಈ ರೀತಿಯ ಯಾವುದೇ ನಿಗ್ರಹ ಇಲ್ಲದಿರುವಂತಹ Home Stay or Paying Guest Accommodation ಇರಬಹುದು ಈ ರೀತಿಯ ಸಂಸ್ಥೆಗಳಲ್ಲಿ ದಂಧೆಗೆ ಒಳಪಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದನ್ನು ದಯವಿಟ್ಟು ಮಾನ್ಯ ಸಚಿವರು ಗಮನಿಸಬೇಕು. ನಾನು ಇನ್ನು ಒಂದು ಅಂಶವನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಹೊಸದಾಗಿ ದಂಧೆ ಮಾಡುವಂತಹ ವ್ಯಾಪಾರ ಪ್ರಾರಂಭವಾಗಿದೆ. 'Online sales' ಎಂದು ಪತ್ರಿಕೆಯಲ್ಲಿ ವರದಿಯಾಗಿತ್ತು. 'ಆನ್‌ಲೈನ್ ಡ್ರಗ್ಸ್ ದಂಧೆ ಪತ್ತೆ ಹಚ್ಚುವಂತಹ ಪೋಲೀಸರ ಬಳಿ ಯಾವ ತಂತ್ರಜ್ಞಾನವೂ ಇಲ್ಲ' ಎಂದು ಪತ್ರಿಕೆಯಲ್ಲಿ ವರದಿಯಾಗಿತ್ತು. ಆನ್‌ಲೈನ್ ಸೇಲ್ ಆಗುತ್ತಿದೆ. ದಯವಿಟ್ಟು Cyber Crime ಇಲಾಖೆಯಲ್ಲಿ ಇದನ್ನು ಪತ್ತೆ ಹಚ್ಚುವಂತಹ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಏನಾದರೂ ವಿಧಾನಗಳನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅತ್ಯಂತ ಗಂಭೀರವಾದ ಈ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ನಾವು ಅತ್ಯಂತ ಗಂಭೀರವಾಗಿ ಆಲೋಚನೆ ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

**ಶ್ರೀಮತಿ ತಾರಾಅನೂರಾಧ(ನಾಮನಿರ್ದೇಶಿತರು)**:- ಮಾನ್ಯ ಸಭಾಪತಿಯವರೆ, ತಾವು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದ ಸಲ್ಲಿಸುತ್ತೇನೆ. ನಾನು ಈಗಾಗಲೇ ಈ ವಿಚಾರವಾಗಿ ಹಲವಾರು ಸಲ ಇದೇ ಸದನದಲ್ಲಿ ಮಾನ್ಯ ಗೃಹ ಮಂತ್ರಿಗಳಿಗೆ ಪ್ರಶ್ನೆಗಳನ್ನು ಹಾಕಿದ್ದೆ. ಇವತ್ತು ಸಾಂಕೇತಿಕವಾಗಿ ಮಕ್ಕಳ ದಿನಾಚರಣೆ. ಜವಾಹರ್ ಲಾಲ್ ನೆಹರೂರವರು ಹುಟ್ಟಿದ ದಿನವನ್ನು ಮಕ್ಕಳ ದಿನಾಚರಣೆಯನ್ನಾಗಿ ಆಚರಣೆ ಮಾಡುತ್ತಿದ್ದೇವೆ. ಆದರೆ ಇವತ್ತು ನಮ್ಮ ಮಕ್ಕಳೇ ಈ ರೀತಿಯಾಗಿ ಚಟಕ್ಕೆ ಬಲಿಯಾಗುತ್ತಿರುವುದು ನಿಜವಾಗಿಯೂ ಶೋಚನಿಯವಾದ ಸಂಗತಿಯಾಗಿದೆ. ನಿಜವಾಗಿಯೂ ಸಣ್ಣ ಮಕ್ಕಳ ಕೈಯಲ್ಲೂ ಕೂಡ ಈ ರೀತಿಯ ಗಾಂಜಾವನ್ನು ಸರಬರಾಜು ಮಾಡಿಸುತ್ತಿದ್ದಾರೆ ಎನ್ನುವುದಕ್ಕೆ ಹಲವಾರು ಉದಾಹರಣೆಗಳಿವೆ. ಕಳೆದ ಸಲ ಇದೇ ಸದನದಲ್ಲಿ ಮಾನ್ಯ ಗೃಹ ಸಚಿವರು ಹೇಳಿಕೆಯನ್ನು ಕೊಟ್ಟಿದ್ದಾರೆ. ಮಕ್ಕಳ ಕೈಯಲ್ಲೂ ಕೂಡ ಗಾಂಜಾವನ್ನು ಶಾಲಾ-ಕಾಲೇಜುಗಳಲ್ಲಿ ಸರಬರಾಜು ಮಾಡಿಸುತ್ತಿದ್ದಾರೆ, ಅಂತಹ ಮಕ್ಕಳನ್ನು ನಾವು ಹಿಡಿದಿದ್ದೇವೆಂದು ಹೇಳಿರುವುದ ದಾಖಲೆಗಳಲ್ಲಿದೆ. ಮೊದಲು ಕೇವಲ ನಗರಗಳಲ್ಲಿ, ನಾಗರೀಕತೆ ಬೆಳೆಯುತ್ತಿರುವ ಜಾಗಗಳಲ್ಲಿ ಇಂತಹವುಗಳು ಹೆಚ್ಚಾಗಿವೆ ಎಂದು ನಾವು ತಿಳಿದುಕೊಂಡಿದ್ದೆವು. ಆದರೆ ಆ ರೀತಿ ಇಲ್ಲ. ಜಿಲ್ಲೆಗಳಲ್ಲಿಯೂ ಕೂಡ ಬಹಳ ಆತಂಕಕಾರಿ ಎಂದರೆ ಸಣ್ಣ ಸಣ್ಣ ಊರುಗಳಲ್ಲಿ, ಹಳ್ಳಿಗಳಲ್ಲಿಯೂ ಕೂಡ ಶಾಲಾ-ಕಾಲೇಜಿಗೆ ಹೋಗುವ ಮಕ್ಕಳನ್ನೇ ಟಾರ್ಗೆಟ್ ಆಗಿ ಇಟ್ಟುಕೊಂಡು, ಬೆಳೆಯುವ ಪೈರನ್ನು ಚಿವುಟಿ ಹಾಕುವಂತಹ ಅಥವಾ ಈ ಚಟುವಟಿಕೆಗಳಿಗೆ ಬಲಿ ಕೊಡುವಂತಹ ಕೆಲಸಗಳು ನಿರಂತರವಾಗಿ ನಡೆದುಕೊಂಡು ಬರುತ್ತಲೇ ಇವೆ. ಮಾನ್ಯ ಐವನ್ ಡಿ'ಸೋಜಾರವರು ಎಷ್ಟೆಷ್ಟು ಪ್ರಕರಣಗಳಾಗಿವೆ, ಎಷ್ಟೆಷ್ಟು ಪ್ರಕರಣಗಳಲ್ಲಿ ತಪ್ಪಿತಸ್ಥರನ್ನು ಹಿಡಿದಿದ್ದಾರೆ ಎಂದು ಅಂಕಿಅಂಶಗಳನ್ನು ಹೇಳಿದ್ದಾರೆ. ಆದರೆ ನನಗೆ ಈ ಅಂಕಿಅಂಶಗಳ ಬಗ್ಗೆ ನಿಜವಾಗಿಯೂ ಸಂದೇಹ ಇದೆ. ಮಾನ್ಯ ಗೃಹ ಸಚಿವರಿಗೆ ಗೊತ್ತಿರುತ್ತದೆ, ಬೆಂಗಳೂರಿನಂತಹ ನಗರಗಳಲ್ಲಿ, ದೊಡ್ಡ ದೊಡ್ಡ five star ಹೋಟೆಲ್‌ಗಳಲ್ಲಿ weekend ಬಂದುಬಿಟ್ಟರೆ ಹುಡುಗರು ಫುಟ್‌ಪಾತ್‌ನಲ್ಲಿ ಕುಳಿತಿರುತ್ತಾರೆ. ರಾತ್ರಿ 1 ಗಂಟೆ, 2 ಗಂಟೆಯಾದರೂ ಮಕ್ಕಳು ಅಲ್ಲಿ ಕುಳಿತಿರುತ್ತಾರೆ. ದೊಡ್ಡ ದೊಡ್ಡ five star ಹೋಟೆಲ್‌ಗಳಲ್ಲಿ ಗಾಂಜಾವನ್ನು ಕೂಡ ಸರಬರಾಜು ಮಾಡುತ್ತಿದ್ದಾರೆ. ಪಬ್‌ನಲ್ಲಿ ಡ್ಯಾನ್ಸ್ ಜೊತೆಗೆ ಅದು ಕೂಡ ಸರಬರಾಜು

ಆಗುತ್ತಿದೆ. ಅದನ್ನು ಹಿಡಿಯುವವರೇ ಇಲ್ಲ. ಅದು ಗೊತ್ತಿದ್ದರೂ ಕೂಡ ಏನು ಆಗುತ್ತಿಲ್ಲವೆನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಇವತ್ತು ನಗರದಲ್ಲಿ ಯಾರಾದರೂ ಪ್ರದಕ್ಷಿಣೆ ಹಾಕಿದರೆ ಶುಕ್ರವಾರ, ಶನಿವಾರ, ಭಾನುವಾರ ರಾತ್ರಿ 12 ಗಂಟೆ ಮೇಲೆ ನೀವೇನಾದರೂ ದೊಡ್ಡ ದೊಡ್ಡ five star ಹೋಟೆಲ್ ಮುಂದೆ ಹೋದರೆ ಸಾವಿರಾರು ಗಟ್ಟಲೆ ಯುವ ಜನತೆಯನ್ನು ನೋಡಬಹುದು. ಅವರು ಫುಟ್‌ಪಾತ್ ಮೇಲೆ ಕುಳಿತಿರುತ್ತಾರೆ. ಇದನ್ನೆಲ್ಲಾ ಯಾರು ಪ್ರಶ್ನೆ ಮಾಡುತ್ತಾರೆ? ಮಾನ್ಯ ಯು.ಟಿ.ಖಾದರ್‌ರವರು ಬಹಳ ಚೆನ್ನಾಗಿ ಹೇಳಿದರು. ಇದರಲ್ಲಿ ತಂದೆ-ತಾಯಿಗಳ ಕರ್ತವ್ಯವೂ ಇದೆ ಎಂದು ಹೇಳಿದರು. ಹೌದು, ನಿಜವಾಗಿಯೂ ಸಂಸ್ಕಾರ ಎನ್ನುವುದು ಮನೆಯಿಂದಲೇ ಪ್ರಾರಂಭವಾಗಬೇಕು. ಆದರೆ ಈಗಿನ ಕಾಲದಲ್ಲಿ ತಂದೆ-ತಾಯಿ ಇಬ್ಬರು ದುಡಿಯುವುದಕ್ಕೆ ಹೊರಗಡೆ ಬರುತ್ತಾರೆ. ಮಕ್ಕಳನ್ನು ಬೇರೆಯವರ ಹತ್ತಿರ ಬಿಟ್ಟು ಬರುತ್ತೇವೆ. ನಾವು ಎಲ್ಲವನ್ನು ನೋಡಿಕೊಂಡು ಇರಬೇಕೆಂದರೆ ಸಾಧ್ಯವಾಗುವುದಿಲ್ಲ. ಮಧ್ಯ ರಾತ್ರಿ ತಿರುಗಾಡುವವರಿಗೆ ಪೋಲೀಸ್, ಕಾನೂನಿನ ಬಗ್ಗೆ ಮೊದಲು ಭಯ ಬರಬೇಕು. ನಮ್ಮ ಸರ್ಕಾರದಲ್ಲಿ ನಿಷ್ಠೆ ಮತ್ತು ನ್ಯಾಯ ಇರಬೇಕು. ಇಲ್ಲಿ ಕೆಲಸ ಮಾಡುವವರ ಬಗ್ಗೆ ಭಯ ಬರದಿದ್ದರೆ ನಿರಂತರವಾಗಿ ಈ ತರಹ ಕ್ರೈಮ್‌ಗಳು ನಡೆಯುತ್ತಲೇ ಇರುತ್ತವೆ. ನಿಜವಾಗಿಯೂ ಇದನ್ನು ಯಾರೂ ತಡೆಯುವುದಕ್ಕೆ ಸಾಧ್ಯವೇ ಇಲ್ಲ. ಈಗಾಗಲೇ ನಾವು ಹೇಳಿದ್ದೇವೆ, ಹೊರದೇಶದಿಂದ ಬಂದವರ ವೀಸಾಗಳು ಬಹಳಷ್ಟು expire ಆಗಿರುತ್ತವೆ. ಅಂಥವರು ಕೂಡ ಇರುತ್ತಾರೆ. ಅಂಥವರಿಂದ ಬಹಳಷ್ಟು ಈ ದಂಧೆ ನಡೆಯುತ್ತಿರುತ್ತದೆ. ಅದಕ್ಕೆ ನಮ್ಮವರನ್ನೇ ಇಟ್ಟುಕೊಂಡು, ನಮ್ಮ ಜನರ ಕೈಗಳಿಂದಲೇ ನಮ್ಮ ಮಕ್ಕಳನ್ನು ಹಾಳು ಮಾಡುವಂತಹ ಕೆಲಸಗಳು ನಿರಂತರವಾಗಿ ನಮ್ಮ ರಾಜ್ಯದಲ್ಲಿ ನಡೆಯುತ್ತಿವೆ. ನಮ್ಮ ಅಕ್ಕಪಕ್ಕ ರಾಜ್ಯಗಳಲ್ಲಿ ಅಲ್ಲ, ನಮ್ಮ ರಾಜ್ಯದಲ್ಲೇ ನಡೆಯುತ್ತಿದೆ. ಇದನ್ನು ನಿಯಂತ್ರಣಕ್ಕೆ ತರದಿದ್ದರೆ ತುಂಬಾ ಬಲಿಯಾಗಬೇಕಾಗುತ್ತದೆ. ನಿನ್ನೆಯಷ್ಟೆ ಮಾನ್ಯ ಗೃಹ ಸಚಿವರ ಬಗ್ಗೆ ಪತ್ರಿಕೆಯಲ್ಲಿ ನೋಡಿದೆ. ಮಾನ್ಯ ಗೃಹ ಸಚಿವರು ತುಂಬಾ ಮೃದುವಾಗಿ ಮಾತನಾಡುತ್ತಾರೆ, ಅದು ಈ ಪೋಲೀಸ್ ಇಲಾಖೆಗೆ ಅಂತಹ ಭಾಷೆ ಸಾಕಾಗುವುದಿಲ್ಲ, ಖಡಕ್ ಭಾಷೆಯಲ್ಲಿ ನೀವು ಮಾತನಾಡಬೇಕಾಗುತ್ತದೆ ಎಂದು ಪತ್ರಿಕೆಯವರು ಸಲಹೆ ಕೊಟ್ಟಿರುವುದನ್ನು ನಾನು ಓದಿದ್ದೇನೆ. ನನಗೆ ಮಾನ್ಯ ಗೃಹ ಸಚಿವರ ನಡವಳಿಕೆಯ ಬಗ್ಗೆ ತುಂಬಾ ಗೌರವವಿದೆ. As a person, ನನಗೆ ಬಹಳ ಗೌರವವಿದೆ. ರಾಜಕಾರಣದಲ್ಲಿ ಎಷ್ಟೇ ಮೃದುವಾಗಿದ್ದರೂ ಅಧಿಕಾರಿಗಳಿಂದ ಹೇಗೆ ಕೆಲಸ ತೆಗೆದುಕೊಳ್ಳಬೇಕೆನ್ನುವುದರ ಬಗ್ಗೆ ಅವರು ನಿಸ್ಸೀಮರಾಗಿ ಕೆಲಸ ತೆಗೆದುಕೊಳ್ಳುತ್ತಿದ್ದಾರೆ, ಚೆನ್ನಾಗಿಯೂ ಕೆಲಸ ಮಾಡುತ್ತಿದ್ದಾರೆ. ನಾನು ಈ ಸಂದರ್ಭದಲ್ಲಿ ಒಂದೇ ಒಂದು ಸಣ್ಣ ಕಥೆಯನ್ನು ಹೇಳುವುದಕ್ಕೆ ಅವಕಾಶ ಕೊಡಿ. ಉತ್ತರ ಭಾರತದಲ್ಲಿ ಒಬ್ಬರು ಪ್ರಸಿದ್ಧ ರಾಜಕಾರಣಿಯವರು ಅಧಿಕಾರವನ್ನು ಕಳೆದುಕೊಂಡು

ಅವರ ಪತ್ನಿಯವರು ಅಧಿಕಾರಕ್ಕೆ ಬಂದರು. ಅವರ ಹೆಸರನ್ನು ಹೇಳುವುದು ಬೇಡ. ಪತ್ನಿಯವರು ಅಧಿಕಾರಕ್ಕೆ ಬಂದಾಗ, ಪತಿಯವರಿಗೆ ಸಾಕಷ್ಟು ಸಮಯವಿದೆ, ಅವರಿಗೆ ಇಂಗ್ಲೀಷ್ ಬರುವುದಿಲ್ಲವೆಂದು ಇಂಗ್ಲೀಷ್ ಚೆನ್ನಾಗಿ ಕಲಿಯಬೇಕು, 30 ದಿನಗಳಲ್ಲಿ ಇಂಗ್ಲಿಷ್ ಕಲಿಯಬೇಕೆಂದು ಅಮೇರಿಕಾದ ಪ್ರೆಸಿಡೆಂಟ್ ಹತ್ತಿರವೇ ಕಳುಹಿಸಿದರಂತೆ. ಅಮೇರಿಕಾದ accent ನಲ್ಲಿ ಇಂಗ್ಲಿಷ್‌ನ್ನು ಕಲಿಯಿರಿ, ತುಂಬಾ ಚೆನ್ನಾಗಿರುತ್ತದೆಂದು ಕಳುಹಿಸುತ್ತಾರಂತೆ. ಎರಡೂವರೆ ತಿಂಗಳಾದ ಮೇಲೆ ಆಕೆಗೆ ಕುತೂಹಲ, ಹೇಗೂ ಯಜಮಾನರು ಅಮೇರಿಕಾದ ಪ್ರೆಸಿಡೆಂಟ್‌ರವರ ಜೊತೆಯಲ್ಲಿದ್ದಾರೆ, ನೋಡೋಣ, ಅವರು ಇಂಗ್ಲಿಷ್ ಕಲಿತುಬಿಟ್ಟಿರುತ್ತಾರೆಂದು ಅವರಿಗೆ ಫೋನ್ ಮಾಡುತ್ತಾರೆ. ಫೋನ್ ಮಾಡಿದರೆ ಅದೇ ಶೈಲಿಯ ಹಿಂದಿಯಲ್ಲಿ ಅದೇ ರೀತಿ ಮಾತನಾಡುತ್ತಾರಂತೆ.

(ಮುಂದು)

959/14-11-2017/04-10/ಬಿಕೆಪಿ-ಜಿಆರ್

**ಶ್ರೀಮತಿ ತಾರಾಅನೂರಾಧ(ಮುಂದು)**

ಎರಡೂವರೆ-ಮೂರು ತಿಂಗಳಾಯಿತು. ಈ ವೇಳೆಗೆ ಯಜಮಾನರು ಇಂಗ್ಲೀಷ್ ಕಲಿತುಕೊಂಡು ಮಾತನಾಡುತ್ತಿರುತ್ತಾರೆ ಎಂದು ಅಂದುಕೊಂಡರೆ, ಆಕೆ ಬೇಜಾರಾಗಿ ಬೈಯ್ಯಲಿಕ್ಕೆ ಶುರು ಮಾಡಿದಳಂತೆ. ಏನ್ರೀ ನೀವು ಇಂಗ್ಲೀಷ್ ಕಲಿತುಕೊಳ್ಳುತ್ತೀರಿ, ನಿಮಗೆ ಅಮೇರಿಕ ಪ್ರೆಸಿಡೆಂಟ್ ಇಂಗ್ಲೀಷ್ ಕಲಿಸುತ್ತಾರೆಂದು ತಿಳಿದುಕೊಂಡಿದ್ದೆ, ನೀವು ನೋಡಿದರೆ ಹಿಂದಿಯಲ್ಲಿಯೇ ಮಾತನಾಡುತ್ತೀರಿ ಎಂದು ಬೈಯ್ಯಲಿಕ್ಕೆ ಶುರು ಮಾಡಿದಳಂತೆ. ಆಗ ಆ ಕಡೆಯಿಂದ ಅಮ್ಮ ಕ್ಷಮಿಸಿ ಎಂದು ಹಿಂದಿಯಲ್ಲಿ ಹೇಳುತ್ತಿದ್ದರಂತೆ. ದೂರವಾಣಿಯಲ್ಲಿ ಮಾತನಾಡುತ್ತಿದ್ದವರು ಅಮೇರಿಕನ್ ಪ್ರೆಸಿಡೆಂಟ್ ಅಂತ ಗೊತ್ತಾಯಿತಂತೆ. ಯಜಮಾನರು ಇಂಗ್ಲೀಷ್ ಕಲಿಯುವ ಬದಲು ಅವರು ಹಿಂದಿಯನ್ನು ಕಲಿತುಕೊಂಡಿದ್ದರಂತೆ.

ಆ ರೀತಿಯಲ್ಲಿ ಮಾನ್ಯ ಸಚಿವರು ಸಾಫ್ಟ್ ಆಗಿದ್ದಾರೆ, ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ, ನೈಸ್ ಆಗಿ ಕೆಲಸವನ್ನು ತೆಗೆದುಕೊಳ್ಳುತ್ತಾರೆ, ಇಲಾಖೆಯಲ್ಲಿಯೂ ಸಹ ಅದೇ ರೀತಿಯಲ್ಲಿ ಸಾಫ್ಟ್ ಆಗಿದ್ದು, ನೈಸ್ ಆಗಿದ್ದು, ಕೆಲಸವನ್ನು ತೆಗೆದುಕೊಳ್ಳುವಂತಹ ಕೆಲಸವನ್ನು ಮಾಡಿಬಿಟ್ಟರೆ ಒಳ್ಳೆಯದು. ಇಂತಹ ಕೆಲಸಗಳನ್ನೆಲ್ಲಾ ಮಾಡಲಿಕ್ಕೆ ಸಾಧ್ಯವಿದೆ ಎಂದು ನಿಮ್ಮ ಪಕ್ಷದವರು ಕೂಡ ಹೇಳುತ್ತಿದ್ದಾರೆ. ಇದು ನಿಜವಾಗಿಯೂ ಜ್ವಲಂತ ಸಮಸ್ಯೆಯಾಗಿದೆ. ಈ ಕೆಲಸವನ್ನು ನೀವು ಹೀಗೆಯೇ ತೆಗೆದುಕೊಳ್ಳಿ. ನಿಮ್ಮ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇಲಾಖೆಯವರು ಸಹ ಅಷ್ಟೇ ನೈಸ್ ಆಗಿ, ಸಾಫ್ಟ್ ಆಗಿ ಕೆಲಸ ಮಾಡುವ ರೀತಿಯಲ್ಲಿ ಆಗಲಿ. ಅದರಲ್ಲಿಯೂ ನಮ್ಮ ರಾಜ್ಯ ನಾವೆಲ್ಲರೂ ಅಂದುಕೊಂಡ ಹಾಗೆ ಈ ಮಾದಕ ದ್ರವ್ಯಗಳನ್ನು ನಿರ್ಮೂಲನೆ ಮಾಡಿ ನಮ್ಮ ರಾಜ್ಯದ ಜನ ಆದರ್ಶವಾಗಿ ಬದುಕಿ ಬಾಳುವ ರೀತಿಯಲ್ಲಿ ಆಗಲಿ ಎಂದು ಹೇಳಿ, ಈ ನಿಟ್ಟಿನಲ್ಲಿ ಮಾನ್ಯ ಸಚಿವರಿಗೆ ಕೆಲಸ ಮಾಡಲಿಕ್ಕೆ ಭಗವಂತ ಅವಕಾಶ ಕೊಟ್ಟಿದ್ದಾನೆ, ಅದನ್ನು ಉಪಯೋಗಿಸಿಕೊಳ್ಳಿ ಎಂದು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ(ಸಾರಿಗೆ ಸಚಿವರು):- ಮಾನ್ಯ ಸಭಾಪತಿಯವರೇ,** ಕತೆ ಕೇಳಲಿಕ್ಕೆ ಚೆನ್ನಾಗಿರುತ್ತದೆ. ಅದು ಎಲ್ಲಿ ನಡೆದಿದೆ ಎನ್ನುವುದನ್ನು ಮಾನ್ಯ ಸದಸ್ಯರು ಹೇಳಬೇಕು.

**ಶ್ರೀಮತಿ ತಾರಾಅನೂರಾಧ:-** ತಮಾಷೆಗಾಗಿ ಕತೆ ಹೇಳಿದ್ದು ಅಷ್ಟೇ.

**ಶ್ರೀ ಹೆಚ್.ಎಂ.ರೇವಣ್ಣ(ಸಾರಿಗೆ ಸಚಿವರು):-** ಮಾನ್ಯ ಸಭಾಪತಿಯವರೇ, ತಾರಾಅನೂರಾಧ ಅವರು ಸದನಕ್ಕೆ ಹೊಸದಾಗಿ ಬಂದಾಗ ಹೇಗಿದ್ದರು ಈಗ ಹೇಗೆ ಇದ್ದಾರೆನ್ನುವುದನ್ನು ನೋಡಿದರೆ ಯಾರು ಏನು ಬೇಕಾದರೂ ಕಲಿಯಬಹುದು ಎನ್ನುವುದೂ ಸಹ ಗೊತ್ತಾಗುತ್ತದೆ.

**ಶ್ರೀಮತಿ ತಾರಾಅನೂರಾಧ:-** ಮಾನ್ಯ ಸಭಾಪತಿಯವರೇ, ನಾನು ಸದನಕ್ಕೆ ಬಂದಾಗಲೂ, ಸಿನಿಮಾಕ್ಕೆ ಬಂದಾಗಲೂ ಹೀಗೇ ಇದ್ದೆ. ಇಲ್ಲಿ ನಾನು ನಾನಾಗಿದ್ದೇನೆ. ಸಿನಿಮಾ ರಂಗದಲ್ಲಿ ಪಾತ್ರಧಾರಿಯಾಗಿದ್ದೆ ಅಷ್ಟೆ.

**ಸಭಾಪತಿಯವರು:-** ನನ್ನ ಹತ್ತಿರ ಸಮಯ ಇಲ್ಲ, ಆ ವಿಷಯ ಬೇಡ.

**ಶ್ರೀ ಸಿ.ಎಂ. ಇಬ್ರಾಹಿಂ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬೇಲಿಯೇ ಎದ್ದು ಹೊಲ ಮೇಯ್ದರೆ ಹೊಲದ ಗತಿ ಏನು? ಇವತ್ತು Law enforcing agencies ಏನಿವೆ, S.H.O., (Station House Officer) ಅವರು ಒಬ್ಬರು ಸರಿಯಾದರೆ 50-60% ನಷ್ಟು ಸಮಸ್ಯೆಗಳು ಸರಿ ಹೋಗುತ್ತವೆ. ಜೈಲಿನ ಒಳಗಡೆ ಮಾದಕ ದ್ರವ್ಯ ಎಂದು ಹೇಳಿದರೆ ಅದನ್ನು ಒಳಗಡೆ ತೆಗೆದುಕೊಂಡು ಹೋಗುವುದಕ್ಕೆ ಬಿಡುವವರು ಯಾರು? ಇದು ಸಣ್ಣ ಸಮಸ್ಯೆ ಅಲ್ಲ, ಭಾರಿ ದೊಡ್ಡ ಸಮಸ್ಯೆಯಾಗಿದೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎಂದು ನಾನು ಹೇಳಿದ್ದು. ಇದಕ್ಕೆ ಎರಡು-ಮೂರು ಪರಿಹಾರ ಸೂಚನೆಗಳನ್ನು ಕೊಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

ನಾನು ಒಂದು ಇಂಜಿನಿಯರಿಂಗ್ ಕಾಲೇಜನ್ನು ನಡೆಸುತ್ತಿದ್ದೇನೆ. ಅಲ್ಲಿ ಸುಮಾರು ೩,೦೦೦ ಜನ ವಿದ್ಯಾರ್ಥಿಗಳಿದ್ದಾರೆ. ನಾವು ಅವರುಗಳನ್ನು ನಮ್ಮ ಕಾಲೇಜಿಗೆ ದಾಖಲಾತಿ ಮಾಡಿಕೊಳ್ಳಬೇಕಾದರೆ ಮೊದಲ ಮಾಡಿದ ಕೆಲಸ ಎಂದರೆ, ಆ ವಿದ್ಯಾರ್ಥಿಗಳ ಬ್ಲಡ್ ಟೆಸ್ಟ್ ಮಾಡಿಸಿದ್ದು, ಈ ಖಾಯಿಲೆ ಕರ್ನಾಟಕ ರಾಜ್ಯದ ಮಕ್ಕಳಿಗೆ ಮೊದಲು ಮಾದಕ ದ್ರವ್ಯದ ಅಭ್ಯಾಸ ಇರಲಿಲ್ಲ. ಹಿಂದೆ ನಾವುಗಳು ಎಸ್.ಎಸ್.ಎಲ್.ಸಿ., ಪಿ.ಯು.ಸಿ., ಓದಬೇಕಾದರೆ ಸಿಗರೇಟ್ ಸೇದುತ್ತಿದ್ದನೆಂದರೆ ಅದೇ ದೊಡ್ಡ ಅವಮಾನವಾಗಿತ್ತು. ಈ ಸಿ.ಇ.ಟಿ., ಮ್ಯಾಟು ಸ್ಲೇಟು ಎಂದು ಹೇಳಿ ಏನು ಉತ್ತರ ಭಾರತದಿಂದ ಏನು ವಿದ್ಯಾರ್ಥಿಗಳು ನಮ್ಮ ರಾಜ್ಯಕ್ಕೆ ಓದಲು ಬಂದರು ಅವರುಗಳು ಕಲಿಸಿರುವಂತಹ ರೋಗ ಇದಾಗಿದೆ. ಆ ಒಂದು ಕಲ್ಚರ್ ಇಂಜಿನಿಯರಿಂಗ್ ಮತ್ತು ಮೆಡಿಕಲ್‌ನ ವಿದ್ಯಾರ್ಥಿಗಳಿಂದ ಬಂದಿದೆ. ಇವತ್ತು ನೀವು ಸರ್ಕಾರದಿಂದ ಸಿ.ಇ.ಟಿ., ಗೆ appear ಆಗತಕ್ಕಂತಹ ವಿದ್ಯಾರ್ಥಿಗೆ ಡ್ರಗ್ ಮುಕ್ತ ಎನ್ನುವಂತಹ ಮೆಡಿಕಲ್ ಸರ್ಟಿಫಿಕೇಟ್ ಕೊಟ್ಟರೆ ಮಾತ್ರ ಅವನಿಗೆ ಸಿ.ಇ.ಟಿ., ಬರೆಯಲಿಕ್ಕೆ ಅವಕಾಶವನ್ನು ಕೊಡುತ್ತೇವೆಂದು ಸರ್ಕಾರ ಮಾಡಿದರೆ 50% ಸಮಸ್ಯೆ ಅಲ್ಲಿಯೇ ನಿವಾರಣೆಯಾಗುತ್ತದೆ. ಈಗ ನಮ್ಮ ಕಾಲೇಜಿನಲ್ಲಿ ಇದನ್ನು ಸ್ವಯಂ ನಾನೇ ಮಾಡಿದ್ದೇನೆ. First year ಗೆ ಪ್ರವೇಶವನ್ನು ಪಡೆಯುವಾಗ ಅವನು ಡ್ರಗ್ ಅಭ್ಯಾಸವಿಲ್ಲ ಎನ್ನುವ ಒಂದು ಮೆಡಿಕಲ್ ಸರ್ಟಿಫಿಕೇಟ್ ತರಬೇಕು. ಆದಾದ ಮೇಲೆ ೩ನೇ ಸೆಮಿಸ್ಟರ್‌ಗೆ ಬಂದಾಗ ಮತ್ತೊಂದು ಡ್ರಗ್ ಇಲ್ಲ ಎನ್ನುವಂತಹ ಮೆಡಿಕಲ್ ಸರ್ಟಿಫಿಕೇಟ್ ತರಬೇಕು. ೮ನೇ ಸೆಮಿಸ್ಟರ್‌ಗೆ ಮತ್ತೊಂದು ಡ್ರಗ್ ಇಲ್ಲ ಎನ್ನುವಂತಹ ಸರ್ಟಿಫಿಕೇಟ್ ತಂದರೆ ಮಾತ್ರ ಅವನಿಗೆ ಪರೀಕ್ಷೆ ಬರೆಯಲಿಕ್ಕೆ ಅವಕಾಶ ಕೊಡುತ್ತೇವೆ, ಇಲ್ಲವೆಂದರೆ ಅವಕಾಶ ಕೊಡುವುದಿಲ್ಲ. ಈ ನಿಯಮ ನಾವು ಅಳವಡಿಸಿಕೊಂಡಿರುವುದರಿಂದ ಇವತ್ತು ಏನಾಗಿದೆ ಎಂದರೆ ನಮ್ಮ ಕಾಲೇಜು ಸಂಪೂರ್ಣವಾಗಿ ಡ್ರಗ್ ಮುಕ್ತವಾಗಿದೆ.

ಮತ್ತೆ, ನೀವು ಆ Station House Officer ಅನ್ನು ಮಾದಕ ವಸ್ತು ಎಲ್ಲಿಯಾದರೂ ಸಿಕ್ಕಿತು ಎಂದು ಹೇಳಿದರೆ ಸೀದಾ ನಿನ್ನ ಡಿಸ್‌ಮಿಸ್ ಮಾಡುತ್ತೇವೆ ಎನ್ನುವ ಒಂದು ನಿಯಮವನ್ನು ಇಲಾಖೆಯಲ್ಲಿ ತರದಿದ್ದರೆ ಯಾರೇ ಎಷ್ಟು ಭಾಷಣ ಮಾಡಿದರೂ ಸಹಾ ಅಥವಾ ಯಾವ ಒಂದು ಪಕ್ಷ ಅಧಿಕಾರಕ್ಕೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಂದರೂ ಸಹಾ ಈ ವ್ಯವಸ್ಥೆ ಸರಿ ಹೋಗುವುದಿಲ್ಲ. ಇವತ್ತಿನ ದಿವಸ ವ್ಯವಸ್ಥೆ ಅಷ್ಟೊಂದು ಹದಗೆಟ್ಟು ಹೋಗಿದೆ.

ಮೂರನೆಯದಾಗಿ, ಇವತ್ತು ಸೌದಿಯಲ್ಲಿ ಆಗಲಿ, Middle East ಆಗಲಿ ಎಲ್ಲಿಯಾದರೂ ಮಾದಕ ವಸ್ತು ಸಿಕ್ಕಿತು ಎಂದರೆ non-bailable offcence. ಅವನಿಗೆ ೩ ದಿವಸಗಳಲ್ಲಿ ಮರಣದಂಡನೆಯಾಗುತ್ತದೆ. ಆದರೆ, ನಮ್ಮ ರಾಜ್ಯದ ಪರಿಸ್ಥಿತಿ ಏನಾಗಿದೆ ಎಂದರೆ, ಅವನಿಗೆ ಹಿಡಿದು ಅರೆಸ್ಟ್ ಮಾಡಿದರು, ಅವನು ಬೇಲ್ ತೆಗೆದುಕೊಂಡು ಹೊರಗಡೆ ಬರುತ್ತಾನೆ. ಆ ಒಂದು ಕೇಸ್ ಬರುವಷ್ಟರಲ್ಲಿ ಸಾಕ್ಷಿ ಸತ್ತು ಹೋಗಿರುತ್ತಾನೆ, ಆ ಇನ್ಸ್‌ಪೆಕ್ಟರ್ ಕೂಡ ಬೇರೆ ಕಡೆ ಟ್ರಾನ್ಸ್‌ಫರ್ ಆಗಿರುತ್ತಾನೆ, ೩ ವರ್ಷಗಳಾದ ನಂತರ ಕೋರ್ಟ್‌ನಲ್ಲಿ ಸಾಕ್ಷಾಧಾರಗಳು ಇಲ್ಲವೆಂದು ಕೇಸ್ ಡಿಸ್‌ಮಿಸ್ ಆಗುತ್ತದೆ. ನೀವು ಈ ಕೇಸ್ ಅನ್ನು ಸ್ಪೆಷಲ್ ಕೋರ್ಟ್ ಮಾಡಿ ಇತ್ಯರ್ಥ ಮಾಡಬೇಕು. ಏಕೆಂದರೆ, ನಮ್ಮ ದೇಶದಲ್ಲಿ ಸುಮಾರು ಎರಡು ಕೋಟಿ ಯುವಕರಿದ್ದಾರೆ. ಅವರ ಭವಿಷ್ಯ ಸಂಪೂರ್ಣವಾಗಿ ಹಾಳಾಗುತ್ತದೆ. ಇವತ್ತು ಈ ಕ್ರೈಮ್ ಮಾದಕ ವಸ್ತುಗಳ ಚಟದಿಂದಾಗಿ ಜಾಸ್ತಿಯಾಗಿದೆ, ಆಗುತ್ತಿದೆ. Drinks, Beer, Whiskey ಚಟವಿದ್ದರೆ ಅದನ್ನು ಹೇಗಾದರೂ ಮಾಡಿ ಬಿಡಿಸಬಹುದು. ಒಂದು ಬಾರಿ ಗಾಂಜಾ, ಅಫೀಮು ಮತ್ತು ಮಾದಕ ವಸ್ತುಗಳ ಚಟ ಅವನ ತಲೆಗೇರಿತು ಎಂದರೆ ಯಾವ ತಂದೆ-ತಾಯಿಗಳಿಗೂ ಸಹ ಇದು ಗೊತ್ತಾಗುವುದಿಲ್ಲ. ನೋಡಲಿಕ್ಕೆ ಅವನು ಚೆನ್ನಾಗಿಯೇ ಇರುತ್ತಾನೆ. ಬಹಳ ಜಂಟಲ್ ಮ್ಯಾನ್ ಆಗಿ ಕಾಣುತ್ತಾನೆ. ಆದ್ದರಿಂದ, ಉನ್ನತ ಶಿಕ್ಷಣ ಇಲಾಖೆಯಿಂದ, ಗೃಹ ಇಲಾಖೆಯಿಂದ ಒಂದು ಸುತ್ತೋಲೆಯನ್ನು ಕಳುಹಿಸಿ ವಿದ್ಯಾರ್ಥಿಗಳಿಗೆ ನಾನು ಹೇಳಿದಂತೆ Blood Test Certificate is compulsory ಎಂದು ಮಾಡಿದರೆ 10 ವರ್ಷಗಳಲ್ಲಿ ಕರ್ನಾಟಕ ರಾಜ್ಯವನ್ನು ಡ್ರಗ್ ಮುಕ್ತ ರಾಜ್ಯವನ್ನಾಗಿ ಮಾಡುವುದಕ್ಕೆ ನಿಮಗೆ ಸಾಧ್ಯವಾಗುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಭಾನುಪ್ರಕಾಶ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸರ್ಕಾರಿ ಮುಖ್ಯಸಚೇತಕರಾದ ಶ್ರೀಯುತ ಐವನ್ ಡಿ.ಸೋಜಾ ರವರು ಈ ವಿಚಾರವಾಗಿ ಸರ್ಕಾರದ ಗಮನ ಸೆಳೆದಿದ್ದು, ಈ ವಿಷಯ ಸದನದಲ್ಲಿ ಇಷ್ಟೊಂದು ಶಾಂತವಾಗಿ ನಡೆಯುತ್ತಿದೆ ಅಂದರೆ positive ಆಗಿ ಯೋಚನೆ ಮಾಡುವಂತಹ ಸಂದರ್ಭದಲ್ಲಿ ಸದನ ಚೆನ್ನಾಗಿ ನಡೆಯುತ್ತದೆ ಎನ್ನುವುದು ಆಗುತ್ತದೆ. ಇದು ಯಾರ್ಯಾರ ಮೇಲೆಯೂ ಆರೋಪ ಮಾಡುವಂತಹ ಪ್ರಶ್ನೆ ಅಲ್ಲ. ನಮ್ಮ ಯುವಕರ ಮುಂದೆ ಇರುವಂತಹ

ಭವಿಷ್ಯ. ಅದರಲ್ಲಿ ನಮ್ಮ ಮನೆ ಮಕ್ಕಳು ಇದ್ದಾರೆ, ನಿಮ್ಮ ಮನೆ ಮಕ್ಕಳು ಇದ್ದಾರೆ ಮತ್ತು ಸಂಬಂಧಿಕರ ಮಕ್ಕಳು ಸಹ ಇದ್ದಾರೆ. ನಾನು ಅಂಕಿ-ಅಂಶವನ್ನು ನೋಡಿದೆ. ನೋಡಿ, ಈ ವಿಚಾರದಲ್ಲಿ ಬೆಂಗಳೂರು ಮೊದಲನೆಯ ಸ್ಥಾನದಲ್ಲಿದೆ. ಮಂಗಳೂರು ಎರಡನೆಯ ಸ್ಥಾನದಲ್ಲಿದೆ, ಶಿವಮೊಗ್ಗ ಮೂರನೆಯ ಸ್ಥಾನದಲ್ಲಿದೆ. ಇದು ನಿರಂತರವಾಗಿ 2015, 2016 ಮತ್ತು 2017 ಈ ಮೂರು ವರ್ಷಗಳಲ್ಲಿಯೂ ಸಹ ಇದೇ ಸ್ಥಾನದಲ್ಲಿ ಉಳಿದುಕೊಂಡಿದೆ. ಇನ್ನು ಕೆಲವು ಜಿಲ್ಲೆಗಳಲ್ಲಿ ಮಾದಕ ದ್ರವ್ಯ ಸೇವನೆ ಶೂನ್ಯ ಇದೆ. ಅಂದರೆ, ಅದರ ಅರ್ಥ ಅಲ್ಲಿನ ಪೋಲೀಸ್‌ನವರು ಬಹಳ ಬಿಗಿಯಾಗಿ ಕಾನೂನನ್ನು ಅನುಸರಿಸಿದ್ದಾರೋ ಎನ್ನುವ ಅರ್ಥವೋ ಅಥವಾ ಅಲ್ಲಿ ಇರುವಂತಹ ಯುವಕರು ಈ ದಾಸ್ಯಕ್ಕೆ ಒಳಗಾಗಿಲ್ಲವೆಂದರ್ಥವೋ ಏನು ಅರ್ಥ ಮಾಡಿಕೊಳ್ಳಬೇಕೆನ್ನುವುದನ್ನು ನಿಮಗೆ ಬಿಟ್ಟು ಬಿಡುತ್ತೇವೆ. ಏಕೆಂದರೆ, ಇದು ಇಡೀ ರಾಜ್ಯದ ಸಮಸ್ಯೆ. ಕೇರಳ ರಾಜ್ಯದ ಗಡಿಯಿಂದ, ಗೋವಾ ರಾಜ್ಯದ ಗಡಿಯಿಂದ ಮಾದಕ ದ್ರವ್ಯಗಳು ಬರುತ್ತದೆ ಎನ್ನುವಂಥದ್ದು ಇದೆ. ಉತ್ತರ ಕನ್ನಡ, ಈ ಭಾಗಗಳಲ್ಲಿ ಮಾದಕ ದ್ರವ್ಯ ವ್ಯಸನಿಗಳು ಬಹಳ ಕಡಿಮೆ ಇದ್ದಾರೆ. ಈ ಕಡೆ ಚಾಮರಾಜನಗರದ ಕಡೆಯಲ್ಲಿಯೂ ಮಾದಕ ದ್ರವ್ಯ ವ್ಯಸನಿಗಳ ಸಂಖ್ಯೆ ಬಹಳ ಕಡಿಮೆ ಇದೆ. ಬೆಂಗಳೂರು, ಮಂಗಳೂರು ಮತ್ತು ಶಿವಮೊಗ್ಗದಲ್ಲಿ ಇದು ಜಾಸ್ತಿ ಇದೆ. ಶಿವಮೊಗ್ಗದ ನಮ್ಮ ಮಾನ್ಯ ಸಚಿವರು ಸಹ ಪ್ರಸ್ತುತ ಸದನದಲ್ಲಿ ಹಾಜರಿದ್ದಾರೆ. ಶಿವಮೊಗ್ಗ ಮಾದಕ ದ್ರವ್ಯ ವ್ಯಸನಿಗಳ ಸಂಖ್ಯೆ ಇರುವುದರಲ್ಲಿ ನಮ್ಮ ರಾಜ್ಯದಲ್ಲಿ 3ನೇ ಸ್ಥಾನವನ್ನು 3ನೇ ಬಾರಿಯೂ ಅದೇ ಸ್ಥಾನದಲ್ಲಿ ಉಳಿದಿದೆ. ಅಂದರೆ 2015, 2016 ಮತ್ತು 2017 ಈ 3ನೇ ಬಾರಿಯೂ ಸಹ 3ನೇ ಸ್ಥಾನವೇ ಆಗಿದೆ. ಹಾಗಾದರೆ, ಎಸ್ಪಿಗಳ ಬದಲಾವಣೆಯಾಗುತ್ತದೆ, ಡಿವೈಎಸ್ಪಿಗಳ ಬದಲಾವಣೆಯಾಗುತ್ತದೆ. ಹಾಗಾದರೆ, ಇಲ್ಲಿ ಇದು ಸುಧಾರಣೆಯಾಗುವುದಿಲ್ಲವೇ?

**ಶ್ರೀ ಯು.ಟಿ.ಖಾದರ್(ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೇ, ಎಲ್ಲಿ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಶಿಕ್ಷಣ ಸಂಸ್ಥೆಗಳು ಜಾಸ್ತಿ ಇವೆ ಅಲ್ಲಿ ಮಾದಕ ವ್ಯಸನಿಗಳ ಸಂಖ್ಯೆ ಹೆಚ್ಚು ಇರುತ್ತದೆ.

**ಶ್ರೀ ಭಾನುಪ್ರಕಾಶ್:-** ಮಾನ್ಯ ಸಭಾಪತಿಯವರೇ, ಮೈಸೂರಿನಲ್ಲಿ ಶಿಕ್ಷಣ ಸಂಸ್ಥೆಗಳು ಜಾಸ್ತಿ ಇವೆ. ಧಾರವಾಡದಲ್ಲಿ ಇದು ಸೊನ್ನೆ ಇದೆ. ಧಾರವಾಡ ಉನ್ನತ ಶಿಕ್ಷಣದಲ್ಲಿ ಏನೂ ಕಡಿಮೆ ಇಲ್ಲ. ಆದರೆ, ಮಾದಕ ವ್ಯಸನಿಗಳ ಸಂಖ್ಯೆ ಶೂನ್ಯ ಇದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮೇಲಿನ ಅಂಕಿ-ಅಂಶದಲ್ಲಿ ಕೆಲವು ಕಡೆ ಶೂನ್ಯ. 1-2 ಇದೆ. ತಾವು ಅನುಭವಸ್ಥರಿದ್ದೀರಿ. ಅಂದರೆ ಇದರ ಬಗ್ಗೆ ವಿವರ ಗೊತ್ತಿದೆ. ಈ ಅಂಕಿ-ಅಂಶವನ್ನು ನೋಡಿದಾಗ ಮಹಾಭಾರತದ ಶ್ಲೋಕ ನನಗೆ ನೆನಪಿಗೆ ಬರುತ್ತದೆ. ನಾವು 3 ಜನ ಇದನ್ನು ವಿಶೇಷವಾಗಿ ಗಮನಿಸದಿದ್ದರೆ ಮಾದಕ ವ್ಯಸನಿಗಳ ಸಂಖ್ಯೆಯನ್ನು ಕಡಿಮೆ ಮಾಡಲಿಕ್ಕೆ ಆಗುವುದಿಲ್ಲ. ಮಹಾಭಾರತದಲ್ಲಿ ಧುರ್ಯೋಧನ ಏನು ಹೇಳುತ್ತಾನೆಂದರೆ **"ಜಾನಾಮಿ ಧರ್ಮಂ ನ ಚ ಮೇ ಪ್ರವೃತ್ತಿ. ಜಾನಾಮಿ ಅಧರ್ಮಂ ನ ಚ ಮೇ ನಿವೃತ್ತಿಃ"** ನನಗೆ ಧರ್ಮ ಯಾವುದು ಎನ್ನುವುದು ಗೊತ್ತಿದೆ. ನನಗೆ ಬಿಡಲಿಕ್ಕೆ ಆಗುವುದಿಲ್ಲ. ಮತ್ತೆ ಅಧರ್ಮ ಎನ್ನುವುದು ಯಾವುದು ಎಂದು ಗೊತ್ತಿದೆ. ನಾನು ಅದನ್ನೂ ಬಿಡಲಿಕ್ಕೆ ಆಗುವುದಿಲ್ಲ. ಧರ್ಮ ಮಾಡಲಿಕ್ಕೆ ಗೊತ್ತಿಲ್ಲ. ಅದುದರಿಂದ ಅಧರ್ಮ ಬಿಡಲಿಕ್ಕೆ ಗೊತ್ತಿಲ್ಲ. ಎಂದು ಹೇಳುತ್ತಾನೆ. ಇದರಲ್ಲಿ ಮೊದಲನೆಯದಾಗಿ ಯುವಕರು ಇರುತ್ತಾರೆ.

**ಶ್ರೀ ಸಿ.ಎಂ.ಇಬ್ರಾಹಿಂ:-** "ಯದ್ಭಾವಂ ತದ್ಭವತಿ'' . . . .

**ಶ್ರೀ ಭಾನುಪ್ರಕಾಶ್:-** ಮಾನ್ಯ ಸಭಾಪತಿಯವರೇ, ಶ್ರೀಯುತ ಉಗ್ರಪ್ಪನವರು ಸಂಸ್ಕೃತದಲ್ಲಿ ಹೇಳುವುದಕ್ಕೆ ಸದನದಲ್ಲಿ ಒಬ್ಬರೇ ಇದ್ದರು. ಈಗ ಮಾನ್ಯ ಶ್ರೀ ಸಿ.ಎಂ. ಇಬ್ರಾಹಿಂ ಒಬ್ಬರು ಬಂದಿದ್ದಾರೆ. **"ಯದ್ಭಾವಂ ತದ್ಭವತಿ''** ಎನ್ನುವುದು ಇದಕ್ಕೆ ಅರ್ಥವಾಗುವುದಿಲ್ಲ. ಇದು ಪೋಲೀಸ್‌ನವರಿಗೆ ಮಾದಕ ವ್ಯಸನಿಗಳನ್ನು ಮತ್ತು ಮಾದಕ ದ್ರವ್ಯಗಳನ್ನು ಮಾರಾಟ ಮತ್ತು ಸಾಗಾಣಿಕೆ ಮಾಡುವವರು ಯಾರು ಎಂದು ಗೊತ್ತಿದ್ದರೂ ಏತಕ್ಕೆ ಕ್ರಮ ತೆಗೆದುಕೊಳ್ಳುವುದಿಲ್ಲ, ಅವರ ಕೈಯನ್ನು ಯಾರು ಕಟ್ಟುತ್ತಾರೆ? ನಾವೇ ಅವರ ಕೈಯನ್ನು ಕಟ್ಟುತ್ತೇವೆ. ನಾವು ಪೋಲೀಸ್ ಸ್ಟೇಷನ್‌ಗೆ ಪೋನ್ ಮಾಡದೇ ಇದ್ದರೆ ಏತಕ್ಕೆ ಅವರನ್ನು ಬಿಡುತ್ತಾರೆ? ನಾವು ಪೋಲೀಸ್‌ನವರಿಗೆ ಬಿಗಿ ಮಾಡದೇ ಇದ್ದರೆ ಏತಕ್ಕೆ ಅವರು ನಮ್ಮ interference ಅನ್ನು ತಡೆದುಕೊಂಡು ಸಹ ಏತಕ್ಕೆ action ಮಾಡಲಿಕ್ಕೆ ಆಗುವುದಿಲ್ಲ.

ಶ್ರೀಮಾನ್ ಇಬ್ರಾಹಿಂ ಸಾಹೇಬರು ಪೋಲೀಸ್‌ನವರ ಬಗ್ಗೆ ಮಾತನಾಡುತ್ತಾ Station House Officer ಗೆ fix ಮಾಡಿ ಎಂದವರು ಹೇಳಿದರು. ಯಾವ ಒಂದು ಪೋಲೀಸ್ ಸ್ಟೇಷನ್ ವ್ಯಾಪ್ತಿಯಲ್ಲಿ ಇದು ನಡೆಯುತ್ತದೋ ಆ ಪೋಲೀಸ್‌ನವರನ್ನು ಇದಕ್ಕೆ ಜವಾಬ್ದಾರರನ್ನಾಗಿ ಮಾಡಬೇಕು. ಎಷ್ಟು ಕೇಸ್ ನೋಂದಣಿಯಾಗಿದೆ ಎಂದರೆ, ಕಳೆದ ತಿಂಗಳು 5 ಕೇಸ್‌ಗಳು ನೋಂದಣಿಯಾಗಿವೆ. ಮುಂದಿನ ತಿಂಗಳು 4 ಕೇಸ್‌ಗಳು ನೋಂದಣಿಯಾಗಿವೆ ಎಂದು ಹೇಳಿದರೆ ಅವನನ್ನು ಜವಾಬ್ದಾರರನ್ನಾಗಿ ಮಾಡಲಿಕ್ಕೆ ಹೇಳಿ. ಸರ್ಕಾರ ಇದರ ಬಗ್ಗೆ ಗಮನ ತೆಗೆದುಕೊಳ್ಳಬೇಕು. ಇತ್ತೀಚೆಗೆ ನಾನು ಒಂದು ಕೇಸ್ ಅನ್ನು ನೋಡಿದ್ದೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೊಸ ರಸ್ತೆಗಳು, ಹೊಸ ಸೇತುವೆಗಳು ಎಲ್ಲಿ ಆಗುತ್ತಿರುತ್ತವೆ, ಅಲ್ಲಿ ಲೈಟ್ ಇರುವುದಿಲ್ಲ. ಅಲ್ಲಿ ಮಾದಕ ದ್ರವ್ಯವನ್ನು ಸೇವಿಸುತ್ತಿರುತ್ತಾರೆ. ಪೋಲೀಸ್‌ನವರಿಗೆ ಹತ್ತಿರ ಅವರನ್ನು ಹಿಡಿದುಕೊಟ್ಟರೆ ಪರಿಸ್ಥಿತಿ ಏನಾಗಿದೆ ಎಂದರೆ ನಾನು ಒಂದು ಉದಾಹರಣೆಯನ್ನು ಕೊಡಲಿಕ್ಕೆ ಬಯಸುತ್ತೇನೆ. ಒಂದು ಶಾಲೆ ಇತ್ತು. ಆ ಶಾಲೆಗೆ ಹುಡುಗ ಓದುವುದಕ್ಕೆ ಹೊಗುತ್ತಿದ್ದ. ಆ ಶಾಲೆಯ ಮುಂದೆ ಅವರ ಅಪ್ಪ ಹೋಗುತ್ತಿದ್ದ. ಅವನದ್ದು ರೈತಾಪಿ ಕೆಲಸ. ಆಗ ಶಾಲೆಯ ಮೆಸ್ಟ್ರ ಅವನ ಮಗನನ್ನು ಹಿಡಿದು ಹೊಡೆಯುತ್ತಿದ್ದರು. ಯಾವ ತಂದೆ-ತಾಯಿಯಾದರೂ ಮಗನನ್ನು ಮೆಸ್ಟ್ರ ಹೊಡೆದರೆ ಬಿಡುತ್ತಾರೆಯೇ? ಹೋಗುತ್ತಿದ್ದ ರೈತ ಅಲ್ಲಿಯೇ ನಿಂತು ಕೊಂಡು ಏನು ಹೇಳಿದನೆಂದರೆ, ಅವನನ್ನು ಹೊಡೆಯಿರಿ, ಇನ್ನು 4 ಏಟು ಹೊಡೆಯಿರಿ ಎಂದು ಹೇಳಿದನಂತೆ. ಹೊಡೆಯಲಿಕ್ಕೆ ಹೇಳುತ್ತಾರಲ್ಲವೆಂದು ಹೇಳಿ ಅ ಮೆಸ್ಟ್ರಿಗೆ ಆಶ್ಚರ್ಯವಾಯಿತು. “ಹೊಲಕ್ಕೆ ಹೋಗು ಎಂದು ಹೇಳಿದರೆ ಇಲ್ಲಿಗೆ ಬಂದಿದ್ದಾನೆ” ಎಂದು ಹೇಳಿದನಂತೆ. ಇದು ನಮ್ಮ ಪರಿಸ್ಥಿತಿ.

ಪೋಲೀಸ್‌ನವರಿಗೆ ಹಿಡಿದು ಕೊಟ್ಟರೆ, ಅವರು ಏನು ಹೇಳುತ್ತಾರೆಂದರೆ “ನೋಡು ಯಾರು ಹೇಳಿದ್ದಾರೆ ಗೊತ್ತಾ, ಯಾರು ಹಿಡಿದು ಕೊಟ್ಟಿದ್ದಾರೆ ಗೊತ್ತಾ, ನೋಡು ಅವರು ಹಿಡಿದು ಕೊಟ್ಟಿದ್ದಕ್ಕೆ 1000 ರೂಪಾಯಿಗಳು ಜಾಸ್ತಿ. ಅಂದರೆ, ನಾವು ಅವರನ್ನು ಹಿಡಿದುಕೊಟ್ಟಿದ್ದಕ್ಕೆ 1000 ರೂಪಾಯಿಗಳನ್ನು ಜಾಸ್ತಿಯಾಗಿ ತೆಗೆದುಕೊಳ್ಳುತ್ತಾರೆ. ಬರಿ ಅವರೇ ಹಿಡಿದರೆ 30 ರೂಪಾಯಿಗಳಿಗೆ ಬಗೆಹರಿಯುತ್ತದೆ. ಹುಡುಗರು ನೀವು ಪೋಲೀಸ್ ಸ್ಟೇಷನ್‌ಗೆ ಹೇಳಬೇಡಿ, ನಾವೇ ಬಿಡಿಸಿಕೊಂಡು ಬರುತ್ತೇವೆಂದು ಹೇಳುತ್ತಾರೆ. ಇದು ನಮ್ಮ ಪರಿಸ್ಥಿತಿ. ಪೋಲೀಸ್ ಸ್ಟೇಷನ್ ಬದಲಾವಣೆ ಮಾಡಬೇಕು.

(ಮುಂದು)...

(960)14.11.2017/04.20/ಎಸ್‌ವಿ-ಎಂಡಿ(ವಿಕೆ)

**ಶ್ರೀ ಭಾನುಪ್ರಕಾಶ್(ಮುಂದು):-**

ಮಾನ್ಯ ಗೃಹ ಸಚಿವರ ಬಗ್ಗೆ ಶ್ರೀಮತಿ ತಾರಾ ಅನೂರಾಧರವರು ಒಂದು ಮಾತನ್ನು ಹೇಳಿದರು. ಮಾನ್ಯ ಗೃಹ ಸಚಿವರು ಬಹಳ ಮೆತ್ತಗೆ ಮಾತನಾಡುತ್ತಾರೆ ಎಂದು ಅವರು ಹೇಳಿದರು. ಪೋಲೀಸರು ಮೆತ್ತಗೆ ಮಾತನಾಡಬೇಕು; ಮಾನ್ಯ ಗೃಹ ಸಚಿವರಲ್ಲ. ಅವರ ಖದರ್ ಹಾಗೆಯೇ; ಮಾತಿನ ಶೈಲಿ ಒಬ್ಬೊಬ್ಬರದ್ದು ಒಂದೊಂದು ರೀತಿ ಇರುತ್ತದೆ. ಅದನ್ನು ನಾನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಸಚಿವರು ಅವರಿಗಿರುವ ಅವಧಿಯಲ್ಲಿ ಇದನ್ನು ನಿಲ್ಲಿಸಿದಲ್ಲಿ ಬಹಳ ಪುಣ್ಯ ಬರುತ್ತದೆ. ಬೇರೆ ಯಾವುದು ಮಾಡುತ್ತಾರೆಯೋ, ಇಲ್ಲವೋ ಗೊತ್ತಿಲ್ಲ. ಮುಂದಿನ ಯುವ ಜನಾಂಗ ಉಳಿಯಬೇಕಾದಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಹಳ ಬಿಗಿಯಾದಂತಹ ಕ್ರಮವನ್ನು ಮಾನ್ಯ ಗೃಹ ಸಚಿವರು ತೆಗೆದುಕೊಳ್ಳಬೇಕು. ಮೊದಲನೆಯದಾಗಿ ರಾಜಕಾರಣಿಗಳ ಹಸ್ತಕ್ಷೇಪ ಇಲ್ಲದಂತಿರುವುದು; ಎರಡನೆಯದಾಗಿ ತಂದೆ ತಾಯಿಗಳು ಮುಚ್ಚಿಡದಿರುವುದು ಹಾಗೂ ಮೂರನೆಯದಾಗಿ ಪೋಲೀಸರನ್ನು ಸಂಪೂರ್ಣವಾಗಿ ಇದಕ್ಕೆ ಜವಾಬ್ದಾರರನ್ನಾಗಿ ಮಾಡಬೇಕು. ಇಲ್ಲದಿದ್ದರೆ ಈ ಅಂಕಿ ಅಂಶಗಳು ಏನಿವೆ, ಇದು ಅಷ್ಟು ನಿಜವಾದ ಅಂಕಿ ಅಂಶಗಳೆಂದು ನಾನು ಹೇಳುವುದಿಲ್ಲ. ಹಾಗೆಂದು ಸುಳ್ಳು ಎಂದೂ ಹೇಳುವುದಿಲ್ಲ. ನಿಜವಾದ ಅಂಕಿ-ಅಂಶಗಳಂತೂ ಅಲ್ಲ. ಕೆಲವು ಕಡೆ ಶೂನ್ಯ, ಕೆಲವು ಕಡೆ 1 ಎನ್ನುವಂತಹ ಪರಿಸ್ಥಿತಿ ರಾಜ್ಯದಲ್ಲಿಲ್ಲ. ಸ್ವಲ್ಪ ಹೆಚ್ಚು-ಕಡಿಮೆ ಇದೆ. ಆದರೆ ಇಷ್ಟು ವ್ಯತ್ಯಾಸ ಇರುವುದಿಲ್ಲ. ಹಾಗಾಗಿ ದಯಮಾಡಿ ಕೊಟ್ಟಿರುವ ಅಂಕಿ-ಅಂಶಗಳನ್ನೂ ಪರಿಶೀಲಿಸಿ ಮುಂದಿನ ವರ್ಷದ ಮಾರ್ಚ್ ಅಧಿವೇಶನದ ವೇಳೆಗೆ ಇಷ್ಟು ಕಡಿಮೆ ಮಾಡದಿದ್ದರೆ ಆಗುವುದಿಲ್ಲ ಎಂದು ಒಂದು short term target ಕೊಡಬೇಕು. ಕ್ರಮ ಏನು ತೆಗೆದುಕೊಳ್ಳಬೇಕು, ಯಾವ ರೀತಿ ಹೇಳಬೇಕು ಎಂಬುದರ ಬಗ್ಗೆ ಅನುಭವಸ್ಥರಾದ ಸಚಿವರು ತಿಳಿದುಕೊಂಡಿದ್ದಾರೆ. ಅದರ ಬಗ್ಗೆ ವಿವರಿಸುವ ಅಗತ್ಯತೆ ಇರುವುದಿಲ್ಲ. ಇದರಲ್ಲಿ ಯುವತಿಯರೂ ಇದ್ದಾರೆ. ಇದು ಬಹಳ ಡೇಂಜರಸ್ ಆಗಿದೆ. ತಾಯಿ ಒಂದು ಬಾರಿ ಹಾಳಾದರೆ ಆ ಸಂಸಾರ ಪೂರ್ತಿ ಹಾಳಾದಂತೆ. ಮದುವೆಯಾಗಿ ಸಂಸಾರ ಮಾಡಬೇಕಾದ ಹೆಣ್ಣುಮಕ್ಕಳು ಇದನ್ನು ಕಲಿತುಬಿಟ್ಟರೆ ನಮ್ಮ ದೇಶದಲ್ಲಿ ಕುಟುಂಬಗಳು ಉಳಿದೀತೆ? ಯುವಕ-ಯುವತಿಯರನ್ನು ಕಣ್ಣಮುಂದಿಟ್ಟುಕೊಂಡು ದಯವಿಟ್ಟು ಇದರ ಬಗ್ಗೆ ಒಂದು stringent action ತೆಗೆದುಕೊಳ್ಳಬೇಕೆಂದು ವಿನಂತಿಸುತ್ತೇನೆ.

**ಶ್ರೀ ಘೋಟ್ನೆಕರ್ ಶ್ರೀಕಾಂತ ಲಕ್ಷ್ಮಣ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳನ್ನು ಅರ್ಪಿಸುತ್ತಾ, ಈ ವಿಷಯದ ಬಗ್ಗೆ ಮಾನ್ಯ ಗೃಹ ಸಚಿವರು ಈಗಾಗಲೇ ಸಾಕಷ್ಟು ಕ್ರಮವನ್ನು ತೆಗೆದುಕೊಳ್ಳುತ್ತಿದ್ದಾರೆ ಎಂದು ಹೇಳಬಯಸುತ್ತೇನೆ. ಗಾಂಜಾದ ಕುರಿತು ನಮ್ಮ ಜಿಲ್ಲೆಯಲ್ಲಿ ಆದಂತಹ ಒಂದು ಘಟನೆಯನ್ನು ಹೇಳುತ್ತೇನೆ. ಗಾಂಜಾ ಮಾರುವ ಏಜೆಂಟರು ರೈತರಿಗೆ ಹತ್ತಿ ಬೆಳೆಯುವಾಗ ಹತ್ತಿ ಬೀಜದ ಜೊತೆಗೆ ಗಾಂಜಾ ಬೀಜವನ್ನೂ ಹಾಕುವಂತೆ ಮಾಡುತ್ತಾರೆ. ಹತ್ತಿ ಬೀಜ ಮತ್ತು ಗಾಂಜಾ ಗಿಡ ಎರಡೂ ಒಂದೇ ರೀತಿಯಾಗಿ ಕಾಣುವುದರಿಂದ ಅಲ್ಲಿ ಸಾಕಷ್ಟು ಗಾಂಜಾ ಗಿಡಗಳನ್ನು ಬೆಳೆಯಲು ರೈತರಿಗೆ ಏಜೆಂಟರು ಪ್ರೇರೇಪಿಸುತ್ತಾರೆ. ರೈತರೂ ಸಹ ಹಣದ ಮೇಲಿನ ವ್ಯಾಮೋಹದಿಂದ ಬಹಳಷ್ಟು ಬೆಳೆಯುತ್ತಿದ್ದರು. ನಮ್ಮ ತಾಲ್ಲೂಕಿನ ಒಂದು ಹೊಲದಲ್ಲಿ ಒಮ್ಮೆ ಗಾಂಜಾ ಹಿಡಿದರೆ ಬರೋಬ್ಬರಿ ಒಂದು ಟ್ರಕ್‌ನಷ್ಟು ಗಾಂಜಾವನ್ನು ವಶಪಡಿಸಿಕೊಳ್ಳಲಾಗುತ್ತಿತ್ತು. ನಾವೂ ಸಹ ರೈತರಲ್ಲಿ ಇದರ ಬಗ್ಗೆ ಅರಿವು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮೂಡಿಸುತ್ತಿರುವುದರಿಂದ ಈಗ ಇದನ್ನೆಲ್ಲಾ ನಾಶ ಪಡಿಸಲಾಗಿದೆ. ಹೀಗಾಗಿ ನಮ್ಮಲ್ಲೆಲ್ಲಾ ಗಾಂಜಾ ಕಡಿಮೆ ಆಗಿದೆ. ಈ ಗಾಂಜಾವನ್ನು ವಶಪಡಿಸಿಕೊಂಡ ನಂತರ ಇದರ ಕೇಸುಗಳು ಬೇಗನೆ ಮುಗಿಯುವುದಿಲ್ಲ. 3-4 ವರ್ಷ ನಡೆಯುವುದರಿಂದ ರೈತರು ಸ್ವಲ್ಪ ಹೆದರಿ ಇದರ ಬೇಸಾಯವನ್ನು ಬಿಟ್ಟಿದ್ದಾರೆ. ಅದರ ಜೊತೆಗೆ ನಮ್ಮಲ್ಲಿ...

**ಸಭಾಪತಿಯವರು:-** ಮಾನ್ಯ ಘೋಟ್ನೇಕರ್‌ರವರೇ, ಸಮಯ ಕಡಿಮೆ ಇರುವುದರಿಂದ ನಿಮ್ಮ ಚರ್ಚೆಯನ್ನು ಒಂದೇ ವಿಷಯಕ್ಕೆ ಸೀಮಿತಗೊಳಿಸಿ. ಮುಂದಿನ ವಿಷಯ ಬೇಡ.

**ಶ್ರೀ ಘೋಟ್ನೇಕರ್ ಶ್ರೀಕಾಂತ ಲಕ್ಷ್ಮಣ:-** ಮಾನ್ಯ ಸಭಾಪತಿಯವರೇ, ಮತ್ತೊಂದು ವಿಷಯವೇನೆಂದರೆ ರೈತರು ಸಾರಾಯಿ ತೆಗೆಯುವಾಗ ಅದಕ್ಕೆ ಕೊಳಕು ಬೆಲ್ಲ ಹಾಕುವುದು, ಕೊಳಕು ಹಣ್ಣುಗಳನ್ನು ಹಾಕುವುದು ಈ ರೀತಿ...

**ಸಭಾಪತಿಯವರು:-** ಮಾನ್ಯ ಘೋಟ್ನೇಕರ್‌ರವರೇ, ಆ ವಿಷಯ ಬೇಡ. ಮಾದಕ ದ್ರವ್ಯದ ಬಗ್ಗೆ ಮಾತ್ರ ಮಾತನಾಡಿ.

**ಶ್ರೀ ಘೋಟ್ನೇಕರ್ ಶ್ರೀಕಾಂತ ಲಕ್ಷ್ಮಣ:-** ಮಾನ್ಯ ಸಭಾಪತಿಯವರೇ, ಅಂತಹ ಸಾರಾಯಿಯನ್ನು ಕುಡಿಯುವುದರಿಂದ ಏನಾಗುತ್ತದೆ ಎಂದು ಹೇಳುತ್ತೇನೆ.

**ಸಭಾಪತಿಯವರು:-** ಮಾನ್ಯ ಘೋಟ್ನೇಕರ್‌ರವರೇ, ಬೇಡ, ಆ ವಿಷಯವೇ ಬೇರೆ. ಇದು ಮಕ್ಕಳು – ಗಾಂಜಾ ಅಂದರೆ ಗಾಂಜಾ ಬಳಕೆಯಿಂದ ಮಕ್ಕಳ ಮೇಲಾಗುತ್ತಿರುವ ದುಷ್ಪರಿಣಾಮಗಳ ಬಗ್ಗೆ ನಡೆಯುತ್ತಿರುವ ಚರ್ಚೆಯಾಗಿದೆ. ಶ್ರೀ ಎಂ.ಕೆ.ಪ್ರಾಣೇಶ್‌ರವರೇ, ತಾವೀಗ ಮಾತನಾಡಿ.

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, ನಾನು ನಿನ್ನೆ ಹತ್ತು ಸಲ ಕೇಳಿದ್ದೇನೆ. ಇಂದು ಐದು ಸಲ ಕೇಳಿದ್ದೇನೆ. ನಮ್ಮಂತಹ ಕಿರಿಯರಿಗೆ ನೀವು ಅವಕಾಶವನ್ನು ಮಾಡಿಕೊಟ್ಟಿಲ್ಲ ಎಂದರೆ ಅದರಲ್ಲಿ ಅರ್ಥವೇ ಇಲ್ಲ.

**ಸಭಾಪತಿಯವರು:-** ತಮಗೆ ಕಿವಿ ಕೇಳಿಸುವುದಿಲ್ಲವೇ? ತಮಗೂ ಅವಕಾಶ ಕೊಡುತ್ತೇನೆ ಎಂದು ನಾನು ಹೇಳುತ್ತಿಲ್ಲವೇ? ಈಗ ಕುಳಿತುಕೊಳ್ಳಿ.

**ಶ್ರೀ ಎಂ.ಕೆ.ಪ್ರಾಣೇಶ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಹೆಚ್ಚಿಗೆ ಏನೂ ಹೇಳುವುದಕ್ಕೆ ಹೋಗುವುದಿಲ್ಲ. ಬಹಳ ವರ್ಷಗಳಿಂದ ನಿರಂತರವಾಗಿ ಗಾಂಜಾ ವ್ಯಾಪಾರ ನಡೆಯುತ್ತಲೇ ಇದೆ. ಆದರೆ ನಾವೆಲ್ಲಾ ಜವಾಬ್ದಾರಿಯುತ ಸ್ಥಾನದಲ್ಲಿರುವಂತಹವರು. ಇದರ ಬಗ್ಗೆ ಪರಿಹಾರವನ್ನು ಏಕೆ ಇನ್ನೂ ತೆಗೆದುಕೊಳ್ಳುವುದಕ್ಕೆ ಆಗಿಲ್ಲ ಎನ್ನುವುದು ನಮ್ಮ ಮುಂದಿರುವ ಪ್ರಶ್ನೆ. ಬಹುಶಃ ನಾವು ಅಸಹಾಯಕರಾಗಿದ್ದೇವೆಯೇ? ಇಂದು ನಾವು ಇಲ್ಲಿ ಮಾತನಾಡಬೇಕಾದರೆ ಪೋಲಿಸರ ಬಗ್ಗೆ ಮಾತನಾಡುತ್ತೇವೆ.

**ಸಭಾಪತಿಯವರು:–** ನಿಮ್ಮ ಸಲಹೆಯನ್ನು ಕೊಡಿ.

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ನಾನು ಆ ವಿಷಯಕ್ಕೆ ಬರುತ್ತಿದ್ದೇನೆ. ಪೋಲಿಸರು ಇದನ್ನು ತಡೆಯಬಹುದು, ಅವರಿಂದ ಇದನ್ನು ತಡೆಯುವುದಕ್ಕೆ ಆಗುತ್ತಿಲ್ಲ ಎನ್ನುವ ಬಗ್ಗೆ ಕೂಡ ಇಲ್ಲಿ ಸಾಕಷ್ಟು ಜನ ಮಾತನಾಡಿದ್ದಾರೆ. ಆದರೆ ಅವರಿಗೆ ನಾವು ಯಾವ ರೀತಿಯ ಸಹಕಾರವನ್ನು ಕೊಡುತ್ತಿದ್ದೇವೆ? ಉದಾಹರಣೆಗೆ ನಾನು ನನ್ನ ಜಿಲ್ಲೆಯ ಬಗ್ಗೆ ಮಾತನಾಡುತ್ತೇನೆ. ಈಗ ಮಾನ್ಯ ಮುಖ್ಯಮಂತ್ರಿಗಳು ಇಲ್ಲದ್ದಾರೆ. ಇಲ್ಲಿ ಹೋಂಸ್ಟೇಗಳ ಬಗ್ಗೆ ಚರ್ಚೆಯಾಯಿತು. ಇಂದು ಚಿಕ್ಕಮಗಳೂರು ಜಿಲ್ಲೆಗೆ ಒಂದು ವಾರದಲ್ಲಿ ಕನಿಷ್ಟ 25 ರಿಂದ 30 ಸಾವಿರ ಜನ ನಗರದಿಂದ ಭೇಟಿ ನೀಡುತ್ತಿದ್ದಾರೆ.

**ಸಭಾಪತಿಯವರು:–** ಮಾನ್ಯ ಪ್ರಾಣೇಶ್‌ರವರೇ, ಅದೆಲ್ಲಾ ಬೇಡ, ಗಾಂಜಾ ಬಗ್ಗೆ ಮಾತನಾಡಿ.

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ಅವರು ಏತಕ್ಕಾಗಿ ಬರುತ್ತಿದ್ದಾರೆ? ಮಾನ್ಯ ಗೃಹ ಸಚಿವರು ಇಲ್ಲಿಯೇ ಇದ್ದಾರೆ. ಮದ್ಯವ್ಯಸನಿಗಳನ್ನು, ಗಾಂಜಾ ವ್ಯಾಪಾರಿಗಳನ್ನು ನಗರದಲ್ಲಿ ತಡೆಯಲಾಗುತ್ತಿದೆ. ಆದರೆ ನಮ್ಮ ಭಾಗಗಳನ್ನು ಬಿಟ್ಟಿದ್ದಾರೆ. ಈಗ ನಮ್ಮ ಭಾಗಗಳು ಮದ್ಯವ್ಯಸನಿಗಳಿಗೆ ಒಳ್ಳೆಯ ಅವಕಾಶಗಳನ್ನು ನಿರ್ಮಾಣ ಮಾಡುವಂತಹ ಜಾಗವಾಗಿವೆ. ಅಲ್ಲೆಲ್ಲಾ ಬಂದು ಅವರು ಗಾಂಜಾ, ಅಫೀಮು ಮುಂತಾದವುಗಳ ಸೇವನೆ ಮಾಡುತ್ತಾರೆ. ಹಾಗೆಯೇ ಮದ್ಯಸೇವನೆಯೂ ನಡೆಯುತ್ತದೆ. ಅದನ್ನು ತಡೆಯುವಂತಹ ವ್ಯವಸ್ಥೆ ಆಗಿರುವುದಿಲ್ಲ. ನಮ್ಮ ಜಿಲ್ಲೆಯಲ್ಲಿ ಒಬ್ಬ ಒಳ್ಳೆಯ ಎಸ್.ಪಿ. ಇರಬಹುದು. ಒಳ್ಳೆಯ ಆಡಳಿತವನ್ನು ಕೊಡುವಂತಹ ಅಧಿಕಾರಿಗಳು ಇದ್ದಾರೆ. ನಾವು ಇತ್ತೀಚೆಗೆ ಅವರೊಡನೆ ಮಾತನಾಡಿದಾಗ ಅವರೂ ಕೂಡ ಈ ರೀತಿ ಅವಕಾಶಗಳು ಸಿಕ್ಕಾಗ ದಯವಿಟ್ಟು ಸರ್ಕಾರದ ಗಮನಕ್ಕೆ ತರುವಂತಹ ಕೆಲಸವನ್ನು ಮಾಡಬೇಕು ಎಂದು ನಮಗೆ ಹೇಳಿದರು. ಏಕೆಂದರೆ ದೀರ್ಘಕಾಲದ ವಾರಾಂತ್ಯಗಳ ಸಂದರ್ಭದಲ್ಲಿ ಸುಮಾರು 42,000 ವಾಹನಗಳು ಚಿಕ್ಕಮಗಳೂರು ಜಿಲ್ಲೆಗೆ ಬಂದಿವೆ. ಆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವಾಹನಗಳ ಮೂಲಕ ಬಂದವರು ಮಾಡುವ ಕೆಲಸವೇನು? ಅವರಿಗೆ ಅಲ್ಲಿ ಯಾವುದೇ ಅಡೆತಡೆಗಳು ಇಲ್ಲ. ಅಲ್ಲಿ ಇದೇ ತರಹದ ಗಾಂಜಾವನ್ನು ಸೇವನೆ ಮಾಡುವಂತಹದ್ದು, ರಸ್ತೆಗಳಲ್ಲಿ ಮದ್ಯವನ್ನು ಇಟ್ಟುಕೊಳ್ಳುವಂತಹದ್ದು, ಅಲ್ಲಿಯೇ ನೃತ್ಯ ಮಾಡುವಂತಹದ್ದು, ಈ ಕೆಲಸಗಳನ್ನು ಮಾಡುತ್ತಿದ್ದಾರೆ. ಇದನ್ನು ನಾವು ಪೊಲೀಸ್ ಇಲಾಖೆಯ ಗಮನಕ್ಕೆ ತಂದಂತಹ ಸಂದರ್ಭದಲ್ಲಿ ಅವರು ಅಸಹಾಯಕತೆಯನ್ನು ತೋರಿಸುತ್ತಾರೆ. ಏಕೆಂದು ಹೇಳಿದರೆ ನಮಗೆ ಕನಿಷ್ಟ ಬೇಕಿದ್ದಂತಹ ಪೊಲೀಸ್ ಇರಬಹುದು, ಸಬ್ ಇನ್ಸ್‌ಪೆಕ್ಟರ್ ಇರಬಹುದು ಅವರು ಇಲ್ಲ ಎಂದು ಹೇಳುತ್ತಾರೆ. ಇದರಿಂದ ವ್ಯವಸ್ಥೆಗಳು ಹಾಳಾಗದೆ ಏನಾಗುತ್ತದೆ? ಅವಕಾಶಗಳನ್ನು ನಾವೇ ನಿರ್ಮಾಣ ಮಾಡಿಕೊಡುತ್ತಿದ್ದೇವೆ. ಹಾಗಾಗಿ ಯಾವ್ಯಾವ ಪೊಲೀಸ್ ಠಾಣೆಗಳಿಗೆ ಎಷ್ಟೆಷ್ಟು ಪೊಲೀಸ್ ಸಿಬ್ಬಂದಿ ಬೇಕಾಗಿದೆಯೋ ಅವರನ್ನು ನೇಮಕ ಮಾಡುವಂತಹ ಕೆಲಸವನ್ನು ಸರ್ಕಾರ ಮಾಡಬೇಕಾಗಿದೆ.

ಇಲ್ಲಿ ಕುಳಿತಿರುವ ನಾವು ಜವಾಬ್ದಾರಿಯುತ ಸ್ಥಾನದಲ್ಲಿರುವವರು. ಕೇವಲ ಪ್ರಚಾರಕ್ಕಾಗಿ ಮಾತನಾಡುವುದಲ್ಲ. ನಾವು ಮಾತನಾಡುವಂತಹ ವಿಚಾರಗಳು ಕಾರ್ಯಗತವಾಗಬೇಕು. ಇಂತಹ ಅಪರಾಧಗಳನ್ನು ತಡೆಯುವಂತಹ ಕೆಲಸಗಳಾಗಬೇಕು. ಮುಂದಿನ ಯುವ ಪೀಳಿಗೆಗಳು ಇಂತಹ ವ್ಯಸನಗಳಿಂದ ಮುಕ್ತರಾಗಬೇಕು. ಶ್ರೀ ಐವನ್ ಡಿ'ಸೋಜಾರವರು ಒಳ್ಳೆಯ ಪ್ರಶ್ನೆಯನ್ನು ಎತ್ತಿದ್ದಾರೆ. ಇದಕ್ಕೆ ನಾವೆಲ್ಲರೂ ಒಗ್ಗೂಡಿ ಕೆಲಸ ಮಾಡಬೇಕು. ಉದಾಹರಣೆಗೆ ಮೂಡಿಗೆರೆ ಪೊಲೀಸ್ ಠಾಣೆಯಲ್ಲಿ ಇರುವ ಹುದ್ದೆಗಳ ಸಂಖ್ಯೆ 32, ಆದರೆ ಅಲ್ಲಿರುವ ಸಿಬ್ಬಂದಿ ಸಂಖ್ಯೆ ಕೇವಲ 13. ನಾವು ಪೋಲಿಸರ ಮೇಲೆ ನೀವು ಗಾಂಜಾ ವ್ಯಾಪಾರಿಯನ್ನು ಹಿಡಿಯಲಿಲ್ಲ ಎಂದು ಹೇಳಿದರೆ ಅವನು ಏನು ಮಾಡಲಿಕ್ಕೆ ಸಾಧ್ಯ? ಆದ್ದರಿಂದ ಸರ್ಕಾರ ಸಂಪೂರ್ಣವಾದ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ಇಲ್ಲಿಯವರೆವಿಗೆ ಏನಾಗಿರುವುದೋ ಅದು ನಮಗೆ ಗೊತ್ತಿಲ್ಲ. ಸರ್ಕಾರದಿಂದ ಏಕೆ ಇದನ್ನು ನಿಯಂತ್ರಣ ಮಾಡುವುದಕ್ಕಾಗುವುದಿಲ್ಲ? ಮಾನ್ಯ ಮುಖ್ಯಮಂತ್ರಿಗಳಿದ್ದಾರೆ, ಮಾನ್ಯ ಗೃಹ ಸಚಿವರಿದ್ದಾರೆ. ಪ್ರತಿಯೊಂದು ಇಲಾಖೆಯೂ ಮುಖ್ಯಮಂತ್ರಿಗಳ ಕೈಯಲ್ಲಿದೆ. ಇಂತಹವುಗಳಿಗೆ ನಿರ್ಬಂಧವನ್ನು ವಿಧಿಸಬೇಕು. ಯಾರಿಗೂ ಮುಲಾಜು ತೋರಬಾರದು. ಗಾಂಜಾ ವ್ಯಾಪಾರಿಗಳಾದರೂ, ಮದ್ಯವ್ಯಸನಿಗಳಾದರೂ ನಿರ್ದಾಕ್ಷಿಣ್ಯ ಕ್ರಮವನ್ನು ಕೈಗೊಂಡಾಗ ಮಾತ್ರ ಖಂಡಿತವಾಗಿ ಈ ಕೆಲಸವಾಗುತ್ತದೆ ಎಂದು ನಾನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ.

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ವಂದಿಸುತ್ತೇನೆ. ಎಲ್ಲರೂ ವಾದ ಮಾಡುತ್ತಿರುವುದನ್ನು ನೋಡಿದರೆ ಸರ್ಕಾರವೇನೋ ಕಣ್ಣು ಮುಚ್ಚಿಕೊಂಡು ಕುಳಿತಿದೆ; ರಾಜ್ಯದಲ್ಲಿ ಕಾನೂನೇ ಇಲ್ಲವೇನೋ; ಮಾನ್ಯ ಗೃಹ ಸಚಿವರೂ ಸಹ ಏನೂ ಮಾಡುತ್ತಿಲ್ಲವೇನೋ ಎಂಬಂತಿದೆ. ನಾರ್ಕೋಟಿಕ್ ಡ್ರಗ್ಸ್‌ನಲ್ಲಿ ಒಟ್ಟು 238 ಡ್ರಗ್ಸ್ ಬರುತ್ತದೆ. ವಿಶೇಷವಾಗಿ ನಮ್ಮ ರಾಜ್ಯದಲ್ಲಿ ಬರತಕ್ಕಂಥದ್ದು Charas, Ganja (Cannabis), Cocaine, Heroin ಹೆಚ್ಚಾಗಿ ಮಾರಾಟವಾಗುತ್ತಿದೆ. ವಿಶೇಷವಾಗಿ ವಿದ್ಯಾ ಸಂಸ್ಥೆಗಳ ಸುತ್ತಮುತ್ತಲಿನ ಪ್ರದೇಶದಲ್ಲಿ ಇದು ಹೆಚ್ಚಾಗಿ ನಡೆಯುತ್ತಿದೆ. 1985ರಲ್ಲಿ ತಂದಂತಹ ಒಂದು ಆಕ್ಟ್ ಇದ್ದು, ಅದನ್ನು NDPS (Narcotic Drugs and Psychotropic Substances) Act ಎಂದು ಹೇಳುತ್ತಾರೆ. ಅದರಲ್ಲಿ ಸೆಕ್ಷನ್ 2 ಅಡಿಯಲ್ಲಿ ಇವೆಲ್ಲವನ್ನೂ ವಿವರಿಸಲಾಗಿದೆ. ಮಾನ್ಯ ಸಿ.ಎಂ.ಇಬ್ರಾಹಿಂ ಅವರು ಮಾತನಾಡುತ್ತಾ ಹೇಳಿದರು. Section 36A ಅಡಿಯಲ್ಲಿ ನಮ್ಮಲ್ಲಿ ವಿಶೇಷವಾದ ಕೋರ್ಟ್‌ಗಳೇ ಇವೆ. ಅದಕ್ಕೆ Special Court ಎಂದು ಹೇಳುತ್ತಾರೆ. ಎಲ್ಲಿಯಾದರೂ in contravention of Section 15-27 ಅಡಿಯಲ್ಲಿ ಪ್ರಕರಣ ದಾಖಲಾದರೆ ಅವುಗಳ ವಿಚಾರಣೆಗಾಗಿ ಸೆಕ್ಷನ್ 36 ಅಡಿಯಲ್ಲಿ ವಿಶೇಷ ನ್ಯಾಯಾಲಯವನ್ನು ನಮ್ಮ ರಾಜ್ಯದಲ್ಲಿಯೂ ಸಹ constitute ಮಾಡಿದ್ದಾರೆ.

(...ಮುಂದು)

(961)14.11.2017/4.30/ಕೆ.ಜಿ-ಎಂಡಿ(ವಿಕೆ)

**ಶ್ರೀ ಶರಣಪ್ಪ ಮಟ್ಟೂರ (ಮುಂದು):-** ಸೆಕ್ಷನ್ 36(ಎ) ಕೆಳಗಡೆ ನಮ್ಮ ರಾಜ್ಯದಲ್ಲಿಯೂ ಸಹ constitute ಮಾಡಿದ್ದಾರೆ. ಆ ನ್ಯಾಯಾಲಯದಲ್ಲಿ ಅವರನ್ನು non-bailable offence ಕೆಳಗಡೆ ತಂದು ಅವರನ್ನು trial ಮಾಡುತ್ತೇವೆ. ಇಲ್ಲಿ ಪ್ರಶ್ನೆ ಬಂದಿರುವುದು ಇಷ್ಟೇ. ನಮ್ಮಲ್ಲಿ ಕಲಂ 20 ರ ಕೆಳಗೆ ವಿಶೇಷವಾದ punishment ಇದೆ. First time involve ಆಗಿದ್ದರೆ, ಹತ್ತು ವರ್ಷ. ಎರಡನೆ ಬಾರಿ involve ಆದ್ದರೆ, ten years imprisonment plus one lakh fine ಎಂದು ಇದೆ. ಕಲಂ 20 (ಸಿ) ಕೆಳಗಡೆ 20 ವರ್ಷ ಮತ್ತು ಒಂದು ಲಕ್ಷ ದಂಡ ಎಂದು ಇದೆ. ಇದರಲ್ಲಿ ಬಹಳ stringent condition ಇದೆ ಅದರಲ್ಲಿ small quantity and commercial

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

quantity ಎಂದು ಬರುತ್ತದೆ. Small quantity ಎಂದರೆ ಏನು? ನಮಗೆ consumption ಮಾಡುವುದಕ್ಕೆ ಒಂದು ಗ್ರಾಂನಿಂದ ೨೨೦ ಗ್ರಾಂನವರೆಗೆ ಅಂದರೆ ಇದು ಗಾಂಜದ್ದು. Cocaine, heroin ಮೇಲೆ ಬೇರೆ ಬೇರೆ ರೀತಿಯಲ್ಲಿ ಟೇಬಲ್ ಇರುತ್ತದೆ. ಆ ಟೇಬಲ್‌ನಲ್ಲಿ ಒಟ್ಟು 289 ಡ್ರಗ್ಸ್‌ನ್ನು describe ಮಾಡುತ್ತಾರೆ. ನಮ್ಮ personal consumption ಗೆ ಇರುವಂಥದ್ದು ಸಿಕ್ಕರೆ it's a bailable offence. Suppose, if anybody is found with the contraband drugs and if it is more than 1000 grams ಇದ್ದರೆ, ಆಗ ಅದು commercial quantity ಅಡಿಯಲ್ಲಿ ಬರುತ್ತದೆ and then it is a non-bailable offence. ಹಾಗಾಗಿ, ಒಂದು ಸಣ್ಣ ಪ್ಯಾಕೇಟ್ ಸಿಕ್ಕರೆ ಅದು personal consumption ಗೆ ಇಟ್ಟುಕೊಂಡಿರುವಂಥದ್ದು. It's a bailable offence. ನಾವು ಏನು ಅಂದುಕೊಳ್ಳುತ್ತೇವೆಂದರೆ, ಮಾನ್ಯ ಗೃಹ ಮಂತ್ರಿಗಳು ಏನು ಕೆಲಸ ಮಾಡುತ್ತಾರೆ, ಪೊಲೀಸ್‌ನವರು ಏನು ಕೆಲಸ ಮಾಡುತ್ತಾರೆ ಎನ್ನುತ್ತೇವೆ. But here the law itself provides. When the person is found with some quantity of drugs which is used for the personal consumption, it's a bailable offence. It is under the Act and nobody can control it. ಇದು ಒಂದು. ಇಲ್ಲಿ ವಿಶೇಷವಾಗಿ ಇನ್ನೊಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ನನಗೆ ಬಹಳ ನೋವಾಗುತ್ತದೆ. ನಮ್ಮ ಐವನ್ ಡಿ'ಸೋಜಾ ರವರ ಕ್ಷೇತ್ರವಾದ ಮಂಗಳೂರಿನಲ್ಲಿ 224 ದಸ್ತಗಿರಿಯಾದ ಪ್ರಕರಣಗಳು ಇವೆ. ಇದು ಬಹಳ highest. Second highest ಶಿವಮೊಗ್ಗದಲ್ಲಿ 152 ಆರೋಪಿಗಳು ದಸ್ತಗಿರಿಯಾಗಿದ್ದಾರೆ. ಉಳಿದವು 15,20,30,32 ರವರೆಗೆ ಇವೆ. ಇಲ್ಲಿ ಏನಾಗುತ್ತದೆಂದರೆ, ಕಲಂ 41...

**ಸಭಾಪತಿಯವರು:-** ಮಾನ್ಯ ಸದಸ್ಯರೆ, ಇದಕ್ಕೆ ಏನಾದರೊಂದು ಸಲಹೆ ಕೊಡಿ. General discussion ಬೇಡ. ಬೇರೆಯವರು ಮಾತನಾಡಬೇಕು, ಅದಕ್ಕೆ ಉತ್ತರವು ಬರಬೇಕು.

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, ತಾವು ಬೇಡವೆಂದರೆ, ನಾನು ಮಾತನಾಡುವುದಿಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ಮಾನ್ಯ ಸದಸ್ಯರೆ, ಮಾತನಾಡಬೇಡಿ ಎಂದು ನಾನು ಹೇಳುತ್ತಿಲ್ಲ. ಸರ್ಕಾರ ಇದಕ್ಕೆ ಏನು ಮಾಡಬೇಕೆಂದು ಒಂದು ಸಲಹೆ ಕೊಡಿ.

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, ಅದನ್ನೇ ಈಗ ಹೇಳುತ್ತೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರೆ, ನೇರವಾಗಿ ಒಂದು ಸಲಹೆ ಕೊಟ್ಟುಬಿಡಿ. ಈಗ ಸಮಯ ಮುಗಿಯುತ್ತಿದೆ.

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, ಸಮಯ ಮುಗಿಯಿತು ಎಂದರೆ, ಬೇರೆಯವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟುಬಿಡಿ.

**ಸಭಾಪತಿಯವರು:-** ಮಾನ್ಯ ಸದಸ್ಯರೆ, ಎಲ್ಲರಿಗೂ ಮೂರು ನಿಮಿಷಗಳಲ್ಲಿ ಮುಗಿಸಬೇಕೆಂದು ಹೇಳುತ್ತಿದೇನೆ.

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, ಈ ವಿಷಯ ಬಹಳ ಗಂಭೀರವಾಗಿದೆ.

**ಸಭಾಪತಿಯವರು:-** ಮಾನ್ಯ ಸದಸ್ಯರೆ, ಹೌದು. ಬೇರೆಯವರು ಮಾತನಾಡುವುದಕ್ಕೆ ಕೈ ಎತ್ತುತ್ತಿದ್ದಾರೆ.

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, ಕಲಂ 40, 41 ಮತ್ತು 42 ಬರುತ್ತದೆ. ಇದನ್ನು ಕಳೆದ ಬಾರಿಯಯ ಈ ವಿಷಯವನ್ನು ಹೇಳಿದ್ದೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರೆ, ಇದಕ್ಕೆ ಸರ್ಕಾರ ಏನು ಮಾಡಬೇಕೆಂದು ಒಂದು ಸಲಹೆ ಕೊಡಿ.

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡುವುದಕ್ಕೆ ಅವಕಾಶ ಇಲ್ಲ. ಏನು ಮಾಡಬೇಕೆಂದರೆ, arrest ಮಾಡಿ ಒಳಗೆ ಹಾಕಿ. ಅದು ಕಾನುನು ಸಚಿವರಿಗೆ ಗೊತ್ತಿಲ್ಲವಾ.

**ಸಭಾಪತಿಯವರು:-** ಮಾನ್ಯ ಸದಸ್ಯರೆ, ಈಗ ನಾನು ಏನು ಮಾಡಬೇಕು ಹೇಳಿ? Should I allow you to speak for some more time?

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೇ, ನಾನು ಹೇಳುವಂತಹ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಬಯಸುತ್ತೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರೆ, ಎಲ್ಲಾ ವಿಚಾರಗಳನ್ನು ಹೇಳುವುದಕ್ಕೆ ಆಗುವುದಿಲ್ಲ. ಈಗ ಸಮಯ ಇಲ್ಲ. ನೀವು ಸರ್ಕಾರಕ್ಕೆ ಏನು ಮಾಡಬೇಕೆಂದು ಸಲಹೆಯನ್ನು ಮಾತ್ರ ಕೊಡಿ.

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೇ, ಈ ರೀತಿ ನಮಗೆ ಮಾತನಾಡುವುದಕ್ಕೆ ಅವಕಾಶ ಇಲ್ಲವೆಂದರೆ, ಬೇಡ ಬಿಡಿ. ನಾನು ಮಾತನಾಡುವುದಿಲ್ಲ.

**ಸಭಾಪತಿಯವರು:–** ಮಾನ್ಯ ಸದಸ್ಯರೆ, ನೀವು ಸಿಟ್ಟು ಮಾಡಿಕೊಳ್ಳಬಾರದು. ನೀವು ನನಗೆ ಸಹಕಾರ ಕೊಡಿ.

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೇ, ನಾನು ಸಿಟ್ಟು ಮಾಡಿಕೊಳ್ಳುವವನಲ್ಲ.

**ಸಭಾಪತಿಯವರು:–** ಮಾನ್ಯ ಸದಸ್ಯರೆ, ನೀವು ಸಹಕಾರ ನೀಡಿ. Please co-operate.

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೇ, ನನ್ನ concern ಅನ್ನು ತಾವು ಅರ್ಥ ಮಾಡಿಕೊಳ್ಳಲಿಲ್ಲವೆಂದರೆ ಹೇಗೆ? My intension is to suggest the Law Minister to bring them under the rule of law.

**ಸಭಾಪತಿಯವರು:–** ಮಾನ್ಯ ಸದಸ್ಯರೆ, ಹೌದು. ಈ ವಿಷಯದ ಮೇಲೆ ಚರ್ಚೆ ಪ್ರಾರಂಭವಾಗಿದ್ದು, 3 ಗಂಟೆ 25 ನಿಮಿಷಕ್ಕೆ. ಈಗ 4 ಗಂಟೆ 35 ನಿಮಿಷ ಆಗಿದೆ. ಈ ವಿಷಯ ಇನ್ನೂ ಮುಗಿಯುವುದಿಲ್ಲ. ಇದನ್ನು ಮುಗಿಸುವುದಕ್ಕೆ ಆಗುವುದಿಲ್ಲ. ನಿಮಗೆ ಒಂದು ಅವಕಾಶ ಕೊಟ್ಟಿದ್ದೇನೆ. ತಾವು ಬೇಗ ಮಾತನಾಡಿ ಮುಗಿಸಿ.

**ಸಭಾಪತಿಯವರು:–** ಮಾನ್ಯ ಸಭಾಪತಿಯವರೇ, ನಾನು ತಮ್ಮಲ್ಲಿ ದಯಮಾಡಿ ಕೈ ಮುಗಿದು ಕೇಳಿಕೊಳ್ಳುತ್ತೇನೆ. You are a senior most member and not only that, but you are adorning the chair as a Chairman. Kindly, afford an opportunity to the juniors. This is not the way of treating the juniors to make a submission.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ಮಾನ್ಯ ಸದಸ್ಯರೆ, ನಾನು ಎಲ್ಲರಿಗೂ ಅವಕಾಶ ಮಾಡಿ ಕೊಡುತ್ತಿದ್ದೇನೆ. ತಾವು ಮಾತನಾಡಿ. Go ahead, I will not interfere.

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, It is not the question of interfere. You have got the discretionary power to control us.

**ಸಭಾಪತಿಯವರು:-** ಮಾನ್ಯ ಸದಸ್ಯರೆ, Please continue your speech.

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, ಇಂತಹ ವಿಶೇಷ ಪ್ರಕರಣಗಳು ಬಂದಾಗ ಪೋಲೀಸರು ಅದನ್ನು ಜಪ್ತಿ ಮಾಡುವಾಗ technical offence ಇರುತ್ತೇ, ಬಹಳ ಗಂಭೀರವಾದ ರೀತಿಯಲ್ಲಿ ಇರುತ್ತದೆ. ನ್ಯಾಯಾಲಯದಲ್ಲಿ ಏಕೆ ಈ ಪ್ರಕರಣಗಳು ಹೆಚ್ಚಿನ ರೀತಿಯಲ್ಲಿ ಬಿಡುಗಡೆ ಆಗುತ್ತವೆ ಎನ್ನುವಂತಹ ವಿಚಾರವನ್ನು ತಮಗೆ ಹೇಳುತ್ತೇನೆ. Search, seizure and arrest ಮಾಡುವಾಗ technical offence ಇರುತ್ತೆ. ಇದರಲ್ಲಿ ಎಲ್ಲಿ ನಿಮಗೆ counterfeit notes ಆಗಿರಬಹುದು, NDPS (The Narcotic Drugs and Psychotropic Substances Act) ಹಾಕಿರಬಹುದು ಅಥವಾ Essential Commodities Act ಇರಬಹುದು, ಇಂತಹ offences ನಲ್ಲಿ Investigating Agency ಯವರು they must take personal interest not only to discharge their duties, but also to control such kind of offences in the country. It is our bounden duty to protect the interest of our Nation. ಅದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಇಲ್ಲಿ ಮಾನ್ಯ ಕಾನೂನು ಸಚಿವರು, ಮುಖ್ಯ ಮಂತ್ರಿಯವರು, ಸರ್ಕಾರ can't help. Atleast, Investigating Officer should take personal interest to bring the real master mind or rather you can call it as a criminal mind. ಮೊದಲು ಇದು ಎಲ್ಲಿಂದ ಯಾರಿಂದ ಪ್ರಾರಂಭವಾಗುತ್ತದೆ ಎಂಬುದನ್ನು ಕಂಡುಹಿಡಿದು ಅವರನ್ನು ಹಿಡಿದು ತಂದು ಅವರ ವಿರುದ್ಧ ಸರಿಯಾದ ರೀತಿಯಲ್ಲಿ ಕಾನೂನು ರೀತಿ ಕ್ರಮ ಕೈಗೊಂಡಾಗ ಮಾತ್ರ ಇದನ್ನು ತಡೆಗಟ್ಟುವುದಕ್ಕೆ ಆಗುತ್ತದೆಯೇ ವಿನಹಃ ಸುಮ್ಮನೆ ಜನರಲ್ ಆಗಿ ಭಾಷಣ ಮಾಡುವುದರಲ್ಲಿ ಅರ್ಥ ಇಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಈ ಕಾಯ್ದೆ ಬಹಳ ಗಂಭೀರವಾಗಿದೆ. The Narcotic Drugs and Psychotropic Substances Act, 1985 ಬಹಳ ಗಂಭೀರವಾದ ಕಾಯ್ದೆ. ಅದರಲ್ಲಿ ಶಿಕ್ಷೆಯು ಸಹ ಅಷ್ಟೇ ಗಂಭೀರವಾಗಿದೆ. ಅದಕ್ಕೆ ನಾನು ಮಾನ್ಯ ಗೃಹ ಸಚಿವರಿಗೆ ಸಲಹೆ ಕೊಡುವುದೇನೆಂದರೆ, Investigating Officer ಯಾರು ಇರುತ್ತಾರೆ, ಅವರು ಬಹಳ ನಿರ್ದಿಷ್ಟವಾಗಿ ಈ ಕೇಸ್‌ನ್ನು ತೆಗೆದುಕೊಂಡು ಅದನ್ನು particularly follow ಮಾಡಿದಾಗ ಮಾತ್ರ ನಾವು conviction ಮಾಡುವುದಕ್ಕೆ ಸಾಧ್ಯವಿದೆ ಎನ್ನುವಂಥಹ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ, ನನ್ನ ಸನ್ಮಿತ್ರರಾದಂತಹ ಮಾನ್ಯ ಉಗ್ರಪ್ಪನವರು ನಾವು ನಮ್ಮ ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿ ಈ ವಿಚಾರದಲ್ಲಿ ಸಭೆಗಳನ್ನು ನಡೆಸುವಾಗ NDPS Act ಬಗ್ಗೆ ನಾನು ಈ ವಿಚಾರವನ್ನು ಅವರ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ಏಕೆಂದರೆ, ಪ್ರಕರಣಗಳು acquit ಆಗುತ್ತವೆ ಎಂಬುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇಲ್ಲಿ ನಮಗೆ ಏನು ಗೊತ್ತಾಗುತ್ತದೆ ಎಂದರೆ, ಓಪನ್ ಆಗಿ ನ್ಯಾಯಾಲಯದ ಮುಂದೆ ಒಂದು ಕೊಲೆ ಆಯಿತು. ನಂತರ ಅದು ಕೇಸ್ ಆಗುತ್ತದೆ. ಅದರಲ್ಲಿ ಆರೋಪಿಗಳು ಬಿಡುಗಡೆಯಾದರು. ಆದರೆ, ಸಾಕ್ಷಿದಾರರು ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ಹೇಳಲಿಲ್ಲವೆಂದರೆ, ನ್ಯಾಯಾಲಯವಾಗಲಿ, ಪೊಲೀಸರಾಗಲಿ, ಸರ್ಕಾರವಾಗಲಿ, ವಕೀಲರಾಗಲಿ ಯಾರು ಏನು ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ನಾನು ಮಾನ್ಯ ಗೃಹ ಸಚಿವರಲ್ಲಿ ಮನವಿ ಮಾಡುವುದೇನೆಂದರೆ, Investigating Officer ಅಲ್ಲಿರುವಂತಹ ಸಾಕ್ಷ್ಯಗಳನ್ನು ಸರಿಯಾದ ರೀತಿಯಲ್ಲಿ ಮಾಡಿ conviction ಆಗುವವರೆಗೂ ಹಾಗೂ Investigating Officer ಅದನ್ನು ನ್ಯಾಯಾಲಯಕ್ಕೆ complete witnesses ಗಳನ್ನು ತಂದು ಹೇಳುವವರೆಗೂ ಅವರಿಗೆ ಜವಾಬ್ದಾರಿಯನ್ನು ಕೊಟ್ಟರೆ ಮಾತ್ರ ಇದನ್ನು ತಡೆಗಟ್ಟಲು ಸಾಧ್ಯವಾಗುತ್ತದೆ ಎನ್ನುವ ಮಾತನ್ನು ಹೇಳಿ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಪಿ.ಆರ್.ರಮೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಷಯ ಬಹಳ ಗಂಭೀರವಾಗಿರುವಂಥದ್ದು ಹಾಗೂ ನಮ್ಮ ಮುಂದಿನ ಪೀಳಿಗೆಯ ಮೇಲೆ ಪರಿಣಾಮ ಬೀರುವಂಥದ್ದು. ಮಾನ್ಯ ಸಚಿವರು ಕೊಟ್ಟಿರುವಂತಹ ಕೆಲವು ಅಂಕಿ-ಅಂಶಗಳ ಬಗ್ಗೆ ನಾನು ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಉತ್ತರದಲ್ಲಿ 2015-2016, 2016-2017 ಈ ಮೂರು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವರ್ಷಗಳನ್ನು ಮಾತ್ರ ಕೊಟ್ಟಿದ್ದಾರೆ. ಇಲ್ಲಿ ಪ್ರತಿ ವರ್ಷ hundred percent increase ಆಗಿದೆ. ಅದರ ಅರ್ಥ ವೇಗವಾಗಿ ಬೆಳೆಯುವಂಥದ್ದು. ಈ ಒಂದು ಪ್ರಕರಣದಲ್ಲಿ ದಸ್ತಗಿರಿ ಮಾಡಿರುವಂಥದ್ದು ಇರಬಹುದು ಮತ್ತು ಪತ್ತೆ ಹಚ್ಚಿರುವುದು ಇರಬಹುದು, ಎಲ್ಲವೂ ಪ್ರತಿ ವರ್ಷ hundred percent increase ಆಗುತ್ತಿದೆ. ಇದು ಏನನ್ನು ತೋರಿಸುತ್ತದೆ ಎಂದರೆ, ನಮ್ಮ ದೇಶದಲ್ಲಿ it's a direct threat on our human resources and human development ಗೆ ತೊಂದರೆಯಾಗುವುದನ್ನು ತೋರಿಸುತ್ತದೆ. ನಮ್ಮ ಮಕ್ಕಳು ಇವತ್ತು ಕಾಲೇಜು ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಇರುವಂತಹವರು ಇದರಿಂದ ಬಹಳಷ್ಟು ಪಿಡುಗಿಗೆ ಒಳಗಾಗುತ್ತಿದ್ದಾರೆ. ಹೆಚ್ಚಾಗಿ ಇಲ್ಲಿ ವಿದ್ಯಾಭ್ಯಾಸ ಮಾಡುವುದಕ್ಕೆ ಆಗಲಿ ಅಥವಾ ಅವರು development ಆಗುವುದಕ್ಕೆ ಬಹಳ ಕುಂಠಿತವಾಗುತ್ತಿದೆ. ಹಾಗಾಗಿ, ಇದು ಒಂದು ಬಹಳ ದೊಡ್ಡ ಪಿಡುಗಾಗಿದೆ. ನಮ್ಮ ಭಾರತ ದೇಶ ಈ ಒಂದು narcotic substances ಗೆ ಒಂದು ದೊಡ್ಡ ಮಾರುಕಟ್ಟೆಯಾಗಿದೆ. ನಾನು ತಮ್ಮಲ್ಲಿ ಒಂದು ಮನವಿ ಮಾಡಿಕೊಳ್ಳುವುದೇನೆಂದರೆ, ಯಾರ್‍ಯಾರು ಇಂತಹ ಪ್ರಕರಣಗಳಲ್ಲಿ ಭಾಗಿಯಾಗಿದ್ದಾರೆ ಅವರ ಭಾವಚಿತ್ರಗಳನ್ನು ದಯವಿಟ್ಟು website ನಲ್ಲಿ ಹಾಕಿ. ಮೊದಲನೆ ಬಾರಿ ಪ್ರಕರಣದಲ್ಲಿ ಯಾರು ಭಾಗಿಯಾಗಿದ್ದಾರೆ ಅವರ ಹೆಸರುಗಳನ್ನು ದಯವಿಟ್ಟು ಪೋಲೀಸ್ official website ನಲ್ಲಿ ಹಾಕಿ. ಎರಡನೆಯ ಬಾರಿ ಅವರನ್ನು ಹಿಡಿದಾಗ ಅವರ ವಿರುದ್ಧ ಗೂಂಡಾ ಕಾಯ್ದೆ ಅಡಿಯಲ್ಲಿ ಕೇಸ್ ದಾಖಲಿಸುತ್ತೇವೆಂದು ಮಾನ್ಯ ಸಚಿವರು ಹೇಳಿರುವುದು ಸ್ವಾಗತಾರ್ಹ. ಆದರೆ, ಮೊದಲನೆ ಬಾರಿಗೆ ಅವರನ್ನು ಹಿಡಿದಾಗಲೇ ಅವರ ಭಾವಚಿತ್ರಗಳನ್ನು ಹಾಕಿ ಇವರು ಇಂತಹ substances ನಲ್ಲಿ involve ಆಗಿದ್ದಾರೆ ಎಂದರೆ, ನಮ್ಮ ಇಡೀ public domain ನಲ್ಲಿ ಇತರರು ಅವರ ಬಗ್ಗೆ ಎಚ್ಚರಿಕೆಯಿಂದ ಇರುವುದಕ್ಕೆ ಸಾಧ್ಯವಾಗುತ್ತದೆ. ಹಾಗಾಗಿ, ಈ ಒಂದು website ಅನ್ನು create ಮಾಡುವಂತಹದ್ದು ಬಹಳ ಮುಖ್ಯವಾಗಿದೆ. ಈ ಸದನ ಸಭೆಯು ಸುಮಾರು ವರ್ಷಗಳಿಂದ ಈ ವಿಷಯವನ್ನು ಚರ್ಚೆ ಮಾಡುತ್ತಾ ಬಂದಿದೆ. ಆದರೆ, ನಾವು ಎಲ್ಲೂ ಇದನ್ನು ಕಡೆಗಣಿಸುವುದಾಗಲಿ ಅಥವಾ ಕಡಿಮೆ ಮಾಡುವುದಕ್ಕೆ ನಮಗೆ ಎಲ್ಲಿಯೂ ಸಾಧ್ಯವಾಗಿದೆ ಎಂಬ ಅಂಶ ಕಂಡು ಬರುತ್ತಿಲ್ಲ. ಈ ಕುರಿತು ಹೆಚ್ಚೆಚ್ಚು ಇನ್ನೂ ಚರ್ಚೆ ಆಗುತ್ತಲೇ ಇದೆ. ಆದರೆ, ಕಳೆದ 2-3 ವರ್ಷಗಳಿಂದ ಈ ವಿಷಯದ ಬಗ್ಗೆ ಚರ್ಚೆ ಮಾಡಿದ್ದರೂ ಸಹ, ಅದು ಈ ವರ್ಷದಲ್ಲಿ ಇನ್ನೂ ಹೆಚ್ಚಾಗಿದೆ. ಹಾಗಾಗಿ, ಇದು ಇನ್ನೂ increase ಆಗುತ್ತಿದೆಯೇ ಹೊರತು

decrease ಆಗುತ್ತಿಲ್ಲ. ಮಾನ್ಯ ಸಭಾಪತಿಯವರೇ, ನಾವು ಇಲ್ಲಿ ಇದನ್ನು decrease ಮಾಡುವುದರ ನಿಟ್ಟಿನಲ್ಲಿ ಸೂಕ್ತ ಬಂದೋಬಸ್ತಿನ ಕ್ರಮಗಳನ್ನು ತೆಗೆದುಕೊಳ್ಳುವುದು ಬಹಳ ಮುಖ್ಯವಾಗಿದೆ ಎಂದು ತಿಳಿಸುತ್ತಾ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

(ಮುಂದು...)

(962)14.11.2017-4.40-ಎಂವಿ:ಎಕೆ

**ಶ್ರೀಮತಿ ಜಯಮ್ಮ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿರುವುದಕ್ಕಾಗಿ ತಮಗೆ ಧನ್ಯವಾದಗಳು. ಈಗಾಗಲೇ ಮಾದಕ ವಸ್ತುಗಳ ಬಗ್ಗೆ ಚರ್ಚೆ ನಡೆಯುತ್ತಿರುವುದು ತುಂಬಾ ಒಳ್ಳೆಯ ವಿಚಾರ. ಮಾನ್ಯ ಸದಸ್ಯರಾದ ಶ್ರೀ ಶರಣಪ್ಪ ಮಟ್ಟೂರ ರವರು ಕೂಡ ಈಗಾಗಲೇ ಸಾಕಷ್ಟು ವಿಚಾರಗಳನ್ನು ಹೇಳಿದರು. "ಓದು ಕಲಿಸಿರಮ್ಮ ಒಳಗೆ ಉಣ್ಣ ಜಾಣಗೆ, ಓದು ಕಲಿಸಿ ಮಗಳನ್ನು ಕೊಡಬೇಕೆಂದು" ಗ್ರಾಮೀಣ ಭಾಗದಲ್ಲಿ ಹೇಳುತ್ತಾರೆ. ಮಾನ್ಯ ಸದಸ್ಯರಾದ ಶ್ರೀ ಶರಣಪ್ಪ ಮಟ್ಟೂರ ರವರು ಕಾನೂನು ಓದಿದ್ದಾರೆ. Point of Order ಎಂದು ಪುಸ್ತಕವನ್ನು ಹಿಡಿದುಕೊಂಡು ಹೇಳುತ್ತಿದ್ದಾರೆ. ಆದರೆ, ನಾವು ಸಮಾಜದಲ್ಲಿ ಸಮಾಜ ಪಾಠವನ್ನು ಕಲಿತವರು. ಅದೇ ರೀತಿ ಸಾಮಾನ್ಯ ಜನರು ಮತ್ತು ಸಾಮಾನ್ಯ ವರ್ಗದವರು ಇವತ್ತಿನ ದಿವಸ ಯಾವ ರೀತಿ ಜೀವನ ಮಾಡುತ್ತಿದ್ದಾರೆ ಮತ್ತು ಮಕ್ಕಳ ಮೇಲೆ ಈ ಮಾದಕ ದ್ರವ್ಯ ಯಾವ ರೀತಿಯ ಪರಿಣಾಮ ಬೀರುತ್ತದೆ ಎನ್ನುವಂಥದ್ದು ನಾವು ನೋಡುತ್ತಿದ್ದೇವೆ. ಸರ್ಕಾರ ಮತ್ತು ಗೃಹ ಇಲಾಖೆಯವರು ಮಾದಕ ವಸ್ತುಗಳ ಬಗ್ಗೆ ಸಾಕಷ್ಟು ಕ್ರಮಗಳನ್ನು ಕೈಗೊಂಡಿದ್ದಾರೆ. ಮಕ್ಕಳಿಗೆ ಮನೆಯಲ್ಲಿ ಮೊದಲು "ವಿದ್ಯೆ ಕಲಿಸದ ತಂದೆ, ಬುದ್ಧಿ ಕೊಡದ ಗುರುವು, ಬಿದ್ದಿರಲು ಬಂದು ನೋಡದ ತಾಯಿ ಶುದ್ಧ ವೈರಿಗಳು ಸರ್ವಜ್ಞ" ಎಂದು ಹೇಳುತ್ತಾರೆ. ಮಕ್ಕಳಿಗೆ ಹವ್ಯಾಸವನ್ನು ಮನೆಯಿಂದಲೇ ಕಲಿಸಬೇಕಾಗುತ್ತದೆ. "ಮನೆಯೇ ಮೊದಲ ಪಾಠಶಾಲೆ, ಜನನಿ ತಾನೆ ಮೊದಲ ಗುರುವು, ಜನನಿಯಿಂದ ಪಾಠ ಕಲಿತ ಜನರು ಧನ್ಯರು". ಮಕ್ಕಳಿಗೆ ಮನೆಯಿಂದ ಒಳ್ಳೆಯ ಸಂಸ್ಕಾರ, ಸಂಸ್ಕೃತಿ ಕೊಡಬೇಕಾಗುತ್ತದೆ ಮತ್ತು ಹವ್ಯಾಸ ಕಲಿಸಬೇಕಾಗುತ್ತದೆ ಹಾಗೂ ಆ ಮಕ್ಕಳು ಯಾವ ರೀತಿ ಬೆಳೆಯುತಿದ್ದಾರೆ ಎಂಬುದರ ಬಗ್ಗೆಯೂ ಕೂಡ ನಾವು ಗಮನ ಹರಿಸಬೇಕಾಗುತ್ತದೆ. ಆಗ ಮಕ್ಕಳು ಸಮಾಜದಲ್ಲಿ ಉತ್ತಮ ಪ್ರಜೆಗಳಾಗುತ್ತಾರೆ. ಪ್ರಪಂಚದಲ್ಲಿ ಎಲ್ಲಾ ರೀತಿಯ ಮಾರುಕಟ್ಟೆಗಳು ಸಹ ಇವೆ. ಆದರೆ, ಅವರು ಯಾವ ಮಾರುಕಟ್ಟೆಗೆ ಹೋಗಬೇಕು ಮತ್ತು ಯಾವ ಮಾರುಕಟ್ಟೆಗೆ ಹೋಗಬಾರದು ಮತ್ತು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾದಕ ವಸ್ತುಗಳನ್ನು ತೆಗೆದುಕೊಳ್ಳಬಾರದು, ಮಾದಕ ವಸ್ತುಗಳಿಂದ ಆರೋಗ್ಯದ ಮೇಲೆ ಹಾನಿಕರ ಎಂಬುದನ್ನು ಮನೆಯಲ್ಲಿ ಮಕ್ಕಳಿಗೆ ಮೊದಲು ತಂದೆ-ತಾಯಿ, ಪೋಷಕರು ಹಾಗೂ ಗುರುಗಳು ತಿಳಿಸಿ ಕೊಟ್ಟರೆ, ಮಾದಕ ವಸ್ತುಗಳ ಕಡೆ ಮಕ್ಕಳ ಗಮನ ಹೋಗುವುದು ಮತ್ತು ಹವ್ಯಾಸ ಬೆಳೆಯುವುದು ಕಡಿಮೆಯಾಗುತ್ತದೆ. ಇವತ್ತಿನ ದಿವಸ ನಾವುಗಳು ಏನನ್ನು ನೋಡುತ್ತಿದ್ದೇವೆಂದರೆ. ಮನೆಯಲ್ಲಿ ಮಕ್ಕಳಿಗೆ pocket money ಯನ್ನು ಚಾಲೆಂಜ್ ಆಗಿ ಕೊಡುತ್ತಿದ್ದೇವೆ. ನಿನ್ನ ಮಗುವಿಗೆ ಎಷ್ಟು pocket moneyಯನ್ನು ಕೊಟ್ಟೆ ಎಂದು ಕೇಳುತ್ತಾರೆ. ಸುಮಾರು ಐದರಿಂದ ಹತ್ತು ಸಾವಿರ ರೂಪಾಯಿಗಳ pocket moneyಯನ್ನು ಕೊಟ್ಟರೆ, ಇಂತಹ ದುರಭ್ಯಾಸವನ್ನು ಮಕ್ಕಳು ಏಕೆ ಕಲಿಯಬಾರದು? ಅವರಿಗೆ ಎಷ್ಟು ಹಣ ಬೇಕೋ ಅಷ್ಟು ಅಂದರೆ ಅವರಿಗೆ ಎಷ್ಟು ಖರ್ಚು ಇರುತ್ತದೆಯೋ ಅಷ್ಟು pocket moneyಯನ್ನು ಮಕ್ಕಳಿಗೆ ಕೊಟ್ಟರೆ, ಆಗ ಮಕ್ಕಳು ಮಾದಕ ವಸ್ತುಗಳನ್ನು ಕೊಂಡುಕೊಳ್ಳಲು ಹಣವಿರುವುದಿಲ್ಲ. ಹಾಗಾಗಿ ಮಕ್ಕಳ ಮೇಲೆ ಹೆಚ್ಚಿನ ಗಮನ ಮೊದಲು ನಮ್ಮ ಮನೆಗಳಲ್ಲಿ ತಂದೆ-ತಾಯಿಗೆ ಬರಬೇಕಾಗುತ್ತದೆ. ಈ ಮಾದಕ ವಸ್ತುಗಳು ಹಾನಿಕರ. "ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು" ಎಂದು ಹೇಳುತ್ತಾರೆ. ಇವತ್ತಿನ ದಿವಸ ಈ ಒಂದು ಮಾದಕ ವಸ್ತುವಿನಿಂದ ಏನೇನು ದುಷ್ಪರಿಣಾಮಗಳು ಆಗುತ್ತವೆಂದರೆ, ಈ ಒಂದು ಗುಟ್ಕಾ ಎಂದು ಏನು ಹೇಳುತ್ತೇವೆ, ಅದನ್ನು ಅವರು ತಮ್ಮ ತುಟಿಗಳ ಒಳಗಡೆ ಇಟ್ಟುಕೊಳ್ಳುತ್ತಾರೆ. ಆಗ ತುಟಿಗಳಿಗೆ ಕ್ಯಾನ್ಸರ್ ಬರುತ್ತದೆ. ಅದು ಒಂದು ರೀತಿಯ ದುರಭ್ಯಾಸದ ಹವ್ಯಾಸ. ಬಾಲಕರು ಮಾತ್ರ ಈ ಮಾದಕ ವಸ್ತುಗಳನ್ನು ಸೇವಿಸುತ್ತಾರೆಂದು ಸಾರ್ವಜನಿಕರು ಮಾತನಾಡುತ್ತಾರೆ ಮತ್ತು ಈ ಸಭೆಯಲ್ಲೂ ಸಹ ಮಾತನಾಡಿದರು. ಇವತ್ತಿನ ದಿವಸ ಬಾಲಕಿಯರು ಸಹ ಆ ಕಡೆ ವಾಲುತ್ತಿದ್ದಾರೆಂದು ಹೇಳುತ್ತಿದ್ದಾರೆ. ಇವತ್ತಿನ ದಿವಸ ಗರ್ಭವತಿಯಾದಾಗ ಅಂಗವಿಕಲತೆಯ ಮಕ್ಕಳು ಏತಕ್ಕೆ ಜನಿಸುತ್ತಿದ್ದಾರೆಂದರೆ, ಈ ಒಂದು ಮಾದಕ ವಸ್ತುಗಳ ಹವ್ಯಾಸದಿಂದ ಅಂಗವಿಕಲತೆಯ ಮಕ್ಕಳು ಜನಿಸುತ್ತಿದ್ದಾರೆಂದು ವೈದ್ಯರು ಹೇಳುತ್ತಿದ್ದಾರೆ. ಹಾಗಾಗಿ ಬೀಡಿ ಮತ್ತು ಸಿಗರೇಟ್ ಸೇದುವವರಿಗಿಂತ, ಅದರ ಹೊಗೆ, ವಾಸನೆ ಮತ್ತು ಅವರ ಶರೀರದಲ್ಲಿ ಇರತಕ್ಕಂಥ ಕ್ರಿಮಿ-ಕೀಟಗಳು ಬೇರೆಯವರಿಗೆ ತಗಲುವುದರಿಂದ ದುಷ್ಪರಿಣಾಮಗಳು ಉಂಟಾಗುತ್ತವೆ. ನನಗೆ ತಿಳಿದಿರುವುದು ಇಷ್ಟೇ, "ಇಂದಿನ ಮಕ್ಕಳೆ ಮುಂದಿನ ಪ್ರಜೆಗಳು" ಎಂದು ಹೇಳುತ್ತೇವೆ. ಹಿಂದೆ ತಂದೆ-ತಾಯಿಗಳು ಸತ್ತಾಗ ಮಕ್ಕಳು ಮಣ್ಣು ಕೊಡುತ್ತಿದ್ದರು. ಆದರೆ, ಇವತ್ತಿನ ದಿವಸ ಮಕ್ಕಳಿಗೇ ತಂದೆ-ತಾಯಿಗಳು ಮಣ್ಣು ಕೊಡುವಂತಹ ಪರಿಸ್ಥಿತಿ ಬಂದಿದೆ. ಅಂತಹವುಗಳನ್ನು ನಾವು ನೋಡಬಾರದು ಎಂದರೆ, ಈ ಮೊದಲು ನಾನು ಏನು ಹೇಳಿದ್ದೇನೆ ಅದರಂತೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅವರಿಗೆ ಮನೆಯಿಂದಲೇ ಸಂಸ್ಕಾರ ಕಲಿಸುವುದು ಪ್ರಾರಂಭವಾಗಬೇಕು. ಅದು ಮನೆಯಿಂದ ಪ್ರಾರಂಭವಾದಾಗ ಮಾತ್ರ ನಮ್ಮ ಮಕ್ಕಳು ನಿಯಂತ್ರಣದಲ್ಲಿರುತ್ತಾರೆ. ಅದೇ ರೀತಿ pocket moneyಯನ್ನು ಸಹ ಕಡಿಮೆ ಮಾಡಬೇಕು, ಮುಂದೆ ಮಕ್ಕಳು ಆರೋಗ್ಯವಂತರಾಗಿರಬೇಕು, ಮುಂದಿನ ಪ್ರಜೆಗಳು ಕೂಡ ಒಳ್ಳೆಯ ಪ್ರಜೆಗಳಾಗಿ ಬಾಳಬೇಕು. ಆರೋಗ್ಯ ಕೂಡ ಅವರಿಗೆ ಚೆನ್ನಾಗಿರಬೇಕೆಂದು ಹೇಳಿ, ನನಗೆ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳು.

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಶ್ರೀ ವಿ.ಎಸ್. ಉಗ್ರಪ್ಪನವರು ಐದು ನಿಮಿಷದಲ್ಲಿ ಮಾತನಾಡುವುದು. ಎಲ್ಲರಿಗೂ ಸಹ ಐದು ನಿಮಿಷ ಕೊಟ್ಟಿದ್ದೇನೆ, ತಾವು ಐದು ನಿಮಿಷ ಮಾತನಾಡಿ. ಎಲ್ಲರಿಗೂ ಅವಕಾಶ ಕೊಡುತ್ತೇನೆಂದು ಹೇಳಿದ್ದೇನೆ.

**ಶ್ರೀ ವಿ.ಎಸ್.ಉಗ್ರಪ್ಪ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಸಮಾಜಕ್ಕೆ ಮಾರಕವಾಗಿರುವಂತಹ ವಿಚಾರದ ಬಗ್ಗೆ ನಾವುಗಳು ಸದನದಲ್ಲಿ ಚರ್ಚೆ ಮಾಡುತ್ತಿದ್ದೇವೆ. ಸರ್ಕಾರದ ಜವಾಬ್ದಾರಿ ಸಂವಿಧಾನದಲ್ಲಿ ಆರ್ಟಿಕಲ್ 47ರ ಅಡಿಯಲ್ಲಿ ಬಹಳ ಸ್ಪಷ್ಟವಾಗಿ ನಿರ್ದೇಶನವಿದೆ. ಅಲ್ಲಿ ಸ್ಪಷ್ಟವಾಗಿ ಈ ರೀತಿ ಹೇಳುತ್ತಾರೆ, *“Duty of the State to raise the level of nutrition* and the *standard of living* and to *improve public health...”* ಕೊನೆಯ ವಾಕ್ಯದಲ್ಲಿ ಬಹಳ ಮುಖ್ಯವಾದ ಅಂಶ ಇದೆ. It says, “...the State shall endeavour to bring about prohibition of the consumption except for medicinal purposes of intoxicating drinks and of drugs which are injurious to health.” ಈ ಎಲ್ಲಾ ಮಾದಕ ವಸ್ತುಗಳು ಯಾವುವು ಇವೆ, they are either in the form of drugs or in the form of other substances. ಇವೆಲ್ಲವೂ ಸಹ ‘injurious to health’ ಎಂದು ಇದೆ. ಯಾರು ಇದನ್ನು ತೆಗೆದುಕೊಳ್ಳತಕ್ಕಂಥದ್ದು ಸರಿಯಲ್ಲ, ಈ N.D.P.S. (Narcotic Drugs and Psychotropic Substances) Act, 1995 ಏನಿದೆ, ಅದರ ಸೆಕ್ಷನ್ 2ರಲ್ಲಿ ‘Addict’ ಎಂದರೆ ಏನು ಎಂದು ಹೇಳಿದ್ದಾರೆಂದರೆ, “Addict means a person who has dependence on any narcotic drug or psychotropic substances.” ಇದರಲ್ಲಿ ಅನೇಕ ಡ್ರಗ್ಸ್‌ಗಳಿವೆ. ಅವು ಯಾವುವೆಂದರೆ, Charas, ganja,

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

cannabis plant, coca derivative, coca leaf, coca plant ಇತ್ಯಾದಿಗಳಿವೆ. ಅದೇ ರೀತಿ ಅದರ ಜೊತೆಗೆ narcotic drugs ನಲ್ಲಿ coca leaf, cannabis, opium, OP, straw, including other opium ಇವೆ. ಇದರ ಜೊತೆಗೆ medical opium ಎನ್ನುವುದು ಸಹ ಇದೆ. ಈ ರೀತಿ ನಾನು ಈಗಾಗಲೇ ಹೇಳಿದ ಹಾಗೆ ಸುಮಾರು 238 ಡ್ರಗ್ಸ್ ಇರುವಂಥದ್ದು ಇದೆ. ಇವುಗಳನ್ನು ಬಳಕೆ ಮಾಡುವವರು ಬರೀ ಮಕ್ಕಳು ಅಷ್ಟೆ ಅಲ್ಲ. ನಮ್ಮ ಹಳ್ಳಿಯಲ್ಲಿ ತಾತಯ್ಯನ ದೇವಸ್ಥಾನವೆಂದು ಇದೆ. ಅಲ್ಲಿ ಶನಿವಾರ ಮತ್ತು ಭಾನುವಾರಗಳಂದು ಭಜನೆ ಮಾಡುತ್ತಾರೆ. ಆ ತಾತಯ್ಯನ ದೇವಸ್ಥಾನಕ್ಕೆ ಹೋಗುವಂತಹವರು ಎಲ್ಲರೂ ಸಹ 100ಕ್ಕೆ ಶೇಕಡ 99ರಷ್ಟು ಜನರು ಈ ಮಾದಕ ದ್ರವ್ಯಗಳನ್ನು ಸ್ವೀಕಾರ ಮಾಡುವವರಿರುತ್ತಾರೆ. ನಾನು ಹುಡುಗನಾಗಿ ಇದ್ದಾಗಿನಿಂದಲೂ ನನ್ನ ಹಳ್ಳಿಯಲ್ಲಿ ನೋಡಿರತಕ್ಕಂಥದ್ದು, ಸಾಮಾನ್ಯವಾಗಿ ಯಾರು ಈ ರೀತಿಯ ಡ್ರಗ್ಸ್‌ಗಳನ್ನು ತೆಗೆದುಕೊಳ್ಳುತ್ತಾರೋ ಅವರು ಬಹಳ aggressive ಆಗುವುದಿಲ್ಲ, ಬಹಳ ತಾಳ್ಮೆಯಿಂದ ಮತ್ತು ನೆಮ್ಮದಿಯಿಂದ ಇರುವಂತಹವರು ಇರುತ್ತಾರೆ. ಅವರ ಆ ತಾಳ್ಮೆ ಮತ್ತು ನೆಮ್ಮದಿಯ ಜೊತೆಗೆ ಅವರಿಗೆ ಗೊತ್ತಿಲ್ಲದೆ ಅವರ ಆರೋಗ್ಯ ಹಾಳಾಗುತ್ತದೆ. ಒಂದು ಕಡೆ ಈ ರೀತಿ ಹಿರಿಯರು ಮಾಡತಕ್ಕಂಥದ್ದು ಆಗಿದೆ. ಶಾಲಾ-ಕಾಲೇಜುಗಳಲ್ಲಿ ಇರಬಹುದು, ಇನ್ನಿತರ ಬೇರೆ ಬೇರೆ ಸ್ಥಳಗಳಲ್ಲಿ ಇರಬಹುದು, ಅಂದರೆ ರೈಲುಗಳಲ್ಲಿ, ಜೈಲುಗಳಲ್ಲಿ ಮತ್ತು ಪೆಟ್ಟಿಗೆ ಅಂಗಡಿಗಳಲ್ಲಿ ಈ ಮಾದಕ ದ್ರವ್ಯ ಸಿಗುತ್ತಿದೆ. ಬೆಂಗಳೂರಿನ ಕೆಲವು ಹೊರ ವರ್ತುಲ ರಸ್ತೆಗಳಿಗೆ ಹೋದರೆ ಕೆಲವರು ಇದನ್ನೇ ಮಾರುತ್ತಿರುತ್ತಾರೆ. ಅದರಲ್ಲೂ ವಿಶೇಷವಾಗಿ ಮಂಗಳಮುಖಿಯರು ವೇಷದಲ್ಲಿ ಇರತಕ್ಕಂಥ ಕೆಲವರು ಮಾರುತ್ತಿರುತ್ತಾರೆ. ಬಹುಶಃ ಈ ಒಂದು ಸಮಸ್ಯೆಯನ್ನು ಪರಿಹಾರ ಮಾಡಬೇಕು ಎನ್ನುವ ಹಾಗೆ ಇದ್ದರೆ N.D.P.S. Act ನಲ್ಲಿ ಸಾಕಷ್ಟು provision ಗಳು ಇವೆ. ಈಗ ಏನಾಗಿದೆ ಎಂದರೆ, ಇಷ್ಟೆಲ್ಲಾ Act ಇದ್ದರೂ ಸಹ ಇದಕ್ಕೆ ಪರಿಹಾರ ಸಿಗುತ್ತಿಲ್ಲ. ರಾಜ್ಯದಲ್ಲಿ ಇಂತಹ ಪ್ರಕರಣಗಳು ನಡೆದಿರುವುದು ಅತ್ಯಂತ ಕಡಿಮೆ, ಅಂದರೆ ಕಳೆದ ಮೂರು ವರ್ಷಗಳಲ್ಲಿ ಒಟ್ಟು ಪತ್ತೆಯಾಗಿರುವಂಥದ್ದು ಸುಮಾರು 1699 ಪ್ರಕರಣಗಳು ಎಂದು ಹೇಳುತ್ತಿದ್ದಾರೆ.

**(ಮುಂದು...)**

(963)14.11.2017-04.50-ಎಲ್‌ಎಲ್-ಎಕೆ

**(ಶ್ರೀ ವಿ.ಎಸ್. ಉಗ್ರಪ್ಪ):- (ಮುಂದುವರೆದಿದ್ದು...)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಹುಶಃ, ನಿಜವಾದಂತಹ ಈ ಎಲ್ಲಾ ಪ್ರಕರಣಗಳನ್ನು ನೋಡಿದರೆ, ಇದು ಕೇವಲ 1699 ಅಲ್ಲ ಎಂದು ನನಗನ್ನಿಸುತ್ತಿದೆ. ಇಲ್ಲಿ ಒಂದು ಕಡೆ ಮಾದಕ ವಸ್ತುಗಳನ್ನು ಬೆಳೆಯುವವರು ಇದ್ದಾರೆ, ಇನ್ನೊಂದು ಕಡೆ ಅದನ್ನು ಸಾಗಾಣಿಕೆ ಮಾಡುವವರು ಇದ್ದಾರೆ, ಮತ್ತೊಂದು ಕಡೆ ಅದನ್ನು ಮಾರಾಟ ಮಾಡತಕ್ಕಂತಹವರು ಇದ್ದಾರೆ ಹಾಗೂ ಅದನ್ನು ಬಳಸತಕ್ಕಂತಹವರು ಇದ್ದಾರೆ. ನಾನು ಅಧ್ಯಕ್ಷನಾಗಿರುವ ಸಮಿತಿಗೆ ಇತ್ತೀಚೆಗೆ ಒಂದು ದೂರು ಬಂದಿತ್ತು. ಅದೇನೆಂದರೆ, "ಇಬ್ಬರು ದಂಪತಿಗಳು ಇರುತ್ತಾರೆ. ಅವರಿಬ್ಬರು ಸಹ M.Tech and M.B.A. ವಿದ್ಯಾಭ್ಯಾಸ ಮಾಡಿದ್ದಾರೆ. ಅವರು ಕಳೆದ ಜೂನ್ ತಿಂಗಳಿನಲ್ಲಿ ಮದುವೆಯಾಗಿದ್ದು, ಬೆಂಗಳೂರಿನ ಹೆಚ್.ಎಸ್.ಆರ್. ಲೇಔಟ್‌ನಲ್ಲಿ ವಾಸವಿರುತ್ತಾರೆ. ಅವರಲ್ಲಿ ಒಬ್ಬರು ಗುಂತಕಲ್ ಮತ್ತು ಮತ್ತೊಬ್ಬರು ದಾವಣಗೆರೆಯವರಾಗಿರುತ್ತಾರೆ. ಅವರಿಬ್ಬರಲ್ಲಿ ವ್ಯತ್ಯಾಸ ಏನಿದೆಯೆಂದರೆ, ಹೆಂಡತಿ ಒಂದು ದಿನ ಜ್ವರ ಬಂದಿದೆಯೆಂದು ಹೇಳಿದರೆ, ಗಂಡ ಎಳನೀರು ತಂದು," "ನೋಡು, ಇದೊಂದು ಆಯುರ್ವೇದಿಕ್ ಪೌಡರ್, ಇದನ್ನು ಎಳನೀರಿನಲ್ಲಿ ಮಿಶ್ರಣ ಮಾಡಿ ಕುಡಿದರೆ ನೆಗಡಿ, ಕೆಮ್ಮು, ಜ್ವರ ಗುಣವಾಗುತ್ತದೆಯೆಂದು," ಹೇಳಿ ಎಳನೀರಿನಲ್ಲಿ ಗಾಂಜಾ ಮಿಶ್ರಣ ಮಾಡಿ ಹೆಂಡತಿಗೆ ಕುಡಿಯುವುದಕ್ಕೆ ಕೊಟ್ಟು, ಮನೆಯ ಬೀಗ ಹಾಕಿಕೊಂಡು ತನ್ನ ಆಫೀಸಿಗೆ ಹೋಗಿದ್ದಾನೆ. ಆಕೆಗೆ ಅನುಮಾನ ಬಂದು ಅವರ ತಂದೆಗೆ ಫೋನ್ ಮಾಡಿ, "ನಾನು ಸಾಯುವ ಸ್ಥಿತಿಯಲ್ಲಿದ್ದಾನೆಂದು" ಹೇಳಿದಾಗ, ಆಕೆಯ ತಂದೆ, ತನ್ನ ಮಗಳ ಮನೆ ಪಕ್ಕದ ಮನೆಯಲ್ಲಿರುವವರಿಗೆ ಫೋನ್ ಮಾಡಿ ವಿಷಯ ತಿಳಿಸುತ್ತಾರೆ. ಆಗ ಪಕ್ಕದ ಮನೆಯವರು ಆಕೆ ಮನೆಯ ಬೀಗ ಹೊಡೆದು ಆಕೆಯನ್ನು ನಾರಾಯಣ ಹೃದಯಾಲಯ ಆಸ್ಪತ್ರೆಗೆ ದಾಖಲಿಸುತ್ತಾರೆ. ಅಲ್ಲಿ ಆಕೆಯ ರಕ್ತ ಮತ್ತು ಮೂತ್ರದ ಪರಿಶೀಲನೆ ಮಾಡಿದಾಗ ಅದರಲ್ಲಿ ಗಾಂಜಾ ಮಿಶ್ರಣ ಮಾಡಿರುವ ಅಂಶ ಗೊತ್ತಾಗಿದೆ. ಬಹುಶಃ, ಪಕ್ಕದ ಮನೆಯವರು ಇನ್ನು ಅರ್ಧ ಗಂಟೆ ತಡವಾಗಿ ಬಂದಿದ್ದರೆ ಆ ಹೆಣ್ಣು ಮಗಳು ಸಾಯುತ್ತಿದ್ದಳೆಂದು ನನ್ನ ಸಮಿತಿಗೆ ದೂರು ಬಂದಿರುತ್ತದೆ. ಆದುದರಿಂದ, ಈ ಮಾದಕ ದ್ರವ್ಯ ಸೇವನೆ ಇವತ್ತಿನ ದಿವಸ ಎಷ್ಟರಮಟ್ಟಿಗೆ ದುರ್ಬಳಕೆ ಆಗುತ್ತಿದೆ ಎನ್ನತಕ್ಕಂತಹ ವಿಚಾರವನ್ನು ಜನರಲ್ಲಿ ಜಾಗೃತಿ ಮೂಡಿಸುವಂತಹ ಕೆಲಸ ಮಾಡಬೇಕಾಗಿರುವುದು ಒಂದು ಕಡೆಯಾದರೆ, N.D.P.S. Act ಮೇರೆಗೆ ಬರುವಂತಹ ಅಪರಾಧಗಳನ್ನು ಪತ್ತೆ ಮಾಡುವುದಕ್ಕೆ ಮತ್ತು ನಿಯಂತ್ರಣ ಮಾಡತಕ್ಕಂತಹದ್ದಕ್ಕೆ ಪ್ರತಿ ಪೊಲೀಸ್ ಠಾಣೆಯಲ್ಲಿ ಒಂದು ಸೆಲ್ ಅನ್ನು ರಚಿಸಬೇಕು. ಬಹುಶಃ ಎಲ್ಲಾ ಶಾಲಾ-ಕಾಲೇಜುಗಳಲ್ಲಿ ಮತ್ತು ಎಲ್ಲಿ ಹೆಚ್ಚು ಜನ ಸೇರುತ್ತಾರೆ ಅಲ್ಲಿ ಕನಿಷ್ಠ ತಿಂಗಳಿಗೆ ಒಂದು ಬಾರಿಯಾದರೂ ಈ ರೀತಿ ಮಾದಕ ದ್ರವ್ಯ ಸೇವನೆಯಿಂದ ಆರೋಗ್ಯದ ಮೇಲೆ ಎಷ್ಟು ದುಷ್ಪರಿಣಾಮ ಬೀರುತ್ತದೆ ಎನ್ನುವ ಅಂಶವನ್ನು ಸಾಧ್ಯವಾದ ಮಟ್ಟಿಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವಂತಹ ಕೆಲಸ ಮಾಡಬೇಕಾಗಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎರಡನೆಯದಾಗಿ, ಇದುವರೆವಿಗೂ ಈ ಬಗ್ಗೆ ಎಷ್ಟು ಪ್ರಕರಣಗಳು ದಾಖಲಾಗಿವೆ, ಆ ಪ್ರಕರಣಗಳ ವಿಚಾರಣೆಯನ್ನು ಕಾಲಮಿತಿಯೊಳಗೆ ಮುಕ್ತಾಯಗೊಳಿಸಬೇಕಾಗುತ್ತದೆ. ಇಲ್ಲವಾದರೆ, ಆ ಪ್ರಕರಣಗಳು 1 ವರ್ಷ, 2 ವರ್ಷಗಳು, 3 ವರ್ಷಗಳಾದರೂ ಮುಕ್ತಾಯವಾಗುವುದಿಲ್ಲ. ಅನೇಕ ಪ್ರಕರಣಗಳು 4–5 ವರ್ಷಗಳಿಂದ ಬಾಕಿ ಇರುವಂತಹ ಹಿನ್ನೆಲೆಯಲ್ಲಿ ಅವುಗಳನ್ನು ಕಾಲಮಿತಿಯೊಳಗೆ ಇತ್ಯರ್ಥಪಡಿಸಬೇಕು. ಜೊತೆಗೆ, ಈ ಮಾದಕ ವಸ್ತು ಸೇವನೆಯ ಗೀಳು ಬೆಳೆಸಿಕೊಂಡಿರುವಂಥವರನ್ನು rehabilitate ಮಾಡತಕ್ಕಂತಹದ್ದಕ್ಕೆ, ಕೆಲವು Rehabilitation Centre ಗಳನ್ನು ಸ್ಥಾಪಿಸುವಂತಹ ದಿಕ್ಕಿನಲ್ಲಿ ಕೆಲಸ ಮಾಡಿದರೆ ಬಹುಶಃ ಇರುವಂತಹ ಮಾದಕ ದ್ರವ್ಯ ಸೇವನೆಯ ಸಮಸ್ಯೆಯನ್ನು ಸ್ವಲ್ಪ ಮಟ್ಟಿಗಾದರೂ ತಡೆಯುವುದಕ್ಕೆ ಸಾಧ್ಯವಿದೆ, ಆ ನಿಟ್ಟಿನಲ್ಲಿ ಸರ್ಕಾರ ಚಿಂತನೆ ಮಾಡಬೇಕೆಂದು ಆಶಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ರಾಮಚಂದ್ರಗೌಡ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಮಾದಕ ದ್ರವ್ಯಗಳ ಸಾಗಾಣಿಕೆ ಮತ್ತು ಸೇವನೆ ಎಂಬ ಒಳ್ಳೆಯ ವಿಚಾರವನ್ನು ಈ ಸದನದಲ್ಲಿ ಚರ್ಚೆಗೆ ತಂದಿದ್ದಾರೆ. ನಮ್ಮ ರಾಜ್ಯದ ಪೊಲೀಸ್ ಇಲಾಖೆಯವರು ಬಹಳ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ. ಅದರಲ್ಲಿ ಯಾವುದೇ ಲೋಪವಿಲ್ಲ. ಆದರೆ, ಪೊಲೀಸ್ ಇಲಾಖೆಗೆ ಚಳ್ಳೇ ಹಣ್ಣು ತಿನ್ನಿಸುವಂತಹ ಜನ ಕೆಲವರಿದ್ದಾರೆ. ಅವರು ಪೊಲೀಸರಿಗೇ ಚಳ್ಳೇ ಹಣ್ಣು ತಿನ್ನಿಸುತ್ತಾರೆ. ಇವತ್ತಿನ ದಿವಸ ಹೊರ ರಾಜ್ಯದ ಮತ್ತು ಹೊರ ದೇಶದ ವಿದ್ಯಾರ್ಥಿಗಳು ಒಂದು conspiracy ಮಾಡಿದ್ದಾರೆ. ಈ ಬಗ್ಗೆ ವಿಶೇಷವಾಗಿ, ಬೆಂಗಳೂರಿನಲ್ಲಿ 443 ಪ್ರಕರಣಗಳಿವೆ. Conspiracy ಎಂದರೆ, "ಈ ದೇಶದ ಯುವಕರನ್ನು ನಿರ್ವೀರ್ಯರನ್ನಾಗಿ ಮಾಡಬೇಕು." ಎನ್ನುವುದಾಗಿದೆ. ಬೆಂಗಳೂರು ಐಟಿ–ಬಿಟಿ ಸಿಟಿ ಎಂದು ಇದೆ. ಇದನ್ನು ಏನಾದರೂ ಮಾಡಿ ತಪ್ಪಿಸಬೇಕು ಎನ್ನುವಂತಹ ಒಂದು conspiracy ಯಿಂದ ಈ ಕೆಲಸ ನಡೆಯುತ್ತಿದೆಯೆಂದು ನಾನು ಭಾವಿಸುತ್ತೇನೆ. ಪೊಲೀಸರು ಇಂತಹ ಕೃತ್ಯಗಳನ್ನು ಪತ್ತೆ ಮಾಡಿ ಅವರ ವಿರುದ್ಧ ಪ್ರಕರಣ ದಾಖಲಿಸಬೇಕು. ಆದರೆ, ನಾನು ಪೊಲೀಸ್ ಇಲಾಖೆಗೆ ಮನವಿ ಮಾಡುವುದೇನೆಂದರೆ, ಮಾದಕ ದ್ರವ್ಯ ಎಲ್ಲಿಂದ ಬರುತ್ತಿದೆ, ಹೇಗೆ ಬರುತ್ತಿದೆ, ಎಂಬ ಬಗ್ಗೆ ಕಂಡುಹಿಡಿಯಬೇಕಾದರೆ ತಾವು ಒಂದು ಗೂಢಚರ್ಯೆ ಇಲಾಖೆಯನ್ನು ರಚಿಸಬೇಕು. ಪ್ರತಿ ಕಾಲೇಜಿನಲ್ಲಿ ನನಗೆ ತಿಳಿದಮಟ್ಟಿಗೆ ಮಕ್ಕಳಿಗೆ ಬಲವಂತವಾಗಿ ದುಡ್ಡು ಕೊಟ್ಟು ಕಳುಹಿಸಿ ಬಿಡುತ್ತಾರೆ. ಈ ಬಗ್ಗೆ ಅನೇಕ ತಂದೆ–ತಾಯಿಗಳು ನನ್ನ ಬಳಿ ಬಂದು, "ನನ್ನ ಮಗ ಅಂತಹವನಲ್ಲ, ಇಂತಹವನಲ್ಲ" ಎಂದು ಹೇಳುತ್ತಾರೆ. ಆಗ ಆತನ ಜೇಬನ್ನು ಪರಿಶೀಲಿಸಿದರೆ, ಅವನಿಗೆ ಮಾದಕ ದ್ರವ್ಯ

ತಿನ್ನಿಸಿರುವ ಅಂಶ ಗೊತ್ತಾಗುತ್ತದೆ. ಆ ಬಗ್ಗೆ ಆತನಿಗೆ ಗೊತ್ತಾಗುವುದಿಲ್ಲ. ಆ ನಂತರ ಆತನ ತಂದೆ-ತಾಯಿಗಳು ಪಶ್ಚಾತ್ತಾಪ ಪಡುತ್ತಾರೆ. ಇದಕ್ಕೆ ಮೂಲಭೂತವಾಗಿ ಯಾರ ಕೈವಾಡವಿದೆ? ಈ ದೇಶದ ಯುವಕರನ್ನು ನಿರ್ವೀರ್ಯರನ್ನಾಗಿ ಮಾಡುವುದಕ್ಕಾಗಿ ಎಲ್ಲಿ ಪ್ರಯತ್ನ ನಡೆಯುತ್ತಿದೆ ಎನ್ನುವ ವಿಚಾರದ ಬಗ್ಗೆ ನಾವು ಮೂಲಭೂತವಾಗಿ ಪತ್ತೆ ಹಚ್ಚಬೇಕಾಗಿದೆ. ಇದಕ್ಕಾಗಿ ಪೊಲೀಸ್ ಇಲಾಖೆ ಗೂಢಚರ್ಯೆ ವಿಭಾಗವನ್ನು ರಚಿಸಿದರೆ ಸುಲಭವಾಗುತ್ತದೆ. ಸರ್ಕಾರವೇ ಕೊಟ್ಟಿರುವ ಅಂಕಿ-ಅಂಶಗಳ ಪ್ರಕಾರ 2017 ನೇ ಇಸವಿಯಲ್ಲಿ ಅಂದರೆ ಈ ವರ್ಷ ಇದುವರೆಗೆ ಒಟ್ಟು ದಸ್ತಗಿರಿಯಾಗಿರುವಂತಹ ಪ್ರಕರಣಗಳ ವಿವರ ಈ ರೀತಿ ಇದೆ. ಬೆಂಗಳೂರು ನಗರ- 443, ಮಂಗಳೂರು ನಗರ – 224, ಶಿವಮೊಗ್ಗ – 152, ದಕ್ಷಿಣ ಕನ್ನಡ – 39, ಬೆಳಗಾವಿ ನಗರ – 56, ಉತ್ತರಕನ್ನಡ – 41, ಮೈಸೂರು – 22, ಬೆಂಗಳೂರು ಜಿಲ್ಲೆ – 38, ಬೆಳಗಾವಿ ಜಿಲ್ಲೆ – 32, ರಾಮನಗರ –21. ಇಲ್ಲಿ ಇನ್ನೂ ಅನೇಕ ನಗರ/ಜಿಲ್ಲೆಗಳ ಅಂಕಿ-ಅಂಶಗಳ ಇವೆ. ಆದರೆ, ನಾನು ಅದರಲ್ಲಿ ಕೇವಲ 10 ನಗರ/ಜಿಲ್ಲೆಗಳ ಅಂಕಿ-ಅಂಶಗಳ ಬಗ್ಗೆ ಹೇಳಿದ್ದೇನೆ. ಎಲ್ಲಿ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ವಿದ್ಯಾರ್ಥಿಗಳು ಇದ್ದಾರೆ, ಇವರುಗಳ ಮೇಲೆ ಪರೋಕ್ಷವಾಗಿ ಪ್ರಹಾರ ಮಾಡುತ್ತಿದ್ದಾರೆ. ಪೊಲೀಸವರು ಕೆಲಸ ಮಾಡುತ್ತಿಲ್ಲವೆಂದು ಹೇಳಿದ್ದಾರೆ. ಆದರೆ, ಪೊಲೀಸರು ಬಹಳಷ್ಟು ಕೆಲಸ ಮಾಡುತ್ತಿದ್ದಾರೆ. ಒಂದು ವೇಳೆ ಅವರು ಕೆಲಸ ಮಾಡಿಲ್ಲದಿದ್ದರೆ, ಈ ಎಲ್ಲಾ ಪ್ರಕರಣಗಳ ಅಂಕಿ-ಅಂಶಗಳ ಮಾಹಿತಿ ನಮಗೆ ಸಿಗುತ್ತಿರಲಿಲ್ಲ. ಈ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಬಹಳ ಜಾಗರೂಕತೆಯಿಂದ ಕೆಲಸ ಮಾಡುತ್ತಿದೆಯೆಂದು ನಾನು ಭಾವಿಸಿದ್ದೇನೆ. ಈ ಹಿಂದೆ ಇದ್ದಂತಹ ಸರ್ಕಾರದವರೂ ಕೂಡ ಜಾಗರೂಕತೆಯಿಂದ ಕೆಲಸ ಮಾಡಿದ್ದರು, ಈಗಿನ ಸರ್ಕಾರವೂ ಕೆಲಸ ಮಾಡುತ್ತಿದೆ. ಪೊಲೀಸ್ ಇಲಾಖೆ 2014 ರಲ್ಲಿ 7 ಕೆ.ಜಿ. ಗಾಂಜಾ ವಶಪಡಿಸಿದ್ದಾರೆ. 2015 ರಲ್ಲಿ 364 ಕೆ.ಜಿ. ಗಾಂಜಾ ವಶಪಡಿಸಿಕೊಂಡಿದ್ದಾರೆ. 2016 ರಲ್ಲಿ 8,550 ಕೆ.ಜಿ. ಗಾಂಜಾ ವಶಪಡಿಸಿಕೊಂಡಿದ್ದಾರೆ. ಇದನ್ನು ತಮ್ಮ ಮಾಹಿತಿಗಾಗಿ ನಾನು ಹೇಳುತ್ತಿದ್ದೇನೆ. ಇದರಿಂದಾಗಿ, ಪೊಲೀಸ್ ಇಲಾಖೆಯವರು ಬಹಳಷ್ಟು ಕೆಲಸ ಮಾಡುತ್ತಿದ್ದಾರೆಂದು ತಿಳಿಯುತ್ತದೆ.

ದಿನಾಂಕ: 10.03.2016 ರಂದು ಬೆಂಗಳೂರಿನ ಸಂಜಯನಗರದಲ್ಲಿ ನೈಜೀರಿಯಾ ಪ್ರಜೆಗಳಿಬ್ಬರು ಸರ್ಕಲ್ ಇನ್ಸ್‌ಪೆಕ್ಟರ್‌ಗೇ ಕೊಕೇನ್ ಮಾರಾಟ ಮಾಡಲು ಹೋಗಿ ಸಿಕ್ಕಿ ಬಿದ್ದಿದ್ದಾರೆ. ಅವರಿಂದ 20 ಲಕ್ಷ ಮೌಲ್ಯದ ಕೊಕೇನ್, 6 ಲಕ್ಷ ರೂಪಾಯಿಗಳ ನಗದು, 7 ಮೊಬೈಲ್ ಜಪ್ತಿ ಮಾಡಿದ್ದಾರೆ. ಇವರನ್ನು ವಿಚಾರಣೆ ಮಾಡಿದಾಗ ವಿದ್ಯಾಭ್ಯಾಸಕ್ಕಾಗಿ ಬಂದಿದ್ದು, ವೀಸಾ ಅವಧಿ ಮುಗಿದು ಹೋಗಿದೆ,".

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮೂಲಭೂತವಾಗಿ ಯಾವ ರೀತಿಯಾಗಿ conspiracy ನಡೆಯುತ್ತಿದೆ ಎನ್ನುವುದನ್ನು ಪತ್ತೆ ಹಚ್ಚುವುದರ ಹಿಂದೆ ನಾವು ಬೀಳಬೇಕು. ಅದಕ್ಕಾಗಿ ಗೂಢಚರ್ಯೆ ಇಲಾಖೆ ಬೇಕಾಗಿದೆ. "ನೈಜೀರಿಯಾ ಪ್ರಜೆಗಳ ವಿರುದ್ಧ 2015 ರಲ್ಲಿ 23 ಡ್ರಗ್ ಮಾಫಿಯಾ ಪ್ರಕರಣಗಳು ಬೆಂಗಳೂರು ನಗರದಲ್ಲಿ ದಾಖಲಾಗಿವೆ." "ಪಶ್ಚಿಮ ಬಂಗಾಳದಿಂದ ಬಂದ ಕಾರ್ಮಿಕರು ಅವರು ವಾಸಿಸುವಂತಹ ಗುಡಿಸಲುಗಳಲ್ಲಿ ಗಾಂಜಾ ಬೆಳೆಸಿ, ಸಿಕ್ಕಿ ಹಾಕಿಕೊಂಡಿದ್ದಾರೆ,". ಕೇವಲ ಗಾಂಜಾ ಮಾತ್ರವಲ್ಲದೇ, ಹೆರಾಯಿನ್, ಕೊಕೇನ್, ಚರಸ್, ಎಂ.ಡಿ.ಎಂ. ಎಕ್ರಿಸ್ಟಲ್, ಎಲ್.ಎಸ್.ಡಿ. ಬ್ಲಾಟರ್ ಪೇಪರ್‌ಗಳನ್ನು ತೆಗೆದುಕೊಳ್ಳುವ ಮಾದಕ ವ್ಯಸನಿಗಳ ಗುಂಪು ನಮ್ಮ ರಾಜ್ಯದಲ್ಲಿ ದಿನೇ ದಿನೇ ಹೆಚ್ಚಾಗುತ್ತಿದೆ. ಇದರಲ್ಲಿ ಬಹುಪಾಲು ವಿದ್ಯಾರ್ಥಿಗಳೇ ಆಗಿದ್ದಾರೆ. Strawberry Quick, Strawberry Meth ಎನ್ನುವ ಹೆಸರಿನಲ್ಲಿ ಶಾಲೆಗಳ ಸುತ್ತಮುತ್ತ ಮಾದಕ ವಸ್ತುಗಳನ್ನು ಸೇರಿಸಿರುವ ಮೆದು ಕ್ಯಾಂಡಿಗಳನ್ನು ಮಾರುತ್ತಿದ್ದಾರೆ. ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ವರ್ಷಕ್ಕೆ ಸುಮಾರು 300 ಪ್ರಕರಣಗಳು ಚಿಕಿತ್ಸೆಗಾಗಿ ದಾಖಲಾಗುತ್ತಿವೆ. ಕೆಲವು ಇಂಜೆಕ್ಷನ್‌ಗಳು, ಕೆಮ್ಮಿನ ಸಿರಪ್‌ಗಳು ಮಾದಕತೆಗೆ ಬಳಕೆಯಾಗುತ್ತಿವೆ. ಡ್ರಗ್ ಮಾಫಿಯಾ ಹೆಚ್.ಎಸ್.ಆರ್. ಲೇಔಟ್, ಕೆ.ಆರ್.ಪುರಂ, ಕೊತ್ತನೂರು, ಕಾಡುಗೋಡಿ, ಮಡಿವಾಳ, ಮೈಕೊ ಲೇಔಟ್‌ಗಳಲ್ಲಿ ಅತಿ ಹೆಚ್ಚಾಗಿದ್ದು, ಪೀಣ್ಯ, ಜಗಜೀವನರಾಮ್ ನಗರ, ಜಯನಗರ, ಕೆ.ಜಿ. ನಗರ, ಯಲಹಂಕ, ಬೇಗೂರು, ವರ್ತೂರು, ತಿಲಕ್ ನಗರ, ಬಸವನಗುಡಿ, ಪುಲಕೇಶಿನಗರ, ರಾಮಮೂರ್ತಿನಗರ ಮತ್ತು ಬೈಯಪ್ಪನಹಳ್ಳಿಗೂ ಹಬ್ಬಿದೆ. ಬೆಂಗಳೂರಿನ ಎಲ್ಲಾ ಮೂಲೆಗಳಿಗೆ ಈ ಮಾಫಿಯಾ ಹಬ್ಬಿದೆ. ಇಷ್ಟು ಮಾಹಿತಿಯನ್ನು ನಾನು ನಗರದ ಎಲ್ಲಾ ಕಡೆ ಹೋಗಿ ಸಂಗ್ರಹ ಮಾಡಿದ್ದೇನೆ. ಇದರಿಂದಾಗಿ ಪ್ರತಿ ದಿನ ನಡೆಯುತ್ತಿರುವ ಕೊಲೆ, ಸುಲಿಗೆ, ಸರಗಳ್ಳತನ, ಅತ್ಯಾಚಾರ ಪ್ರಕರಣಗಳು ಹೆಚ್ಚಾಗುತ್ತಿವೆ. All these things are resultant of this. ಪೋಲೀಸ್ ಇಲಾಖೆಗೆ ಇದೊಂದು ಸವಾಲಾಗಿದೆ.

(ಮುಂದುವರೆದಿದೆ...)

(964) 14.11.2017/5.00/ವೈಎಲ್-ಆರ್‌ಎನ್

**(ಶ್ರೀ ರಾಮಚಂದ್ರಗೌಡ) (ಮುಂದು):-**

ನೈಜಿರಿಯಾ ಉಗಾಂಡಾ ಇನ್ನು ಮೊದಲಾದ ದೇಶಗಳಿಂದ ಬಂದು ವೀಸಾ ಅವಧಿ ಮುಗಿದಿರುವವರನ್ನು ಕರೆಸಿಕೊಂಡು ತನಿಖೆ ನಡೆಸಬೇಕು. Drugs Crime Investigation Bureau ಅನ್ನು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಡೆಪ್ಯೂಟಿ ಕಮೀಷನರ್ ಮಟ್ಟದಲ್ಲಿ ಸ್ಥಾಪಿಸಬೇಕು. ಅದಕ್ಕಾಗಿಯೇ ನುರಿತ ಸಿಬ್ಬಂದಿಯನ್ನು ನೇಮಕ ಮಾಡಿ, ಆಫ್ರಿಕಾ ಮತ್ತು ನೈಜೀರಿಯಾ ಭಾಷೆಯನ್ನು ಕಲಿಸಬೇಕು. ನಮ್ಮ ಪೋಲೀಸ್ ಅಧಿಕಾರಿಗಳು ಹೊರದೇಶದ ಪ್ರಜೆಗಳು ಯಾರಿದ್ದಾರೆ ಅವರ ಭಾಷೆಗಳನ್ನು ಕಲಿತರೆ ಇದು ಸರಿಯಾಗುತ್ತದೆ. ಮೂಲಭೂತವಾಗಿ ಏಕೆ ಗಾಂಜಾ ಮಾಫಿಯಾ ನಡೆಯುತ್ತಿದೆ ಎಂಬುದನ್ನು ನೋಡಬೇಕು. ಪೋಲೀಸ್ ಇಲಾಖೆಯವರು ತಪ್ಪಿತಸ್ಥರನ್ನು ಹಿಡಿದು ಪ್ರಕರಣವನ್ನು ಹೂಡುತ್ತಾರೆ. ಆದರೆ, ಗುಪ್ತಚರ ಇಲಾಖೆಯವರು ಗುಟ್ಟಾಗಿ ಹೋಗಿ ಕೆಲಸ ಮಾಡಿ, ಎಲ್ಲಿಂದ ಮಾದಕ ವಸ್ತುಗಳ ಬಳಕೆಯಾಗುತ್ತಿದೆ. ಯಾರ ಮೂಲಕ ಬಳಕೆಯಾಗುತ್ತಿದೆ ಎಂಬುದನ್ನು ಪತ್ತೆ ಹೆಚ್ಚಿ ಮೂಲದಲ್ಲಿಯೇ ಅದನ್ನು ಹತೋಟಿಗೆ ತಂದರೆ ಮಾತ್ರ ಈ ಸಮಸ್ಯೆ ಬಗೆಹರಿಯುತ್ತದೆ. ಮಾನ್ಯ ಸದಸ್ಯರಾದ ಶ್ರೀಮತಿ ಜಯಮ್ಮನವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದರು. ಮನೆಯಲ್ಲಿ ಮಕ್ಕಳನ್ನು ಪೋಷಣೆ ಮಾಡುವುದು ತಾಯಿಯೇ. ಆಕೆ ತನ್ನ ಮಕ್ಕಳ ಚಲನವಲನದ ಮೇಲೆ ಸದಾ ನಿಗಾ ಇಡುತ್ತಾಳೆ. ಅದೇ ರೀತಿ ನಾವು ಕಲಿಯತಕ್ಕಂತ ವಿದ್ಯಾಭ್ಯಾಸದಲ್ಲಿ ಇದರ ಬಗ್ಗೆ ಪರಿಚಯ ಮಾಡಬೇಕು. 'ಗಿಡವಾಗಿ ಬಗ್ಗದ್ದು, ಮರವಾಗಿ ಬಗ್ಗೀತೆ?' ಎಂಬ ಗಾದೆ ಮಾತಿದೆ. ನಾವು ಮಕ್ಕಳಿಗೆ ಸರಿಯಾಗಿ ಪಾಠವನ್ನು ಕಲಿಸಬೇಕು. ಈಗಿನ ಜನಾಂಗ 'ಪಾಕೇಟ್ ಮನಿ' ಎಂದು ಏನು ಹೇಳುತ್ತಾರೆ. ನಾನು ಇಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡುತ್ತಿದ್ದಾಗ ಆ ಪಾಕೇಟ್ ಮನಿ ಕೇವಲ ನಾಲ್ಕಾಣೆಯಾಗಿತ್ತು.

**ಸಭಾಪತಿಯವರು:–** ನಿಮ್ಮ ಸಲಹೆಯನ್ನು ನೀಡಿ.

**ಶ್ರೀ ರಾಮಚಂದ್ರಗೌಡ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನ್ನ ಸಲಹೆ ಏನೆಂದರೆ, ಇದೊಂದು ಗೂಢಚರ್ಯ ವ್ಯವಸ್ಥೆಯಿಂದಾಗುವಂತಹ ಕೆಲಸ. ಪೋಲೀಸ್‌ನವರಿಗೆ ಚಳ್ಳೆಹಣ್ಣು ತಿನ್ನಿಸುತ್ತಾರೆ. ಗೂಢಚರ್ಯ ವಿಭಾಗದಿಂದ ಎಲ್ಲಿ ಮಾದಕ ದ್ರವ್ಯಗಳ ಬಳಕೆಯಾಗುತ್ತಿದೆ. ಎಲ್ಲಿ ಸರಬರಾಜು ಆಗುತ್ತಿದೆ ಎಂಬುದನ್ನು ಪತ್ತೆ ಹೆಚ್ಚಬೇಕು. ಹೊರ ರಾಷ್ಟ್ರದ ವಿದ್ಯಾರ್ಥಿಗಳು ಯಾರ್‍ಯಾರು ಬರುತ್ತಾರೆ, ಅಂಥವರ ಮೂಲವನ್ನು ವಿಚಾರಿಸಬೇಕು. ನೋಡಿಕೊಂಡು ಕೆಲಸ ಮಾಡಬೇಕು. ಈ ರೀತಿ ಮಾಡಿದರೆ ಸಾಧ್ಯವಾಗುತ್ತದೆ. ಈಗಾಗಲೇ ಅನೇಕ ವಿಚಾರಗಳನ್ನು ನಮ್ಮ ಸ್ನೇಹಿತರು ತಿಳಿಸಿದ್ದಾರೆ. ಅದರ ಜೊತೆಗೆ ನಾನು ಕೆಲವು ಸಲಹೆಯನ್ನು ನೀಡಿದ್ದೇನೆ.

**ಸಭಾಪತಿಯವರು:–** ಧನ್ಯವಾದಗಳು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ನೇರವಾಗಿ ಎರಡು ಸಲಹೆಯನ್ನು ನೀಡುತ್ತೇನೆ. ಮೊದಲನೆಯದಾಗಿ ಬೆಂಗಳೂರು, ಮಂಗಳೂರು, ಶಿವಮೊಗ್ಗ, ಧಾರವಾಡ ಮತ್ತು ಮೈಸೂರು ಈ ರೀತಿಯ ನಗರಗಳಲ್ಲಿ ವೈದ್ಯಕೀಯ ಕಾಲೇಜು ಮತ್ತು ಎಂಜಿನಿಯರಿಂಗ್ ಕಾಲೇಜು ಎಲ್ಲಿವೆ, ಅಂದರೆ ಹೊರ ರಾಜ್ಯ ಹಾಗೂ ಹೊರ ದೇಶದಿಂದ ವಿದ್ಯಾರ್ಥಿಗಳು ಅಲ್ಲಿಗೆ ಬಂದಿದ್ದಾರೆ ಅಂಥವರಿಂದ ಮಾದಕ ದ್ಯವ್ಯಗಳ ಬಳಕೆ ನಡೆಯುತ್ತಿದೆ. ಅದಕ್ಕಾಗಿ ನನ್ನ ಸಲಹೆಯೇನೆಂದರೆ ಹೊರರಾಜ್ಯದ ವಿದ್ಯಾರ್ಥಿಗಳು ಹಾಗೂ ಹೊರ ದೇಶದ ವಿದ್ಯಾರ್ಥಿಗಳು ಯಾರು ಬಂದಿದ್ದಾರೆ ಅಂಥವರು ಪ್ರತಿ ವರ್ಷವೂ ವೈದ್ಯಕೀಯ ಪರೀಕ್ಷೆಯನ್ನು ಕಡ್ಡಾಯವಾಗಿ ಮಾಡಿಸಿದ ಪ್ರಮಾಣ ಪತ್ರವನ್ನು ಕೊಡಬೇಕು ಮತ್ತು ಪೋಷಕರು ಬರಬೇಕು. ಇಂತಹ ವಿದ್ಯಾರ್ಥಿಗಳನ್ನು ವೈದ್ಯಕೀಯ ಪರೀಕ್ಷೆ ಮಾಡಿ ಕೌನ್ಸಿಲಿಂಗ್ ಮಾಡಿ, ಮನಃ ಪರಿವರ್ತನೆ ಮಾಡುವಂತಹ ಕೆಲಸವನ್ನು ಮಾಡಬೇಕು. ಜೊತೆಗೆ ಪೋಲೀಸ್ ಇಲಾಖೆ ಮತ್ತು ಗುಪ್ತಚರ ಇಲಾಖೆಯವರೇನಿದ್ದಾರೆ, ಯಾವ ಕಾಲೇಜಿನ ಮಕ್ಕಳು ಹೆಚ್ಚಾಗಿ ಮಾದಕ ದ್ರವ್ಯಗಳ ಸೇವನೆಯನ್ನು ಮಾಡುತ್ತಿದ್ದಾರೆ, ಹೆಚ್ಚಾಗಿ ಮಾದಕ ದ್ರವ್ಯಗಳ ಮಾರಾಟ ಮಾಡತಕ್ಕಂಥವರು ಯಾವ ಕಾಲೇಜನ್ನು ಟಾರ್ಗೇಟ್ ಮಾಡುತ್ತಿದ್ದಾರೆ ಎನ್ನುವುದು ಇಲಾಖೆಯವರ ಗಮನದಲ್ಲಿರುತ್ತದೆ. ಅಂತಹ ಕಾಲೇಜುಗಳಿಗೆ ಪತ್ರದ ಮೂಲಕ ಅಥವಾ ಆದೇಶದ ಮೂಲಕ ತಿಳುವಳಿಕೆ ನೀಡಿ ವಿದ್ಯಾರ್ಥಿಗಳಿಗೆ ಪ್ರತಿ ವರ್ಷ ವೈದ್ಯಕೀಯ ಪರೀಕ್ಷೆಯನ್ನು ಮಾಡಿಸಿ, ವಿದ್ಯಾರ್ಥಿಗಳ ಮನ ಪರಿವರ್ತನೆ ಮಾಡುವಂತಹ ಕೆಲಸವನ್ನು ಮಾಡಬೇಕಾಗುತ್ತದೆ. ಯಾರನ್ನೋ ಹಿಡಿದು, ಏನನ್ನೋ ಮಾಡಿದಂತಾಗಬಾರದು. ಇಂತಹ ಕೃತ್ಯಗಳು ಹಿಂದೆಯೂ ಹಾಗೂ ಮುಂದೆಯೂ ನಡೆಯುತ್ತಿರುತ್ತವೆ. ನನಗೆ ಒಬ್ಬರು ಬಾರ್ ಉದ್ಘಾಟನೆ ಸಲುವಾಗಿ ಕರೆದರು. ಈಗಿನ ದಿನಮಾನದಲ್ಲಿ WhatsUp, ಮಾಧ್ಯಮದವರು, ಪತ್ರಕರ್ತರು, ಎಲ್ಲಾ ಇರುವುದರಿಂದ ಆಭಾಸವಾಗಬಾರದೆಂಬ ಕಾರಣಕ್ಕೆ ದಯವಿಟ್ಟು ನಾನು ಆ ಉದ್ಘಾಟನಾ ಕಾರ್ಯಕ್ರಮಕ್ಕೆ ಬರುವುದಿಲ್ಲವೆಂದು ಅವರಿಗೆ ಹೇಳಿದ್ದೆ. ಅದಕ್ಕೆ ಬಾರ್ ಮಾಲೀಕ ಉದ್ಘಾಟನೆ ಇರುವುದು ಬೆಳಗ್ಗೆ 10.00 ಘಂಟೆಗೆ. ಸಂಜೆ 5.00 ಘಂಟೆಗೆ ಬನ್ನಿ ಎಂದು ಹೇಳಿದ್ದರು. ಆ ಬಾರ್‌ನಲ್ಲಿ ಡ್ಯಾನ್ಸರ್ಸ್ ಇರುವುದಿಲ್ಲ. ಇವರೇ ಏನು ಬೇಕು ಅದನ್ನು ಕುಡಿದು ಡ್ಯಾನ್ಸ್ ಮಾಡುತ್ತಾರೆ. ನಾನು ಆ ಬಾರ್‌ಗೆ ಹೋದ ಮೇಲೆ ವಯಸ್ಕ ಹುಡುಗರು, ಹುಡುಗಿಯರೆಲ್ಲರೂ ಇದ್ದರು. ನಾನು ಈಗ ಅಂಥವರು ಯಾರೆಂದು ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ. ಈ ಸದನಕ್ಕೆ ಅವರೆಲ್ಲರೂ ಗೊತ್ತಿರತಕ್ಕಂಥವರು. ಅವರು ಹೆಸರಾಂತ ಕುಟುಂಬದಿಂದ ಬಂದಂತಹ ಮಕ್ಕಳು. ರಾಜಕಾರಣಿಗಳು, ವ್ಯಾಪಾರಸ್ಥರು, ಸ್ವಾತಂತ್ರ್ಯ ಹೋರಾಟಗಾರರು, ಅಧಿಕಾರಿಗಳು ಅಂಥವರ ಮಕ್ಕಳು–ಮೊಮ್ಮಕ್ಕಳು ಬಂದಿದ್ದರು. ನಾನು ಅಲ್ಲಿ ಬಂದಂತಹವರನ್ನೆಲ್ಲಾ ಒಬ್ಬೊಬ್ಬರನ್ನೇ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವಿಚಾರಿಸಿದೆ. ಆದರೆ, ನಾನು ಯಾರೆಂದು ಅವರಿಗೆ ಗೊತ್ತಿರಲಿಲ್ಲ. ಏಕೆಂದರೆ ನಾನು ವೈಟ್ ಅಂಡ್ ವೈಟ್ ಉಡುಪನ್ನು ಧರಿಸಿಕೊಂಡು ಹೋಗಿರಲಿಲ್ಲ. ಹಾಗಾಗಿ ಗೊತ್ತಾಗಲಿಲ್ಲ. ಆ ಮಕ್ಕಳ ಹಿನ್ನೆಲೆಯನ್ನು ನೋಡಿದರೆ ನನಗೆ 'ಇಂತಹ ಸಮಾಜವೂ ಇದೆಯೇ?' ಎಂದು ಆಶ್ಚರ್ಯವಾಗಿತ್ತು. ಅದರಲ್ಲಿಯೂ ಹೆಣ್ಣು ಮಕ್ಕಳು. ಅದಕ್ಕಾಗಿ ದಯವಿಟ್ಟು ಇಲಾಖೆಯವರಿಗೆ ಎಲ್ಲವೂ ಗೊತ್ತಿರುತ್ತದೆ. ಮಾನ್ಯ ಸಚಿವರು ತುಂಬಾ ಮೃದು. ಅವರಿಂದ ಏನು ಮಾಡುವುದಕ್ಕೆ ಆಗುವುದಿಲ್ಲವೆಂದಲ್ಲ. ಆದರೆ, ಈ ಕೆಲಸವನ್ನು ಮಾಡತಕ್ಕಂಥ ಅಧಿಕಾರ ಮಾನ್ಯ ಸಚಿವರಿಗೆ ಬಂದಿರುತ್ತದೆ. ಸಚಿವರು ಈ ಕೆಲಸವನ್ನು ಮಾಡುತ್ತಾರೆ. ಎಲ್ಲದರಲ್ಲಿಯೂ ಸಮರ್ಥರಿದ್ದಾರೆ. ನಾನು ಒಂದು ಪಿಯುಸಿ ಕಾಲೇಜನ್ನು ತೆರೆದಿದ್ದೇನೆ. ನೀವು ನಾನು ಹೇಳುವುದನ್ನು ನಂಬುತ್ತೀರೋ, ಬಿಡುತ್ತೀರೋ ಅದು ನಿಮಗೆ ಬಿಟ್ಟ ವಿಚಾರ. ಪ್ರತಿ ದಿನ ಮಾದಕ ದ್ರವ್ಯದ ಜಾಲದ ಕಡೆಗೆ ವಿದ್ಯಾರ್ಥಿಗಳನ್ನು ಯಾರಾದರೂ ಬಂದು ಎಳೆದುಬಿಡುತ್ತಾರೆಂದು ಕಾಲೇಜಿನ ಹೊರಗಡೆ ನಾವು ಕಾಯಬೇಕಾಗಿದೆ. ಮಧ್ಯಾಹ್ನದ ಊಟದ ಸಮಯದಲ್ಲಿ ವಿದ್ಯಾರ್ಥಿಗಳನ್ನು ಹೊರಗೆ ಬಿಟ್ಟರೆ ಆಗಲೂ ಕಾಯಬೇಕಾಗಿದೆ. ಸಂಜೆ ವೇಳೆ ಬಸ್‌ಸ್ಟಾಪ್ ಹತ್ತಿರ ಮತ್ತು ಪಾರ್ಕ್ ಹತ್ತಿರ ಸಹ ಗಮನಿಸಬೇಕಾಗಿದೆ. ಏಕೆಂದರೆ, ಯಾರಾದರೂ ಬಂದು ನಾಲ್ಕು ಜನರನ್ನು ಈ ದಂಧೆಗೆ ಎಳೆದರೆ, ಇಡೀ ಕಾಲೇಜು ಇಂತಹ ದಂಧೆಗೆ ಬಲಿಯಾಗುತ್ತದೆಂದು ಆತಂಕವಾಗಿದೆ. ಅದಕ್ಕಾಗಿ ಎಲ್ಲೆಲ್ಲಿ ಹೆಸರು ಮಾಡಿರತಕ್ಕಂಥ ಕಾಲೇಜುಗಳು ಇವೆ, ಅಂತಹ ಕಾಲೇಜಿನಲ್ಲಿಯೇ ಇಂತಹ ಸಮಸ್ಯೆ ಜಾಸ್ತಿ ಇದೆ. ಸರ್ಕಾರಿ ಶಾಲೆ ಮತ್ತು ಸರ್ಕಾರಿ ಕಾಲೇಜಿನಲ್ಲಿ ಇಂತಹ ಸಮಸ್ಯೆ ಕಡಿಮೆ ಇರುತ್ತದೆ. ಆದರೆ, ಒಳ್ಳೆಯ ಹೆಸರನ್ನು ಹೊಂದಿರತಕ್ಕಂಥ ಕಾಲೇಜುಗಳಲ್ಲಿಯೇ ಇದು ಜಾಸ್ತಿ.

**ಶ್ರೀ ರಾಮಚಂದ್ರಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಏಕೆಂದರೆ ಸರ್ಕಾರಿ ಶಾಲೆಯಲ್ಲಿ ಓದತಕ್ಕಂಥವರು ಬಡ ಮಕ್ಕಳು. ಅವರ ಹತ್ತಿರ ಹಣ ಇರುವುದಿಲ್ಲ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಹಾಗಾಗಿ ಹೆಸರನ್ನು ಹೊಂದಿರತಕ್ಕಂಥ ಕಾಲೇಜುಗಳನ್ನು identify ಮಾಡಿ, ಅಂತಹ ಕಾಲೇಜುಗಳ ವಿದ್ಯಾರ್ಥಿಗಳನ್ನು ವೈದ್ಯಕೀಯ ಪರೀಕ್ಷೆ, ಕೌನ್ಸಿಲಿಂಗ್ ಎಲ್ಲವನ್ನು ಮಾಡುವುದರ ಮುಖಾಂತರ ಸರ್ಕಾರ ಏನಾದರೂ ಕೆಲಸ ಮಾಡಿದರೆ ಇದು ಒಂದು ಹಂತದಲ್ಲಿ ನಿಯಂತ್ರಣಕ್ಕೆ ಬರಬಹುದೆಂದು ನನ್ನ ಭಾವನೆ. ಅದನ್ನು ಮಾಡಲಿ ಎಂದು ನಾನು ಸರ್ಕಾರದಲ್ಲಿ ಮನವಿ ಮಾಡುತ್ತೇನೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ರಾಮಲಿಂಗಾರೆಡ್ಡಿ (ಗೃಹ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಐವನ್ ಡಿ'ಸೋಜಾರವರು ಬಹಳ ಪ್ರಮುಖವಾದ ವಿಚಾರವನ್ನು ಇವತ್ತು ತಂದಿದ್ದಾರೆ. ಮಾನ್ಯ ಸದಸ್ಯರು ಸಲಹೆ ಸೂಚನೆಯನ್ನು ಕೊಟ್ಟಿದ್ದಾರೆ. ಅವರಿಗೆ ಮಾದಕ ದ್ರವ್ಯದ ಬಗ್ಗೆ ಇರತಕ್ಕಂಥ ಕಾಳಜಿ ಕೂಡ ಅರ್ಥವಾಗುತ್ತದೆ. ಶ್ರೀಮತಿ ತಾರಾ ಅನೂರಾಧರವರು ಮತ್ತು ಮಾನ್ಯ ಪುಟ್ಟಣ್ಣನವರು ಮಾತನಾಡುವಾಗ ನನಗೆ 'ಮೃದು' ಎಂದು ಹೇಳಿದ್ದರು. ನಾನು ಮೃದುವೆ. ಆದರೆ, ಕೆಲಸವನ್ನು ಮಾಡಿಸಬೇಕಾದರೆ ಕಠಿಣವಾಗಿ ಇರಲೇ ಬೇಕು.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಪೆನ್ನು ಗಟ್ಟಿಯಾಗಿರಬೇಕು.

**ಶ್ರೀ ರಾಮಲಿಂಗಾರೆಡ್ಡಿ:–** ಮಾನ್ಯ ಸಭಾಪತಿಯವರೇ, ಪೆನ್ನು ಗಟ್ಟಿಯಾಗಿರುತ್ತದೆ. ಬಾಯಿಯೂ ಗಟ್ಟಿಯಾಗಿರುತ್ತದೆ. ಸ್ನೇಹಿತರ ಹತ್ತಿರ ಮತ್ತು ಪೋಲೀಸ್‌ನವರ ಹತ್ತಿರ ಯಾವ ರೀತಿಯಲ್ಲಿ ಮಾತನಾಡಬೇಕು, ಆ ರೀತಿಯಲ್ಲಿಯೇ ಮಾತನಾಡುತ್ತೇನೆ. ಕಳ್ಳರ ಜೊತೆಯೂ ಹೇಗೆ ಮಾತನಾಡಬೇಕೋ ಅವರ ಹತ್ತಿರವೂ ಹಾಗೆ ಮಾತನಾಡುತ್ತೇನೆ. ನಾನು ಬೆಂಗಳೂರು ಜಿಲ್ಲೆಯ ಪ್ರಭಾರ ಸಚಿವನಾಗಿದ್ದೆ. ನಾನು ತಪಾಸಣೆಗೆ ಹೋದರೆ ಕನಿಷ್ಠ ಪಕ್ಷ ಇಬ್ಬರನ್ನಾದರೂ ಅಮಾನತು ಮಾಡುತ್ತಿದ್ದೆ. ಎರಡೂವರೆ ವರ್ಷದಲ್ಲಿ ಸುಮಾರು 50ಕ್ಕಿಂತಲೂ ಹೆಚ್ಚು ಜನರನ್ನು ಅಮಾನತುಗೊಳಿಸಿದ್ದೇನೆ. ನನ್ನ ಮಾತು ಕಡಿಮೆಯೇ. ನಾನು ಮಾತನಾಡುವುದು ಕಡಿಮೆಯೇ ಇರಬಹುದು, ಆದರೆ ಕೆಲಸದಲ್ಲಿ ಹಾಗಲ್ಲ. ನಾನು ಹೇಳುವುದೆಲ್ಲಾ ರೆಕಾರ್ಡ್‌ಗೆ ಹೋಗಿ ಬಿಡುತ್ತದೆ. ಅದಕ್ಕಾಗಿ ಹೇಳುತ್ತಿದ್ದೇನೆ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಈ ಕೆಲಸವನ್ನು ಮಾನ್ಯ ಸಚಿವರು ಸಮರ್ಥವಾಗಿ ಮಾಡುತ್ತಾರೆ. ಆದರೆ, 'ಮೃದು' ಎನ್ನುವ ಭಾವನೆ ಬರುವುದು ಬೇಡವೆಂದು ಹೇಳಿದ್ದೇನೆ.

**ಶ್ರೀ ರಾಮಲಿಂಗಾರೆಡ್ಡಿ:–** ಮಾನ್ಯ ಸಭಾಪತಿಯವರೇ, ನನ್ನ ಕ್ಷೇತ್ರಕ್ಕೆ ಯಾರಾದರೂ ಪೋಲೀಸ್ ಅಧಿಕಾರಿ ಬರಬೇಕೆಂದರೆ ಪೋಲೀಸ್ ಎಂದ ತಕ್ಷಣ ಭಯ ಉಳ್ಳವರಾಗಿರಬೇಕು. ಗಲಾಟೆ ಮಾಡುವವರು, ರೌಡಿಗಳು ಪೋಲೀಸರನ್ನು ನೋಡಿದರೆ ಭಯಪಡಬೇಕು. ಇದರರ್ಥ ಏನೆಂದು ತಮಗೂ ಗೊತ್ತಿದೆ. ಈ ರೀತಿ ಪೋಲೀಸ್ ಅಧಿಕಾರಿ ಇದ್ದರೆ ಮಾತ್ರ ನನ್ನ ಕ್ಷೇತ್ರಕ್ಕೆ ಬನ್ನಿ ಎಂದು ಕರೆಯುತ್ತೇನೆ. ಇಲ್ಲವೆಂದರೆ ನಾನು ಕರೆಸಿಕೊಳ್ಳುವುದೇ ಇಲ್ಲ. ತಪ್ಪು ಮಾಡುವವರಿಗೆ ಪೋಲೀಸ್ ಎಂದ ತಕ್ಷಣ ಭಯ ಇರಬೇಕು. ತಪ್ಪು ಮಾಡದೇ ಇರತಕ್ಕಂಥವರಿಗೆ ಪೋಲೀಸ್ ಅಧಿಕಾರಿಗಳ ಬಗ್ಗೆ ಗೌರವವಿರಬೇಕು. ಪೋಲೀಸ್ ಠಾಣಾಧಿಕಾರಿ strict ಆಗಿದ್ದಾರೆಂದರೆ ಅರ್ಧ ಕ್ರೈಮ್ಸ್ automatically ಕಡಿಮೆಯಾಗುತ್ತವೆ. ಇತ್ತೀಚಿನ ದಿನಗಳಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸರಗಳ್ಳತನ ನಿಂತಿರುವುದು ಮತ್ತೆ ಜಾಸ್ತಿಯಾಗಿತ್ತು. ಆದ್ದರಿಂದ ಆ ಗ್ಯಾಂಗ್‌ಗಳನ್ನು ಹಿಡಿಯಬೇಕಾಗಿತ್ತು. ಹಾಗಾಗಿ ಒಂದು ಸಭೆಯನ್ನು ನಡೆಸಿ, ಕಮೀಷನರ್‌ರವರನ್ನು ಕರೆಸಿ DCPs, DySPs ಮಟ್ಟದವರೆಗೂ ಸಭೆಗೆ ಕರೆಸಿದ್ದೆ. ಸಭೆಗೆ ಬಂದಾಗ 'ಸರಗಳ್ಳತನ ಇರಬಹುದು, ರೌಡಿಸಂ ಇರಬಹುದು, ಹಾಗೆಯೇ ಬೇರೆ ಬೇರೆ ಚಟುವಟಿಕೆಗಳನ್ನು ನಿಲ್ಲಿಸುವುದಕ್ಕೆ ನಿಮಗೆ ಏನು ಅಧಿಕಾರ ಬೇಕು? ನಿಮಗೆ ಕೊಟ್ಟಿರತಕ್ಕಂಥ ಅಧಿಕಾರ ಸಾಕಾಗುವುದಿಲ್ಲವೇ?' ಎಂದು ಕೇಳಿದ್ದೆ. ಅದಕ್ಕೆ ಪೊಲೀಸ್ ಅಧಿಕಾರಿಗಳು ಸಾಕು, ಕೊಟ್ಟಿರತಕ್ಕಂಥ ಅಧಿಕಾರದಲ್ಲಿಯೇ ನಾವು ಮಾಡಬಹುದೆಂದು ಹೇಳಿದ್ದರು. ಮತ್ತೆ ಏತಕ್ಕೆ ಇಂತಹ ಸಮಾಜಘಾತುಕ ಚಟುವಟಿಕೆಗಳನ್ನು ನಿಲ್ಲಿಸುತ್ತಿಲ್ಲವೆಂದು ಕೇಳಿದ್ದೆ. ಸಾಕಷ್ಟು ಅಧಿಕಾರ ನಮ್ಮ ಪೊಲೀಸ್ ಅಧಿಕಾರಿಗಳಿಗೆ ಇದೆ. ಗಂಭೀರವಾಗಿ ತಪಾಸಣೆ ಮಾಡಿದರೆ ಯಾವ ಕಳ್ಳರು ಇರುವುದಿಲ್ಲ, ಯಾವ ಚಟುವಟಿಕೆಗಳು ನಮ್ಮ ಕರ್ನಾಟಕದಲ್ಲಿ ಇರುವುದಿಲ್ಲ. ಇವತ್ತಿನ ದಿನ ಇಂತಹ ಪ್ರಶ್ನೆ ಬರುತ್ತದೆ, ಇದಕ್ಕೆ ಉತ್ತರವನ್ನು ನೀಡಬೇಕೆಂದು ನಾನು ಭಾವಿಸಿರಲಿಲ್ಲ. ಸೆಪ್ಟೆಂಬರ್ ೦1ನೇ ತಾರೀಖಿನಂದು ನಾನು ಗೃಹ ಸಚಿವನಾಗಿ ಆಯ್ಕೆಯಾಗಿದ್ದು, 8ನೇ ತಾರೀಖಿನಂದು ನಮ್ಮ ಡಿಜಿ ಯವರ ಮುಖಾಂತರ ಒಂದು ಸುತ್ತೋಲೆಯನ್ನು ಹೊರಡಿಸಿದ್ದೇವೆ. ನಮ್ಮ ರಾಜ್ಯದ ಎಲ್ಲಾ ಕಡೆಗಳಲ್ಲಿ ಪುಂಡಾಟಿಕೆ ಮತ್ತು ಗೂಂಡಾಗಿರಿಯನ್ನು ಪದೇ-ಪದೇ ಯಾರು ಮಾಡುತ್ತಾರೆ ಅಂಥವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಗೂಂಡಾ ಕಾಯ್ದೆ ಕಾನೂನು ಇರುವುದು ಏತಕ್ಕಾಗಿ? ಇಂತಹ ಸಂದರ್ಭಗಳಲ್ಲಿ ಉಪಯೋಗಿಸಿಕೊಳ್ಳುವುದಕ್ಕಾಗಿಯೇ ಗೂಂಡಾ ಕಾಯ್ದೆ ಇರುವುದು. ಅದನ್ನು ಪೊಲೀಸ್ ಅಧಿಕಾರಿಗಳಿಗೆ ಬಳಸಿ ಎಂದು ಹೇಳಿದ್ದೇನೆ.

(ಮುಂದು) . . .

(965)/14.11.2017/5.10/ಎಸ್‌ಕೆ-ಆರ್‌ಎನ್

**ಶ್ರೀ ರಾಮಲಿಂಗಾರೆಡ್ಡಿ (ಗೃಹ ಸಚಿವರು) ಮುಂದು:-**

ಗಡಿಪಾರು ಮತ್ತು ಮತಾಂತರ ವಿಚಾರಗಳಲ್ಲಿ ಯಾರು ಗಲಾಟೆ ಮಾಡುತ್ತಾರೋ? ಅವರು ಯಾವುದೇ ಪಕ್ಷ ಹಾಗೂ ಯಾವುದೇ ಸಂಘಟನೆಯವರಾಗಿರಬಹುದು, ಯಾವುದೇ ಮುಲಾಜು ಇಲ್ಲದೇ ಅವರನ್ನು ಗುಂಡಾ ಕಾಯ್ದೆಯಡಿಯಲ್ಲಿ ಹಾಕಿ ಅಥವಾ ಗಡಿಪಾರು ಮಾಡಿ ಎಂದು ಹೇಳಿದ್ದೇನೆ. ವಿಶೇಷವಾಗಿ, ಹೆಣ್ಣು ಮಕ್ಕಳು ಓದುವಂತಹ ಶಾಲಾ-ಕಾಲೇಜುಗಳಲ್ಲಿ ನಮ್ಮ ಪೊಲೀಸ್ ಮತ್ತು ಹೊಯ್ಸಳ ಕಾಲೇಜುಗಳಲ್ಲಿ ಇರುತ್ತದೆ. ನಮ್ಮ ಪೊಲೀಸ್ ಇನ್ಸ್‌ಪೆಕ್ಟರ್ಸ್ ಅಥವಾ ಸಬ್ ಇನ್ಸ್‌ಪೆಕ್ಟರ್ಸ್ ಮೀಟಿಂಗ್ಸ್ ಮಾಡಿ ಎಂದು ತಿಳಿಸಿ ಸೂಚನೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನೀಡಿದ್ದೇನೆ. ಶಾಲಾ-ಕಾಲೇಜುಗಳಲ್ಲಿ ಓದುವಂತಹ ಹೆಣ್ಣು ಮಕ್ಕಳು ಯಾರು ಬಂದು ದೂರು ನೀಡುವುದಿಲ್ಲ. ಈ ಪೋಲಿ ಹುಡುಗರು ಚುಡಾಯಿಸುತ್ತಾ ಹೋಗುತ್ತಿರುತ್ತಾರೆ. ಒಂದು ಬಾಕ್ಸ್ ಇಟ್ಟು, ದೂರು ತೆಗೆದುಕೊಳ್ಳಿ ಎಂದು ಹೇಳಿದ್ದೇನೆ. ಈಗಾಗಲೇ, ಪೋಲೀಸ್‌ನವರು ಕೂಡ ಕಾರ್ಯಗತ ಮಾಡುತ್ತಿದ್ದಾರೆ. ನಗರ ಪ್ರದೇಶಗಳಲ್ಲಿರುವ ಪಿಜಿಗಳು. ಈಗಾಗಲೇ ಮಾನ್ಯ ಸದಸ್ಯರು ಪಿಜಿಗಳ ಬಗ್ಗೆ ಹೇಳಿದರು. ನಮ್ಮ ಕ್ಷೇತ್ರದಲ್ಲಿ ಪಿಜಿಗಳು ಸಾಕಷ್ಟು ಇದೆ. ಮಹದೇವಪುರ, ಬೊಮ್ಮನಹಳ್ಳಿ, ಬಿಟಿಎಂ ಕ್ಷೇತ್ರ ಈ ಭಾಗದಲ್ಲಿ ಸಾಕಷ್ಟು ಪಿಜಿಗಳಿವೆ. ಇಲ್ಲಿ ಐಟಿ ಮತ್ತು ಬಿಟಿಯವರು ಜಾಸ್ತಿಯಿದ್ದಾರೆ. ಶನಿವಾರ ಮತ್ತು ಭಾನುವಾರ ದಿನಗಳಂದು ರಾತ್ರಿ 11.00 ಗಂಟೆಯ ನಂತರ ಕುಡಿದುಕೊಂಡು ಗಲಾಟೆ ಮಾಡುತ್ತಾರೆ. ಯಾರ್‍ಯಾರು ಪಿಜೆಗಳನ್ನು ನಡೆಸುತ್ತಾರೆ ಅವರು ನಡೆಸಿಕೊಳ್ಳಲಿ ನಾನೇನು ಬೇಡ ಎನ್ನುವುದಿಲ್ಲ. ಆದರೆ, ರಾತ್ರಿ 11.00 ಗಂಟೆಗೆ ಅವರ ಚಟುವಟಿಕೆ ಮುಗಿಯಬೇಕು. ಅಕ್ಕ-ಪಕ್ಕದ ಮನೆಯವರಿಗೆ ತೊಂದರೆಯಾಗಬಾರದು ಎಂಬುದರ ಬಗ್ಗೆ ಹೇಳಿದ್ದೇನೆ. ಇದರ ಬಗ್ಗೆ ನಾನು ಎಲ್ಲಾ ಡಿಸಿಪಿಗಳು ಮತ್ತು ಕಮೀಷನರ್‌ರವರಿಗೆ ನಿರ್ದೇಶನ ನೀಡಿದ್ದೇನೆ.

ಮಾನ್ಯ ಸಭಾಪತಿಯವರೆ, ಈ ಮೀಟರ್ ಬಡ್ಡಿ ವ್ಯವಹಾರಗಳ ಬಗ್ಗೆ ಹೆಚ್ಚು ಗಮನಹರಿಸಬೇಕೆಂದು ಹೇಳಿದ್ದೇನೆ. ಮೀಟರ್ ಬಡ್ಡಿ ಏನಾಗುತ್ತದೆ ಎಂದು ಹೇಳಿದರೆ ಕಾಗದದಲ್ಲಿ ಬ್ಲ್ಯಾಂಕ್ ಬರೆದುಕೊಟ್ಟು ಬಿಡುತ್ತಾರೆ. ಅವರು ಬರೆದುಕೊಟ್ಟು ಬಿಟ್ಟರೆ, ಆ ಮೀಟರ್ ಬಡ್ಡಿ ಯಾರು ಬರೆದು ಕೊಡುತ್ತಾರೋ, ಅವರಲ್ಲಿ ಯಾವುದೇ ಆ ಆಸ್ತಿಯನ್ನು ಇರಲಿ ಅದನ್ನು ಅವರಿಂದ ಮತ್ತೆ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಇದರ ಬಗ್ಗೆ ಹೆಚ್ಚು ಗಮನಹರಿಸಿ ಎಂದು ನಾನು ಹೇಳಿದ್ದೇನೆ. ಇವೆಲ್ಲವೂ ನಮ್ಮ ಸಮಾಜವನ್ನು ಹಾಳು ಮಾಡುವಂತಹ ದುಷ್ಟ ಶಕ್ತಿಗಳು. ನಾವು ಅನೇಕ ಬಾರಿ ಪತ್ರಿಕೆಗಳಲ್ಲಿ ಓದಿದಾಗ, ಕುಟುಂಬದಲ್ಲಿರುವ ಗಂಡ-ಹೆಂಡತಿ ಮತ್ತು ಮಕ್ಕಳು ಕೂಡ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಎಷ್ಟೋ ಕಡೆಗಳಲ್ಲಿ ಹಾಲಿನವರು ಬರುವುದಕ್ಕಿಂತ ಮುಂಚೆ ಬಾರ್ ರೆಸ್ಟೋರೆಂಟ್ ಮತ್ತು ವೈನ್ ಶಾಪ್ ಬಾಗಿಲು ತೆಗೆಯುತ್ತಿದ್ದರು. ಅವರು ಬೆಳಗ್ಗೆ 10.30 ಗಂಟೆಯಿಂದ ಬಾಗಿಲು ತೆಗೆದು ರಾತ್ರಿ 10.30 ಗಂಟೆಯವರೆಗೆ ಶಾಪ್‌ಗಳನ್ನು ಮುಚ್ಚಬೇಕು ಅವರಿಗೆ ಎಷ್ಟು ಗಂಟೆಗೆ ಶಾಪ್ ತೆಗೆಯಬೇಕೆಂಬುದು ಆದೇಶ ಇದೆಯೋ ಅಷ್ಟೇ ಗಂಟೆಗೆ ತೆಗೆಯಬೇಕು ಮತ್ತು ಮುಚ್ಚಬೇಕು ಎಂದು ಸೂಚನೆ ಕೊಟ್ಟಿದ್ದೇನೆ. ಇದರ ಬಗ್ಗೆ ಕೂಡ ಹೆಚ್ಚು ಒತ್ತು ಕೊಡಿ ಎಂದು ನಾನು ಹೇಳಿದ್ದೇನೆ. ನೈಜಿರೀಯಾ ಮತ್ತು ಇನ್ನಿತರ ವಿದೇಶಗಳಿಂದ ಬಂದಂತಹ ವಿದ್ಯಾರ್ಥಿಗಳು ಈ ಮಾದಕ ವಸ್ತುಗಳನ್ನು ಮಾರುವುದು ಮತ್ತು ಗಲಾಟೆ ಮಾಡುವುದು ಹಾಗೂ ಅವರವರೇ ಕಿತ್ತಾಡುವುದು. ಇದರ ಬಗ್ಗೆಯೂ ಕೂಡ ಹೆಚ್ಚು ಒತ್ತು ಕೊಡಿ ಎಂದು ಹೇಳಿದ್ದೇನೆ. ಈ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರೀತಿಯ ದೂರು ಬಂದಾಗ ಎಫ್.ಐ.ಆರ್ ದಾಖಲೆ ಮಾಡುವುದರ ಬಗ್ಗೆ, ಅತ್ಯಾಚಾರ, ಲೈಂಗಿಕ ದೌರ್ಜನ್ಯ ಹಾಗೂ ಸರಗಳ್ಳತನದ ಬಗ್ಗೆ, ಮಕ್ಕಳ ಬಗ್ಗೆ ದೌರ್ಜನ್ಯ ಮಾಡುವುದು. ಇದರ ಬಗ್ಗೆ ಹೆಚ್ಚಿನ ಗಮನಹರಿಸಿ ಎಂದು ಹೇಳಿದ್ದೇನೆ. ಇವತ್ತು ನಾನು ಮಾತನಾಡುವಾಗಲೇ, ಈ ವಿಷಯ ಎಲ್ಲವೂ ಈ ಸದನದಲ್ಲಿ ಪ್ರಸ್ತಾಪವಾಗುತ್ತದೆಂದು ತಮಗೆ ಹೇಳಿದ್ದೆ. ಮಾದಕ ವಸ್ತುಗಳಾದ ಗಾಂಜಾ, ಅಫೀಮು ಮಕ್ಕಳ ಕೈಯಲ್ಲಿ ಸಿಕ್ಕಿದರೆ ತೊಂದರೆಯಾಗುತ್ತದೆ. ಆ ಮಕ್ಕಳೇ ಅದನ್ನು ತೆಗೆದುಕೊಳ್ಳುತ್ತಾರೆ ಎಂದೇನೂ ಇಲ್ಲ. ಹಾಗೆಯೇ ದೊಡ್ಡವರು ಕೂಡ ಈ ಮಾದಕ ದ್ರವ್ಯಗಳನ್ನು ತೆಗೆದುಕೊಳ್ಳುತ್ತಾರೆ ಮಕ್ಕಳ ಕೈಯಲ್ಲಿ ಸಿಕ್ಕಿದರೆ ಸೇದುತ್ತಾರೆ. ಇದನ್ನು ಮಕ್ಕಳ ಕೈಯಲ್ಲಿ ಸಿಗದೇ ಹಾಗೇ ನೋಡಿಕೊಳ್ಳುವಂತಾದ್ದು. ನಮ್ಮ ಕರ್ತವ್ಯವಾಗಿರುತ್ತದೆ. ಈ ಮಾದಕ ವಸ್ತುಗಳು ನಮ್ಮ ರಾಜ್ಯದಲ್ಲಿಯೇ ಸಿಗಬಾರದು, ಆ ರೀತಿ ಮಾಡಿ ಎಂದು ಹೇಳಿದ್ದೇನೆ.

ಮಾನ್ಯ ಸಭಾಪತಿಯವರೆ, ನಾನು ಸಭೆ ನಡೆಸಿದಾಗಲೆಲ್ಲಾ ಈ ಕುರಿತು ಚರ್ಚೆ ನಡೆಯುತ್ತದೆ. ನಾನೊಬ್ಬ ಗೃಹ ಸಚಿವನಾಗಿ, ನಾನೇ ಇದನ್ನೆಲ್ಲಾ ಕೂಡ ನೋಡುವುದಕ್ಕೆ ಆಗುವುದಿಲ್ಲ. ಜಿಲ್ಲಾ ಮಟ್ಟದಲ್ಲಿ ಕೆ.ಡಿ.ಪಿ. ಮೀಟಿಂಗ್ಸ್ ನಡೆಯುತ್ತದೆ. ಆ ಸಭೆಯಲ್ಲಿ, ನಾವೆಲ್ಲ ಕುಡಿಯುವ ನೀರಿನ ಬಗ್ಗೆ ಮತ್ತು ಇನ್ನಿತರ ವಿಷಯಗಳ ಬಗ್ಗೆ ಚರ್ಚೆ ಮಾಡುತ್ತೇವೆ. ಆದರೆ ಇದರ ಬಗ್ಗೆ ನಾವು ಯಾರು ಚರ್ಚೆ ಮಾಡುವುದಿಲ್ಲ. ಜಿಲ್ಲಾ ಉಸ್ತುವಾರಿ ಸಚಿವರು, ಎಸ್.ಪಿ.ಯವರು ಮತ್ತು ಜಿಲ್ಲಾಧಿಕಾರಿಗಳು ಈ ನಿಟ್ಟಿನಲ್ಲಿ ಹೆಚ್ಚು ಆಸಕ್ತಿ ವಹಿಸಬೇಕು. ಆಯಾಯ ಜಿಲ್ಲೆಗಳಲ್ಲಿ ಏನೇನು ಚಟುವಟಿಕೆಗಳು ನಡೆಯುತ್ತಿದೆಂಬುದರ ಬಗ್ಗೆ ಆ ಜಿಲ್ಲೆಗಳಿಗೆ ಸಂಬಂಧಪಟ್ಟಂತಹ ಶಾಸಕರುಗಳು, ಪಾರ್ಲಿಮೆಂಟಿನ ಸದಸ್ಯರು, ವಿಧಾನ ಪರಿಷತ್ತಿನ ಸದಸ್ಯರು ಹೆಚ್ಚು ಆಸಕ್ತಿ ವಹಿಸಬೇಕು. ನಾವೆಲ್ಲರೂ ಮನಸ್ಸು ಮಾಡಿದರೆ ಇದನ್ನೆಲ್ಲ ತಡೆಯಬಹುದು. ಇಸ್ಪೀಟ್, ಗ್ಯಾಂಬ್ಲಿಂಗ್ ಮತ್ತು ಹುಕ್ಕಾ ಬಾರ್ ಇದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಈ ಹುಕ್ಕಾ ಬಾರ್‌ನಲ್ಲಿ ಹೋಗಿ ಹೆಣ್ಣು ಮಕ್ಕಳೆಲ್ಲಾ ಸೇದುತ್ತಾರೆ. ಅದರಲ್ಲಿ ಏನೋ flavour ಇರುವುದನ್ನು ಕೊಡುತ್ತೇವೆಂದು ಹೇಳುತ್ತಾರೆ.

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):**–ಮಾನ್ಯ ಸಭಾಪತಿಯವರೆ, ಈ ಹುಕ್ಕಾ ಬಾರ್ ತೆಗೆಯಲು ಏಕೆ ಅನುಮತಿ ಕೊಡಬೇಕು?

**ಶ್ರೀ ರಾಮಲಿಂಗಾರೆಡ್ಡಿ (ಗೃಹ ಸಚಿವರು):**– ಮಾನ್ಯ ಸಭಾಪತಿಯವರೆ, ಈಗ ಎಲ್ಲಾ ಕಡೆಗಳಲ್ಲಿ ಮುಚ್ಚಿ ಎಂದು ಹೇಳಿದ್ದೇನೆ. ಇದರ ಜೊತೆಗೆ ಇಸ್ಪೀಟ್ ಕ್ಲಬ್ಸ್‌ಗಳನ್ನು ಸಹ ಮುಚ್ಚಿ ಎಂದು ಹೇಳಿದ್ದೇನೆ. ಕೆಲವು ಇಸ್ಪೀಟ್ ಕ್ಲಬ್ಸ್‌ಗಳು ಕೋರ್ಟ್‌ಗೆ ಹೋಗಿ directions ತರುತ್ತಾರೆ. ಇವರು ಕೋರ್ಟಿನ guidelines

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅನ್ನು ಸರಿಯಾಗಿ ಅನುಸರಿಸುವುದಿಲ್ಲ. ಪೋಲೀಸ್‌ನವರು ಮನಸ್ಸು ಮಾಡಿದರೆ ಎಲ್ಲಾ ಕೂಡ ಮುಚ್ಚಬಹುದು.

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**ಮಾನ್ಯ ಸಭಾಪತಿಯವರೆ, ಸಮಾಜಕ್ಕೆ ಮಾರಕವಾದಂತಹ ಇಂತಹ ಹುಕ್ಕಾ ಬಾರ್‌ಗಳು ಏಕೆ ಬೇಕು? 'ಪಾನ ನಿರೋಧ' ಮಾಡಬೇಕೆಂಬ ಒಂದು ಚಿಂತನೆ ಇದೆ. ಆ ಚಿಂತನೆಯ ಬಗ್ಗೆ ಮಾನ್ಯ ಪುಟ್ಟಣ್ಣನವರು ಮಾತನಾಡುತ್ತಿದ್ದರು. ಹೆಣ್ಣು ಮಕ್ಕಳು ಆ ಬಾರ್‌ಗಳಿಗೆ ಬಂದು, ಹುಕ್ಕಾ ಸೇವನೆ ಮಾಡಿ ನೃತ್ಯ ಮಾಡುತ್ತಾರೆ ಎಂದು ಹೇಳುತ್ತಿದ್ದರು. ಅಂತಹ ಒಂದು ಹುಕ್ಕಾ ಬಾರ್ ಸಮಾಜಕ್ಕೆ ಅವಶ್ಯಕತೆಯಿದೆಯೇ? ಇದರಿಂದ ಸಮಾಜಕ್ಕೆ ಒಳ್ಳೆಯದಾಗುತ್ತದೆ. ಈ ತರಹದ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು ಮತ್ತು ಇದಕ್ಕೆ ಅನುಮತಿ ಕೊಡಬಾರದು.

**ಶ್ರೀ. ಟಿ.ಎ. ಶರವಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಆ ತರಹ ಏನಾದರೂ ನಡೆದರೆ ಅಲ್ಲಿರುವಂತಹ ಪೋಲೀಸ್ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಅವರ ಫೋಣೆ ಮಾಡಿ, ಅವರ ಮೇಲೆ ಕ್ರಮ ಕೈಗೊಂಡರೆ, ಇದಕ್ಕೆ ನಾವು ಕಡಿವಾಣ ಹಾಕಬಹುದು.

**ಶ್ರೀ ರಾಮಲಿಂಗಾರೆಡ್ಡಿ (ಗೃಹ ಸಚಿವರು):–** ಮಾನ್ಯ ಸಭಾಪತಿಯವರೆ, Video games, Live Bands, ಹುಕ್ಕಾ ಬಾರ್‌ಗಳು ಇವೆಲ್ಲಾ ಕೂಡ ನಮ್ಮ ಸಮಾಜವನ್ನು ಮತ್ತು ಅದರಲ್ಲಿ ವಿಶೇಷವಾಗಿ ಯುವಕರನ್ನು ಹಾಳು ಮಾಡುವಂತಹದು. ನಾನು ಗೃಹ ಸಚಿವನಾಗಿ ಬಂದು ಎಂಟು ದಿವಸಗಳಲ್ಲಿ ಡಿ.ಜಿ. ಮುಖಾಂತರ ಎಲ್ಲಾ ಎಸ್ಪಿಗಳು ಮತ್ತು ಕಮೀಷನರ್ಸ್‌ಗಳಿಗೂ ಸೂಚನೆ ನೀಡಿದ್ದೇನೆ. ಬಹುತೇಕ ನೂರಕ್ಕೆ ನೂರು ಭಾಗ ಎಲ್ಲಾ ರೇಂಜಸ್ ಮತ್ತು ಎಲ್ಲಾ ಕಮೀಷನರ್‌ಗಳನ್ನು ಭೇಟಿ ಮಾಡಿ ಸೂಚನೆ ನೀಡಿದ್ದೇನೆ. ಇದರಲ್ಲಿ ಮೂವತ್ತು ಅಂಶಗಳಿವೆ. ಇದೆಲ್ಲಾ ಕೂಡ ನಮ್ಮ Police Manual ನಲ್ಲಿ ಇರುವಂತಹದು. ಭಾರತೀಯ ದಂಡ ಸಂಹಿತೆಯಲ್ಲಿ ಎಲ್ಲವೂ ಕೂಡ ಬರುವಂತಹದು. ನಮ್ಮ ಪೋಲೀಸ್‌ನವರು ಮನಸ್ಸು ಮಾಡಿದರೆ ಇದನ್ನೆಲ್ಲಾ ಸುಧಾರಣೆ ಮಾಡಬಹುದು. ಇದರ ಜೊತೆಗೆ ಪೋಲೀಸರಿಗೆ ನಾವು ಮತ್ತು ನೀವು ಸಹಕಾರ ಕೊಡಬೇಕು. ಇದರ ಬಗ್ಗೆ ಕೆ.ಡಿ.ಪಿ ಮೀಟಿಂಗ್ಸ್‌ನಲ್ಲಿ ಕುಡಿಯುವ ನೀರು, ರಸ್ತೆ, ರೇಷನ್ ಕಾರ್ಡ್ ಮತ್ತು ಬೇರೆ ವಿಚಾರಗಳ ಬಗ್ಗೆ ಚರ್ಚೆ ಮಾಡುತ್ತೇವೆ. ಇದರ ಬಗ್ಗೆ ನಾವು ಹೆಚ್ಚು ಒತ್ತು ಕೊಡಬೇಕು. ಇತ್ತೀಚೆಗೆ ಪ್ರಕರಣಗಳು ಜಾಸ್ತಿಯಾಗುತ್ತಿದೆ. ಕಾರಣವೇನೆಂದರೆ, ಇದರ ಬಗ್ಗೆ ಹೆಚ್ಚು ಒತ್ತು ಕೊಟ್ಟು ಆಸಕ್ತಿ ವಹಿಸಬೇಕೆಂದು ಹೇಳಿದ ಮೇಲೆ ಪ್ರಕರಣಗಳು ಜಾಸ್ತಿಯಾಗುತ್ತಿದೆ. 'ಗಾಂಜಾ ಮುಕ್ತ' 'ಅಫೀಮು ಮುಕ್ತ'

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮತ್ತು Charas ಇದ್ಯಾವುದು ಕೂಡ ನಮ್ಮ ರಾಜ್ಯದಲ್ಲಿ ಸಿಗಬಾರದು. ಇದು ಸಿಕ್ಕಿದರೆ ತಾನೇ ಸೇದುವುದು. ಇದು ಸಿಗದೇ ಇರುವಂತಹ ಕೆಲಸವನ್ನು ನಾವು ಮತ್ತು ನೀವೆಲ್ಲರೂ ಕೂಡ ಸೇರಿ ಮಾಡಬೇಕು. ಈಗ ಇರುವಂತಹ ಕಾನೂನುಗಳು ಬಹಳ ಬಿಗಿಯಾಗಿದೆ. ಬಿಗಿಯಾಗಿರವ ಕಾನೂನುಗಳನ್ನು ನಮ್ಮ ಪೊಲೀಸ್ ಅಧಿಕಾರಿಗಳು ಬಹಳ ಸಮರ್ಪಕವಾಗಿ ನಿಭಾಯಿಸುತ್ತಿದ್ದಾರೆ. ಈಗ ಇರುವಂತಹ ಕಾನೂನುಗಳಲ್ಲಿ ನಾವು ಇದೆಲ್ಲವನ್ನೂ ನಿಯಂತ್ರಣ ಮಾಡಬಹುದು.

ಮಾನ್ಯ ಸಭಾಪತಿಯವರೆ, ರಾಜ್ಯ ಮಟ್ಟದಲ್ಲಿ Drugs & Narcotics ವಿಚಾರದಲ್ಲಿ Nodal Officer ಆಗಿ ADGP (Crimes) ಅವರು ಮಾಡುತ್ತಿದ್ದಾರೆ. Anti-Narcotics Cell functioning in CID under IGP level officer ಒಂದು ಮತ್ತು Special Anti-Narcotics Cell opened in Bangalore, Mangalore and Belagavi. June 6th of every year is observed as "Anti-Drug Day. The *sale of tobacco* products is prohibited within a radius of 100 yards of any educational institution. 100 ಮೀಟರ್‌ನ ಒಳಗಡೆ ಮಾರಾಟ ಮಾಡಬಾರದು ಎಂಬುದು ಸಹ ಇದೆ.

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಮಂಗಳೂರು ಜಿಲ್ಲೆಗೆ ಏನು ಪ್ರಾರಂಭ ಮಾಡುತ್ತೀರಿ ಎಂದು ಕೇಳಿದೆ.

**ಶ್ರೀ ರಾಮಲಿಂಗಾರೆಡ್ಡಿ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೆ, ಮಂಗಳೂರು ಇದು Special Anti-Narcotics Cells were opened in Mangalore, Bangalore and Belagavi. Thirty-eight Police Stations have been sanctioned only to look after Cyber Crimes and Narcotics cases. 36 ಪೊಲೀಸ್ ಸ್ಟೇಷನ್‌ಗಳು ಆಗಿದೆ. ನಮ್ಮ ರಾಜ್ಯ ಸರ್ಕಾರ ಮತ್ತು ಬಹಳ ಹಿಂದಿನಿಂದಲೂ ಈ ಚಟುವಟಿಕೆಗಳನ್ನು ತಡೆಯುತ್ತಾ ಬಂದಿದೆ. 106 ವರ್ಷಗಳಿಂದ ಸಾಧುಗಳು ಸಹ ಇದನ್ನು ತೆಗೆದುಕೊಳ್ಳುತ್ತಾರೆಂದು ಈಗಾಗಲೇ ಮಾನ್ಯ ಉಗ್ರಪನವರು ಹೇಳಿದ್ದಾರೆ. ಇದು ಈಗಾಗಲೇ ಹಳ್ಳಿಗಳಲ್ಲಿಯೂ ಸಹ ಬಂದಿದೆ. ಇತ್ತೀಚೆಗೆ ಇದು ಜಾಸ್ತಿಯಾಗಿದ್ದು, ಅದರಲ್ಲಿ ವಿಶೇಷವಾಗಿ ಯುವ ಜನಾಂಗದಲ್ಲಿ ಇದು ಜಾಸ್ತಿಯಾಗಿದೆ. ಇದನ್ನು ನಿಯಂತ್ರಣ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಬೇಕಾದರೆ, ಪೋಲೀಸ್ ಇಲಾಖೆಯವರು ಕಠಿಣವಾಗಿ ಕೆಲಸ ಮಾಡಿದರೆ ಅದನ್ನು ನಿಯಂತ್ರಣ ಮಾಡಬಹುದು. ನಾವು ಶೇಕಡ 100 ಕ್ಕೆ 100 ಭಾಗ ತೆಗೆಯುತ್ತೇವೆಂಬುದು ಸುಳ್ಳು.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಗಾಂಜಾ, ಅಫೀಮುಗಳು ಜೈಲಿನಲ್ಲಿ ಸಿಗುತ್ತದೆಂದು ಶ್ರೀಮತಿ ರೂಪಾ ಎನ್ನುವಂತಹ ಅಧಿಕಾರಿಗಳು ....

**ಸಭಾಪತಿಯವರು:–** ಈಗಾಗಲೇ ಮಾನ್ಯ ಸಚಿವರು ಹೇಳಿದ್ದಾರೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಬೆಂಗಳೂರಿನಲ್ಲಿ ನಡೆಯುವಂತಹದ್ದು ಮತ್ತು  ಗಾಂಜಾ, ಅಫೀಮು ಯಥೇಚ್ಛವಾಗಿ ಬೇರೆ ಬೇರೆ ಕಡೆಗಳ ಜೈಲಿಗಳಲ್ಲಿ ಸಿಗುತ್ತದೆಂಬ ಆರೋಪವನ್ನು ಹಲವಾರು ಬಾರಿ ಮಾಧ್ಯಮಗಳು ವರದಿ ಮಾಡಿದೆ. ದಯವಿಟ್ಟು, ಅದರ ಬಗ್ಗೆ ಹೇಳಬೇಕೆಂದು ತಮ್ಮನ್ನು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ರಾಮಲಿಂಗಾರೆಡ್ಡಿ (ಗೃಹ ಸಚಿವರು):–** ಮಾನ್ಯ ಸಭಾಪತಿಯವರೆ, ಜೈಲಿನಲ್ಲಿ ಮೊಬೈಲ್ ಸಹ ಉಪಯೋಗಿಸುತ್ತಾರೆ. ಡ್ರಗ್ಸ್ ಕೂಡ ಬಹಳ ಹಿಂದಿನಿಂದಲೂ ಕೂಡ ಇದೆ. ಇತ್ತೀಚೆಗೆ ತಮಿಳುನಾಡಿನ ಶ್ರೀಮತಿ ಶಶಿಕಲರವರ ಪ್ರಕರಣದ ನಂತರ ಸ್ವಲ್ಪ ನಿಯಂತ್ರಣವಾಗಿದೆ. ಅಲ್ಲಿರುವಂತಹ ಅಧಿಕಾರಿಗಳನ್ನು ಸಹ ವರ್ಗಾವಣೆ ಮಾಡಿದ್ದಾರೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಒಂದು ಉಲ್ಲೇಖ ಮಾಡಿದಿರಿ ಇಲ್ಲಿ ಒಂದು ವರದಿಯಿದೆ. ಅದು ಏನು ಹೇಳುತ್ತದೆ ಎಂದರೆ ಕಳೆದ ಎರಡು ವರ್ಷಗಳಲ್ಲಿ ಡ್ರಗ್ಸ್ ಪ್ರಕರಣದಲ್ಲಿ ಒಬ್ಬರಿಗೂ ಶಿಕ್ಷೆಯಾಗಿಲ್ಲ. ಎಲ್ಲಾ 30 ಆರೋಪಿಗಳು ಇದರಲ್ಲಿ ಖುಲಾಸೆಯಾಗಿದೆ. ಆಮೇಲೆ ಇದಕ್ಕೆ ಕಾರಣ ಕೊಡುತ್ತಾರೆ.

(ಮುಂದು...)

(966)14.11.2017/5.20/ಟಿಸಿಹೆಚ್–ವಿಕೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** (ಮುಂದು...)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"...ಹೈಕೋರ್ಟ್ ಆರೋಪಿಗಳನ್ನು ಖುಲಾಸೆಗೊಳಿಸಲು ಪ್ರಮುಖ ಕಾರಣವೇನೆಂದರೆ, ತನಿಖಾಧಿಕಾರಿಗಳು ತನಿಖೆಯಲ್ಲಿ ಎಸಗುವ ಲೋಪ ಮತ್ತು ಕಾಯ್ದೆಯ ಕಠಿಣ ಅಂಶಗಳು, ಮಾದಕ ದ್ರವ್ಯಗಳು ಮತ್ತು ಮಾನಸಿಕ ವ್ಯಸನ ಪದಾರ್ಥಗಳ ಕಾಯ್ದೆ 1985 ಅನ್ವಯ ಮಾದಕ ವಸ್ತುಗಳ ಮಾರಾಟ, ಶೇಖರಣೆ ಮತ್ತು ಸಾಗಣೆ ಮಾಡುವವರ ಮೇಲೆ ದಾಳಿ ನಡೆಸಿ, ಅವುಗಳನ್ನು ವಶಪಡಿಸಿಕೊಳ್ಳುವುದರಿಂದ ಹಿಡಿದು, ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸುವವರೆಗೆ ಕಡ್ಡಾಯವಾಗಿ ಅನುಸರಿಸಬೇಕಾದ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು ಕಟ್ಟುನಿಟ್ಟಾಗಿ ಪಾಲಿಸದೇ ಇರುವುದು" ಎಂದು ಒಂದು ವರದಿ ಇದೆ. ವಿಪರ್ಯಾಸವೇನೆಂದು ಹೇಳಿದರೆ, ಮಾದಕ ದ್ರವ್ಯಗಳ ಪ್ರಕರಣಗಳಲ್ಲಿ ಆರೋಪಿಗಳನ್ನು ಖುಲಾಸೆಗೊಳಿಸಿದ ಪ್ರತಿ ಭಾರಿಯೂ ಎನ್.ಡಿ.ಪಿ.ಎಸ್ ಕಾಯ್ದೆ ನಿಯಮಗಳನ್ನು ತನಿಖೆಯಲ್ಲಿ ಸೂಕ್ತವಾಗಿ ಪಾಲಿಸಬೇಕೆಂದು ಹೈಕೋರ್ಟ್ ಸೂಚಿಸುತ್ತಿದ್ದರೂ ಸಹ ತನಿಖಾಧಿಕಾರಿಗಳು ಪದೇ ಪದೇ ಎಡವುತ್ತಿದ್ದಾರೆ ಎಂದು ಒಂದು ವರದಿ ಬಂದಿದೆ. ನಾನು ಇದನ್ನು ಏತಕ್ಕೆ ಉಲ್ಲೇಖ ಮಾಡುತ್ತೇನೆಂದರೆ, ಅವರು ಹೇಳಿದಂತೆ, ಈ NDPS (Narcotic Drugs and Psychotropic Substances) Act ಏನಿದೆ, ಇದು ಬಹಳ strict ಆಗಿದೆ. ಆದರೆ ತನಿಖಾಧಿಕಾರಿಗಳು ಆ ಕಾಯ್ದೆಯನ್ನು ಅರ್ಥಮಾಡಿಕೊಂಡು ಅದಕ್ಕನುಗುಣವಾಗಿ ತಮ್ಮ ತನಿಖೆ ನಡೆಸದೇ ಇದ್ದರೆ, ಅವರು ಹೈಕೋರ್ಟ್‌ಗೆ ಹೋದಾಗ ಸಲೀಸಾಗಿ ಜಾಮೀನು ಪಡೆದುಕೊಂಡು ಹೊರಗಡೆ ಬರುತ್ತಿದ್ದಾರೆ. ಹಾಗಾಗಿ, ನನ್ನ ವಿನಂತಿ ಏನೆಂದರೆ, NDPS Act ಏನಿದೆ, ಅದನ್ನು ಇನ್ನಷ್ಟು ಬಿಗಿ ಮಾಡಬೇಕು. ಅದನ್ನು ಬಿಗಿಗೊಳಿಸಲು ಏನು ಮಾಡಬೇಕಿದೆಯೋ ಅದನ್ನು ಮಾಡಿ. ಈಗ ಇರುವುದನ್ನು ತನಿಖಾಧಿಕಾರಿಗಳು ಪರಿಗಣಿಸಿಕೊಂಡು, ಅದಕ್ಕೆ ಪೂರಕವಾಗಿ ಪ್ರಕರಣವನ್ನು build ಮಾಡದೇ ಇದ್ದರೆ, ತಾವು ದಾಳಿ ನಡೆಸಿ, ಆರೋಪಿಗಳನ್ನು ಪತ್ತೆ ಹಚ್ಚಿದರೂ ಸಹ ಏನೂ ಪ್ರಯೋಜನ ಆಗುವುದಿಲ್ಲ. ಅವರಿಗೆ ಜಾಮೀನು ಸಿಗುವುದಕ್ಕೆ ಕಾರಣಗಳೇನು ಎಂದು ನಾನು ಹೇಳುತ್ತಿದ್ದೇನೆ. ಮಾದಕ ವಸ್ತುಗಳ ಮಾರಾಟ, ಸಂಗ್ರಹ ಮತ್ತು ಸಾಗಣೆ ಪ್ರಕರಣಗಳು, ಜೀವಾವಧಿ ಶಿಕ್ಷೆ ಅಥವಾ ಗಲ್ಲು ಶಿಕ್ಷೆ ವಿಧಿಸುವಂತಹ ಪ್ರಕರಣಗಳಲ್ಲ. ಪ್ರಕರಣಗಳ ತನಿಖೆ ಪೂರ್ಣಗೊಂಡ ನಂತರ ಅದು ಕೋರ್ಟ್‌ಗೆ ಹೋಗುತ್ತದೆ. ಆರೋಪಿಯ ಕೃತ್ಯ ಸಾಬೀತುಪಡಿಸುವ ಸಾಕ್ಷ್ಯಾಧಾರಗಳ ಕೊರತೆ, ಕಡಿಮೆ ಪ್ರಮಾಣದ ಗಾಂಜಾ ಮಾರಾಟಕ್ಕೆ ಪ್ರಯತ್ನ ಮಾಡಿದ್ದು, ಇಂತಹ ಸಣ್ಣ ಸಣ್ಣ ಕಾರಣಗಳನ್ನು ತೆಗೆದುಕೊಂಡು ಕೋರ್ಟ್‌ಗೆ ಹೋದರೆ, ಅಲ್ಲಿ ಅವರಿಗೆ ಯಾವುದೇ ನ್ಯಾಯ ಸಿಗುವುದಿಲ್ಲ. ಅಲ್ಲಿಂದ ಅವರು ಸಲೀಸಾಗಿ ಹೊರಗಡೆ

ಬರುತ್ತಾರೆ. ಹಾಗಾಗಿ, ತನಿಖಾಧಿಕಾರಿಗಳಿಗೆ NDPS Actನ್ನು ಚೆನ್ನಾಗಿ ಅರ್ಥವಾಗುವಂತೆ ಮಾಡಿ, ಅದಕ್ಕೆ ಪೂರಕವಾಗಿ ಪ್ರಕರಣಗಳನ್ನು forward ಮಾಡುವುದಕ್ಕೆ ಹೇಳಬೇಕು.

**ಶ್ರೀ ಐವನ್ ಡಿ'ಸೋಜ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಬೆಂಗಳೂರು, ಮಂಗಳೂರು ಮತ್ತು ಶಿವಮೊಗ್ಗ ಈ ಮೂರು ಜಿಲ್ಲೆಗಳು ಒಂದು, ಎರಡು ಮತ್ತು ಮೂರನೆಯ ಸ್ಥಾನದಲ್ಲಿ ಇವೆ. ಈ ಸ್ಥಳಗಳಲ್ಲಿ ನೀವು ಏನಾದರೂ Special Squad ಅನ್ನು ಮಾಡಿ, ಇದನ್ನು ಕಂಟ್ರೋಲ್ ಮಾಡುವುದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ಎಂದು ನಾನು ತಮ್ಮಲ್ಲಿ ಕೇಳಬಯಸುತ್ತೇನೆ. ನಮ್ಮ ನಾರ್ಮಲ್ ಪೋಲೀಸರಿಂದ ಇಂತಹ ಕೆಲಸವನ್ನು ಮಾಡಲು ಆಗುವುದೇ ಇಲ್ಲ. ಏಕೆಂದರೆ, we have seen. ಈಗ crime rate ಹೇಗಿದೆ ಎಂದರೆ; 2015ರಲ್ಲಿ 49 ಪ್ರಕರಣಗಳು ದಾಖಲಾಗಿವೆ, 2016ರಲ್ಲಿ 239 ಪ್ರಕರಣಗಳು ದಾಖಲಾಗಿವೆ, 2017ರಲ್ಲಿ 246 ಪ್ರಕರಣಗಳು ದಾಖಲಾಗಿವೆ ಎಂದರೆ, the crime rate has totally gone up. ಹಿಂದೆ ಪೇಪರ್‌ನಲ್ಲಿ ಹೊಡೆದಾಟ ಎಂದು ವರದಿ ಆಗುತ್ತಿತ್ತು. ಈಗ ಹೊಡೆದಾಟ ಎಂದು ಬರುವುದಿಲ್ಲ. ಅದರ ಬದಲಿಗೆ ಇಂತಹ ಕಡೆ ಗಾಂಜಾ ಮಾರಾಟ ಮತ್ತು ಇಂತಹ ಕಡೆ ಕಳ್ಳ ಸಿಕ್ಕಿಬಿದ್ದ ಎಂದು ಬರಲು ಪ್ರಾರಂಭವಾಗಿದೆ. ಇದು ಒಂದು challenge ಆಗಿದೆ. ಮಂಗಳೂರಿನಲ್ಲಿ ಸುಮಾರು 2 ಲಕ್ಷ ವಿದ್ಯಾರ್ಥಿಗಳು ಇದ್ದಾರೆ. ಸನ್ಮಾನ್ಯ ಸಚಿವರೇ, ಇದನ್ನು ತಾವು ಹೀಗೆಯೇ ಬಿಟ್ಟರೆ ಇದು ಎಲ್ಲಾ ಕಡೆ ಹರಡುತ್ತದೆ. ಇದನ್ನು ತಡೆಯಲು ಮಂಗಳೂರು ಜಿಲ್ಲೆಗೆ ಒಂದು Special Squad ಮಾಡುವುದು, ಅಲ್ಲಿಗೆ ಹೆಚ್ಚಿನ ಪೋಲೀಸ್‌ನ್ನು ಕೊಡುವುದು ಅಗತ್ಯವಿದೆ ಮತ್ತು Special Courtಗಳು ಇದನ್ನು ಒಂದು ವರ್ಷದೊಳಗೆ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಆ ಆಕ್ಟ್‌ನಲ್ಲಿಯೇ ಇದೆ. ಆದರೆ ಇಂತಹ ಪ್ರಕರಣಗಳಲ್ಲಿ conviction ಆಗುವುದಕ್ಕೆ 3-4 ವರ್ಷಗಳ ಕಾಲ ತೆಗೆದುಕೊಳ್ಳಲಾಗುತ್ತಿದೆ. ಆದರೆ, conviction rate ಇದೆ; 2015ರಲ್ಲಿ 5 ಪ್ರಕರಣಗಳಲ್ಲಿ conviction ಆಗಿದೆ. 2016ರಲ್ಲಿ 49 ಪ್ರಕರಣಗಳಲ್ಲಿ conviction ಆಗಿದೆ. 2017ರಲ್ಲಿ 21 ಪ್ರಕರಣಗಳಲ್ಲಿ conviction ಆಗಿದೆ. Conviction rate ಮಧ್ಯದಲ್ಲಿ ಜಾಸ್ತಿ ಆಗಿದ್ದು, ಪುನಃ ಕಡಿಮೆ ಆಗುವುದಕ್ಕೆ ಪ್ರಾರಂಭವಾಗಿದೆ. ಹಾಗಾಗಿ ಮಾನ್ಯ ಸಚಿವರೇ, ಈ ಬಗ್ಗೆ ಬೆಳಕು ಚೆಲ್ಲಬೇಕೆಂದು ತಮ್ಮಲ್ಲಿ ಕೇಳುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ರಾಮಲಿಂಗಾ ರೆಡ್ಡಿ (ಗೃಹ ಸಚಿವರು):–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದ ಮೇಲೆ ಪ್ರಕರಣಗಳು ದಾಖಲಾಗಿರುವುದು ಸ್ವಲ್ಪ ಜಾಸ್ತಿಯಾಗಿದೆ. ಆಮೇಲೆ ಗಾಂಜ ಮತ್ತಿತರ ವಸ್ತುಗಳು ನಮ್ಮ ರಾಜ್ಯದಲ್ಲಿ ಸಿಗಬಾರದು. ನಾವು ಸಿಗಬಾರದು ಎಂದು ಹೇಳುತ್ತೇವೆ. ಆದರೆ, ಅದು ಬೇರೆ ರಾಜ್ಯಗಳಾದ ಒರಿಸ್ಸಾ, ತಮಿಳುನಾಡು ಮತ್ತು ಆಂಧ್ರಪ್ರದೇಶದಿಂದ ಬರುತ್ತಿದೆ. ನಮ್ಮ ರಾಜ್ಯದಲ್ಲಿ ಚಾಮರಾಜನಗರ ಜಿಲ್ಲೆಯಿಂದಲೂ ಸಹ ಬರುತ್ತಿದೆ. ಮೊದಲನೆಯದು ಹೀಗೆ ಬರುವುದನ್ನು ನಾವು ತಡೆಯಬೇಕು. ಎರಡನೆಯದು, ಯಾರು ಇದನ್ನು ನಮ್ಮ ರಾಜ್ಯದಲ್ಲಿ ಬೆಳೆಯುತ್ತಿದ್ದಾರೆ ಅಂತಹ ರೈತರ ಮೇಲೂ ಕೂಡ ಗೂಂಡಾ ಆಕ್ಟ್ ಅಥವಾ ಎನ್‌ಡಿಪಿಎಸ್ ಆಕ್ಟ್‌ನಡಿಯಲ್ಲಿ ಪ್ರಕರಣ ದಾಖಲಿಸಲು ಕೂಡ ಹೇಳಿದ್ದೇನೆ. ಯಾರು ಗಾಂಜಾವನ್ನು ಮಾರಾಟ ಮಾಡುತ್ತಿದ್ದಾರೆ ಮತ್ತು ಅದರ ಬಳಕೆದಾರರು ಅಂದರೆ ಯಾರು ಇದನ್ನು ಸೇದುತ್ತಾರೆ ಅವರ ಮೇಲೂ ಕೂಡ ಪ್ರಕರಣಗಳನ್ನು ದಾಖಲಿಸಲು ಹೇಳಿದ್ದೇನೆ. ವಿದ್ಯಾರ್ಥಿಗಳು ಅದನ್ನು ಬಳಸುತ್ತಿದ್ದರೆ, ಆ ವಿದ್ಯಾರ್ಥಿಗಳ ತಂದೆ–ತಾಯಿಗಳನ್ನು ಕರೆಸಿ, ಈ ರೀತಿ ಆಗಿದೆಯೆಂದು ಹೇಳಿದರೆ, ಅವರು ಕೊನೆಯಪಕ್ಷ ಮಕ್ಕಳಿಗೆ ಬುದ್ಧಿವಾದ ಹೇಳಬಹುದು. ಅದನ್ನು ಸಹ ನಾವು ಮಾಡಬಹುದು. ಇದನ್ನು ಸ್ವಲ್ಪ ಬಿಗಿಯಾಗಿ ಮಾಡಿ ಎಂದು ಹೇಳಿದ್ದೇನೆ. ಬೆಂಗಳೂರು, ಮಂಗಳೂರು ಶಿವಮೊಗ್ಗ ಮತ್ತು ಮೈಸೂರು ಈ ನಾಲ್ಕು ಸ್ಥಳಗಳಲ್ಲಿ ಈ ಪ್ರಕರಣಗಳು ಸ್ವಲ್ಪ ಜಾಸ್ತಿ ಇದೆ. ಇದಕ್ಕೆ ವಿಶೇಷ ಗಮನಹರಿಸಿ ಎಂದು ಹೇಳುತ್ತೇನೆ. ಎನ್.ಡಿ.ಪಿ.ಎಸ್ ಆಕ್ಟ್‌ನಡಿಯಲ್ಲಿ ಇಂತಹ ಪ್ರಕರಣಗಳನ್ನು professional ಆಗಿ ತನಿಖೆ ಮಾಡಿದರೆ, ಶಿಕ್ಷೆ ಕೂಡ ಜಾಸ್ತಿ ಆಗುತ್ತದೆ. ನಮಗೆ ಸರಿಯಾದ ಮಾಹಿತಿ ಇಲ್ಲದಿದ್ದರೆ ಏನಾಗುತ್ತದೆ ಎಂದರೆ, ಸಾಮಾನ್ಯವಾಗಿ ಸರಿಯಾಗಿ ಮಾಹಿತಿಯನ್ನು ತನಿಖಾಧಿಕಾರಿಗಳು ಸರ್ಕಾರಿ ಅಭಿಯೋಜಕರಿಗೆ ಕೊಡದಿದ್ದರೆ, ಅಲ್ಲಿ ಪ್ರಕರಣಗಳು ಬಿದ್ದು ಹೋಗುತ್ತವೆ. ಇದನ್ನು professional ಆಗಿ ತನಿಖೆ ಮಾಡಿ ಎಂದು insist ಮಾಡುತ್ತೇನೆ. ಈಗ ನಮ್ಮ ರಾಜ್ಯದಲ್ಲಿ ಹೊಸದಾಗಿ ೩೮ ಪೊಲೀಸ್ ಠಾಣೆಗಳನ್ನು ಅಂದರೆ, Cybercrime and Narcotics ವಿಭಾಗಗಳಲ್ಲಿ ಪ್ರಾರಂಭ ಮಾಡಿದ್ದೇವೆ. ಈ ರೀತಿಯ ಪ್ರಕರಣಗಳನ್ನು ಕಡಿಮೆ ಮಾಡಲು ನಾವು ಎಲ್ಲಾ ಪ್ರಯತ್ನ ಮಾಡುತ್ತೇವೆ. ನಾವು ಅದನ್ನು ಸಂಪೂರ್ಣವಾಗಿ ಕಡಿಮೆ ಮಾಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ಅದನ್ನು ಕಂಟ್ರೋಲ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ನಾನು ಈ ಸದನದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಧನ್ಯವಾದಗಳು. ಈ ವಿಷಯದ ಮೇಲೆ ಚರ್ಚೆ ಮುಕ್ತಾಯವಾಗಿದೆ. ಈಗ ಮಾನ್ಯ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನರವರ ವಿಷಯದ ಮೇಲೆ ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳಲಾಗುವುದು.

**ಆ)ವಿಷಯ:– ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಕಾಮಗಾರಿಗಳು ನಿಗಧಿತ ಕಾಲಮಿತಿಯೊಳಗೆ ಪೂರ್ಣಗೊಳ್ಳದೆ ಇರುವುದರಿಂದ, ಸಾರ್ವಜನಿಕರಿಗೆ ಕುಡಿಯುವ ನೀರಿನ ತೊಂದರೆ ಉಂಟಾಗಿರುವ ಬಗ್ಗೆ.**

––––

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬಹು ಗ್ರಾಮ ಕುಡಿಯುವ ನೀರಿನ ಯೋಜನೆ ಬಹಳ ಮಹತ್ವಾಕಾಂಕ್ಷೆಯಾಗಿರತಕ್ಕಂಥ ಯೋಜನೆಯಾಗಿದ್ದು, ಗ್ರಾಮೀಣ ಪ್ರದೇಶದಲ್ಲಿರತಕ್ಕಂಥ ಗ್ರಾಮಗಳಿಗೆ ವಿಶೇಷವಾಗಿ ನದಿ ಮೂಲಗಳಿಂದ ಕುಡಿಯುವ ನೀರನ್ನು ಸರಬರಾಜು ಮಾಡತಕ್ಕಂಥ ಯೋಜನೆಯಾಗಿದೆ. ಈ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಕಾಮಗಾರಿಗಳು ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳ್ಳದೆ ಇರುವುದರಿಂದ, ಸಾರ್ವಜನಿಕರಿಗೆ ಕುಡಿಯುವ ನೀರಿನ ತೊಂದರೆ ಉಂಟಾಗಿರುವ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

**ಶ್ರೀ ಎಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನರವರು ಸರ್ಕಾರದ ಗಮನ ಸೆಳೆದು ಬಹು ಗ್ರಾಮ ಕುಡಿಯುವ ನೀರಿನ ಯೋಜನೆಯ ಕಾಮಗಾರಿಗಳ ಬಗ್ಗೆ ವಿವರವನ್ನು ಬಯಸಿದ್ದಾರೆ.

**(ಹೇಳಿಕೆ ಲಗತ್ತಿಸಿದೆ.)**

**(ಈ ಹಂತದಲ್ಲಿ Panel of Chairman ನಲ್ಲಿ ಒಬ್ಬರಾದ ಶ್ರೀ ಡಿ.ಎಸ್.ವೀರಯ್ಯರವರು ಸಭಾಪೀಠದಲ್ಲಿ ಉಪಸ್ಥಿತರಾದರು)**

**(ಮುಂದು…)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(967)14.11.2017/5.30/ಎಂ.ಎಂ/ವಿಕೆ**

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ತಾವು ಉತ್ತರವನ್ನು ಕೊಟ್ಟಿರುವುದರಿಂದ ವಿವರಣೆಯನ್ನು ಹೇಳಬೇಕಾದ

ಅವಶ್ಯಕತೆ ಇಲ್ಲ. ಬೆಳಗಾವಿ ಜಿಲ್ಲೆಯಲ್ಲಿರುವ ಕೆಲವೊಂದು ಕುಂಠಿತಗೊಂಡಿರುವ ಯೋಜನೆಗಳ ಬಗ್ಗೆ ತಮಗೆ ಬೆಳಕನ್ನು ಚೆಲ್ಲಬಯಸುತ್ತೇನೆ. ಅದರ ಬಗ್ಗೆ ತಾವು ಸ್ಪಷ್ಟೀಕರಣವನ್ನು ಕೊಡಬೇಕೆನ್ನುವುದು ನನ್ನ ಬೇಡಿಕೆಯಾಗಿದೆ. ಬಹಳಷ್ಟು ಯೋಜನೆಗಳನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸುವುದಕ್ಕೆ ತಾವು ಪ್ರಯತ್ನ ಮಾಡಿದ್ದೀರಿ. ಆದರೆ ಆ ಯೋಜನೆಗಳಲ್ಲಾಗಿರುವ ನ್ಯೂನತೆಗಳ ಬಗ್ಗೆ ಮಾನ್ಯ ಸಭಾಪತಿಯವರ ಮುಖಾಂತರ ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ರಾಜ್ಯವನ್ನು ಗಮನದಲ್ಲಿಟ್ಟುಕೊಂಡು ಕೇಳಿದ್ದಾರೆ. ಅದಕ್ಕೆ ನಾನು ಉತ್ತರವನ್ನು ಕೊಟ್ಟಿದ್ದೇನೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಹೌದು, ನಾನು ರಾಜ್ಯವನ್ನು ಗಮನದಲ್ಲಿಟ್ಟುಕೊಂಡು ಹೇಳಿದ್ದೆನು. ನಿಮ್ಮ ಉತ್ತರವು ತೃಪ್ತಿಕರವಾಗಿದೆ. ಅದರ ಬಗ್ಗೆ ನಾನು ಏನನ್ನು ಹೇಳಲು ಹೋಗುವುದಿಲ್ಲ.

**ಶ್ರೀ ಹೆಚ್.ಕೆ. ಪಾಟೀಲ್:-** ಮಾನ್ಯ ಸಭಾಪತಿಯವರೇ, ಉತ್ತರ ತೃಪ್ತಿಕರವಾಗಿದ್ದರೆ, ನಿಮ್ಮ ಜಿಲ್ಲೆಯ ವಿಚಾರ ಅಥವಾ ಯಾವುದಾದರೂ ಯೋಜನೆಗಳ ಬಗ್ಗೆ ವಿವರ ಕೇಳುವುದಿದ್ದರೆ ಕೇಳಿ ಸಾಧ್ಯವಾದರೆ ಅದಕ್ಕೆ ಉತ್ತರವನ್ನು ಹೇಳುತ್ತೇನೆ. ಇಲ್ಲಿ ನಮ್ಮ ಇಲಾಖೆಯ ಹಿರಿಯ ಅಧಿಕಾರಿಗಳು ಇದ್ದಾರೆ. ಒಂದು ವೇಳೆ ಸಾಧ್ಯವಾಗದೇ ಹೋದರೆ ನಂತರ ತಮಗೆ ಉತ್ತರವನ್ನು ಒದಗಿಸುತ್ತೇನೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ನಿರ್ದಿಷ್ಟವಾಗಿರುವುದನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ನಂತರ ತಾವು ಉತ್ತರವನ್ನು ಕೊಡಿ.

**ವೈಸ್‌ಛೇರ್ಮನ್:-** ಮಾನ್ಯ ಕವಟಗಿಮಠರವರೇ, ನಿರ್ದಿಷ್ಟವಾಗಿ ನಿಮ್ಮ ಜಿಲ್ಲೆಗೆ ಸಂಬಂಧಪಟ್ಟಿದ್ದು ಏನಾದರೂ ಇದ್ದರೆ ಅಷ್ಟನ್ನು ಮಾತ್ರ ಕೇಳಿ. ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಕಬ್ಬೂರು ಯೋಜನೆಗೆ ಸಂಬಂಧಪಟ್ಟಂತೆ ಕೆ.ಡಿ.ಪಿ ಸಭೆಯಲ್ಲಿಯು ಕೂಡ ಹಲವಾರು ಬಾರಿ ಈ ವಿಷಯವನ್ನು ಆ ಭಾಗದ ಶಾಸಕರು ಮತ್ತು ನಾನು ಪ್ರಸ್ತಾಪ ಮಾಡಿದ್ದೆವು. ಇದೇ ವಿಷಯವಾಗಿ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರು ಆ ಸ್ಥಳಕ್ಕೆ ಭೇಟಿ ಕೊಟ್ಟಿದ್ದರು. ಆದರೆ ಇದುವರೆವಿಗೂ ಆ ಯೋಜನೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಂಪೂರ್ಣವಾಗಿ ಅನುಷ್ಠಾನಗೊಂಡಿಲ್ಲ ಎನ್ನುವ ಖೇದ ನನಗಿದೆ. ಚಿಕ್ಕೋಡಿ ತಾಲ್ಲೂಕಿನ ಕಬ್ಬೂರು ಮತ್ತು ಒಂಭತ್ತು ಗ್ರಾಮಗಳಿಗೆ ಆ ಯೋಜನೆ ಇದೆ. ಸುಮಾರು ಮೂರು ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ವೆಚ್ಚದಲ್ಲಿ ಈ ಯೋಜನೆ ಕಾರ್ಯಗತಗೊಂಡಿದೆ. ಆದರೆ ಇವತ್ತಿಗೂ ಕೂಡ ಸಂಪೂರ್ಣವಾಗಿ ಎಲ್ಲಾ ಗ್ರಾಮಗಳಿಗೆ ಕುಡಿಯುವ ನೀರು ತಲುಪುತ್ತಿಲ್ಲ. ಆ ಯೋಜನೆಯ ಬಗ್ಗೆ ತಾವು ದಯಮಾಡಿ ಸ್ಪಷ್ಟೀಕರಣವನ್ನು ಕೊಡಬೇಕು. ಇದು ಬಹುಮುಖ್ಯವಾಗಿ ಬೆಳಗಾವಿ ಜಿಲ್ಲೆಯ ಜೈನಾಪುರ್ ಮತ್ತು ಇತರೆ 13 ಗ್ರಾಮಗಳ ಕುಡಿಯುವ ನೀರಿನ ಯೋಜನೆಯಾಗಿದ್ದು ಕೃಷ್ಣಾ ನದಿಯಿಂದ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಈ ವಿಷಯ ಕೂಡ ಬೆಳಗಾವಿ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಬಹುಮುಖ್ಯವಾಗಿ ಚರ್ಚೆಗೆ ಬಂದಿತ್ತು. ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಇದಕ್ಕೂ ಕೂಡ ಸ್ಥಳ ಪರಿಶೀಲನೆಗೆ ಬಂದಿದ್ದರು. ಆ ಯೋಜನೆಯ ಮೂಲಕ ಸಂಪೂರ್ಣವಾಗಿ ಎಲ್ಲಾ ಗ್ರಾಮಗಳಿಗೆ ಶಾಶ್ವತವಾಗಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯನ್ನು ಮುಂದಿನ 25 ವರ್ಷಗಳಿಗೆ ನಿಯೋಜನೆ ಮಾಡಲಾಗುತ್ತದೆ. ದಿನಂಪ್ರತಿ ಅಲ್ಲಿರುವಂತಹ ಜನ-ಜಾನುವಾರುಗಳು ಮತ್ತು ಅಲ್ಲಿ ವಾಸಿಸುವ ಜನಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು ಆ ಯೋಜನೆಯನ್ನು ರೂಪಿಸಲಾಗುತ್ತದೆ. ಆ ಯೋಜನೆಯಲ್ಲಿ ಸುಮಾರು 25 ಕಿ.ಮೀ.ಗಳ ದೂರದಿಂದ ಕೃಷ್ಣಾ ನದಿಯಿಂದ ನೀರನ್ನು ಎತ್ತಲಾಗುತ್ತದೆ. ಬಹಳ ವರ್ಷಗಳಿಂದ ಕುಡಿಯುವ ನೀರಿನ ತೊಂದರೆಯನ್ನು ಅನುಭವಿಸುತ್ತಿರುವ ಚಿಕ್ಕೋಡಿ ತಾಲ್ಲೂಕಿನ ನಾಗರಮುನ್ನೋಳಿ ಹೋಬಳಿಯ ಸುಮಾರು 13 ಗ್ರಾಮಗಳಿಗೆ ಹೋಗಿ ಕೇಳಿದಾಗ pipeline fail ಆಗಿದೆ ಎಂಬ ಉತ್ತರವನ್ನು ಅಧಿಕಾರಿಗಳು ಕೊಟ್ಟಿದ್ದಾರೆ.

ಅವರು ಹೇಳುವುದೇನೆಂದರೆ, ಹೊಸ pipeline ಅನ್ನು ಅಳವಡಿಸುವ ಸಂದರ್ಭದಲ್ಲಿ ಹೊಸದಾಗಿ ಕಾರ್ಯ ಯೋಜನೆಯೊಂದನ್ನು ನಾವು ಅನುಷ್ಟಾನಗೊಳಿಸಿದ್ದೇವೆ. ಆದರೆ ಆ pipeline fail ಆಗಿದೆ ಎಂದು ಸಂಬಂಧಪಟ್ಟ ಅಧಿಕಾರಿಗಳು ಮಾನ್ಯ ಸಚಿವರಿಗೂ ಉತ್ತರ ನೀಡಿದ್ದಾರೆ. ಒಂದು ಯೋಜನೆಯನ್ನು ರೂಪಿಸುವ ಅಧಿಕಾರಿಗಳು ಮುಂದಿನ 25 ವರ್ಷಗಳಿಗಾಗಿ ರೂಪಿಸಿರುವ ಯೋಜನೆಯ pipeline fail ಆಗಿದೆ ಮತ್ತೊಮ್ಮೆ ಅದಕ್ಕೆ ಬೇರೆ ಯೋಜನೆಯೊಂದನ್ನು ರೂಪಿಸುತ್ತೇವೆ ಎಂಬ ಉತ್ತರವನ್ನು ಕೊಟ್ಟಾಗ, ಕಳೆದ 10-15 ವರ್ಷಗಳಿಂದ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಿಂದ ಕುಡಿಯುವ ನೀರಿನ ಬವಣೆ ತಪ್ಪುತ್ತದೆ ಎಂಬ ನಿರೀಕ್ಷೆಯಲ್ಲಿದ್ದ ಜನರಿಗೆ ನಿರಾಸೆಯಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಹೆಚ್.ಕೆ. ಪಾಟೀಲ್**:- ಮಾನ್ಯ ಕವಟಗಿಮಠರವರೆ, ಆ ಗ್ರಾಮ ಯಾವುದು?

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ**:- ಮಾನ್ಯ ಸಚಿವರೇ, ಜೈನಾಪುರ್ ಮತ್ತು ಇತರೆ 13 ಹಳ್ಳಿಗಳು. ದಯವಿಟ್ಟು ತಾವು ಇದರ ಬಗ್ಗೆ ಗಮನಹರಿಸಿ ತಮ್ಮ ಇಲಾಖೆಯ ಅಧಿಕಾರಿಗಳಿಂದ ಉತ್ತರವನ್ನು ಒದಗಿಸಿಕೊಡಬೇಕು ಮತ್ತು ಕಬ್ಬೂರ್ ಮತ್ತು ಇತರೆ ಒಂಭತ್ತು ಗ್ರಾಮಗಳ ಬಗ್ಗೆ ಇರುವ ಎರಡು ಸ್ಕೀಂ ಗೆ ಜಿಲ್ಲಾ ಉಸ್ತುವಾರಿ ಸಚಿವರು ಭೇಟಿ ಕೊಟ್ಟಿದ್ದಾರೆ. ಆದ್ದರಿಂದ ತಾವು ಅಧಿಕಾರಿಗಳಿಗೆ ನಿರ್ದೇಶನ ನೀಡಿ ಆದಷ್ಟು ಬೇಗ ಆ ಯೋಜನೆಗಳನ್ನು ಮುಗಿಸಿ ಮತ್ತು ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸಿಕೊಡಬೇಕೆಂದು ಕೋರುತ್ತೇನೆ. ನಾನು ಹೇಳುವುದೇನೆಂದರೆ, ಎಲ್ಲೋ ಒಂದು ಕಡೆ ಅಲ್ಲಿ ಅವ್ಯವಹಾರಗಳಾಗುತ್ತಿವೆ ಎಂಬ ಶಂಕೆ ಇದೆ. ಅದೇನೆಂದರೆ, ಆ ಹೋಬಳಿಗೆ ಪ್ರತಿವರ್ಷವು ಟ್ಯಾಂಕರ್ ಮೂಲಕ ಕುಡಿಯುವ ನೀರನ್ನು ಒದಗಿಸುತ್ತಾರೆ. ಸ್ಕೀಂ ಮುಗಿದರೆ ಟ್ಯಾಂಕರ್‌ನಿಂದ ನೀರು ಕೊಡುವುದು ತಪ್ಪುತ್ತದೆ. ಇಲ್ಲಿ ಟ್ಯಾಂಕರ್ ಮತ್ತು ಅಲ್ಲಿರುವಂತಹ ಅಧಿಕಾರಿಗಳ ನಡುವೆ link ಇರಬಹುದು ಎಂಬ ಒಂದು ಭಾವನೆ ನನಗಿದೆ. ಸ್ಕೀಂ ಮುಗಿಯಬೇಕಾಗಿದ್ದರೂ ಇಲ್ಲಿಯವರೆಗೂ ಸ್ಕೀಂ ಮುಗಿದಿಲ್ಲ. ಜಿಲ್ಲಾ ಉಸ್ತುವಾರಿ ಸಚಿವರು ಭೇಟಿ ನೀಡಿದರೂ ಕೂಡ ಕಾರ್ಯಯೋಜನೆಯ ಪ್ರಕಾರ ದಿನಂಪ್ರತಿ ಅಲ್ಲಿರುವ ಗ್ರಾಮಸ್ಥರಿಗೆ ನೀರು ಸರಬರಾಜು ಆಗಬೇಕು, ಆದರೆ ಕುಡಿಯುವ ನೀರು ಸರಬರಾಜು ಆಗುತ್ತಿಲ್ಲ. ದಯವಿಟ್ಟು ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಂದ ಸ್ಪಷ್ಟೀಕರಣವನ್ನು ತಾವು ದೊರಕಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ, ಚಿಕ್ಕೋಡಿ ತಾಲ್ಲೂಕಿನ ಖಡಕಲಾಟ್ ಮತ್ತು ಇತರ ಏಳು ಗ್ರಾಮಗಳದ್ದು ಹಳೆಯ ಯೋಜನೆಯಾಗಿದ್ದು, ಸಂಪೂರ್ಣವಾಗಿ ಎಲ್ಲಾ ಏಳು ಗ್ರಾಮಗಳಿಗೆ ದಿನಂಪ್ರತಿ ಕುಡಿಯುವ ನೀರು ತಲುಪುತ್ತಿಲ್ಲ. ಇದರ ಬಗ್ಗೆ ಕೂಡ ತಾವು ಮಾಹಿತಿಯನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ವಿನಂತಿಸುತ್ತಿದ್ದೇನೆ. ನಾನು ಕಳೆದ ಸದನದಲ್ಲಿ ಚಿಕ್ಕೋಡಿ ತಾಲ್ಲೂಕಿನ ಮಾಂಜರಿ ಗ್ರಾಮಕ್ಕೆ ಶಾಶ್ವತ ಕುಡಿಯುವ ನೀರಿನ ಯೋಜನೆ ಮಂಜೂರಾಗಿದೆ. ಅಲ್ಲಿ ಅಳವಡಿಸಿರುವಂತಹ water filter, that doesn't work at all. ಫಿಲ್ಟರ್‌ನಲ್ಲಿ ಪಾಚಿ ಕಟ್ಟಿರುವುದರ ಬಗ್ಗೆ ಫೋಟೋವನ್ನು ಈ ಸದನದಲ್ಲಿ ತೋರಿಸಿದ್ದೇನೆ. ಆ ಫಿಲ್ಟರ್‌ನಲ್ಲಿ ಕೃಷ್ಣಾ ನದಿಯ ನೀರು ಫಿಲ್ಟರ್ ಆಗುವುದೇ ಇಲ್ಲ. ಅದರ ಬಗ್ಗೆ ಅಧಿಕಾರಿಗಳನ್ನು ಕೇಳಿದರೆ, ಫಿಲ್ಟರನ್ನು ಕೊಡಿಸಿದ್ದೇವೆ ಆದರೆ ಆ system work ಆಗುವುದಿಲ್ಲ ಎಂಬ ಉತ್ತರ ಕೊಡುತ್ತಾರೆ. ಆದ್ದರಿಂದ ದಯವಿಟ್ಟು ತಾವು ಇದನ್ನು ಗಂಭೀರವಾಗಿ ಪರಿಗಣಿಸಬೇಕು ಮತ್ತು ಇದಕ್ಕೆ ಸಮರ್ಪಕವಾದ ಉತ್ತರವನ್ನು ಮಾನ್ಯ ಸಚಿವರಿಂದ ಬಯಸುತ್ತೇನೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ವೈಸ್‌ಛೇರ್ಮನ್:-** ಮಾನ್ಯ ಸಚಿವರು ಉತ್ತರ ಕೊಡುವುದಕ್ಕೆ ಮೊದಲು ಮಾನ್ಯ ಸದಸ್ಯರಾದ ಶ್ರೀಮತಿ ಮೋಟಮ್ಮರವರು ಈ ವಿಷಯದ ಬಗ್ಗೆ ಮಾತನಾಡಬಯಸುತ್ತಾರೆ.

**ಶ್ರೀಮತಿ ಮೋಟಮ್ಮ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬಹುಗ್ರಾಮ ಕುಡಿಯುವ ನೀರಿನ ಯೋಜನೆಗೆ ಸಂಬಂಧಿಸಿದಂತೆ ಜನರಲ್ ಆಗಿ ಮಾತನಾಡಬಯಸುತ್ತೇನೆ.

**ಶ್ರೀ ಹೆಚ್.ಕೆ. ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಕವಟಗಿಮಠರವರು ಬೆಳಗಾವಿ ಜಿಲ್ಲೆಗೆ ಸಂಬಂಧಿಸಿದಂತೆ ಕೇಳಿದ್ದಾರೆ ಅದನ್ನು ಹೇಳಿ ಮುಗಿಸಿಬಿಡುತ್ತೇನೆ ನಂತರ ಮಾನ್ಯ ಸದಸ್ಯರಾದ ಶ್ರೀಮತಿ ಮೋಟಮ್ಮರವರು ಏನನ್ನು ಕೇಳಬೇಕೋ ಅದನ್ನು ಕೇಳಬಹುದು. ಮಾನ್ಯ ಕವಟಗಿಮಠರವರು ಕಳೆದ ಸದನದಲ್ಲಿ ನಾಗರಮುನ್ನೋಳಿ ಮತ್ತು ಹತ್ತು ಗ್ರಾಮಗಳ ಯೋಜನೆಯ ಬಗ್ಗೆ ಕೇಳಿದ್ದರು. ನನಗೆ ಅಧಿಕಾರಿಗಳು ವರದಿಯಲ್ಲಿ ಕೊಟ್ಟಿರುವಂತಹ ವಿವರದಲ್ಲಿ ಮೂರು ತಿಂಗಳುಗಳ ಹಿಂದೆ ಇದನ್ನು ಪೂರ್ಣಗೊಳಿಸಿದ್ದಾರೆ. ಎಲ್ಲಾ ಹಳ್ಳಿಗಳಿಗೂ ನೀರನ್ನು ಒದಗಿಸುತ್ತಿದ್ದಾರೆ. ಇದು ಒಂಭತ್ತು ವರ್ಷಗಳ ಹಳೆಯ ಯೋಜನೆಯಾಗಿದ್ದು, ಜೈನಾಪುರ್ ಮತ್ತು 15 ಗ್ರಾಮಗಳಿಗೆ O & M (Operations and Maintenance) contract ಸಹಿತ ಒದಗಿಸಲಾಗಿದೆ. ಅಂದು ಮಾನ್ಯ ಸದಸ್ಯರು ಒ & ಎಂ ಅನ್ನು ಯಾರಿಗೂ ವಹಿಸಿಲ್ಲ ಅದಕ್ಕಾಗಿ ಆ ಯೋಜನೆ ಯಾವಾಗ ಪ್ರಾರಂಭವಾಗುತ್ತದೆ ಎಂಬುದೇ ಸಂಶಯವಾಗಿದೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಆ ಯೋಜನೆಯಲ್ಲಿಯು ಸಹ ಎಲ್ಲಾ ಗ್ರಾಮಗಳಿಗೂ ನೀರು ಸರಬರಾಜು ಮಾಡಲಾಗುತ್ತಿದೆ ಎನ್ನುವ ವರದಿ ಕೊಟ್ಟಿದ್ದಾರೆ. ಆ old technology ಯಲ್ಲಿ sand filter ಏನಿದೆ ಅಲ್ಲಿ ಅದರಲ್ಲೂ ಈ black cotton soil ಬಂದರೆ the whole filtration process will not work. ಅದು ನಮ್ಮ ಗಮನಕ್ಕೆ ಬಂದಿದೆ. ಆ ಕಡೆಯಲ್ಲೆಲ್ಲಾ ಸಿಸ್ಟಂ ಅನ್ನು change ಮಾಡುತ್ತಿದ್ದೇವೆ. ಸದರಿ ವರದಿಯ ಪ್ರಕಾರ ಯೋಜನೆಗಳು ಸಮರ್ಪಕವಾಗಿ ನಡೆದಿಲ್ಲವೆಂಬುದು . . .

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಯೋಜನೆ ಪ್ರಾರಂಭವಾಗಿದೆ ನೀರು ಬರುತ್ತಿದೆಯೆಂದರೆ, ವಾರಕ್ಕೊಮ್ಮೆ ನೀರನ್ನು ಒದಗಿಸುವುದಲ್ಲ. ದಿನವೂ as per the scheme, regular functioning of the scheme ಅಂದರೆ, it has to be either everyday or at an alternative day. It doesn't mean that seven

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

days. ದಯವಿಟ್ಟು ತಾವು ಇದನ್ನು ಗಮನಿಸಬೇಕು. ಸ್ಥಳೀಯ ಅಧಿಕಾರಿಗಳು ತಪ್ಪು ಮಾಹಿತಿಯನ್ನು ಕೊಡಬಾರದು. ಇಲ್ಲಿರುವಂತಹ ಅಧಿಕಾರಿಗಳು ಸ್ಥಳಪರಿಶೀಲನೆ ಮಾಡಬೇಕಾಗಿದೆ. ಜೈನಾಪುರ್ ಗ್ರಾಮದಲ್ಲಿ pipeline ಸರಿಯಾಗಿಲ್ಲ, ಅದು defunct ಆಗಿದೆ ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರಾಗಿರುವ ಶ್ರೀ ರಮೇಶ್ ಜಾರಕಿಹೊಳಿಯವರು ಅಲ್ಲಿಗೆ ಸ್ಥಳಪರಿಶೀಲನೆ ಮಾಡಲು ಬಂದಿದ್ದರು. ನಂತರ ರಾಮದುರ್ಗ ತಾಲ್ಲೂಕಿನ **ಬಟಕುರಕಿ** ಮತ್ತು 14 ಗ್ರಾಮಗಳ ಬಗ್ಗೆ ಕೂಡ ತಾವು ಗಮನಹರಿಸಬೇಕೆಂದು ಕೋರುತ್ತೇನೆ.

**ಶ್ರೀ ಹೆಚ್.ಕೆ. ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ಹಿಂದಿನ ಸಿ.ಇ.ಒ ಅವರು ಈ ಎಲ್ಲಾ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು visit ಮಾಡಿ ಒಂದು total inspection report ಮಾಡಿ ಅದರ ಪ್ರಕಾರ ಯಾವ್ಯಾವುದನ್ನು ಸರಿಪಡಿಸಬೇಕಾಗಿತ್ತೋ ಆ ಕೆಲಸವನ್ನು ಪೂರ್ಣ ಮಾಡಿದ್ದೇವೆಂದು ವರದಿ ಕೊಟ್ಟಿದ್ದಾರೆ. ಇನ್ನು ಯಾವುದಾದರೂ ಆಗಿಲ್ಲ ಎನ್ನುವುದು ನಿಮ್ಮ ಮಾಹಿತಿಯಾದರೆ ಮುಖ್ಯ ಕಾರ್ಯನಿರ್ವಾಹಕರಿಗೆ ಮತ್ತು ನಿಮಗೂ ಮಾಹಿತಿ ಕೊಟ್ಟು ನೀವು ಕೊಟ್ಟಿರುವ ಬಹುಗ್ರಾಮ ಯೋಜನೆಗಳ ವೀಕ್ಷಣೆಗೆ ಹೋಗುವಂತೆ ಹೇಳುತ್ತೇನೆ. ಆ ಸಂದರ್ಭದಲ್ಲಿ ಅವರು ಏನು ಅಭಿಪ್ರಾಯವನ್ನು ಕೊಡುತ್ತಾರೆ. ಅದರ ಮೇಲೆ ಮುಂದಿನ ಕ್ರಮವನ್ನು ತೆಗೆದುಕೊಳ್ಳಲು ಸೂಚನೆಯನ್ನು ಕೊಡುತ್ತೇನೆ.

(ಮುಂದು . . .

(968)14-11-2017/5-40/ಕೆಹೆಚ್/ಬಿಎನ್ಎಸ್

**(ವೈಸ್ ಛೇರ್‌ಮನ್‌ರವರ ಉಪಸ್ಥಿತಿ)**

**ಶ್ರೀಮತಿ ಮೋಟಮ್ಮ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಬಹುಗ್ರಾಮ ಕುಡಿಯುವ ನೀರಿನ ಯೋಜನೆ ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳ್ಳದೆ ಇರುವುದರಿಂದ ಸಾರ್ವಜನಿಕರಿಗೆ ಕುಡಿಯುವ ನೀರಿಗೆ ತೊಂದರೆ ಉಂಟಾಗಿರುವ ಬಗ್ಗೆ ಮಾನ್ಯ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನರವರು ಏನು ಹೇಳಿದ್ದಾರೆ, ಅದೇ ಪರಿಸ್ಥಿತಿ ಚಿಕ್ಕಮಗಳೂರಿನಲ್ಲಿಯೂ ಸಹ ಇದೆ. ಏಕೆಂದರೆ ಚಿಕ್ಕಮಗಳೂರು ಪಟ್ಟಣಕ್ಕೆ ಯಗಚಿ ಜಲಾಶಯದಿಂದ ನೀರು ಸರಬರಾಜಾಗುತ್ತಿದೆ. ಯಗಚಿ ಜಲಾಶಯದಿಂದ ನೀರು ಬರಬೇಕಾದರೆ ಅಂಬಳೆ ಹೋಬಳಿಗೆ ಬಹುಗ್ರಾಮ ಕುಡಿಯುವ ನೀರಿನ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಯೋಜನೆಯನ್ನು ಮಾಡಿದ್ದಾರೆ. 38 ಗ್ರಾಮಗಳಿಗೆ ಯಗಚಿ ಜಲಾಶಯದ ಎರಡನೇ ಹಂತದ ಕುಡಿಯುವ ನೀರಿನ ಯೋಜನೆಯಲ್ಲಿ ಅವಕಾಶ ಮಾಡಿಕೊಡಬೇಕು ಎಂದು ಈಗಾಗಲೇ ಪ್ರಸ್ತಾವನೆ ಇದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಆದರೆ, ಈ ಕಾಮಗಾರಿಯ ಪ್ರಗತಿ ಬಹಳ ನಿಧಾನವಾಗಿದೆ. ಅಲ್ಲಿ ಕುಡಿಯುವ ನೀರಿನ ಪರಿಸ್ಥಿತಿ ಬಹಳ ಬಿಗಡಾಯಿಸಿರುವುದರಿಂದ, ಯಗಚಿ ಜಲಾಶಯದ ಎರಡನೇ ಹಂತದ ಕುಡಿಯುವ ನೀರಿನ ಯೋಜನೆಯಲ್ಲಿ ಅಂಬಳೆ ಗ್ರಾಮದ 38 ಹಳ್ಳಿಗಳಿಗೆ ಆದಷ್ಟು ಬೇಗ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಗ್ರಾಮೀಣ ಕುಡಿಯುವ ನೀರಿನ ವಿಚಾರಕ್ಕೆ ಮಾನ್ಯ ಮುಖ್ಯಮಂತ್ರಿಯವರು ಮತ್ತು ಗ್ರಾಮೀಣಾಭಿವೃದ್ಧಿ ಸಚಿವರು ಜಿಲ್ಲಾ ಪಂಚಾಯಿತಿ ಚುನಾವಣೆಯ ಸಂದರ್ಭದಲ್ಲಿ 10,000 ಕೋಟಿ ರೂಪಾಯಿಗಳಷ್ಟು ಹಣವನ್ನು ನಾವು ಮೀಸಲಿಡುತ್ತೇವೆಂಬ ಮಾತನ್ನು ತಿಳಿಸಿದ್ದರು. ಆದರೆ ಇತ್ತೀಚೆಗೆ ಸರ್ಕಾರ ಯಾವ ಹೊಸ ಯೋಜನೆಗಳನ್ನು ತೆಗೆದುಕೊಳ್ಳುತ್ತಿಲ್ಲ. ಈ ಬಗ್ಗೆ ಆಗಲೇ ಇಲ್ಲಿಂದ ಸೂಚನೆಗಳು ಹೊರಟು ಹೋಗಿವೆ. ಇಡೀ ರಾಜ್ಯದಲ್ಲಿ ನಾನು ಪ್ರವಾಸ ಮಾಡುತ್ತಿರುವಂತಹ ಸಂದರ್ಭದಲ್ಲಿ ಎಲ್ಲಾ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರ ಹತ್ತಿರ ಕೇಳಿದಾಗ ಸಂಬಂಧಪಟ್ಟ ಕಾರ್ಯನಿರ್ವಾಹಕ ಇಂಜಿನಿಯರ್ ಬಂದಿರುವಂತಹ ಸಂದರ್ಭದಲ್ಲಿ ತಾವು ಹೊಸ ಯೋಜನೆಗಳನ್ನು ತೆಗೆದುಕೊಳ್ಳಬೇಡಿ ಎಂಬ ಸೂಚನೆ ನಮಗೆ ಬಂದಿದೆ ಎಂದು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದಾರೆ, ಇದು ನಿಜವೇ ಎಂಬುದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟಪಡಿಸಬೇಕು. ಎರಡನೆಯದು, ಮೊನ್ನೆಯ ದಿವಸ ದಿನಾಂಕ:07-11-2017 ರಂದು ಮಾನ್ಯ ಮುಖ್ಯಮಂತ್ರಿಯವರು, ಪ್ರಾದೇಶಿಕ ಆಯುಕ್ತರು, ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರ ಸಮ್ಮೇಳನದಲ್ಲಿ ಸಿಕ್ಕಿರುವಂತಹ ಒಂದು ವರದಿಯ ಪ್ರಕಾರ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಾಗಿ 2017-18ನೇ ಸಾಲಿನಲ್ಲಿ 1,745 ಕೋಟಿ ರೂಪಾಯಿಗಳ ಅವಶ್ಯಕತೆಯಿದೆ. ಗುರಿ ಹೊಂದಿರುವ 65 ಯೋಜನೆಗಳಿಗೆ 1,000 ಕೋಟಿ ರೂಪಾಯಿಗಳ ಅವಶ್ಯಕತೆಯಿದೆ. ಪ್ರಸಕ್ತ ಸಾಲಿನಲ್ಲಿ ಲಭ್ಯವಿರುವ ಒಟ್ಟು ಅನುದಾನದಲ್ಲಿ 595 ಕೋಟಿ ರೂಪಾಯಿಗಳನ್ನು ಅನುವು ಮಾಡಿದ್ದು, ಈಗಾಗಲೇ ಆ ಮೊತ್ತ ಪೂರ್ಣ ವೆಚ್ಚವಾಗಿರುತ್ತದೆ. ನನಗೆ ಬಂದಿರುವ ಅಂಕಿ-ಅಂಶಗಳ ಪ್ರಕಾರ ಎಲ್ಲಾ 65 ಯೋಜನೆಗಳನ್ನು ಪೂರ್ಣಗೊಳಿಸಲು ಇನ್ನು ಹೆಚ್ಚುವರಿಯಾಗಿ 1,150 ಕೋಟಿ ರೂಪಾಯಿಗಳ ಅನುದಾನದ ಅವಶ್ಯಕತೆಯಿದೆ. ಇದಲ್ಲದೆ ರಾಜ್ಯದಲ್ಲಿ ಇನ್ನು 123 ಯೋಜನೆಗಳು ಪೂರ್ಣಗೊಳ್ಳಬೇಕಾಗಿದೆ. ಇದಕ್ಕೆ ಸುಮಾರು 2,300 ಕೋಟಿ ರೂಪಾಯಿಗಳ ಅನುದಾನ ಬೇಕಾಗಿದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತಮ್ಮ ಇಲಾಖೆಯ ಅಧಿಕಾರಿಗಳಿಂದ ಈ ಮಾಹಿತಿಯನ್ನು ನಾನು ತೆಗೆದುಕೊಂಡಿದ್ದೇನೆ. ಇದು ನಿಜವೇ ಎಂಬುದನ್ನು ಸಹ ಸರ್ಕಾರ ಸ್ಪಷ್ಟಪಡಿಸಬೇಕಾಗಿದೆ. ಮೊದಲನೆಯದು ಇಡೀ ರಾಜ್ಯದಲ್ಲಿ ಕುಡಿಯುವ ನೀರಿನ ಹಾಹಾಕಾರ ಇರುವಂತಹ ಸಂದರ್ಭದಲ್ಲಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯನ್ನು ನಿಲ್ಲಿಸಿರುವುದೇ ಮೊದಲನೇ ತಪ್ಪು. ಏಕೆಂದರೆ, ಈ ಯೋಜನೆಗಳು ಇಲ್ಲವೆಂದರೆ, ನಮ್ಮ ಹಳ್ಳಿಯಲ್ಲಿರುವ ಜನರ ಗತಿ ಏನು? ಅವರಿಗೆ ಕುಡಿಯುವ ನೀರು ಎಲ್ಲಿಂದ ಬರಬೇಕು? ಅದಕ್ಕೋಸ್ಕರ ಯೋಜನೆಗಳು ಎಲ್ಲೆಲ್ಲಿ ಬೇಕೆಂಬುದರ ಬಗ್ಗೆ ಪ್ಲ್ಯಾನ್, ಎಸ್ಟಿಮೇಟ್ ಮಾಡಿ ಕಳುಹಿಸಿ ಕೊಡಲಿ, ಯೋಜನೆಗಳಿಗೆ ಹಣ ಎಷ್ಟೆಷ್ಟು ಬೇಕೋ ಹಾಗೂ ಎಷ್ಟು ಹಣ ಲಭ್ಯವಿದೆಯೋ ಅಷ್ಟು ಕೊಡುತ್ತಾ ಹೋಗಲಿ. ಎಲ್ಲಾ ಹಣವನ್ನು ಒಂದೇ ಬಾರಿ ಕೊಡುವುದಕ್ಕೆ ಆಗುತ್ತದೆ, ಕೊಟ್ಟು ಬಿಡಿ ಎಂದು ನಾನು ಹೇಳುವುದಿಲ್ಲ. ನಾನು ಏನು ಹೇಳುತ್ತೇನೆಂದರೆ, ಯಾವ ಯಾವ ಹಳ್ಳಿಗಳಿಗೆ ಕುಡಿಯುವ ನೀರು ಬೇಕೆಂಬ ಬಗ್ಗೆ ಪ್ಲ್ಯಾನ್, ಎಸ್ಟಿಮೇಟ್ ಮಾಡಲಿಲ್ಲವೆಂದರೆ ಆ ಹಳ್ಳಿಗಳ ಕಥೆ ಏನು? ಆದ್ದರಿಂದ ದಯವಿಟ್ಟು, ನೀವು ಯಾವ ಯಾವ ಹಳ್ಳಿಗಳಿಗೆ ಕುಡಿಯುವ ನೀರು ಬೇಕೆನ್ನುವುದರ ಬಗ್ಗೆ ಪ್ಲ್ಯಾನ್, ಎಸ್ಟಿಮೇಟ್ ಮಾಡಿಸಿ ತರಿಸಿಕೊಳ್ಳಿ. ಆ ರೀತಿ ಮಾಡಿದರೆ ಮಾತ್ರ ನಿಮಗೆ ಎಷ್ಟು ದುಡ್ಡು ಬೇಕೆಂಬ ಬಗ್ಗೆ ಸರ್ಕಾರಕ್ಕೆ ಒಂದು ಕಲ್ಪನೆಯಾದರೂ ಬರುತ್ತದೆ.

**(ಈ ಹಂತದಲ್ಲಿ ಸಭಾಪತಿಯವರಾದ ಶ್ರೀ ಡಿ.ಹೆಚ್.ಶಂಕರಮೂರ್ತಿಯವರು ಪೀಠವನ್ನು ಅಲಂಕರಿಸಿದರು.)**

ಆಯವ್ಯಯ ನಿಗದಿಪಡಿಸುವಂತಹ ಸಂದರ್ಭದಲ್ಲಿ ನಿಮಗೆ ಎಷ್ಟು ಅನುದಾನ ಬೇಕೆಂಬ ಮಾಹಿತಿಯು ಬೇಕಲ್ಲವೇ? ಆದರೆ ನೀವು ಜಿಲ್ಲೆಗಳಿಂದ ಪ್ಲ್ಯಾನ್ ಅನ್ನು ಕಳುಹಿಸಬೇಡಿ ಎಂದು ಹೇಳಿದರೆ, ಅವರು ಏನು ಮಾಡಬೇಕು? ಅವರು ಯಾರನ್ನು ಕೇಳಬೇಕು? ಎಷ್ಟು ದುಡ್ಡು ಬೇಕೆಂಬ ಬಗ್ಗೆ ಪ್ಲ್ಯಾನ್, ಎಸ್ಟಿಮೇಟ್ ಅನ್ನು ತರಿಸಿಕೊಳ್ಳಿ. ಆಗ ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಇಷ್ಟು ದುಡ್ಡು ಬೇಕಾಗುತ್ತದೆ ಎಂದು ಕೇಳುವುದಕ್ಕೆ ಧ್ವನಿ ಇರುತ್ತದೆ. ಇಷ್ಟು ದುಡ್ಡು ಬೇಕು, ಎಲ್ಲಾ ಜಿಲ್ಲಾ ಪಂಚಾಯಿತಿಗಳಿಂದ ಇಷ್ಟು ಬೇಡಿಕೆ ಬಂದಿದೆ. ನೀವು ಅನುಮೋದನೆ ಮಾಡಿಕೊಡುವುದು ನಂತರದ ಪ್ರಶ್ನೆ. ಅದಕ್ಕೋಸ್ಕರ ನಾನು ಹೇಳುತ್ತಿರುವುದೇನೆಂದರೆ, ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ಇದರ ಬಗ್ಗೆ ತಕ್ಷಣ ತಿಳಿಸಿ, ಯಾವ ಯಾವ ಗ್ರಾಮಗಳಿಗೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಡಿಯಲ್ಲಿ ಏನೇನು ಆಗಬೇಕು ಮತ್ತು ಎಷ್ಟು ಹಣ ಬೇಕೆಂಬುದರ ಬಗ್ಗೆ ಮಾಹಿತಿಯನ್ನು ತರಿಸಿಕೊಳ್ಳಿ.

ಮತ್ತೊಂದು ವಿಚಾರವೆಂದರೆ, 65 ಯೋಜನೆಗಳನ್ನು ಪೂರ್ಣಗೊಳಿಸಲು ಇನ್ನು ಹೆಚ್ಚುವರಿಯಾಗಿ 1,150 ಕೋಟಿ ರೂಪಾಯಿಗಳು ಬೇಕೆಂದು ಈಗಾಗಲೇ ತೀರ್ಮಾನವಾಗಿದೆ. ಇದಕ್ಕಾಗಿ 2,000 ಕೋಟಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರೂಪಾಯಿಗಳ ಹಣವನ್ನು ಬಿಡುಗಡೆ ಮಾಡಬಹುದೆನ್ನುವ ಒಂದು ಸುದ್ದಿ ನನ್ನ ಹತ್ತಿರ ಇದೆ. ಇದು ನಿಜವೇ? ಈಗ 1,745 ಕೋಟಿ ರೂಪಾಯಿಗಳ ಅವಶ್ಯಕತೆ ಇದೆ. 65 ಯೋಜನೆಗಳನ್ನು ಪೂರ್ಣಗೊಳಿಸುವುದಕ್ಕೆ 1,000 ಕೋಟಿ ರೂಪಾಯಿಗಳದ್ದು, ಅದರಲ್ಲಿ ಈಗಾಗಲೇ 595 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ. ಇನ್ನು 65 ಯೋಜನೆಗಳಿಗೆ 1,150 ಕೋಟಿ ರೂಪಾಯಿಗಳು ಬೇಕು. ಇವತ್ತಿನ ದಿವಸ ಅಥವಾ ನಂತರದ ದಿವಸಗಳಲ್ಲಿ ತಾವು ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಇದರ ಬಗ್ಗೆ ಸ್ಪಷ್ಟೀಕರಣವನ್ನು ನೀಡಬೇಕೆಂದು ನಾನು ಕೇಳುತ್ತಿದ್ದೇನೆ. ಇದರ ಬಗ್ಗೆ ನನಗೆ ಮತ್ತು ತಮಗೆ ಕೂಡ ಸ್ಪಷ್ಟೀಕರಣ ಬೇಕೆನ್ನುವ ಕಾರಣಕ್ಕಾಗಿ ಕೇಳುತ್ತಿದ್ದೇನೆಯೇ ಹೊರತು ಬೇರೆ ಯಾವುದೇ ರೀತಿಯ ಉದ್ದೇಶವಿಲ್ಲ. ನನಗೆ ಬಂದಿರುವ ಮಾಹಿತಿಯ ಪ್ರಕಾರ 125 ಯೋಜನೆಗಳನ್ನು ಪೂರ್ಣಗೊಳಿಸುವುದಕ್ಕೆ 2,300 ಕೋಟಿ ರೂಪಾಯಿಗಳಷ್ಟು ಹಣ ಬೇಕಾಗಿದೆ. ಇದು ನಿಜವೇ? ಇದರ ಬಗ್ಗೆ ಸ್ಪಷ್ಟೀಕರಣವನ್ನು ಕೊಡಬೇಕು. ಇನ್ನು ಮೊನ್ನೆಯ ಸಭೆಯಲ್ಲಿ ರಾಜ್ಯದ ಎಲ್ಲ ಕಛೇರಿಗಳಲ್ಲಿ ಒಟ್ಟಾರೆ ಶೇಕಡ 45 ರಷ್ಟು ತಾಂತ್ರಿಕ ಸಿಬ್ಬಂದಿ ಕೊರತೆ ಇದೆ ಎಂದು ತಿಳಿದು ಬಂದಿದೆ. ಈ ರೀತಿಯ ಪರಿಸ್ಥಿತಿ ಇದ್ದರೆ, ಹೇಗೆ ಕೆಲಸವಾಗುತ್ತದೆ? ನಾವು ಗ್ರಾಮೀಣ ಕುಡಿಯುವ ನೀರಿಗೆ ಆದ್ಯತೆಯನ್ನು ಕೊಡಲೇಬೇಕು. ಕುಡಿಯುವ ನೀರಿಗೂ ಆದ್ಯತೆ ಕೊಡದೆಯಿದ್ದರೆ ಮತ್ತು ಶೇಕಡ 45 ರಷ್ಟು ತಾಂತ್ರಿಕ ಸಿಬ್ಬಂದಿಯ ಕೊರತೆ ಇದೆ ಎನ್ನುವುದಾದರೆ ಕುಡಿಯುವ ನೀರು ಹೇಗೆ ಸಿಗುತ್ತದೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಇಂತಹ ಅವ್ಯವಸ್ಥೆಗಳನ್ನು ಗಮನಿಸಿ ಸರಿಪಡಿಸುತ್ತಾರೆ ಎನ್ನುವ ವಿಶ್ವಾಸ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಇದ್ದಂತಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಹೆಚ್.ಕೆ.ಪಾಟೀಲ್ ರವರು ಇದರ ಬಗ್ಗೆ ಕ್ರಮ ಕೈಗೊಳ್ಳುತ್ತಾರೆಂಬ ಬಗ್ಗೆ ನನಗೆ ಗೌರವ ಇದೆ. ನಾನು ಅವರು ಮಾಡುವುದಿಲ್ಲವೆಂದು ಹೇಳುವುದಿಲ್ಲ. ಯಾರಿಗಾದರೂ ನೀನು "ಹಲ್ಕ" ಎಂದು ನೇರವಾಗಿ ಹೇಳುವುದಕ್ಕೆ ಆಗುತ್ತದೆಯೇ? ಆದರೆ ಕೆಲವರ ಬಗ್ಗೆ ನನಗೆ ನಿಜಕ್ಕೂ ಗೌರವ ಇದೆ. ನಾನು ಸುಮ್ಮನೆ ನಾಟಕೀಯವಾಗಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಅದಕ್ಕೋಸ್ಕರ ನಾನೇನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ನೀವು ತುಂಬಾ ಸ್ಪಷ್ಟವಾಗಿ ಇಡೀ ರಾಜ್ಯದಲ್ಲಿ ಕುಡಿಯುವ ನೀರು ಇಲ್ಲದೆ ಇರುವಂತಹ ಹಳ್ಳಿಗಳು ಯಾವ್ಯಾವು ಎಂಬುದನ್ನು ಗುರುತಿಸಿ, ಬಹುಗ್ರಾಮ ಕುಡಿಯುವ ನೀರಿನ ಯೋಜನೆಗೆ ಪ್ಲ್ಯಾನ್, ಎಸ್ಟಿಮೇಟ್ ಮಾಡಬೇಕು. ಇಲ್ಲಿ ಬಹಳ ದೊಡ್ಡ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಮಸ್ಯೆಯೇನೆಂದರೆ ಇರುವುದನ್ನು ನಿರ್ವಹಣೆ ಮಾಡುವುದಕ್ಕೆ ತಾಂತ್ರಿಕ ಸಿಬ್ಬಂದಿಯ ಕೊರತೆ ಇದೆ. ಮತ್ತೆ ಇನ್ನು ಬೇಕೆಂದರೆ ಎಲ್ಲಿಂದ ತರುವುದಕ್ಕೆ ಹೋಗುತ್ತೀರಿ. ಕುಡಿಯುವ ನೀರನ್ನು ಒದಗಿಸಬೇಕಾಗಿರುವುದು ನಿಮ್ಮ ತಲೆಯ ಮೇಲೆ ಕಟ್ಟಿರುವಂತಹ ಒಂದು ಭಾರ ಮತ್ತು ನಿಮ್ಮ ಕರ್ತವ್ಯ ಕೂಡ. ಆದರೆ, ಇದನ್ನು ಹೇಗೆ ತರುತ್ತೀರಿ, ಹೇಗೆ ಮಾಡುತ್ತೀರಿ ಎನ್ನುವುದು ನಿಮಗೆ ಬಿಟ್ಟ ವಿಚಾರ. ನಮ್ಮ ರಾಜ್ಯದ ಹಳ್ಳಿಗಳಿಗೆ ನೀರಿಲ್ಲ ಅನ್ನುವುದನ್ನು ನಾನು ಸ್ವತಃ ಪ್ರಾಕ್ಟಿಕಲ್ ಆಗಿ ರಾಜ್ಯದ ಪ್ರವಾಸ ಮಾಡಿಕೊಂಡು ಬಂದು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇದರ ಬಗ್ಗೆ ಇವತ್ತಿನ ದಿವಸವೇ ಉತ್ತರವನ್ನು ಕೊಡಿ ಎಂದು ಹೇಳುವುದಿಲ್ಲ. ಇನ್ನು ಒಂದು ವಾರ ವಿಧಾನ ಪರಿಷತ್ತಿನ ಅಧಿವೇಶನ ನಡೆಯುವುದರಿಂದ ದಯವಿಟ್ಟು ತಾವು ಯಾವತ್ತು ಉತ್ತರವನ್ನು ಕೊಡುತ್ತೀರೋ ಆಗ ಉತ್ತರವನ್ನು ಕೊಡಬಹುದಾಗಿದೆ.

ಮೂರನೆಯದು ಇನ್ನು 1,150 ಕೋಟಿ ರೂಪಾಯಿಗಳು ಮತ್ತೆ ಅವಶ್ಯಕತೆ ಇರುವ ಬಗ್ಗೆ ನನಗೆ ಬಂದಿರುವ ಮಾಹಿತಿಯ ಪ್ರಕಾರ 2,000 ಕೋಟಿ ರೂಪಾಯಿಗಳ ಅನುದಾನ ಬಿಡುಗಡೆಯಾಗುತ್ತಿದೆ ಎಂಬ ಸುದ್ದಿ ಇದೆ. ಇದು ನಿಜವೇ ಎಂಬ ಬಗ್ಗೆ ಮಾನ್ಯ ಸಚಿವರು ಸ್ಪಷ್ಟೀಕರಣವನ್ನು ನೀಡಬೇಕಾಗಿದೆ. 65 ಯೋಜನೆಗಳಲ್ಲದೆ 123 ಯೋಜನೆಗಳೇನು ಪೂರ್ಣಗೊಳ್ಳಬೇಕಾಗಿದೆ. ಅದಕ್ಕಾಗಿ ಇನ್ನು ಹೆಚ್ಚುವರಿಯಾಗಿ 2,300 ಕೋಟಿ ರೂಪಾಯಿಗಳು ಬೇಕಾಗಿರುವುದರಿಂದ ಇದಕ್ಕೆ ಏನು ಮಾಡುತ್ತೀರಿ? ಈ ಸಾಲಿನಲ್ಲಿ ನಿರ್ವಹಣೆಗೆ 100 ಕೋಟಿ ರೂಪಾಯಿಗಳನ್ನು ಇಡಲಾಗಿದೆ. ಈ ಹಣ ಯಾವ ಮೂಲೆಗೂ ಸಾಕಾಗುವುದಿಲ್ಲ. ಎರಡನೆಯದು, ಇದನ್ನು ಯಾವ ರೀತಿಯಲ್ಲಿ ಮಾಡಬೇಕೆಂದು ಗ್ರಾಮ ಪಂಚಾಯಿತಿಗೆ ಬಿಡಲಾಗುತ್ತಿದೆ. ಅವರು ಎಲ್ಲಿಂದ ಹಣವನ್ನು ತರುತ್ತಾರೆ?

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅಲ್ಲಿ manpower ಇಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಹೌದು, manpower ಇಲ್ಲ, ಹಣ ಇಲ್ಲವೆಂದು ಹೇಳಿದಾಗ ಗ್ರಾಮ ಪಂಚಾಯಿತಿಯವರು ಏನು ಮಾಡಬೇಕು? ಅಲ್ಲಿ ಸಿಬ್ಬಂದಿಗಳಿಲ್ಲದಿರುವುದರಿಂದ, ಇದನ್ನು ನಿರ್ವಹಣೆ ಮಾಡುವುದಕ್ಕೆ ಆಗುವುದಿಲ್ಲ. ಹಣದ ಕೊರತೆ ಇರುವುದರಿಂದ, ವಿದ್ಯುಚ್ಛಕ್ತಿ ಬಿಲ್ಲನ್ನು ಕಟ್ಟುವುದಕ್ಕೆ ಸಹ ಆಗುವುದಿಲ್ಲ. 150 ಹೆಚ್.ಪಿ. ವರೆಗೂ ಪಂಪ್‌ಸೆಟ್‌ಗಳು ಇರುತ್ತವೆ. Treatment ಸಮಸ್ಯೆ, chemicals ಇರುವುದಿಲ್ಲ. ಗ್ರಾಮ ಪಂಚಾಯಿತಿಯವರಿಗೆ ನೀವು ಮಾಡಿ ಎಂದು ಹೇಳಿದರೆ, ಅವರು ಹೇಗೆ ಮಾಡುತ್ತಾರೆ? ಒಂದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಾನೂನನ್ನು ಮಾಡಿ ಬಿಡುವುದು ತುಂಬಾ ಸುಲಭ. ಒಂದು ಕಾನೂನು ಬಂದಿರುತ್ತದೆ. ಅವನು ನೋಟಿಸನ್ನು ನೋಡಿ, ಇಟ್ಟುಕೊಂಡು ಮನೆಗೆ ಹೋಗುತ್ತಾನೆ. ಅಲ್ಲಿ ನೀರು ಇದೆಯೋ, ಇಲ್ಲವೋ ಎಂಬುದರ ಬಗ್ಗೆ ಅವನಿಗೆ ಏನು ಸಂಬಂಧವಿರುತ್ತದೆ? ನಿಮಗೆ ಇದರ ಬಗ್ಗೆ ಜವಾಬ್ದಾರಿ ಇದೆ. ಅದಕ್ಕೋಸ್ಕರ ನೀವು ಇದನ್ನು ಹೇಗೆ ನಿಭಾಯಿಸುತ್ತೀರಿ? ಇಡೀ ಕರ್ನಾಟಕ ರಾಜ್ಯದಲ್ಲಿ ಸರಿಯಾದ ಒಂದು ಯೋಜನೆ ಇಟ್ಟುಕೊಂಡು, ಆ ಯೋಜನೆಯನ್ನು ಜಾರಿಗೆ ತರುವಲ್ಲಿ ಅದರ ಬಗ್ಗೆ ಗುರಿಯನ್ನಿಟ್ಟುಕೊಂಡು ಎರಡು ಅಥವಾ ಮೂರು ತಿಂಗಳಿಗೆ ಇದರ ಬಗ್ಗೆ follow up ಮಾಡುತ್ತಿದ್ದೀರಿ. ಸಚಿವರು follow up ಮಾಡುತ್ತಿಲ್ಲವೆಂದು ನಾನು ಖಂಡಿತವಾಗಿಯೂ ಹೇಳುತ್ತಿಲ್ಲ. ಅನೇಕ ಜಿಲ್ಲೆಗಳಿಗೆ ಹೋದಂತಹ ಸಂದರ್ಭದಲ್ಲಿ ಇಷ್ಟಿಷ್ಟು ದುಡ್ಡು ಬಂದಿದೆ. ಇಷ್ಟಿಷ್ಟು ಕೆಲಸ ಪ್ರಾರಂಭವಾಗುತ್ತಿದೆ ಎಂಬ ಬಗ್ಗೆ ಹೇಳುತ್ತಿದ್ದಾರೆ.

(ಮುಂದು)

**(969)14-11-2017/5.50/ಎಸ್‌ಪಿಆರ್/ಬಿಎನ್‌ಎಸ್**

**ಶ್ರೀ ಕೆ.ಎಸ್.ಈಶ್ವರಪ್ಪ(ಮುಂದು):-**

ನಾನು ತುಂಬಾ ಸ್ಪಷ್ಟವಾಗಿ ಹೇಳುತ್ತಿರುವುದೇನೆಂದರೆ ಶೇಕಡ 45 ರಷ್ಟು ಸಿಬ್ಬಂದಿ ಕೊರತೆ ನಮ್ಮ ಹತ್ತಿರ ಇದೆ. ಇದನ್ನು ಭರ್ತಿ ಮಾಡಲು ಯಾವ ರೀತಿಯ ಕ್ರಮಗಳನ್ನು ಕೈಗೊಂಡಿದ್ದೀರಿ? 60 ಯೋಜನೆಗಳನ್ನು ಪೂರ್ಣಗೊಳಿಸಲು ತತ್‌ಕ್ಷಣವಾಗಿ 1,150 ಕೋಟಿ ರೂಪಾಯಿಗಳ ಅವಶ್ಯಕತೆಯಿದೆ. ಇದಕ್ಕಾಗಿ ಯಾವ ರೀತಿಯ ತಯಾರಿ ಮಾಡಿಕೊಂಡಿದ್ದೀರಿ? ಇವುಗಳಲ್ಲದೇ 123 ಯೋಜನೆಗಳಿಗೆ 2,300 ಕೋಟಿ ರೂಪಾಯಿಗಳಷ್ಟು ಅವಶ್ಯಕತೆಯಿದೆ. ಇದರ ಬಗ್ಗೆ ನಿಮ್ಮ ಯೋಜನೆಯೇನು? ನಿರ್ವಹಣೆಗಾಗಿ ಮೀಸಲಿಟ್ಟಿರುವ 100 ಕೋಟಿ ರೂಪಾಯಿಗಳು ಯಾವ ಕಾರಣಕ್ಕಾಗಿಯೂ ಸಾಕಾಗುವುದಿಲ್ಲ. ಈ ಬಗ್ಗೆಯೂ ಸಹ ತಾವು ಯಾವ ರೀತಿಯ ಯೋಜನೆಯನ್ನು ಹಾಕಿಕೊಂಡಿದ್ದೀರಿ? ಖಾಲಿಯಿರುವ ತಾಂತ್ರಿಕ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಯಾವ ರೀತಿಯ ಯೋಜನೆಗಳನ್ನು ಹಾಕಿಕೊಂಡಿದ್ದೀರಿ? ಹಾಲಿ ಗ್ರಾಮ ಪಂಚಾಯತಿಗೆ ಇರುವ ಅಧಿಕಾರ ವ್ಯಾಪ್ತಿಯಲ್ಲಿ ಅವುಗಳ ಮುಖಾಂತರ ಕೆಲಸಗಳು ಆಗುತ್ತವೆ ಎಂಬ ನಂಬಿಕೆಯು ನಿಮಗೆ ಇದೆಯೇ? ಗ್ರಾಮ ಪಂಚಾಯತಿಯ ಹತ್ತಿರ ಯಾವುದೇ ರೀತಿಯ ಕನಿಷ್ಟ ಸೌಲಭ್ಯಗಳಿಲ್ಲ. ಈ ವಿಚಾರ ತುಂಬಾ ಸ್ಪಷ್ಟವಾಗಿ ನಿಮಗೂ ಹಾಗೂ ನಮಗೂ ಸಹ ಗೊತ್ತಿದೆ. ಹೀಗಾಗಿ ಈ ವಿಚಾರದಲ್ಲಿ ನೀವು ಬೇರೆ ರೀತಿಯ ವ್ಯವಸ್ಥೆಯನ್ನು ಮಾಡಬಹುದೇ? ಇವು ನನ್ನ ಪ್ರಶ್ನೆಗಳಾಗಿವೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಭಾನುಪ್ರಕಾಶ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಬೇರೆ ಯಾವುದೇ ವಿಚಾರವನ್ನು ಮಾತನಾಡುವುದಕ್ಕೆ ಹೋಗುವುದಿಲ್ಲ ಆದರೆ ಒಂದು ವಿಚಾರದಲ್ಲಿ ಮಾತ್ರ ಸ್ಪಷ್ಟೀಕರಣವನ್ನು ಕೇಳುತ್ತಿದ್ದೇನೆ. ನಮ್ಮ ಜಿಲ್ಲೆಯಲ್ಲಿ ತುಂಗಾ ಮತ್ತು ಭದ್ರಾ ಎರಡೂ ನದಿಗಳು ಹರಿಯುತ್ತಿವೆ. ಹಿಂದಿನ ಸಾಲುಗಳಲ್ಲಿ ಮಳೆಯಾದ ಪ್ರಮಾಣದಲ್ಲಿ ಈ ವರ್ಷ ಮಳೆಯಾಗಿಲ್ಲ. ಹೀಗಾಗಿ ನಮ್ಮ ನದಿಗಳಲ್ಲಿ ನೀರಿಲ್ಲ. ಆದ್ದರಿಂದ ಭದ್ರಾ ಅಣೆಕಟ್ಟು ಸಹ ಭರ್ತಿಯಾಗಿಲ್ಲ. ಭದ್ರಾ ನದಿಯ ತೀರದಲ್ಲಿರುವ ಚೆನ್ನಗಿರಿ ಪ್ರದೇಶಕ್ಕೆ ನಾವು ನೀರನ್ನು ಒದಗಿಸಿದ್ದೇವೆ. ತಾವು ಸಚಿವರಾಗಿದ್ದಂತಹ ಸಂದರ್ಭದಲ್ಲಿ ಚೆನ್ನಗಿರಿ ತಾಲ್ಲೂಕಿನ ಉಗ್ರಾಣಿ ಹೋಬಳಿಗೂ ಸಹ ನೀರನ್ನು ನೀಡಿದೆ. ಆ ಪ್ರದೇಶದಲ್ಲಿ ಎರಡು ಬಹುಗ್ರಾಮ ಕುಡಿಯುವ ನೀರಿನ ಯೋಜನೆಯು ಜಾರಿಯಲ್ಲಿದೆ. ಅದೇ ರೀತಿಯಾಗಿ ತುಂಗಾ ತೀರದಲ್ಲಿಯೂ ಸಹ ಎರಡು ಬಹುಗ್ರಾಮ ಕುಡಿಯುವ ನೀರಿನ ಯೋಜನೆಯು ಜಾರಿಯಲ್ಲಿದೆ. ಇಂತಹ ಸಂದರ್ಭದಲ್ಲಿ ನಾನು ಕೇಳುತ್ತಿರುವ ವಿಚಾರವೇನೆಂದರೆ, ಚೆಕ್ ಡ್ಯಾಂಗಳನ್ನು ನಿರ್ಮಾಣ ಮಾಡದೇ ನೀವು ನೀರನ್ನು ಖಾಲಿ ಮಾಡಿದರೆ ಹೇಗೆ? ಪ್ರಸ್ತುತ ಬೋರ್‌ವೆಲ್‌ಗಳಲ್ಲಿರುವ ನೀರನ್ನು ಖಾಲಿ ಮಾಡಲಾಗಿದೆ. ನಮ್ಮ ಕ್ಷೇತ್ರದಲ್ಲಿ ಬೋರ್‌ವೆಲ್‌ಗಳಿಲ್ಲ. ಪ್ರತಿಬಾರಿಯೂ ಪ್ರಕೃತಿ ವೈಪರೀತ್ಯವಾಗುತ್ತಿದೆ. ಚೆಕ್ ಡ್ಯಾಂಗಳನ್ನು ನಿರ್ಮಾಣ ಮಾಡದೇ ನೀರನ್ನು ಸಂಗ್ರಹಿಸಿಟ್ಟುಕೊಳ್ಳದೇ ಹೋದರೆ ನೀವು ನಾಳೆಯ ದಿವಸ ಯಾವ ಮೂಲದಿಂದ ನೀರನ್ನು ಕೊಡುತ್ತೀರಿ? ನದಿ ವಿಚಾರವು ಸಣ್ಣ ಅಥವಾ ಭಾರಿ ನೀರಾವರಿ ಇಲಾಖೆಗೆ ಒಳಪಡುತ್ತದೆ. ಹೀಗಾಗಿ ಚೆಕ್ ಡ್ಯಾಂಗಳ ನಿರ್ಮಾಣ ನಿಮ್ಮ ಗ್ರಾಮೀಣಾಭಿವೃದ್ಧಿ ಇಲಾಖೆಯ ಪರಿಮಿತಿಯೊಳಗೆ ಬರುವುದಿಲ್ಲ ಎಂಬುದಾಗಿ ಹೇಳುತ್ತೀರಿ. ಕೃಷ್ಣಾ-ಬಿ ಯೋಜನೆಯು ಕಾನೂನಿನ್ವಯ ತೊಂದರೆಯಾಗುತ್ತದೆ ಹಾಗೂ ಇನ್ನಿತರೆ ಸಂಗತಿಗಳನ್ನು ತಾವು ಪ್ರಸ್ತಾಪ ಮಾಡುತ್ತೀರಿ. ಆದರೆ, ಮೂಲಭೂತವಾಗಿ ನೀರಿನ ಯೋಜನೆಗಳು ದಶಕಗಳ ಕಾಲ ನಡೆಯಬೇಕು ಎನ್ನುವುದಾದರೆ ನದಿಯಲ್ಲಿ ನೀರಿರಬೇಕು. ನೀರಿನ ಬಗ್ಗೆ ಯಾವ ರೀತಿಯ ಯೋಚನೆಯನ್ನು ಮಾಡಿದ್ದೀರಿ? ಪ್ರಸ್ತುತ ಯೋಜನೆಯಲ್ಲಿ ಈ ಬಗ್ಗೆ ಯಾವ ಅಂಶವನ್ನೂ ಸೇರ್ಪಡೆಗೊಳಿಸಿಲ್ಲ. ನೀರಿನ ಮೂಲವನ್ನು ಹುಡುಕಬೇಕಾದರೆ, DPR (Detailed Project Report) ಮಾಡಿದ್ದೀರಿ. ಆದರೆ, ಅಂತಹ ಸಂದರ್ಭದಲ್ಲಿ ಡ್ಯಾಂ ಕೆಳಗಿನ ಭಾಗದಲ್ಲಿನ ಎಷ್ಟು ವಿಸ್ತೀರ್ಣದಲ್ಲಿ ಮಾಡುತ್ತಿದ್ದೀರಿ, ನದಿ ನೀರಿನ ಪ್ರಮಾಣವೇನು ಎಂಬಂಶಗಳ ಬಗ್ಗೆ ಯೋಚನೆ ಮಾಡಿದ್ದೀರಾ? ಇವತ್ತಿನ ದಿವಸ ವಿದ್ಯುತ್‌ನ್ನು ಉತ್ಪಾದಿಸಲು ಅವಶ್ಯಕವಿರುವಷ್ಟು ನೀರನ್ನು ಮಾತ್ರವೇ ಭದ್ರಾ ನದಿಯಿಂದ ಬಿಡಲಾಗುತ್ತಿದ್ದು ಇನ್ನೂ ಸಹ ಭದ್ರಾ ನದಿಯು ಭರ್ತಿಯಾಗಿಲ್ಲ. ಪ್ರತಿಬಾರಿಯೂ ಭದ್ರಾ ನದಿಯಿಂದ ನೀರನ್ನು ಬಳಸಿಕೊಂಡು ಹತ್ತಾರು ಹಳ್ಳಿಗಳಿಗೆ ನೀರನ್ನು ಕೊಟ್ಟರೆ, ನದಿಗೆ ನೀರನ್ನು ಕೊಡುವವರು ಯಾರು? ಮಳೆಯಿಲ್ಲ, ಡ್ಯಾಂನವರು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನೀರನ್ನು ಬಿಡುವುದಿಲ್ಲ. ಇವುಗಳ ಮಧ್ಯದಲ್ಲಿ ರೈತರ ಬೆಳೆಗಳಿಗಾಗಿ ಪಂಪ್‌ಸೆಟ್‌ಗಳನ್ನು ಅಳವಡಿಸುತ್ತೀರಿ. ಇಂತಹ ಪರಿಸ್ಥಿತಿಗಳಲ್ಲಿ ಈ ಯೋಜನೆಗೆ ಬೆನ್ನೆಲುಬು ಆಗಿ ಚೆಕ್ ಡ್ಯಾಂಗಳ ನಿರ್ಮಾಣದ ಅವಶ್ಯಕತೆಯಿದೆಯೇ ಅಥವಾ ಇಲ್ಲವೇ ಎಂಬ ಅಂಶದ ಬಗ್ಗೆ ಅತ್ಯಂತ ಗಂಭೀರವಾಗಿ ಗ್ರಾಮೀಣಾಭಿವೃದ್ಧಿ ಮಂತ್ರಿಗಳಾದ ತಾವು ಚಿಂತನೆಯನ್ನು ಮಾಡಬೇಕೆಂಬುದು ನನ್ನ ವಿನಂತಿಯಾಗಿದೆ.

ಮತ್ತೊಂದು ವಿಚಾರವೇನೆಂದರೆ, 4-6 ವರ್ಷಗಳ ಹಿಂದೆ ಡಿ.ಪಿ.ಆರ್.ಮಾಡಿದ್ದಾರೆ. ಅದರನ್ವಯ 10 ಕಿಲೋಮೀಟರ್ ದೂರದ ಪ್ರದೇಶಗಳಿಗೆ ನೀರನ್ನು ಒದಗಿಸುವ ಸಂಬಂಧ ಪೈಪ್‌ಲೈನ್‌ಗಳನ್ನು ಅಳವಡಿಸಿದ್ದಾರೆ. ಆದರೆ, ನೀರಿನ ಮೂಲವನ್ನು ಹುಡುಕುವ ಮೊದಲೇ ಪೈಪ್‌ಲೈನ್‌ಗಳನ್ನು ಅಳವಡಿಸಿದ್ದಾರೆ. ಸದರಿ ಯೋಜನೆ ರೀತ್ಯ ದೊಡ್ಡ ದೊಡ್ಡ ಟ್ಯಾಂಕ್‌ಗಳಿರುವ ಪ್ರದೇಶದಿಂದ ಬಹಳ ಹತ್ತಿರದಲ್ಲೇ ಇರುವ ಗ್ರಾಮೀಣ ಪ್ರದೇಶಗಳ ಮುಖಾಂತರ ಪೈಪ್‌ಲೈನ್‌ಗಳನ್ನು ಅಳವಡಿಸುತ್ತಾರೆ. ಆದರೆ ಪೈಪ್‌ಲೈನ್ ಹಾದುಹೋಗುವ ಹಳ್ಳಿಗಳಿಗೆ ನೀರನ್ನು ಕೊಡುವುದಿಲ್ಲ. ಈ ಬಗ್ಗೆ ಅಧಿಕಾರಿಗಳನ್ನು ವಿಚಾರಿಸಿದಾಗ, ಡಿ.ಪಿ.ಆರ್.ನಲ್ಲಿ ಸದರಿ ಗ್ರಾಮಗಳಿಗೆ ನೀರನ್ನು ಒದಗಿಸುವ ವ್ಯವಸ್ಥೆಯಿಲ್ಲ ಹೀಗಾಗಿ ನೀರನ್ನು ಕೊಡಲಾಗುವುದಿಲ್ಲ ಎಂಬುದಾಗಿ ಹೇಳುತ್ತಾರೆ. ಈ ಸದನದ ಮುಖಾಂತರ ನಾವು ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ವಿಚಾರದಲ್ಲಿ ಮಾನ್ಯ ಸಚಿವರು ಆದೇಶವನ್ನು ಮಾಡಲಿ ಹಾಗೂ ಜಿಲ್ಲಾ ಉಸ್ತುವಾರಿ ಮಂತ್ರಿಗಳು ನಿರ್ಣಯವನ್ನು ತೆಗೆದುಕೊಳ್ಳಲಿ. ಈ ಸಂಬಂಧ ಅಧಿಕಾರಿಗಳಿಂದ ವರದಿಯನ್ನೂ ಸಹ ಪಡೆಯಲಿ. ಪೈಪ್‌ಲೈನ್ ಹಾಗುಹೋಗುವ ಅರ್ಧ-ಒಂದು ಕಿಲೋ ಮೀಟರ್ ವ್ಯಾಪ್ತಿಪ್ರದೇಶದಲ್ಲಿನ ಗ್ರಾಮಗಳಿಗೆ ನೀರನ್ನು ಒದಗಿಸಲಿ. ಇಲ್ಲದೇ ಹೋದರೆ, ಅಲ್ಲಿನ ನಿವಾಸಿಗಳು ಪೈಪ್‌ಗಳನ್ನು ಒಡೆದು ಹಾಕಿ ನೀರನ್ನು ಪಡೆದುಕೊಳ್ಳುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ನೀವು ಪೋಲೀಸರ ಸಹಾಯವನ್ನು ಪಡೆದುಕೊಳ್ಳುತ್ತೇವೆ ಎಂಬುದಾಗಿ ಹೇಳಬಹುದು. 10 ಕಿಲೋಮೀಟರ್ ದೂರ ಪ್ರದೇಶದ ನಿವಾಸಿಗಳು ನೀರನ್ನು ಕುಡಿಯಬಹುದು ಆದರೆ, ಪೈಪ್‌ಲೈನ್ ಹಾದುಹೋಗುವ ಆಸುಪಾಸಿನ ಗ್ರಾಮಗಳಿಗೆ ನೀರನ್ನು ಕೊಡುವುದಿಲ್ಲ ಎನ್ನುವುದಾದರೆ, ಇದು ಯಾವ ರೀತಿಯ ನ್ಯಾಯ? ಆದ್ದರಿಂದ ದಯಮಾಡಿ ಮಾನ್ಯ ಸಚಿವರು ಡಿ.ಪಿ.ಆರ್. ಸಂಬಂಧ ಜಿಲ್ಲಾ ಉಸ್ತುವಾರಿ ಮಂತ್ರಿಗಳಿಗೆ, ಜಿಲ್ಲಾಧಿಕಾರಿಗಳಿಗೆ ಅಥವಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಯಾರಿಗಾದರೂ ಸರಿ ಆದೇಶವನ್ನು ನೀಡಿ ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಲಿ. ಈಗಾಗಲೇ ಈ ಯೋಜನೆಯಲ್ಲಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದೆ. ಹೀಗಾಗಿ ಈ ಯೋಜನೆಯಲ್ಲಿ ಮಾರ್ಪಾಡುಗಳನ್ನು ಮಾಡಲು ಟೆಂಡರ್‌ದಾರರು ಒಪ್ಪಿಕೊಳ್ಳುವುದಿಲ್ಲ. ಈ ರೀತಿಯ ಸಣ್ಣ ಬದಲಾವಣೆಯಿಂದ 4-8 ಲಕ್ಷ ರೂಪಾಯಿಗಳಷ್ಟು ಹೆಚ್ಚಿನ ಹಣ ಖರ್ಚಾಗಬಹುದು ಇಲ್ಲವೆಂದು ನಾನು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೇಳುವುದಿಲ್ಲ. ದೂರದ ಪ್ರದೇಶಗಳಿಗೆ ಹಳ್ಳಿಗಳ ಮುಖಾಂತರ ನೀರನ್ನು ಒದಗಿಸಿ, ಅಲ್ಲಿನ ಆಸುಪಾಸಿನ ಗ್ರಾಮಗಳಿಗೆ ನೀರನ್ನು ಒದಗಿಸದೇ ಹೋದರೆ ಇಂತಹ ಅನ್ಯಾಯವನ್ನು ತಡೆದುಕೊಳ್ಳುವುದಾದರೂ ಹೇಗೆ? ಇದು ಸಾಮಾಜಿಕ ಸಮಸ್ಯೆಯೂ ಸಹ ಆಗಿದೆ. ಈ ಎರಡು ಅಂಶಗಳ ಬಗ್ಗೆ ಗಮನಹರಿಸಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಎರಡು ವಿಚಾರಗಳಲ್ಲಿ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯಲು ಬಯಸುತ್ತೇನೆ. ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಮೂರು ಗ್ರಾಮಗಳಲ್ಲಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳು ಮಂಜೂರಾಗಿದ್ದು, ಅವುಗಳನ್ನು ಕೈಗೆತ್ತಿಕೊಳ್ಳುವ ಕೆಲಸಗಳು ಇನ್ನೂ ಸಹ ಆಗಿಲ್ಲ. ಅವುಗಳು ಯಾವುವೆಂದರೆ ಕೊಪ್ಪ, ಮದ್ದೂರು ಕೆರೆಗಳಿಂದ ಹಾಗೂ ಮತ್ತೊಂದು ಶಿಂಷಾ ನದಿಯಿಂದ. ದಯಮಾಡಿ ಈ ಮೇಲ್ಕಂಡ ಯೋಜನೆಗಳನ್ನು ಕೈಗೆತ್ತಿಕೊಳ್ಳಿ. ಏಕೆಂದರೆ ಈ ಆಯಕಟ್ಟಿನ ಕಟ್ಟ ಕಡೆಯ ಭಾಗದಲ್ಲಿ ನೀರಿನ ಹಾಹಾಕಾರವುಂಟಾಗಿದೆ. ಕಳೆದ ಮೂರು ವರ್ಷಗಳಿಂದ ಬರಗಾಲದ ಬೇಗೆಯಲ್ಲಿ ಬಳಲುತ್ತಿರುವ ಆ ಎಲ್ಲಾ ಗ್ರಾಮಗಳಲ್ಲಿ ಬಹುಪಾಲು ಕುಡಿಯುವ ನೀರಿನ ಸಮಸ್ಯೆಯುಂಟಾಗಿದೆ. ಹಿಂದಿನ ಸಾಲುಗಳಲ್ಲಿ ಕುಡಿಯುವ ನೀರಿನ ಯೋಜನೆಗಳಿಗೆ ಹಣಕಾಸಿನ ಕೊರತೆ ಇರಲಿಲ್ಲ. ಇತ್ತೀಚಿನ ದಿನಗಳಲ್ಲಿ ಎಲ್ಲಾ ಜನಪ್ರತಿನಿಧಿಗಳು ಒತ್ತಡವನ್ನು ಹಾಕಿ ಬೋರ್‌ವೆಲ್‌ಗಳನ್ನು ಕೊರೆಸಿದ್ದಾರೆ. ಪಂಪ್‌ಗಳನ್ನು ಅಳವಡಿಸಲು, ಟ್ಯಾಂಕ್‌ಗಳಿಗೆ ಸಂಪರ್ಕ ಒದಗಿಸಲು ಪೈಪ್‌ಲೈನ್‌ನ್ನು ಹಾಕಲು ಹಣದ ಕೊರತೆಯುಂಟಾಗಿದೆ. ನಮ್ಮ ಜಿಲ್ಲೆಯಲ್ಲಿ ಬೋರ್‌ವೆಲ್‌ಗಳನ್ನು ಹಾಕಿಸಲು ಕನಿಷ್ಟ 7-8 ಕೋಟಿ ರೂಪಾಯಿಗಳಷ್ಟು ಹಣದ ಅವಶ್ಯಕತೆಯಿದೆ. ಯಾವ ಭಾಗದಲ್ಲಿ ಹೆಚ್ಚು ಬೋರ್‌ವೆಲ್‌ಗಳನ್ನು ಕೊರೆಸಿದ್ದಾರೆ ಅಲ್ಲಿ ಸಂಪರ್ಕ ಒದಗಿಸುವಂತಹ ಸ್ಥಿತಿಯಿಲ್ಲ. ಹೀಗಾಗಿ ಬಹಳ ಜಿಲ್ಲಾಪಂಚಾಯತಿಗಳಲ್ಲಿ ಸಮಸ್ಯೆಯುಂಟಾಗಿದೆ. ಕುಡಿಯುವ ನೀರಿನ ವಿಚಾರದಲ್ಲಿ ತಾವು ದಯಮಾಡಿ ಯೋಜನೆಗಳಿಗೆ ಅನುದಾನದ ಕೊರತೆಯುಂಟಾಗದ ಹಾಗೆ ನೋಡಿಕೊಳ್ಳಿ. ಕುಡಿಯುವ ನೀರಿನ ವಿಚಾರದಲ್ಲಿ ನಾವು ಈಗಾಗಲೇ ಹಲವಾರು ರೀತಿಯ ಸಮಸ್ಯೆಗಳನ್ನು ಎದುರಿಸಿದ್ದೇವೆ. ಹೀಗಾಗಿ ತಾವು ಈ ವಿಚಾರದಲ್ಲಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಿ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕಾಂತರಾಜು(ಬಿಎಂಎಲ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕುಡಿಯುವ ನೀರಿನ ವ್ಯವಸ್ಥೆಯ ಬಗ್ಗೆ ನಮ್ಮ ಹಲವಾರು ಸದಸ್ಯರುಗಳು ಮಾತನಾಡುತ್ತಿದ್ದಾರೆ. ಎರಡು-ಮೂರು ವರ್ಷಗಳ ಹಿಂದೆ ಅಧಿಕಾರದಲ್ಲಿದ್ದ ಜಿಲ್ಲಾ ಪಂಚಾಯತಿಯ ಸದಸ್ಯರುಗಳಿಗೆ ಕುಡಿಯುವ ನೀರಿನ

ಯೋಜನೆಗಾಗಿ ಬಿಡುಗಡೆಯಾಗುತ್ತಿದ್ದ ಅನುದಾನಗಳು ಇವತ್ತಿನ ದಿವಸ ಬಿಡುಗಡೆಯಾಗುತ್ತಿಲ್ಲ ಹಾಗೂ ಅನುದಾನದ ಪ್ರಮಾಣವೂ ಸಹ ಕಡಿಮೆಯಾಗಿದೆ. ಆರ್ಥಿಕವಾಗಿ ಸದೃಢವಾಗಿರದ ಪಂಚಾಯತಿಗಳು ತಮ್ಮ ಅಡಿ ಕರ್ತವ್ಯ ನಿರ್ವಹಿಸುತ್ತಿರುವ ವಾಟರ್‌ಮೆನ್‌ಗಳಿಗೆ ಕಳೆದ 6-7 ತಿಂಗಳುಗಳಿಂದ ವೇತನವನ್ನು ಪಾವತಿಸಿಲ್ಲ. ನೀರಿನ ಯೋಜನೆಗಳಿಗೆ ಪೈಪ್‌ಲೈನ್‌ಗಳನ್ನು ಅಳವಡಿಸುವುದು ತುಂಬಾ ಕಷ್ಟಕರವಾಗಿದೆ. ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಈ ಹಿಂದೆ ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳಿಗೆ ಬಿಡುಗಡೆಯಾಗುತ್ತಿದ್ದ ಅನುದಾನದ ಪ್ರಮಾಣವನ್ನು ಇಂದಿಗೂ ಸಹ ಸರ್ಕಾರವು ಮುಂದುವರೆಸಿದರೆ ಕನಿಷ್ಠ ಕುಡಿಯುವ ನೀರಿನ ಸಮಸ್ಯೆಯು ಬಗೆಹರಿಯುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ಸದನದ ಮೂಲಕ ನಾನು ಸರ್ಕಾರವನ್ನು ಒತ್ತಾಯಿಸುವುದೇನೆಂದರೆ, ಇಚ್ಛಾ-ಶಕ್ತಿಯಿರುವ ಮಂತ್ರಿಗಳು ಕುಡಿಯುವ ನೀರಿನ ಎಲ್ಲಾ ವ್ಯವಸ್ಥೆಯು ನೇರವಾಗಿ ಜನರಿಗೆ ತಲುಪುವಂತೆ ಮಾಡಲಿ. ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ವಾಟರ್‌ಮೆನ್‌ಗಳಿಗೆ ವೇತನವನ್ನು ನೀಡಿಲ್ಲ. ಆದಾಗ್ಯೂ ಈಗಾಗಲೇ ಅಳವಡಿಸಲಾಗಿರುವ ಶುದ್ಧ ಕುಡಿಯುವ ನೀರಿನ ಘಟಕಗಳ ನಿರ್ವಹಣಾ ಕೆಲಸವನ್ನು ಅವರಿಗೆ ವಹಿಸಿದ್ದೀರಿ. ಇವತ್ತಿನ ದಿವಸ 'ದೇವರು ವರ ಕೊಟ್ಟರೂ ಪೂಜಾರಿ ವರ ಕೊಡುವುದಿಲ್ಲ' ಎನ್ನುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಬೋರ್‌ವೆಲ್‌ಗಳನ್ನು ಕೊರೆಸಿದ್ದಾರೆ, ಆದರೆ ಪಂಪ್‌ಸೆಟ್ ಹಾಗೂ ಮೋಟರ್‌ಗಳನ್ನು ಅಳವಡಿಸಲು ಸಮಸ್ಯೆಯುಂಟಾಗಿದೆ. ತುಮಕೂರು ಜಿಲ್ಲೆಯಲ್ಲಿ ನೀರಿನ ವಿಚಾರದಲ್ಲಿ Assistant Executive Engineer (AEE) ಎಂಬ ಹುದ್ದೆಯನ್ನು ಹೊಸದಾಗಿ ಮಾಡಿದ್ದೀರಿ. ಸದರಿ ಜಿಲ್ಲೆಯ 11 ತಾಲ್ಲೂಕುಗಳ ಪೈಕಿ 6 ತಾಲ್ಲೂಕುಗಳಲ್ಲಿ ಈ AEE ಗಳ ಹುದ್ದೆಗಳು ಖಾಲಿಯಿವೆ. ಹೀಗಾಗಿ ಸಮಸ್ಯೆಗಳು ಉಂಟಾಗಿವೆ. ತಾಂತ್ರಿಕ ಅಧಿಕಾರಿ ಹಾಗೂ ಸಿಬ್ಬಂದಿಗಳ ಕೊರತೆಯುಂಟಾಗಿದೆ. ನಮ್ಮ ಜಿಲ್ಲೆಯಲ್ಲಿನ 330 ಪಂಚಾಯತಿಗಳ ಪೈಕಿ 96 ಪಂಚಾಯತಿಗಳಲ್ಲಿ Panchayath Development Officer (PDO) ಹುದ್ದೆಗಳು ಖಾಲಿಯಿವೆ. ಇಂತಹ ಪರಿಸ್ಥಿತಿಯಲ್ಲಿ ನಾವು ಹೇಗೆ ಗ್ರಾಮಪಂಚಾಯತಿಗಳಲ್ಲಿ ಕೆಲಸಗಳನ್ನು ಮಾಡಬೇಕು ಹಾಗೂ ನೀರಿನ ಸಮಸ್ಯೆಯನ್ನು ಯಾವ ರೀತಿಯಾಗಿ ಬಗೆಹರಿಸಬೇಕು. ಇತ್ತೀಚಿನ ದಿನಗಳಲ್ಲಿ ಗ್ರಾಮಗಳು ಬಹಳ ವೇಗದಲ್ಲಿ ಬೆಳೆಯುತ್ತಿವೆ ಹಾಗೂ ಆ ಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಮಪಂಚಾಯತಿಗಳು ಕಾರ್ಯನಿರ್ವಹಿಸುತ್ತಿವೆ. ವಾಟರ್‌ಮೆನ್‌ಗಳಿಗೆ ಬಾಕಿಯಿರುವ ವೇತನವನ್ನು ಪಾವತಿಸಿ, ಕುಡಿಯುವ ನೀರಿನ ಯೋಜನೆಗೆ ಸಂಬಂಧಪಟ್ಟಂತೆ ಪೈಪ್‌ಲೈನ್‌ಗಳನ್ನು ಅಳವಡಿಸಿ ಹಾಗೂ ಅಲ್ಲಿನ ನಿವಾಸಿಗಳಿಗೆ ನೇರವಾಗಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಯೋಜನೆಯ ಫಲ ಸಿಗುವಂತೆ ಮಾಡುವ ಬಗ್ಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

ಆಂಧ್ರಪ್ರದೇಶ ರಾಜ್ಯದ ಗಡಿಯನ್ನೂ ದಾಟಿ ನಮ್ಮ ಜಿಲ್ಲೆಯ ಪಾವಗಡ ತಾಲ್ಲೂಕಿನ ಭೌಗೋಳಿಕ ವಿಸ್ತೀರ್ಣವಿದೆ. ನಮ್ಮ ಗಡಿಯನ್ನೂ ದಾಟಿ ಆಂಧ್ರಪ್ರದೇಶದ ಗ್ರಾಮಗಳಿಗೆ ತುಂಗಭದ್ರಾ ಮೇಲ್ದಂಡೆ ಯೋಜನೆಯಡಿ ಪೈಪ್‌ಲೈನ್ ಅನ್ನು ಅಳವಡಿಸಲಾಗಿದೆ. ಸದರಿ ಪೈಪ್‌ಲೈನ್‌ನ ಟೆಂಡರ್ ಕಾಮಗಾರಿಯು ಜಾರಿಯಲ್ಲಿದೆ. ಯೋಜನೆಯ ಕಾಮಗಾರಿಯನ್ನು ಹಾಗೂ ಟೆಂಡರ್ ಮೊತ್ತವನ್ನು ಹೆಚ್ಚಳ ಮಾಡಿ. ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ವ್ಯವಸ್ಥೆಯನ್ನು ಮಾಡಿ. ಏಕೆಂದರೆ ಆ ಭಾಗದಲ್ಲಿ ಕುಡಿಯುವ ನೀರಿನ ವ್ಯವಸ್ಥೆಯು ಬಹಳವಾಗಿ ಹದಗೆಟ್ಟು ಹೋಗಿದೆ. ಅಲ್ಲಿರುವ 7–8 ದೊಡ್ಡ ಗ್ರಾಮ ಪಂಚಾಯತಿಗಳಿಗೆ ಕುಡಿಯುವ ನೀರನ್ನು ಒದಗಿಸುವ ವ್ಯವಸ್ಥೆಯನ್ನು ಮಾಡುವಂತೆ ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಎನ್.ಅಪ್ಪಾಜಿಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ ರವರು ಗಮನ ಸೆಳೆಯುವ ಸೂಚನೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟಂತೆ ನಾಗಮಂಗಲ ತಾಲ್ಲೂಕಿನ ಮಾರ್ಕೋನಹಳ್ಳಿ ಜಲಾಶಯದಿಂದ ಸುಮಾರು 128 ಗ್ರಾಮಗಳಿಗೆ ಕುಡಿಯುವ ನೀರಿನ DBOT (Design, Build, Operate and Transfer) ಯೋಜನೆಯನ್ನು 2018 ನೇ ಸಾಲಿನಲ್ಲಿ ಪ್ರಾರಂಭಿಸುವುದಾಗಿ ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ. ನನಗೆ ತಿಳಿದಿರುವ ಹಾಗೆ ಸದರಿ ಯೋಜನೆಯು ಇನ್ನೂ ಪ್ರಾರಂಭವಾಗಿಲ್ಲ. ಸದರಿ ಜಲಾಶಯವು ನಮ್ಮ ಊರಿನ ಪಕ್ಕದಲ್ಲಿಯೇ ಇದೆ ಹಾಗೂ ನಾನು ಸದರಿ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಸದರಿ ಯೋಜನೆಯ ಶಂಕು ಸ್ಥಾಪನೆಯನ್ನು ಇದೇ ತಿಂಗಳು 20 ನೇ ತಾರೀಕಿನಂದು ನೆರವೇರಿಸುತ್ತಾರೆಂಬ ಮಾಹಿತಿಯು ನನಗೆ ತಿಳಿದುಬಂದಿರುತ್ತದೆ. ಮಾನ್ಯ ಸದಸ್ಯರಾದ ಶ್ರೀ ಭಾನುಪ್ರಕಾಶ್ ರವರು ಉಲ್ಲೇಖಿಸಿರುವಂತೆ ಮಾರ್ಕೋನಹಳ್ಳಿ ಜಲಾಶಯದಲ್ಲಿ ಪ್ರಸ್ತುತ ಒಂದು ಹನಿ ನೀರೂ ಸಹ ಇಲ್ಲ. ಇದಕ್ಕೆ ನೀರಿನ ಮೂಲ ಹೇಗಿದೆ? 128 ಗ್ರಾಮಗಳಿಗೆ ಸದರಿ ಜಲಾಶಯದಿಂದ ಕುಡಿಯುವ ನೀರಿನ ಯೋಜನೆಯನ್ನು ಹಾಕಿಕೊಂಡಿದ್ದೀರಿ. ಇದಕ್ಕೆ ನೀರಿನ ಮೂಲ ಯಾವುದು? ಸದರಿ ಯೋಜನೆಯು ಈಗಾಗಲೇ ಪ್ರಾರಂಭವಾಗಿದೆ ಎಂದು ಹೇಳಲಾಗಿದೆ ಆದರೆ ವಾಸ್ತವವಾಗಿ ಸದರಿ ಯೋಜನೆಯು ಪ್ರಾರಂಭವಾಗಿದೆಯೇ? ಹಾಗಿದ್ದಲ್ಲಿ ಯಾವಾಗ ಪ್ರಾರಂಭವಾಗಿದೆ?

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿ ಶೇಕಡ 25 ರಷ್ಟು ಕಾಮಗಾರಿಯು ಪೂರ್ಣಗೊಂಡಿದೆ ಎಂಬುದಾಗಿ ಹೇಳಿದ್ದಾರೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರು ಸ್ಪಷ್ಟೀಕರಣವನ್ನು ನೀಡಬೇಕು.

(ಮುಂದು)

(970)6.00/14.11.2017/CS/KS

**ಶ್ರೀ ಹೆಚ್.ಕೆ.ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳಾದ ಭಾನು ಪ್ರಕಾಶ್‌ರವರು, ಶ್ರೀಕಂಠೇಗೌಡರು, ಕಾಂತರಾಜುರವರು ಮತ್ತು ಅಪ್ಪಾಜಿಗೌಡರು ನೇರವಾಗಿ ಈ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಪ್ರಶ್ನೆಗಳನ್ನು ಕೇಳಿರುವುದಿಲ್ಲ. ಆದ್ದರಿಂದ ಅವರುಗಳು ಪ್ರಸ್ತಾಪಿಸಿರುವ ವಿಚಾರಗಳನ್ನು ಕೇಳಿಸಿಕೊಂಡು, ಅವರ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡಿದ್ದೇನೆ. ಮಾನ್ಯ ಹಿರಿಯ ಸದಸ್ಯರಾದ ಶ್ರೀಮತಿ ಮೋಟಮ್ಮನವರು ಅವರ ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಾಮಗಾರಿ ಬಹಳ ವಿಳಂಬವಾಗಿದ್ದು ನಿಧಾನಗತಿಯಲ್ಲಿ ನಡೆಯುತ್ತಿದೆ, ಅದನ್ನು ತ್ವರಿತಗತಿಯಲ್ಲಿ ಮುಗಿಸಬೇಕೆನ್ನುವ ಒಂದು ಒತ್ತಾಯವನ್ನು ಮಾಡಿದ್ದಾರೆ.

ಈ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಕಾಮಗಾರಿಗಳು ವಿಳಂಬವಾಗುತ್ತಿರುವುದು ನಮ್ಮ ಗಮನಕ್ಕೆ ಬಂದ ಮೇಲೆ ನಮಗೂ ಸಹ ಈ ಕಾಮಗಾರಿಗಳ ಮೇಲೆ ಇರುವ ವಿಶೇಷ ಕಾಳಜಿಯಿಂದ ನಾವು ಇದ್ದಂತಹ ನೀತಿಯ ಬದಲಾವಣೆಯನ್ನು ಮಾಡಿದ್ದೇವೆ. ಇದರ ಬಗ್ಗೆ ಎಲ್ಲಾ ವಿವರಗಳನ್ನು ಮಾನ್ಯ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ ಅವರಿಗೆ ನೀಡಬೇಕೆಂದು ಬಯಸಿದ್ದೆನು. ಆದರೆ ಸರ್ಕಾರ ನೀಡಿರುವ ಲಿಖಿತ ಉತ್ತರದಿಂದ ತಮಗೆ ತೃಪ್ತಿಯಾಗಿದೆ ಎಂದು ಅವರು ಹೇಳಿದ ಕಾರಣ ಸದನದ ಸಮಯವನ್ನು ಹಾಳು ಮಾಡಬಾರದೆಂದು ನಾನು ಓದುತ್ತಿದ್ದ ಉತ್ತರವನ್ನು ಅಲ್ಲಿಗೆ ನಿಲ್ಲಿಸಿದ್ದೆನು. ನಾವು ಇಲ್ಲಿಯವರೆಗೆ ಏನು ಮಾಡುತ್ತಿದ್ದೇವೆಂದರೆ ಗುತ್ತಿಗೆದಾರರು ತಮ್ಮ ಕಾಮಗಾರಿಗಳನ್ನು ಎಷ್ಟೇ ಮುಗಿಸಿರಲಿ ಅವರಿಗೆ ನಾವು ಹಣವನ್ನು ಕೊಟ್ಟುಕೊಂಡು ಬಂದಿದ್ದೆವು. ಸಹಜವಾಗಿ ಆರ್ಥಿಕ ತೊಂದರೆ ಇರುವ ಕಾರಣ ಎಲ್ಲರಿಗೂ ಒಟ್ಟಿಗೆ ಹಣವನ್ನು ನೀಡುವುದಕ್ಕೆ ಆಗುವುದಿಲ್ಲ. ಆ ಹಿನ್ನೆಲೆಯಲ್ಲಿ ಯಾರು ಬಹುತೇಕ 90% ರಷ್ಟು ಹೆಚ್ಚು ಭೌತಿಕ ಕಾಮಗಾರಿಯನ್ನು ಮುಗಿಸಿರುತ್ತಾರೆ, ಅವರಿಗೆ ಶೇಕಡ 100 ರಷ್ಟು ಕಾಮಗಾರಿಯ ಬಾಕಿ ಹಣವನ್ನು ನೀಡಬೇಕೆಂದು ನಾವು ನಿರ್ಧರಿಸಿದ್ದೇವೆ. ಯಾರು ಭೌತಿಕವಾಗಿ ಶೇಕಡ 80ರಷ್ಟು ಕಾಮಗಾರಿಯ ಕೆಲಸವನ್ನು ಮುಗಿಸಿರುತ್ತಾರೆ if the physical progress is 80%, ಅವರಿಗೆ ಶೇಕಡ 85ರಷ್ಟು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಾಕಿ ಹಣವನ್ನು ನೀಡಿದ್ದೇವೆ. ಅದೇ ರೀತಿ ಯಾರು ಬಹುತೇಕ 70% ಕ್ಕಿಂತ ಹೆಚ್ಚು ಭೌತಿಕ ಕಾಮಗಾರಿಯನ್ನು ಮುಗಿಸಿರುತ್ತಾರೆ, ಅವರಿಗೆ ಶೇಕಡ 75 ರಷ್ಟು ಕಾಮಗಾರಿಯ ಬಾಕಿ ಹಣವನ್ನು ನೀಡಿದ್ದೇವೆ. ಯಾರು 60% ರಷ್ಟು ಭೌತಿಕ ಕಾಮಗಾರಿಯನ್ನು ಮುಗಿಸಿರುತ್ತಾರೆ, ಅವರಿಗೆ ಶೇಕಡ 60 ರಷ್ಟು ಕಾಮಗಾರಿಯ ಬಾಕಿ ಹಣವನ್ನು ನೀಡಿದ್ದೇವೆ. ಯಾರು ಶೇಕಡ 50ಕ್ಕಿಂತ ಕಡಿಮೆ ಭೌತಿಕ ಕಾಮಗಾರಿಯನ್ನು ಮಾಡಿದ್ದಾರೆ, ಅವರಿಗೆ ನೀವು ಏಕೆ ಕಾಮಗಾರಿಯ ಪ್ರೋಗ್ರೆಸ್ ತೋರಿಸಿಲ್ಲವೆಂದು ಕಾರಣ ಕೇಳಿ ಕ್ರಮ ಜರುಗಿಸುತ್ತಿದ್ದೇವೆ. ಮುಂದೆ ಅವರು ಶೇಕಡ 50 ಕ್ಕಿಂತ ಹೆಚ್ಚು ಕಾಮಗಾರಿ ಮುಗಿಸಿದ ಮೇಲೆ ಅವರಿಗೆ ಶೇಕಡ 50ರಷ್ಟು ಬಾಕಿ ಹಣವನ್ನು ಬಿಡುಗಡೆ ಮಾಡುತ್ತಾ ಬಂದಿದ್ದೇವೆ. ಈ ಒಂದು ವ್ಯವಸ್ಥೆಯಿಂದ ಈ ಕಾಮಗಾರಿಗಳ ಪ್ರಗತಿಯಲ್ಲಿ ಸಾಕಷ್ಟು ವೇಗ ಹೆಚ್ಚಾಗಿರುವುದನ್ನು ಕಾಣಲಾಗಿದೆ. ಇದರಿಂದಾಗಿಯೇ ಇಷ್ಟೆಲ್ಲಾ ಕಾಮಗಾರಿಗಳನ್ನು ಮುಗಿಸುವುದಕ್ಕೆ ನಮಗೆ ಸಾಧ್ಯವಾಯಿತು. ಬಹುಶಃ ಶ್ರೀಮತಿ ಮೋಟಮ್ಮನವರ ಚಿಕ್ಕಮಗಳೂರು ಜಿಲ್ಲೆಯಲ್ಲಿಯೂ ಸಹ ಈಗ ಕಾಮಗಾರಿಯ ಪ್ರಗತಿಯ ವೇಗ ಹೆಚ್ಚಾಗಿರಬಹುದು. ನಿರ್ದಿಷ್ಟವಾಗಿ ಚಿಕ್ಕಮಗಳೂರು ಜಿಲ್ಲೆಯ ಯೋಜನೆಯ ಬಗ್ಗೆ ನಮ್ಮ ಆಯುಕ್ತರಿಗೆ ನಿರ್ದೇಶನವನ್ನು ನೀಡಿ, ಈ ಯಗಚಿ ಬಹುಗ್ರಾಮ ಯೋಜನೆಯ ಬಗ್ಗೆ ನಮ್ಮ ಆಯುಕ್ತರೆ ಖುದ್ದಾಗಿ ಭೇಟಿ ನೀಡಿ, ಅಲ್ಲಿ ಪರಿವೀಕ್ಷಣೆ ನಡೆಸಿ ಅಲ್ಲಿನ ಕಾಮಗಾರಿ ಯಾವ ಹಂತದಲ್ಲಿದೆ ಎನ್ನುವುದನ್ನು ಮಾನ್ಯ ಮೋಟಮ್ಮನವರಿಗೂ ಸಹ ತಿಳಿಸುವುದಕ್ಕೆ ಹಾಗೂ ಅಲ್ಲಿನ ಕಾಮಗಾರಿಯನ್ನು ತ್ವರಿತಗೊಳಿಸುವುದಕ್ಕೆ ನಾನು ಅವರಿಗೆ ನಿರ್ದಿಷ್ಟ ನಿರ್ದೇಶನವನ್ನು ನೀಡುತ್ತೇನೆ.

CEO ಮತ್ತು Deputy Commissioners conference ನಲ್ಲಿ ನಾವು ಮುಖ್ಯಮಂತ್ರಿಗಳಿಗೆ ಏನು ವಿವರಗಳನ್ನು ನೀಡಿದ್ದೆವು, ಆ ವಿವರಗಳನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಸದನದಲ್ಲಿ ಓದಿದರು. ಅದು ಸರಿಯಾಗಿದ್ದರೆ ಅದು ನಮ್ಮ ಇಲಾಖೆಯವರು ನೀಡಿರುವ ಅಂಕಿಅಂಶಗಳೇ ಆಗಿವೆ. ಮಾನ್ಯ ಸದಸ್ಯರುಗಳು ಹೇಳಿದ ಹಾಗೆ ಈ ಬಹುಗ್ರಾಮ ಯೋಜನೆಗಳನ್ನು ನಾವು ನಿಧಾನ ಮಾಡುತ್ತಿದ್ದೇವೆ. ಕಳೆದ ಆರೆಂಟು ತಿಂಗಳಿನಲ್ಲಿ, ಮಾನ್ಯ ರೇವಣ್ಣನವರು ತಂದಂತಹ ಎರಡು ಪ್ರಸ್ತಾವನೆಗಳನ್ನು ಆಗುವುದಿಲ್ಲ ಎಂದು ಅವರಿಗೆ ಬಹಳ ಸ್ಪಷ್ಟವಾಗಿ ತಿಳಿಸಿದ್ದೆನು. ಏಕೆಂದರೆ ಕೇಂದ್ರ ಸರ್ಕಾರ NRDWP (National Rural Development Water Programme) ಯೋಜನೆಯ ಮೂಲಕ ನಮಗೇನು ಹಣವನ್ನು ಕೊಡುತ್ತಿದ್ದರು, they have directed us not to take up

any new scheme, unless it is inevitable or unless there is an emergency. ನೀವು ಯಾವುದೇ ಹೊಸ ಯೋಜನೆಗಳನ್ನು ತೆಗೆದುಕೊಳ್ಳಬಾರದೆಂದು ನಮಗೆ ಒಂದು ಸೂಚನೆಯನ್ನು ಕಳುಹಿಸಿದರು. ಆ ಸೂಚನೆಯ ನಕಲನ್ನು ಸಹ ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಕಳುಹಿಸಿಕೊಡುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ನಮ್ಮ ಸರ್ಕಾರಕ್ಕೆ ಅನುಕೂಲವಾಗುವ ರೀತಿಯಲ್ಲಿ ಕೇಂದ್ರ ಸರ್ಕಾರ ಹಾಗೂ ಸಂಬಂಧಪಟ್ಟವರ ಜೊತೆಯಲ್ಲಿ ಈ ಬಗ್ಗೆ ವ್ಯವಹರಿಸಬೇಕು, ಹಾಗೂ ಮಾತನಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇಷ್ಟೆಲ್ಲಾ ತೊಂದರೆಗಳಿದ್ದರೂ ಸಹ ನಾವು ಕಾಮಗಾರಿಗಳನ್ನು ಪೂರ್ಣವಾಗಿ ನಿಲ್ಲಿಸಿಲ್ಲ. SLSSC (State Level Scheme Sanctioning Committee) ಖಾತೆಯನ್ನು ನಿರ್ವಹಿಸಿದಂತಹ ಅವರಿಗೆ ಇದು ಚೆನ್ನಾಗಿ ಗೊತ್ತಿದೆ. SLSSC ಸಭೆಯಲ್ಲಿ ಇದು ಪಾಸ್ ಆಗಿ, STA (State Technical Agency) **ಯಲ್ಲಿ** ಪಾಸ್ ಆಗಬೇಕು. ಇದರ ಜೊತೆಗೆ ಇದರಲ್ಲಿ ಕೇಂದ್ರ ಸರ್ಕಾರದ ಪ್ರತಿನಿಧಿಗಳಿರುತ್ತಾರೆ, ಅವರು ಇದಕ್ಕೆ ತಮ್ಮ ಒಪ್ಪಿಗೆಯನ್ನು ನೀಡಬೇಕಾಗುತ್ತದೆ. ನಾವು preliminary estimates ಗಳನ್ನು ಹಾಗೂ DPR (Detailed Project Report) ಗಳನ್ನು ಮಾಡಿ ಸಲ್ಲಿಸಬೇಕಾಗುತ್ತದೆ. ಆದ್ದರಿಂದ ನಮ್ಮ ದೃಷ್ಟಿಯಲ್ಲಿ ಯಾವ ಯೋಜನೆಗಳು ಅತ್ಯಂತ ಅವಶ್ಯವಾಗಿವೆ, ಅವುಗಳ preliminary work ಏನಿವೆ, we may not start them immediately, ಕಾಮಗಾರಿ ಪ್ರಾರಂಭಿಸುವ ಮೊದಲೇ ಅದು 10 ಕೋಟಿ ರೂಪಾಯಿಗಳಿಗೂ ಹೆಚ್ಚಿನ ಕಾಮಗಾರಿ ಆಗಿದ್ದಲ್ಲಿ SLSSC and STA ಸಭೆಯಲ್ಲಿ ಇದು ಪಾಸ್ ಆಗಿ DPR ಮಾಡಿ, then it shall go to the Finance Department and then comes to the Cabinet. ಹೀಗೆ ತಾಂತ್ರಿಕವಾಗಿ ಇದಕ್ಕೆ 3–4 ತಿಂಗಳುಗಳ ಕಾಲಾವಕಾಶ ಬೇಕಾಗುತ್ತದೆ. ಆದ್ದರಿಂದ ನಾವು ಯಾವುದೇ ಕಾಮಗಾರಿಗಳನ್ನು ನಿಲ್ಲಿಸಿರುವುದಿಲ್ಲ. ಆದರೆ ಹೊಸ ಯೋಜನೆಗಳನ್ನು ಪ್ರಾರಂಭ ಮಾಡುತ್ತಿಲ್ಲ ಏಕೆಂದರೆ ನಮ್ಮ ಕೈಯಲ್ಲಿರುವ ಕಾಮಗಾರಿಗಳನ್ನು ಪೂರ್ಣಗೊಳಿಸದೇ ಯಾವುದೇ ಹೊಸ ಕಾಮಗಾರಿಗಳನ್ನು ಕೈಗೊಂಡರೆ ಅವು ಯಾವೂ ಪೂರ್ಣಗೊಳ್ಳುವುದಿಲ್ಲ. ಗುತ್ತಿಗೆದಾರ ಬಂದು earth work ಏನಿರುತ್ತದೆ, ಅದಷ್ಟನ್ನು ಮಾಡಿ, ಅಲ್ಲಿಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಾಮಗಾರಿಯನ್ನು ನಿಲ್ಲಿಸಿ ಹೋಗಿಬಿಡುತ್ತಾನೆ. ಹೀಗಾಗಬಾರದೆಂದು ಈ ರೀತಿಯ ವ್ಯವಸ್ಥೆಯನ್ನು ಮಾಡಿದ್ದೇವೆ.

ಆದರೆ ಒಂದು ವಿಚಾರವನ್ನು ನಾನು ತಮ್ಮ ಗಮನಕ್ಕೆ ತರಬಯಸುವುದೇನೆಂದರೆ ಬಹುಶಃ ಮಾನ್ಯ ಉಗ್ರಪ್ಪನವರು ಈ ವಿಚಾರವನ್ನು ಪ್ರಸ್ತಾಪಿಸುತ್ತಾರೆಂದು ನಾನು ಭಾವಿಸಿದ್ದೆನು, ಈ ಪಾವಗಡಕ್ಕೂ ಕೂಡ DBOT (Design, Build, Operate and Transfer) ಮೇಲೆ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕಾಗಿತ್ತು, ಅದರ ಬಗ್ಗೆ ಸರ್ಕಾರ ಒಂದು ನಿರ್ಧಾರವನ್ನು ಕೈಗೊಂಡಿದೆ. ಅದು ಕೂಡಲಿಗಿ, ಚಳ್ಳಕೆರೆ, ಪಾವಗಡ, ಮೊಳಕಾಲ್ಮೂರಿನ ಕೆಲವು ಹಳ್ಳಿಗಳು ಸೇರಿದಂತಹ ಒಂದು ಬೃಹತ್ತಾದ ಯೋಜನೆ. ಇದನ್ನು ಕೂಡ ತೆಗೆದುಕೊಳ್ಳುವುದಕ್ಕೆ ನಾವು ಸಚಿವ ಸಂಪುಟ ಸಭೆಯಲ್ಲಿ ನಿರ್ಣಯವನ್ನು ಕೈಗೊಂಡಿದ್ದೇವೆ. DBOT ಒಂದು ಹೊಸ ಕಲ್ಪನೆಯಾದ ಕಾರಣ ಅದಕ್ಕೆ ನಾವು ಹೆಚ್ಚಿನ ಒತ್ತನ್ನು ಕೊಟ್ಟಿದ್ದೇವೆ. ಇದು ಮೊದಲು ಇರಲಿಲ್ಲವೆಂದಲ್ಲ, ಹಿಂದಿನ ಸರ್ಕಾರ ಇಂತಹ ಸಣ್ಣ ಯೋಜನೆಯನ್ನು ತೆಗೆದುಕೊಂಡಿದ್ದರು, ನಾವು ಇಂತಹ 9–10 ದೊಡ್ಡ ಯೋಜನೆಗಳನ್ನು ಕೈಗೊಂಡಿದ್ದೇವೆ. ಉದಾಹರಣೆಗೆ ನಮ್ಮ ಗದಗ ಜಿಲ್ಲೆಯಲ್ಲಿ ಒಂದು ಯೋಜನೆ, ಚಾಮರಾಜನಗರದಲ್ಲಿ ಒಂದು ಯೋಜನೆಯನ್ನು ಕೈಗೊಂಡು ಚಾಮರಾಜನಗರ ಜಿಲ್ಲೆಯ ಯೋಜನೆ ಈಗಾಗಲೇ ಪೂರ್ಣಗೊಂಡಿದೆ. ಗದಗ ಜಿಲ್ಲೆಯ ಕೆಲಸ ಶೇಕಡ 90 ರಷ್ಟು ಪೂರ್ಣಗೊಂಡಿದೆ. ಡಿಸೆಂಬರ್ ಅಥವಾ ಜನವರಿ ಅಂತ್ಯದೊಳಗೆ ಅದನ್ನು commission ಮಾಡಬೇಕೆಂದು ಪ್ರಯತ್ನವನ್ನು ಮಾಡುತ್ತಿದ್ದೇವೆ. ಹಾಗೆಯೇ ಕೊಪ್ಪಳ ಜಿಲ್ಲೆಯ ಕುಷ್ಟಗಿ ಹಾಗೂ ಯಲಬುರ್ಗಿ ತಾಲ್ಲೂಕುಗಳಿಗೆ ಒಂದು DBOT ಯೋಜನೆಯನ್ನು ಈಗಾಗಲೇ ಕೈಗೊಂಡಿದ್ದೇವೆ. ಈ ಯೋಜನೆಗಳನ್ನು ಪೂರೈಸಲು ಬಹಳ ದೊಡ್ಡ ಮಟ್ಟದ ಹಣ ಬೇಕಾಗುತ್ತದೆ. ಇದಕ್ಕಾಗಿಯೇ ತಕ್ಷಣಕ್ಕೆ 1050 ಕೋಟಿ ರೂಪಾಯಿಗಳನ್ನು ನೀಡಬೇಕೆನ್ನುವ ಬೇಡಿಕೆಯನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ನೀಡಿದ್ದೇವೆ. ಇದಕ್ಕೂ ಇನ್ನು ಹೆಚ್ಚಿನ ಹಣ ಬೇಕಾಗುತ್ತದೆ. ಒಂದು ವೇಳೆ NRDWP ನವರು ಹೆಚ್ಚಿನ ಹಣ ನೀಡಲು ಒಪ್ಪಿಕೊಂಡರೆ ನಮ್ಮ ರಾಜ್ಯದಿಂದಲೂ ಹೆಚ್ಚಿನ ಭಾಗವನ್ನು ಕೊಟ್ಟು ಹೆಚ್ಚು ಕೆಲಸವನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಮಾನ್ಯ ಮೂವರು ಸದಸ್ಯರುಗಳು ಹೇಳಿದ ವಿಚಾರಗಳು ಬಹಳ ಮಹತ್ವದ್ದಾಗಿದೆ. ಅವರು ಬೋರ್‌ವೆಲ್ ಕೊರೆಯುವ ಬಗ್ಗೆ ಮತ್ತೆ ಜಿಲ್ಲಾ ಪಂಚಾಯಿತಿಗಳಿಗೆ ಹಣ ಬಿಡುಗಡೆ ಮಾಡುವ ವಿಚಾರದ ಬಗ್ಗೆ ಪ್ರಸ್ತಾಪವನ್ನು ಮಾಡಿದರು. ತಮಗೆಲ್ಲರಿಗೂ ಗೊತ್ತಿರುವ ಹಾಗೆ 14ನೇ ಹಣಕಾಸಿನ ಆಯೋಗದಿಂದ ಜಿಲ್ಲಾ ಪಂಚಾಯಿತಿಗಳಿಗೆ ಹಣ ಬರಲೇ ಇಲ್ಲ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹಾಗಾಗಿ ಜಿಲ್ಲಾ ಪಂಚಾಯಿತಿಗಳಿಗೆ ಆರ್ಥಿಕ ಕೊರತೆ ಉಂಟಾಗಿದೆ. ಈ RWS & SD (Rural Water Supply and Sanitation Department) ನವರು NRDWP ಕೆಳಗೆ ಏನು ಕೆಲಸ ಮಾಡಬೇಕಾಗಿದೆ., ಆ ಅಲೋಕೇಷನ್ ನೇರವಾಗಿ ಜಿಲ್ಲಾ ಪಂಚಾಯಿತಿಗೆ ಬರುವಂಥದ್ದಾಗಿದ್ದು ಸದಸ್ಯರಿಗೆ ಬರುವುದಿಲ್ಲವೆನ್ನುವುದನ್ನು ನಾವು ಒಪ್ಪಿಕೊಳ್ಳೋಣ. ಆದರೆ ಕುಡಿಯುವ ನೀರಿಗೆ ಯಾವುದೇ ಕೊರತೆ ಉಂಟಾಗದ ಹಾಗೆ ನಾವು ಸಮತೂಕವನ್ನು ಮಾಡುತ್ತಿದ್ದೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾನು ಎರಡು–ಮೂರು ಅಂಶಗಳನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನಕ್ಕೆ ತಂದಿದ್ದೆನು; ಒಂದು ಅಲ್ಲಿ ತಾಂತ್ರಿಕ ಸಿಬ್ಬಂದಿಯ ಕೊರತೆ ಇದೆ ಎನ್ನುವುದು, ಆ ವಿಚಾರದ ಬಗ್ಗೆ ಏನನ್ನೂ ಹೇಳಲಿಲ್ಲ. ಅದರ ಬಗ್ಗೆ ಸಚಿವರು clarify ಮಾಡಬೇಕು. ತಾಂತ್ರಿಕ ಸಿಬ್ಬಂದಿ ಇಲ್ಲದಿದ್ದಲ್ಲಿ ಉಳಿದೆಲ್ಲ ವಿಚಾರಗಳು ನಿಧಾನ ಆಗುತ್ತದೆ ಎನ್ನುವುದು ನಿಮಗೂ ಸಹ ಗೊತ್ತಿರುವ ವಿಚಾರ. ಮತ್ತೊಂದು ಈ ಗ್ರಾಮ ಪಂಚಾಯಿತಿಗಳ ನಿರ್ವಹಣೆಗೆ ಬೇರೆ ಏನಾದರೂ ವ್ಯವಸ್ಥೆ ಮಾಡಲು ಸಾಧ್ಯವೇ ಎನ್ನುವುದನ್ನು ಮಾನ್ಯ ಸಚಿವರು ತಿಳಿಸಬೇಕು. ಉಳಿದಂತೆ ಸಚಿವರು ಹೇಳುವ ವಿಚಾರಗಳೆಲ್ಲ ಸರಿಯಾಗಿದೆ. ಇಲ್ಲ ಎಂದು ನಾನು ಹೇಳುವುದಿಲ್ಲ.

**ಶ್ರೀ ಹೆಚ್.ಕೆ.ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಉತ್ ರಾಜ್ ಸಚಿವರು):–** ಮಾನ್ಯ ಸಭಾಪತಿಯವರೇ, ತಾವು ಎರಡನೆಯ ವಿಚಾರ ಏನು ಹೇಳಿದ್ದೀರಿ., ಈಗಾಗಲೇ ಅದರ ಬಗ್ಗೆ ನಾವು ನಿರ್ಣಯಿಸಿದ್ದೇವೆ, ಎಲ್ಲಿ ಒಂದು ಪಂಚಾಯಿತಿಗಿಂತ ಹೆಚ್ಚು ಪಂಚಾಯಿತಿಗಳಿಗೆ ಬಹು ಗ್ರಾಮ ಯೋಜನೆಯ ನೀರನ್ನು ನೀಡುತ್ತಿದ್ದರೆ, ಅಲ್ಲಿ ನಮ್ಮ ಇಂಜಿನಿಯರಿಂಗ್ ಇಲಾಖೆಯೇ Rural Waer Supply Schme ಏನಿದೆ ಅದರಡಿಯಲ್ಲಿ O & M (Operation and Maintenance) ಮಾಡುತ್ತಿದ್ದೇವೆ. ಎಲ್ಲಿ ಒಂದು ಪಂಚಾಯಿತಿಗೆ ಮಾತ್ರ ಸೀಮಿತ ಆಗಿದ್ದಲ್ಲಿ, ಅಲ್ಲಿ ಮಾತ್ರ ಗ್ರಾಮ ಪಂಚಾಯಿತಿಯವರಿಗೇ O & M ಮಾಡಬೇಕೆಂದು ಒತ್ತಾಯ ಮಾಡುತ್ತೇವೆ.

(ಮುಂದು)

(972)14–11–2017(06–20)ಬಿಎಸ್‌ಡಿ/ಜಿಆರ್

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಶ್ರೀ ಹೆಚ್.ಕೆ. ಪಾಟೀಲ್ (ಮುಂದು)

ನನಗೆ ಮಾರ್ಕೋನಹಳ್ಳಿ ಬಗ್ಗೆ ಹೇಳುವುದಾದರೆ, they will contact the person, who is on the field. But, in the meanwhile, all preparatory works are over on the ground. ಇದರ ಬಗ್ಗೆ ಇನ್ನೊಬ್ಬ ಮಾನ್ಯ ಸದಸ್ಯರು ಮಾಹಿತಿಯನ್ನು ಕೇಳಿದ್ದರು.

**ಶ್ರೀ ಕೆ.ಟಿ. ಶ್ರೀಕಂಠೇಗೌಡಃ–** ಮಾನ್ಯ ಸಭಾಪತಿಯವರೇ, ನಮ್ಮಿಬ್ಬರದೂ ಒಂದೇ ತಾಲ್ಲೂಕಾಗಿದೆ.

**ಶ್ರೀ ಹೆಚ್.ಕೆ. ಪಾಟೀಲ್ಃ–** ಮಾನ್ಯ ಸಭಾಪತಿಯವರೇ, ನಮ್ಮ ಆಯುಕ್ತರು ಠಿಡಿಜಠಿಚಿಡಿಚಿಣಠಡಿಥಿ ತಿಠಡಿಞ ಆಗಿದೆ ಎಂಬುದನ್ನು ಕನ್‌ಫರ್ಮ್ ಮಾಡುತ್ತಿದ್ದಾರೆ. ಅಲ್ಲಿನ ನೆಲಮಟ್ಟದ ಕೆಲಸದ ಬಗ್ಗೆ ಮಾಹಿತಿ ತರಿಸಿ ಕೊಡುತ್ತೇನೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡಃ–** ಅಲ್ಲಿ 25 ಭಾಗ ಕಾಮಗಾರಿ ಮುಗಿದಿದೆ ಎಂದು ಲಿಖಿತವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಅಲ್ಲದೇ ಈ ತಿಂಗಳ 20ನೇ ತಾರೀಖು ಶಂಕುಸ್ಥಾಪನೆ ನಡೆಯುತ್ತದೆ ಎಂಬ ಸುದ್ದಿ ಇದೆ. ಅಧಿವೇಶನ ನಡೆಯುತ್ತಿರುವಾಗ ಮಾನ್ಯ ಸಚಿವರು ಶಂಕುಸ್ಥಾಪನೆಗೆ ಬರುತ್ತಾರೆ ಎಂಬ ಸುದ್ದಿಯೂ ಇದೆ. ನಾವು ಗೊಂದಲಕ್ಕೆ ಸಿಕ್ಕಿಹಾಕಿಕೊಂಡಿದ್ದೇವೆ.

**ಶ್ರೀ ಎನ್. ಅಪ್ಪಾಜಿಗೌಡಃ–** ಮಾನ್ಯ ಸಭಾಪತಿಯವರೇ, ಅಲ್ಲಿಗೆ ಯಾವ ಜನಪ್ರತಿನಿಧಿಗಳನ್ನು ಆಹ್ವಾನಿಸಿಲ್ಲ. ಈಗ ಅಧಿವೇಶನ ನಡೆಯುತ್ತಿದೆ. ಅಲ್ಲದೇ ಈಗಾಗಲೇ 25 ಭಾಗ ಕಾಮಗಾರಿ ಮುಗಿದಿದೆ ಎಂಬ ಸುದ್ದಿ ಸಹ ಇದೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡಃ–** ಇಲ್ಲಿ ಅಧಿವೇಶನವನ್ನು ಮುಗಿಸಿ ಉದ್ಘಾಟನೆಗೆ ಬಂದರೂ ಆಗುತ್ತದೆ.

**ಶ್ರೀ ಹೆಚ್.ಕೆ. ಪಾಟೀಲ್ಃ–** ಮಾನ್ಯ ಸಭಾಪತಿಯವರೇ, ನನಗೆ ಮಾಹಿತಿಯನ್ನು ಕಳುಹಿಸಿದ್ದಾರೆ. I will withhold this information. ನಂತರ ಇದರ ಬಗ್ಗೆ ಸರಿಯಾದ ಮಾಹಿತಿಯನ್ನು ಅವರಿಗೆ ಕಳುಹಿಸಿಕೊಡುತ್ತೇನೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡಃ–** 25 ಭಾಗ ಕೆಲಸವು ಮುಗಿದಿದೆ ಎಂದು ತಿಳಿಸಿದ್ದಾರೆ.

**ಶ್ರೀ ಹೆಚ್.ಕೆ. ಪಾಟೀಲ್:–** 20ನೇ ತಾರೀಖಿನಂದು ಶಂಕುಸ್ಥಾಪನೆ ಕಾರ್ಯಕ್ರಮ ಇರುವುದಿಲ್ಲ. ಮಾನ್ಯ ಮುಖ್ಯಮಂತ್ರಿಯವರು ದಿನಾಂಕವನ್ನು ಕೊಟ್ಟ ನಂತರ ನಾನು ಮಾನ್ಯ ಸದಸ್ಯರಿಗೆ ಸೂಚನೆ ಕೊಡುತ್ತೇನೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** 25 ಭಾಗ ಕೆಲಸ ಮುಗಿದ ಮೇಲೆ ದಿನಾಂಕವನ್ನು ಕೊಟ್ಟಿದ್ದಾರೆ. ಆದರೂ ಅದರ ಉದ್ಘಾಟನೆ ಮಾಡಲು ನಮ್ಮ ತಕರಾರೇನೂ ಇಲ್ಲ.

**ಖಡು ಊ.ಏ.ಕುಖಖಐ:–** ಖ ತುಟಟ ತಾಜುಡಿಜಿಥಿ ಚಿಟಿಜ ಛಿಡಿಜಛಿಚಿಛಿಇ ಣಂ ಥಿಡಾ

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಈಗ ಈ ಉತ್ತರವನ್ನು ವಾಪಸ್ಸು ಪಡೆಯುತ್ತಾರೆಯೇ?

**ಶ್ರೀ ಹೆಚ್.ಕೆ. ಪಾಟೀಲ್:–** ಮಾನ್ಯ ಸಭಾಪತಿಯವರೇ, ಉತ್ತರದ ಆ ಭಾಗದ ಎರಡು ಸಾಲುಗಳ ಬಗ್ಗೆ reconfirm ಮಾಡುತ್ತೇನೆ. Because, right now the information that I have is not in full. I don't want to err, if that is an error.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಅಂದರೆ 20ನೇ ತಾರೀಖು ಉದ್ಘಾಟನೆ ಇಲ್ಲ ಎಂಬುದನ್ನು ತಾವು ಸ್ಪಷ್ಟವಾಗಿ ತಿಳಿಸುತ್ತಿದ್ದೀರಿ.

**ಶ್ರೀ ಹೆಚ್.ಕೆ. ಪಾಟೀಲ್:–** ಆ ರೀತಿ ಅಲ್ಲ, ಅದನ್ನು ನೋಡಿ ನಾನು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ. ಮಾನ್ಯ ಸದಸ್ಯರು ತಿಳಿಸುತ್ತಿರುವ ಮಾಹಿತಿಯೂ ತಪ್ಪಾಗಿರಬಹುದು. ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದಂತೆ ನಮ್ಮ ರಾಜ್ಯದ ಎಲ್ಲಾ ನೀರಾವರಿ ಯೋಜನೆಗಳು ಪೂರ್ಣಗೊಳ್ಳಲು we need Rs.52,000 crore. ಅವರಿಗೂ ತಿಳಿದಂತೆ ಮೇಲ್ಮೈ ನೀರಿನ ಮೂಲದಿಂದ ತಯಾರು ಮಾಡುವ ಯೋಜನೆಗಳು ಎಲ್ಲಾ ಜಿಲ್ಲೆಗಳಲ್ಲಿ ತಯಾರಾಗಿದೆ. ನಮಗೆ ಒಟ್ಟು 52,000/- ಕೋಟಿಗಳ ಅವಶ್ಯಕತೆ ಇದೆ. ಈ ಮಾಹಿತಿಯನ್ನು ಮಾನ್ಯ ವಿರೋಧ ಪಕ್ಷದ ನಾಯಕರ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಆಗಲೇ ಉತ್ತರವನ್ನು ಕೊಟ್ಟರು. 65 ಯೋಜನೆಗಳಿಗೆ ರೂ.1,150 ಕೋಟಿಗಳ ಅವಶ್ಯಕತೆ ಇದ್ದು, ಈ ಹಣವನ್ನು ಬಜೆಟ್‌ನಲ್ಲಿ ಒದಗಿಸುವ ಬಗ್ಗೆ ಪ್ರಯತ್ನ ಮಾಡುತ್ತೇನೆ ಎಂದು ಹೇಳಿದರು. ಆದರೆ ಇದಲ್ಲದೇ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನನ್ನಲ್ಲಿರುವ ಮಾಹಿತಿ ಪ್ರಕಾರ ಇನ್ನೂ 123 ಯೋಜನೆಗಳು ಬಾಕಿ ಇದ್ದು, ಇದಕ್ಕೆ ರೂ.2,300/- ಕೋಟಿಗಳ ಅವಶ್ಯಕತೆ ಇದೆ. ಇದರ ಬಗ್ಗೆ ಅವರು ವೆರಿಫೈ ಮಾಡಲಿ. ಏಕೆಂದರೆ 52,000/- ಕೋಟಿಗಳ ಅವಶ್ಯಕತೆ ಯಾವುದಕ್ಕೆ ಎಂದು ನನಗಂತೂ ಗೊತ್ತಿಲ್ಲ. ಆದರೆ 123 ಯೋಜನೆಗಳು ಪೂರ್ಣವಾಗಿಲ್ಲ, ಇವುಗಳು ಪೂರ್ಣವಾಗಬೇಕೆಂದರೆ ರೂ.2,300/- ಕೋಟಿಗಳು ಬೇಕು. ಮುಂದಿನ ಬಜೆಟ್‌ನಲ್ಲಿ 65 ಯೋಜನೆಗಳಿಗೆ ರೂ.1,150 ಕೋಟಿಗಳ ಅವಶ್ಯಕತೆಯಿದ್ದರೆ ಉಳಿದ 123 ಯೋಜನೆಗಳ ಕತೆ ಏನು? ಒಂದಕ್ಕೊಂದು ಸಂಬಂಧ ಇದ್ದು, ಆ ದಿಕ್ಕಿನಲ್ಲಿ ಮಾನ್ಯ ಸಚಿವರು ಯೋಚನೆ ಮಾಡಬೇಕು. ಮಾನ್ಯ ಉಗ್ರಪ್ಪನವರು ಹೇಳುತ್ತಿರುವ ಅಂಶದಂತೆ ನೀರಾವರಿ ಯೋಜನೆಗಳಿಗೆ ಮೊದಲ ಆದ್ಯತೆ ಕೊಡಲೇಬೇಕಾಗುತ್ತದೆ. ಉಳಿದ ಇಲಾಖೆಗಳಿಗೆ ಏನು ಹಣ ಕೊಡಬೇಕೋ, ಬಿಡಬೇಕೋ ಎನ್ನುವುದು ಬೇರೆ ವಿಷಯ. ರೂ.52,000/- ಕೋಟಿಗಳಲ್ಲಿ ಇಡೀ ರಾಜ್ಯಕ್ಕೆ ಪೂರ್ಣ ನೀರನ್ನು ಕೊಡಲು ಮಾಡಿರುವ ಯೋಜನೆಯ ಬಗ್ಗೆ ನಂತರ ನೋಡೋಣ. ಆದರೆ ಈಗ 65 ಮತ್ತು 123 ಯೋಜನೆಗಳ ಕಾಮಗಾರಿಗಳು ನಿಂತಿವೆ. 65 ಯೋಜನೆಗಳನ್ನು ಪೂರ್ಣಗೊಳಿಸಲು ರೂ.1,150 ಕೋಟಿ ಮತ್ತು 123 ಯೋಜನೆಗಳನ್ನು ಪೂರ್ಣಗೊಳಿಸಲು ರೂ.2,300/- ಕೋಟಿಗಳ ಅವಶ್ಯಕತೆ ಇದೆ. ಈ ದಿಕ್ಕಿನಲ್ಲಿ ಮಾನ್ಯ ಸಚಿವರು ಏನು ಯೋಚನೆ ಮಾಡಿದ್ದಾರೆ ಎಂದು ಈಗಲೆ ಹೇಳುವುದಕ್ಕೆ ಆಗುವುದಿಲ್ಲ. ದಯವಿಟ್ಟು ಇದರ ಬಗ್ಗೆ ಯಾವಾಗ ಹೇಳಿಕೆ ಕೊಡುತ್ತಾರೆ ಎಂದು ಚಿಂತಿಸಿ, ಎಲ್ಲಾ ಯೋಜನೆಗಳನ್ನು ಪೂರ್ಣಗೊಳಿಸಲು ಎಷ್ಟು ಹಣ ಬೇಕಾಗುತ್ತದೆ? ಈ ಹಣವನ್ನು ಹೇಗೆ ತರುತ್ತಾರೆ ಮತ್ತು ಯಾವಾಗ ತರುತ್ತಾರೆ ಎಂದು ಮಾನ್ಯ ಸಚಿವರಿಗೆ ಇಂದು ಉತ್ತರ ಕೊಡುವುದಕ್ಕೆ ಆಗದಿದ್ದರೆ ನಂತರವಾದರೂ ಉತ್ತರವನ್ನು ಕೊಡಲಿ.

**ಸಭಾಪತಿಯವರುಃ-** ಧನ್ಯವಾದಗಳು, ಈಗ ಗಮನ ಸೆಳೆಯುವ ಸೂಚನೆಯ ಬಗ್ಗೆ ಚರ್ಚೆ ಇಲ್ಲಿಗೆ ಮುಗಿದಿದೆ. ಈಗ ನಿಯಮ 330ರಡಿಯಲ್ಲಿನ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳೋಣ.

**ಶ್ರೀ ಕೆ.ಎಸ್. ಈಶ್ವರಪ್ಪಃ-** ಮಾನ್ಯ ಸಭಾಪತಿಯವರೇ, ಈಗ ಸಂಜೆ 6 ಗಂಟೆಗೆ ನಮ್ಮ ಪಕ್ಷದ ಶಾಸಕಾಂಗ ಸಭೆಯೂ ನಿಗದಿಯಾಗಿರುವುದರಿಂದ ಮಾನ್ಯ ಕಾಗೋಡು ತಿಮ್ಮಪ್ಪನವರು ಉತ್ತರ ಕೊಡಲು ನನ್ನ ಅಭ್ಯಂತರ ಇಲ್ಲ. ಆದರೆ ವಿಷಯ ಪ್ರಾರಂಭಿಸಿದ ತಕ್ಷಣ ಚರ್ಚೆಯು ಪ್ರಾರಂಭವಾಗುತ್ತದೆ.

**ಶ್ರೀ ಎಂ.ಆರ್. ಸೀತಾರಾಂ (ಸಭಾನಾಯಕರು)ಃ-** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು 7 ಗಂಟೆಯೊಳಗೆ ಮುಕ್ತಾಯ ಮಾಡಿಬಿಡಬಹುದು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಎಸ್. ಈಶ್ವರಪ್ಪಃ–** ಈಗ 6 ಗಂಟೆಗೆ ನಮ್ಮ ಶಾಸಕಾಂಗ ಪಕ್ಷದ ಸಭೆ ಇರುವುದರಿಂದ ಆ ಸಭೆಗೆ ನಾವೇ ಹೋಗದಿದ್ದರೆ ಹೇಗೆ? ದಯವಿಟ್ಟು ಇವತ್ತು ಬೇಡ. ನಾಳೆ ತೆಗೆದುಕೊಳ್ಳೋಣ.

**ಸಭಾಪತಿಯವರುಃ–** ಆಯಿತು, ನಾಳೆ ತೆಗೆದುಕೊಳ್ಳೋಣ.

**ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ನಿಯಮ ೩೩೦ರಡಿಯಲ್ಲಿ ಎರಡು ವಿಷಯಗಳು ಇವೆ.

**ಸಭಾಪತಿಯವರುಃ–** ನಾಳೆ ಭೋಜನ ವಿರಾಮದ ನಂತರ ಮೊದಲು ಈ ವಿಷಯವನ್ನು ತೆಗೆದುಕೊಂಡು ನಂತರ ಗಮನ ಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳೋಣ.

**ಶ್ರೀ ಕಾಗೋಡು ತಿಮ್ಮಪ್ಪಃ–** ಆಯಿತು.

**ಸಭಾಪತಿಯವರುಃ–** ಈಗ ಸದನವನ್ನು ನಾಳೆ ಬೆಳಗ್ಗೆ 11 ಗಂಟೆಯವರೆಗೆ ಮುಂದೂಡುತ್ತೇನೆ.

**(ಸದನವು ಸಂಜೆ 06 ಗಂಟೆ 26 ನಿಮಿಷಕ್ಕೆ ಮುಕ್ತಾಯಗೊಂಡು ಪುನ: ದಿನಾಂಕ 15 ನೇ ನವೆಂಬರ್ ಮಾಹೆ 2017ರ ಬುಧವಾರದಂದು ಬೆಳಗ್ಗೆ 11 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು